SRI MOHAMED ALI :—As per the promise made on the floor of the House, the Government has taken a decision fixing the minimum fare to be charged by the Autorickshaw at 75 paise. This has been done after the approval of the S. T. A.

BUDGET ESTIMATES FOR 1975-76

DEMANDS FOR GRANTS

(Demand Nos. 1, 16, 49 and 50 (Debate Continued).

‡ಶ್ರೀ ವಿ ಎಸ್. ಕೌಜಲಗಿ (ರೇಷ್ಮೆ ಶಾಖೆಯ ರಾಜ್ಯ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ರೇಷ್ಮೆ ಇಲಾಖೆಯ ಬೇಡಿಕೆಗಳ ಮೇಲೆ ಈ ಸದನದಲ್ಲಿ ಸಾಕಷ್ಟು ಅನುಭವವುಳ್ಳ ಸದಸ್ಯರು ಎಂದರೆ ಶ್ರೀ ವೆಂಕಟಪ್ಪನವರು, ಶ್ರೀ ರಾಚೇಗೌಡರು, ಶ್ರೀ ಬಿ. ಪುಟ್ಟಸ್ವಾಮಯ್ಯ, ಕೆ. ಸಿದ್ದಯ್ಯ, ಶ್ರೀ ಸಿದ್ದಮಾದಯ್ಯ, ಶ್ರೀ ಹೆಚ್. ಜಿ. ಚನ್ನಪ್ಪ ಮತ್ತು ಶ್ರೀ ಟಿ. ಆರ್. ಶಾಮಣ್ಣನವರು ಬಹಳ ಅಮೂಲ್ಯವಾದ ಸಲಹೆಯನ್ನು ರೇಷ್ಮೆ ಅಭಿವೃದ್ಧಿ ಬಗ್ಗೆ ಕೊಡುತ್ತಾ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ ಕೆಲವು ವಿಚಾರಗಳನ್ನು ಇಲ್ಲಿ ತಿಳಿಸಬೇಕೆಂದಿದ್ದೇನೆ. ನಮ್ಮ ಭಾರತ ದೇಶ ಬಡ ದೇಶ. ಈ ದೇಶದಲ್ಲಿ ಸಾಕಷ್ಟು ಬಡಜನರು ಉಪ ಜೀವನ ಮಾಡಿಕೊಳ್ಳಲು ಇಂತಹ ರೇಷ್ಮೆ ಉದ್ಯೋಗವನ್ನು ತೆಗೆದುಕೊಳ್ಳುತ್ತಾರೆ ಮತ್ತು ಬಡವರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ರೇಷ್ಮೆ ಉದ್ಯೋಗ ಒಂದು ಸಾಧನೆಯಾಗುತ್ತದೆ ಎಂದು ಹೇಳುತ್ತೇನೆ. ಏಕೆಂದರೆ ಈ ಉದ್ಯೋಗವನ್ನು ಹೆಣ್ಣು ಮಕ್ಕಳು ಹಾಗೂ ಮನೆಯ ಯಜಮಾನರು ಎಲ್ಲರೂ ಕೂಡಿಕೊಂಡು ಅಲ್ಪ ಹಣದಲ್ಲಿ ಈ ಉದ್ಯೋಗವನ್ನು ಶುರು ಮಾಡಿ ಉಪಜೀವನ ನಡೆಸಿಕೊಳ್ಳಲು ಬೇಕಾದ ವಾತಾವರಣವನ್ನು ನಾವು ಅವರಿಗೆ ಕಲ್ಪಿಸಿಕೊಡಬೇಕಾಗಿದೆ. ಮಹಿಳೆಯರು ಪ್ರತಿ ಮನೆಯಲ್ಲೂ ಇಂತಹ ಒಂದು ಉದ್ಯೋಗವನ್ನು ಮಾಡಿದರೆ ನಮ್ಮ ದೇಶದ ಬಡ ಜನರ ಆರ್ಥಿಕ ಸ್ಥಿತಿ ಪರಿಹರಿಸಿಕೊಳ್ಳಲು ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿ ಈ ಉದ್ಯೋಗಕ್ಕೆ ಬಹಳ ಪ್ರಾಮುಖ್ಯತೆ ಇದೆ. ರೇಷ್ಮೆ ಉದ್ಯೋಗದಲ್ಲಿ ಸುಮಾರು ನೂರರಲ್ಲಿ 85 ಪಾಲು ಕರ್ನಾಟಕದಿಂದ ರೇಷ್ಮೆ ಉತ್ಪಾದನೆಯಾಗುತ್ತದೆ.

---

‡Asterisks indicate that remarks or speeches have not been revised by the member concerned.

ಅಂತರರಾಷ್ಟ್ರದಲ್ಲಿ ನಮ್ಮ ಸ್ಥಾನಮಾನಗಳು 5ನೇ ಸ್ಥಾನದಲ್ಲಿ ನಾವು ನಿಲ್ಲುತ್ತಿದ್ದೇವೆ. ಇಷ್ಟರಲ್ಲಿಯೇ ನಾವು ಸಮಾಧಾನ ಪಟ್ಟುಕೊಳ್ಳದ ಅಂತರ ರಾಷ್ಟ್ರದಲ್ಲಿ ನಮಗೆ ಮೊದಲನೇ ಸ್ಥಾನ ಬರಬೇಕು ಎನ್ನುವ ಧ್ಯೇಯ ಧೋರಣೆ ಗಳಿಂದ ಈ ಸರ್ಕಾರಿ ಕಾರ್ಯಕ್ರಮಗಳನ್ನು ಬಹಳ ತೀವ್ರವಾಗಿ ನಡೆಸುತ್ತಿದ್ದೇವೆ. ಇವಕ್ಕೆ ಬೇಕಾಗುವ ಸೌಲಭ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕೊಡುವುದ ಕ್ಕೋಸ್ಕರ ನಾವು ಪ್ರಯತ್ನ ಮಾಡುವಾಗ ಮೊದಲನೆಯದಾಗಿ ಹಿಪ್ಪನೇರಳೆ ಬೆಳೆಯುವುದಕ್ಕೆ ಯಾವ ಪ್ರಮಾಣದಲ್ಲಿ ಬೆಳೆಯಬೇಕು, ಅದನ್ನು ಹೇಗೆ ಬೆಳೆಸ ಬೇಕು, ಎನ್ನುವುದರ ಬಗ್ಗೆ ನಮ್ಮ ಒಂದು ಸಂಶೋಧನೆ ಕೇಂದ್ರದಿಂದ ಉತ್ತಮ ವಾದ ಹಿಪ್ಪನೇರಳೆ ಬೆಳೆಯುವುದಕ್ಕೋಸ್ಕರ ಸಲಹೆ ಕೊಟ್ಟು ಜನಗಳು ಅದನ್ನು ಬೆಳೆಸುವುದಕ್ಕೆ ಪ್ರೋತ್ಸಾಹ ಕೊಡುತ್ತಿದ್ದೇವೆ. ಹಿಪ್ಪನೇರಳೆ ರೇಷ್ಮೆ ಹುಳಗಳಿಗೆ ಬಹಳ ಪ್ರಾಮುಖ್ಯವಾದ ಆಹಾರ. ಆದ್ದರಿಂದ ಉತ್ತಮವಾದ ಹಿಪ್ಪನೇರಳೆ ಯನ್ನು ಬೆಳೆಸುವುದರಿಂದ ಹೆಚ್ಚು ರೇಷ್ಮೆ ಉತ್ಪಾದನೆಯಾಗುತ್ತದೆ ಎಂದು ನನಗೆ ಅನಿಸುತ್ತದೆ. ಅದರಂತೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ರೇಷ್ಮೆ ಹುಳುಗಳ ಸಾಕಾಣಿಕೆಯ ಸಲುವಾಗಿ ಗ್ರೈನೇಜ್‌ಗಳನ್ನು ರಾಜ್ಯಸರ್ಕಾರದವರು ಕೊಟ್ಟಿದ್ದಾರೆ. ಮತ್ತು ಇದೇ ರೀತಿ ವೈಯುಕ್ತಿಕವಾಗಿ ನಡೆಸುವುದಕ್ಕೂ ಕೂಡ ನಾವು ಲೈಸೆನ್ಸ್ ಕೊಟ್ಟಿದ್ದೇವೆ. ಗ್ರೈನೇಜ್‌ಗಳನ್ನು ಮುಖ್ಯವಾಗಿ ನಮ್ಮ ರೈತ ಜನಗಳಿಗೆ ಯಾವ ವಿಧವಾದ ರೋಗಗಳೂ ಇಲ್ಲದ ತತ್ತಿಗಳನ್ನು ಪೂರೈಕೆ ಮಾಡಬೇಕು ಎಂಬ ಧ್ಯೇಯದಿಂದ ಹೆಚ್ಚು ಉತ್ಪಾದನೆಯನ್ನು ಗ್ರೈನೇಜ್‌ಗಳಲ್ಲಿ ಮಾಡಲಾಗುತ್ತಿದೆ. ನಿನ್ನೆ ದಿವಸ ಮಾನ್ಯ ಸದಸ್ಯರು ಬಹಳ ಕಟುವಾಗಿ ಮತ್ತು ಒತ್ತಾಯವಾಗಿ ಹೇಳಿ ದರು. ರೈತರಿಗೆ ಏನೂ ಕೊಡದಿದ್ದರೂ ಚಿಂತೆಯಿಲ್ಲ, ರೋಗರಹಿತವಾದ ತತ್ತಿ ಗಳನ್ನು ಕೊಟ್ಟರೆ ಬಹಳ ಉಪಕಾರವಾಗುತ್ತದೆ ಎಂದು ಹೇಳಿದರು. ಅದಕ್ಕಾಗಿ ನಾವು ಯೋಗ್ಯವಾದ ತತ್ತಿಗಳನ್ನು ಪೂರೈಕೆ ಮಾಡುತ್ತಿದ್ದೇವೆ. ಆದರೆ ನಮ್ಮಲ್ಲಿ ಪುರಾತನ ಕಾಲದಿಂದ ಬಂದಂತಹ ಭಾವನೆಯನ್ನು, ಸಂಪ್ರದಾಯವನ್ನು ಬದಲಾಯಿಸುವುದರಲ್ಲಿ ಸ್ವಲ್ಪ ಸಮಯ ಬೇಕಾಗುತ್ತದೆ. ಈಗಾಗಲೇ ನಾನು ಹೇಳಿದಂತೆ ರೇಷ್ಮೆ ಖಾತೆಯ ಭಾಗ್ಯ, ಅದರ ಒಂದು ಉತ್ತಮವಾದ ಪರಿಣಾಮ ಆಗಬೇಕಾದರೆ ಅಂತರರಾಷ್ಟ್ರದಲ್ಲಿ ನಾವು ಬರಬೇಕು. ಅಂತರರಾಷ್ಟ್ರದಲ್ಲಿ ಬರ ಬೇಕಾದರೆ ನಾವು ಉತ್ತಮವಾದ ರೇಷ್ಮೆಯನ್ನು ಹೆಚ್ಚು ರೆಂಡೆಟಾ ಕೊಡತಕ್ಕಂಥಾ ರೇಷ್ಮೆಯನ್ನು ಉತ್ಪಾನೆ ಮಾಡಬೇಕಾಗಿದೆ. ಅದಕ್ಕಾಗಿ ಬೈವೋಲ್ಟೀನ್ ರೇಷ್ಮೆ ಯನ್ನು ಉತ್ಪಾದಿಸುವುದರಲ್ಲಿ ಬಹಳ ಪ್ರಯತ್ನ ಮಾಡಿ ಸೆಂಟ್ರಲ್ ಸಿಲ್ಕ್ ಬೋರ್ಡಿ ನಿಂದ ಸಾಕಷ್ಟು ಪ್ರಮಾಣದ ಸಹಾಯ ಮತ್ತು ಸಹಕಾರವನ್ನು ಕೊಟ್ಟಿದೆ. ಬೈ ವೋಲ್ಟಿನ್ ಬೆಳೆಸುವುದರಿಂದ ನಮಗೆ ಉತ್ತಮವಾದ ರೇಷ್ಮೆ ಸಿಕ್ಕುತ್ತದೆ. ಆದ್ದ ರಿಂದ ನಮ್ಮ ದೇಶದಲ್ಲಿ ಉತ್ಪಾದನೆಯಾಗುವಂತಹ ರೇಷ್ಮೆ ಕ್ವಾಲಿಟಿ ಸಹ ಉತ್ತಮ ವಾಗಿ ಬರುತ್ತದೆ. ಅದನ್ನು ಪರಿಣಾಮಕಾರಿಯಾಗಿ ತ್ವರಿತವಾಗಿ ಎಲ್ಲಾ ಜನಗಳಲ್ಲಿ

(ಶ್ರೀ ವಿ. ಎಸ್. ಕೌಜಲಗಿ)

ಯೂ ಬದಲಾವಣೆ ಮಾಡುವುದು ಬಹಳ ಕಠಿಣವಾಗುತ್ತದೆ. ಇದು ಜನಗಳಲ್ಲಿ ವಿಶೇಷವಾಗಿ ಬೆಳೆದು ಬಂದ ನಂತರ ನಿಜವಾಗಿ ಉತ್ತಮ ರೇಷ್ಮೆ ತಯಾರಿಸುವುದರಲ್ಲಿ ನಾವು ಹಿಂದೆ ಬೀಳುವುದಿಲ್ಲ ಎನಿಸುತ್ತದೆ. ಅದಕೋಸ್ಕರ ಹೆಚ್ಚು ಆಸಕ್ತಿಯನ್ನು ವಹಿಸುವುದಕ್ಕೆ ಆಗಿಲ್ಲ. ಅದಕ್ಕಾಗಿ ಈಗ ಒಂದು ಸೀಡ್ ಕಾರ್ಪೊರೇಷನ್ ಮಾಡಬೇಕು ಎನ್ನುವ ಉದ್ದೇಶದಿಂದ ಎಲ್ಲಾ ಪ್ರೈಮರಿ ಕೆಲಸಗಳನ್ನೂ ಮುಗಿಸಿ ಕಾರ್ಪೊರೇಷನ್ ತ್ವರಿತವಾಗಿ ಕಾರ್ಯರೂಪಕ್ಕೆ ತಂದರೆ ಮಾನ್ಯ ಸದಸ್ಯರು ಹೇಳುವ ಪ್ರಕಾರ ರೈತರಿಗೆ ರೋಗಗಳು ಇಲ್ಲದ ತತ್ತಿಗಳು ಪೂರೈಸಲು ಹೆಚ್ಚು ಅನುಕೂಲವಾಗುತ್ತದೆ. ಅದಕ್ಕಾಗಿ ಸೀಡ್ ಕಾರ್ಪೊರೇಷನ್ ಶುರು ಮಾಡುತ್ತಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಈ ಸಭೆಯಲ್ಲಿ ಸಂಪೂರ್ಣವಾದ ಮಾಹಿತಿಯನ್ನು ಹೊಂದಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಇರುವುದರಿಂದ ಅವರು ಇದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿದರೆ ಚೆನ್ನಾಗಿರುತ್ತದೆ. ಮಾನ್ಯ ರೇಷ್ಮೆ ಖಾತೆಯ ಮಂತ್ರಿಗಳು ಉತ್ತರ ಕೊಡಬಾರದು ಎನ್ನುವ ಉದ್ದೇಶದಿಂದ ನಾನು ಹೇಳುತ್ತಿಲ್ಲ.

ಶ್ರೀ ಡಿ ದೇವರಾಜ ಅರಸ್ (ಮುಖ್ಯಮಂತ್ರಿಗಳು) :— ಸೀಡ್ ಕಾರ್ಪೊರೇಷನ್ ಬಗ್ಗೆ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ 600-700 ಪ್ರೈವೇಟ್ ಗ್ರೇನೇಜ್‌ಗಳು ಇವೆ. ಈ ಏಡೆಡ್ ಗ್ರೇನೇಜುಗಳನ್ನು ಅಗತ್ಯವಾದ ಬಿತ್ತನೆಯನ್ನು ಇಲಾಖೆಯವರೇ ಒದಗಿಸುವ ಸ್ಥಿತಿಯಲ್ಲಿ ಇಲ್ಲ. ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ ಅನೇಕ ಸಂದರ್ಭಗಳಲ್ಲಿ ಕೆಟ್ಟ ಬಿತ್ತನೆ ಬೀಜವನ್ನಾದರೂ ಸಮಯದಲ್ಲಿ ತೆಗೆದುಕೊಳ್ಳದೇ ಹೋದರೆ ವಿಧಿಯಿಲ್ಲ. ಬೇರೆ ಕಡೆ ಬಿತ್ತನೆ ಬೀಜ ಸಿಕ್ಕುವುದಿಲ್ಲ. ಆದ್ದರಿಂದ ಅವರ ಕೈಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಕ್ರಾಸ್ ಮಾಡತಕ್ಕ ಗಂಡುಹುಳುವನ್ನು 2-3 ಸಾರಿ ಕ್ರಾಸ್ ಮಾಡಿಸುತ್ತಾರೆ. ಆದರಿಂದ ಅದರಲ್ಲಿ ಸತ್ವ ಇರುವುದಿಲ್ಲ, ಲಾಭದ ಆಶೆಯಿಂದ ಅವರು ಆ ರೀತಿ ಮಾಡುತ್ತಾರೆ ಆವರು ವಿಧಿ ಇಲ್ಲದೆ ಆ ಬೀಜಗಳನ್ನು ತೆಗೆದುಕೊಳ್ಳುತ್ತಾರೆ. ಜಪಾನ್ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬೀಜವನ್ನು ಉತ್ಪಾದನೆ ಮಾಡತಕ್ಕ ಫಾರಂಗಳು ಇವೆ. ಅವು ಬೀಜವನ್ನು ಉತ್ಪಾದನೆ ಮಾಡಿ ಸರ್ಟಿಫೈ ಮಾಡಿ ಎಲ್ಲರಿಗೂ ಹಂಚುತ್ತಾರೆ ಬೀಜದ ಅಭಾವ ಇರುವ ಸಂದರ್ಭದಲ್ಲಿ ಎಲ್ಲೆಲ್ಲಿ ಬೀಜಗಳು ಸಿಕ್ಕುತ್ತವೆಯೋ ಅಲ್ಲೆಲ್ಲಾ ಕೊಂಡುಕೊಳ್ಳುತ್ತಾರೆ. ಇದರಿಂದಾಗಿ ರೇಷ್ಮೆಯ ಉತ್ಪಾದನೆ ಸಾಕಷ್ಟು ಆಗುವುದಿಲ್ಲ. ಈಗ ನಾಲ್ಕು ವರ್ಷಗಳಿಂದ ಇಲ್ಲಿಯವರೆಗೂ ಕೂಡ ಸಾಕಷ್ಟು ರೇಷ್ಮೆಯನ್ನು ಉತ್ಪಾದನೆ ಮಾಡುವುದಕ್ಕೆ ಆಗಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಕಾರಣದಿಂದ ನಾವು ಸೀಡ್ ಕಾರ್ಪೊರೇಷನ್ ಮಾಡುತ್ತಿದ್ದೇವೆ.

ಅದನ್ನು ಯಾವ ರೀತಿ ಮಾಡುತ್ತೇವೆ ಎನ್ನುವುದನ್ನು ಅವರು ತಮ್ಮ ಮುಂದೆ ಇಡುತ್ತಿದ್ದಾರೆ.

ಶ್ರೀ ವಿ. ಎಸ್. ಕೌಜಲಗಿ :— ಗೂಡುಗಳನ್ನು ಮಾರುವುದಕ್ಕೋಸ್ಕರ ಮಾರ್ಕೆಟ್‌ಗಳನ್ನು ಬೇರೆ ಜಾಗದಲ್ಲಿ ಸ್ಥಾಪನೆ ಮಾಡಿದೆ. ಮಾನ್ಯ ಸದಸ್ಯರು ಕೆಲವೊಂದು ನ್ಯೂನತೆಗಳನ್ನು ಎತ್ತಿತೋರಿಸಿದ್ದಾರೆ. ರೇಷ್ಮೆಯನ್ನು ಇಟ್ಟುಕೊಳ್ಳಲು ಸಾಕಷ್ಟು ಪ್ರಮಾಣದಲ್ಲಿ ಸ್ಥಳ ಇಲ್ಲ ಎಂದು ಹೇಳಿದರು. ಪ್ರತಿಯೊಂದು ಮಾರ್ಕೆಟ್ಟಿನಲ್ಲಿಯೂ ಸ್ಥಳವನ್ನು ದೊರಕಿಸಿಕೊಡಬೇಕು ಎಂದು ಹೇಳಿದರು. ಒಂದು ವೇಳೆ ಗೂಡುಗಳನ್ನು ಮಾರದೇ ಹೋದರೆ ಅದನ್ನು ಮಾರ್ಕೆಟ್ಟಿನಲ್ಲಿ ಇಡುವುದಕ್ಕೋಸ್ಕರ ಸ್ಥಳವನ್ನು ಒದಗಿಸುವ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಮತ್ತು ನಿರೀಕ್ಷಿಸಿದಷ್ಟು ಸಾಕಷ್ಟು ಪ್ರಮಾಣದಲ್ಲಿ ಕಟ್ಟಡಗಳು ಇಲ್ಲ. ಅವು ಅರ್ಧಕ್ಕೆ ನಿಂತಿವೆ. ಅವುಗಳನ್ನು ಪೂರ್ಣ ಮಾಡಬೇಕು. ತೂಕದ ಅನುಕೂಲವನ್ನು ಒದಗಿಸಬೇಕು. ರೇಷ್ಮೆ ಬೆಳೆಯನ್ನು ಮಾಡತಕ್ಕ ರೈತರಿಗೆ ಉತ್ತಮವಾದ ಬಿತ್ತನೆ ಬೀಜವನ್ನು ಒದಗಿಸಬೇಕು. ಅದನ್ನು ಸರಿಯಾದ ಕಾಲಕ್ಕೆ ದೊರಕಿಸಬೇಕು. ಪ್ರತಿಯೊಬ್ಬ ರೈತನಿಗೂ ಅವನು ಬೆಳೆದ ರೇಷ್ಮೆಗೆ ಯೋಗ್ಯ ಬೆಲೆ ಸಿಕ್ಕಬೇಕು. ಅವನಿಗೆ ಹಣ ಸಿಕ್ಕಬೇಕು ಎನ್ನುವ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ನಾವು ಈಗಾಗಲೇ ಹಾಕಿಕೊಂಡಿದ್ದೇವೆ. ಅದರಿಂದ ಅವನಿಗೆ ಅವನು ಬೆಳೆವಂತಹ ರೇಷ್ಮೆ ಗೂಡುಗಳಿಗೆ ಯೋಗ್ಯ ಬೆಲೆ ಸಿಕ್ಕುತ್ತದೆ. ಈ ರೀತಿಯಾಗಿ ನಾವು ಎಷ್ಟೋ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

ಸಿಲ್ಕ್ ರೀಲರ್ಸ್ ಇಂಡಸ್ಟ್ರಿ, ಮತ್ತು ಫಿಲೇಚರ್ ಇಂಡಸ್ಟ್ರಿ ಎನಿಪ ಅವುಗಳ ಬಗ್ಗೆ ಸಾಕಷ್ಟು ಕಟುವಾದ ಟೀಕೆಗಳು ಬಂದಿವೆ. ನಿಜ. ಕಳೆದ ವರ್ಷದಿಂದ ನಾನು ನೋಡುತ್ತಿದ್ದೇನೆ. ಪ್ರತಿಯೊಂದು ಫಿಲೇಚರನಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಲುಕ್ಸಾನು ಆಗುತ್ತದೆ. ಇದಕ್ಕೆ ಕೇವಲ ಒಂದು ಕಾರಣವಲ್ಲ, ಹಲವಾರು ಕಾರಣಗಳಿವೆ. ಎಲ್ಲಾ ಕಾರಣಗಳನ್ನೂ ನಾವು ಒಂದೊಂದಾಗಿ ನಾವು ಸರಿಪಡಿಸಬೇಕಾಗುತ್ತದೆ. ಒಂದೇ ಸಮಯದಲ್ಲಿ ಎಲ್ಲಾ ಕಾರ್ಯಕಗಳನ್ನೂ ಒಂದೇ ಆಜ್ಞೆಯನ್ನು ಕೊಟ್ಟು ಮಾಡುವುದಕ್ಕಾಗುವುದಿಲ್ಲ. ಇರತಕ್ಕ ನ್ಯೂನತೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಭ್ಯಾಸ ಮಾಡಿ ಅದನ್ನು ಸರಳ ರೀತಿಯಲ್ಲಿ ಕೆಲಸ ಮಾಡುವ ಹಾಗೆ ಪ್ರಯತ್ನ ಮಾಡುತ್ತಿದ್ದೇವೆ ಈ ವರ್ಷದಿಂದ ಎಲ್ಲಾ ಫಿಲೇಚರ್‌ಗಳೂ ಒಂದು ಉತ್ತಮವಾದ ಪರಿಸ್ಥಿತಿಗೆ ಬರುವುದರಲ್ಲಿ ಸಂದೇಹ ಇಲ್ಲ.

(ಶ್ರೀ ಪಿ. ಎಸ್. ಕೌಜಲಗಿ)

ಮೊದಲನೆಯದಾಗಿ ನಮ್ಮಲ್ಲಿರತಕ್ಕ ಒಂದೊಂದು ಸ್ಪನ್‌ಸಿಲ್ಕ್ ಮಿಲ್ ಸಹ ಸಾಕಷ್ಟು ಪ್ರಮಾಣದಲ್ಲಿ ಪ್ರತಿವರ್ಷ ನಮಗೆ ಲಾಭವನ್ನು ಕೊಡುತ್ತಾ ಇದೆ. ಗೌರ್ನಮೆಂಟ್ ವೀವಿಂಗ್ ಫ್ಯಾಕ್ಟರಿ ಮತ್ತು ಮೈಸೂರು ರಯಾನ್ ಸಿಲ್ಕ್ ಫ್ಯಾಕ್ಟರಿಯಿಂದ ಪ್ರತಿ ವರ್ಷ ಲಾಭ ಬರುತ್ತಿದೆ. ಆದರೆ ಅಲ್ಲಿಯೂ ಕೂಡ ಅನೇಕ ಸುಧಾರಣೆಗಳನ್ನು ಮಾಡಬೇಕಾಗಿದೆ. ಸಾಧಾರಣವಾಗಿ ಚನ್ನಪಟ್ಟಣ ದಲ್ಲಿರುವ ಮಿಲ್ಲಿಗೆ ಸುಮಾರು 60–70 ಲಕ್ಷ ರೂಪಾಯಿಗಳು ಬೇಕಾಗುತ್ತದೆ. 30–35 ವರ್ಷಗಳ ಹಿಂದಿನಿಂದ ಬಂದಂಥ ಮೆಷನರಿಗಳನ್ನು ಯೋಗ್ಯ ಪ್ರಮಾಣ ದಲ್ಲಿ ಸಾಕಷ್ಟು ಸ್ಪೇರ್ ಪಾರ್ಟ್ಸ್‌ಗಳನ್ನು ಇಟ್ಟುಕೊಂಡು ಹೆಚ್ಚಿನ ಉತ್ಪಾದನೆಯನ್ನು ಅಲ್ಲಿ ಮಾಡಬೇಕಾಗಿದ್ದರೆ ಇನ್ನೂ 60--70 ಲಕ್ಷ ರೂಪಾಯಿ ಗಳನ್ನು ನಾವು ಖರ್ಚುಮಾಡಬೇಕಾಗುತ್ತದೆ. ಅದರ ಬಗ್ಗೆ ಈಗಾಗಲೇ ಒಂದು ವ್ಯವಸ್ಥಿತ ರೂಪದಲ್ಲಿ ಪರಿಣತರ ಸಲಹೆಗಳನ್ನು ತೆಗೆದುಕೊಂಡು ಯಾವ ಒಂದು ಹಂತದಲ್ಲಿ ಅದನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಚನ್ನಪಟ್ಟಣ ದಲ್ಲಿರತಕ್ಕ ಫ್ಯಾಕ್ಟರಿಯಲ್ಲಿ ಮೂರು ಷಿಫ್ಟ್‌ಗಳನ್ನು ಮಾಡಬೇಕೆಂದು ನನ್ನ ಅಭಿಪ್ರಾಯವಿದೆ. ಆದರೂ ಸರ್ಕಾರದ ವೀವಿಂಗ್ ಫ್ಯಾಕ್ಟರಿ ಮತ್ತು ಮೈಸೂರಿನ ರಯಾನ್ ಸಿಲ್ಕ್ ಫ್ಯಾಕ್ಟರಿಗಳಲ್ಲಿ ಇನ್ನೂ ಉತ್ತಮ ತರದ ರೇಷ್ಮೆಯನ್ನು ತಯಾರು ಮಾಡಿ ಎಲ್ಲರಿಗೂ ಆಕರ್ಷಣೀಯವಾದ ರೀತಿಯಲ್ಲಿ ಮಾಡುವ ದೆಸೆ ಯಿಂದ ಇನ್ನೂ ಹೆಚ್ಚಿಗೆ ಹಣವನ್ನು ವಿನಿಯೋಗಿಸಿ ಆಧುನಿಕ ಪದ್ಧತಿ ರೀತಿಯಲ್ಲಿ ಬೇರೆ ಬೇರೆ ಬಣ್ಣದ ಸಿಲ್ಕನ್ನು ತಯಾರು ಮಾಡಿ ಅದು ಹೆಚ್ಚಿನ ಜನರಿಗೆ ಯೋಗ್ಯ ಬೆಲೆಗೆ ಸಿಗಬೇಕೆಂಬ ದೃಷ್ಟಿಯಿಂದ ಅಲ್ಲಿಯೂ ಕೂಡ ಪ್ರಯತ್ನ ಮಾಡುತ್ತಿದ್ದೇವೆ. ಆ ಮೇಲೆ ಇನ್ನು ಕೆಲವು ಸದಸ್ಯರು ನಿನ್ನೆ ನಮ್ಮಲ್ಲಿರತಕ್ಕ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ ಹೇಳಿದರು. ಸಾಮಾನ್ಯವಾಗಿ ಈ ದೇಶದಲ್ಲಿ ದಳ್ಳಾಳಿಗಳ ಹಾವಳಿ ನಮ್ಮ ಬಡ ಜನರ ಮೇಲೆ ಬಹಳವಾಗಿದ್ದರೂ ಕೂಡ ನಮ್ಮ ಜನರ ರಕ್ತ ಹೀರುವ ಪರಿಸ್ಥಿತಿಯಲ್ಲಿದ್ದಾಗ, ಆಗ ಬಡಜನರು ಅಂತಹ ದಳ್ಳಾಳಿಗಳ ದವಡೆ ಯಿಂದ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ಕೊ-ಅಪರೇಟಿವ್ ಫೆಡರೇಷನ್ನನ್ನು ಷುರುಮಾಡಿದರು. ಸರ್ಕಾರ ನಿಗದಿಪಡಿಸುವ ಬೆಲೆಯಲ್ಲಿ ರೇಷ್ಮೆ ಯನ್ನು ಕೊಂಡು ಜನರಿಗೆ ವಿತರಣೆ ಮಾಡುವುದಕ್ಕೋಸ್ಕರ ಇದು ಸ್ಥಾಪಿತವಾಗಿದೆ. ಇದರಲ್ಲಿರುವ ಕೆಲವು ನ್ಯೂನತೆಗಳನ್ನು ಹೇಳಿದರು. ಅದನ್ನು ಇನ್ನೂ ಸುಧಾರಿಸ ಬೇಕಾಗಿದೆ ಪ್ರಾಮುಖ್ಯವಾಗಿ ಇದರ ಉದ್ದೇಶ ನಮ್ಮ ಜನರಿಗೆ ಯೋಗ್ಯ ಬೆಲೆಗೆ ಯೋಗ್ಯ ಸಮಯದಲ್ಲಿ ರೇಷ್ಮೆ ಸಿಗಬೇಕು ಮತ್ತು ಹಣ ಪೂರೈಕೆ ಅವರಿಗೆ ಆಗಬೇಕು ಎನ್ನುವುದೇ ಆಗಿದೆ. ಈ ಕಾರ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಲಾಭದಾಯಕವಾಗಿ ಅನುಕೂಲವಾಗಿ ಜನರಿಗೆ ಒಳ್ಳೆಯ ಸಹಕಾರಿಯಾಗಿದೆಯೋ ಎಂಬ ಬಗ್ಗೆ ಕೆಲವರು ನಿನ್ನೆ ಮಾತನಾಡಿದರು. ಈಗ ಒಟ್ಟು 90–95 ಲಕ್ಷ ರೂಪಾಯಿಗಳಷ್ಟು ಬಾಕಿ ನಿಂತಿದೆ. ಅದನ್ನು ವಸೂಲು ಮಾಡಬೇಕು. ಇದರ

ಬಗ್ಗೆ ಸಾಧಾರಣವಾಗಿ ನನ್ನ ಅರಿಕೆ ಏನೇಂದರೆ ನಮ್ಮ ಬಡಜನರು, ರೈತ ಜನರು ಒಂದು ಸೊಸೈಟಿ ಸ್ಥಾಪನೆ ಮಾಡುವ ಮುನ್ನ 'ಅಲ್ಲಿಂದ ತಂದಿದ್ದ ಸಾಲದ ಹಣವನ್ನು ಜವಾಬ್ದಾರಿಯಿಂದ ತಿರಿಗಿಸುವ ಕೆಲಸವನ್ನು ಅರಿತುಕೊಳ್ಳಬೇಕು ಮತ್ತು ಬೆಲೆಯನ್ನು ನಿಗದಿ ಮಾಡುವ ಬಗೆ ತೀವ್ರ ಗಮನವನ್ನು ಹರಿಸಬೇಕು. ಈ ರೀತಿ ಕೆಲವು ಸದಸ್ಯರು ವಾದ ಮಾಡಿದ್ದಾರೆ. ಆ ಬೆಲೆ ನಿಗದಿ ಮಾಡುವುದು ಒಂದು ಲೆವಲ್‌ನಲ್ಲಿ ಇರಬೇಕು. ಅದು ಕೆಳಗೆ ಹೋಗದ ಹಾಗೆ ನೋಡಿಕೊಂಡು ಅದನ್ನು ಹೆಚ್ಚಿಗೆ ಸ್ಟಾಕ್ ಮಾಡಿಕೊಡಬೇಕಾಗಿದೆ. ಮುಂದೆ ರೇಷ್ಮೆಯನ್ನು ಉಪಯೋಗಿಸಿಕೊಂಡು ಹೆಚ್ಚಿನ ಉತ್ಪತ್ತಿ ಮಾಡುವವರಿಗೆ ಮಾತ್ರ ಲೈಸನ್ಸ್ ಕೊಡುತ್ತೇವೆ. ಆದರೆ ಈ ರೇಟ್ಸ್ ಚಪಳ ತೀಕ್ಷ್ಣವಾದ ರೇಟ್ಸ್. ಇವೆಲ್ಲವೂ ಅಂತರರಾಷ್ಟ್ರೀಯ ಬೆಲೆಗಳ ಮೇಲೆ ಅವಲಂಬಿಸಿರುತ್ತದೆ. ಇದರಿಂದ ಹೆಚ್ಚು ಪ್ರಮಾಣದಲ್ಲಿ ಉತ್ಪಾದನೆ ಮಾಡಿ ರೇಟ್‌ನಲ್ಲಿ ಸ್ವಲ್ಪ ಮಟ್ಟಿಗೆ ಹಿಡಿತವನ್ನು ಇಟ್ಟುಕೊಂಡು ರೇಷ್ಮೆ ವ್ಯವಸಾಯಗಾರರಿಗೆ ಸಹಾಯ ಮಾಡಬೇಕೆಂದು ತಕ್ಕ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ನನ್ನ ಆಕ್ಷೇಪಣೆ ಅಲ್ಲ. ರೇಷ್ಮೆ ತೆಗೆದುಕೊಂಡು ಹೋಗಿ ಇಟ್ಟರೆ ಶೇಕಡ 80 ಭಾಗ ಅಡ್ವಾನ್ಸ್ ಕೊಡುತ್ತಾರೆ. ಕೆಲವು ಕಡೆಗಳಲ್ಲಿ ಅಡ್ವಾನ್ಸ್ ಪಡೆದು ರೇಷ್ಮೆ ಮಾರಿ ದುಡ್ಡು ವಾಪಸ್ಸು ಕೊಡುತ್ತಾರೆ. ಆ ರೀತಿ ರೇಷ್ಮೆ ತೆಗೆದುಕೊಂಡು ಮಾರಿದ ಮೇಲೂ ಇನ್ನೂ 90--95 ಲಕ್ಷ ರೂಪಾಯಿಗಳ ಬಾಕಿ ನಿಂತಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ನೀವು ಬರೀ ರೈತರ ಮೇಲೆ ಹೇಳುತ್ತಿದ್ದೀರಿ. ವರ್ತಕರ ಬಗ್ಗೆಯೂ ಹೇಳಬೇಕು. ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಇದೆ. ಅದು ಸ್ಪಷ್ಟವಾದ ಮಾತು. ಅಲ್ಲಿ ಏನು ನಡೆದಿದೆ ಎಂಬುದು ಮಾನ್ಯ ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ಗೊತ್ತಿದೆ. ಅವರು ಒಂದು ಮಾತನ್ನು ಹೇಳಿದರೆ, ನನ್ನ ಮನಸ್ಸಿಗೆ ಸಂತೋಷವಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್ :—ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನೇನು ನ್ಯೂನತೆಗಳಿವೆಯೋ ಅವನ್ನು ಪರಿಶೀಲಿಸಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಹೇಳಿದ್ದಾರೆ, ಅದೇ ರೀತಿಯಲ್ಲಿ ಕ್ರ್ಯಾಷ್ ಪ್ರೋಗ್ರಾಂ ಬಗ್ಗೆ ಬಹಳ ಜನರು ಬಹಳ ಕಟುವಾಗಿ ಟೀಕೆಮಾಡಿದ್ದಾರೆ. ಆ ಪ್ರೋಗ್ರಾಂನ್ನು ನಾವು ಅದನ್ನು ಅರಿತುಕೊಳ್ಳಬೇಕು. 60-67 ಕೋಟಿ ರೂಪಾಯಿಗಳ ಯೋಜನೆ ಈಗಾಗಲೇ ಮಾಡಬೇಕೆಂದು ನಿರ್ಧರಿಸಿದ್ದೇವೆ. ಅದನ್ನು ಸರ್ಕಾರ ಮಾಡುತ್ತದೋ ಇಲ್ಲವೋ ಎಂದು ಕೆಲವರು ಹೇಳಿದರು. ಆ ಪ್ರೋಗ್ರಾಂ ಏನಿದೆಯೋ ಅದನ್ನು 7 ವರ್ಷಗಳಲ್ಲಿಯೇ ಮಾಡಬೇಕೆಂಬ ಉದ್ದೇಶವಿದೆ. ಅದನ್ನು ಬೇರೆಬೇರೆ ವ್ಯವಹಾರಿಕ ಬ್ಯಾಂಕ್‌ಗಳು ಮತ್ತು ಕಮರ್ಷಿಯಲ್ ಬ್ಯಾಂಕುಗಳ ದುಡ್ಡು ತೆಗೆದುಕೊಂಡು ಆ ಪ್ರೋಗ್ರಾಂನ್ನು ಪೂರ್ತಿಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ವಿ. ಎಸ್. ಕೌಜಲಗಿ :—ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ರೈತರಿಗೆ ಮತ್ತು ರೀಲರ್ಸ್‌ಗೆ ಕೊಟ್ಟಿದ್ದು ಆಗಿದೆ. ಅದರ ಬಗ್ಗೆ ಅಂಕಿ ಅಂಶಗಳು ನನ್ನಲ್ಲಿವೆ. 67 ಲಕ್ಷ 46 ಸಾವಿರ ರೂಪಾಯಿಗಳನ್ನು ರೀಲರ್ಸ್ ಸೊಸೈಟಿಗಳಿಗೆ ಕೊಟ್ಟಿದ್ದೇವೆ. ಆದರೂ 5 ಲಕ್ಷ 63 ಸಾವಿರ ರೂಪಾಯಿಗಳನ್ನು ಕ್ರ್ಯಾಷ್ ಪ್ರೋಗ್ರಾಂನಲ್ಲಿ ಕೊಟ್ಟಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಾನ್ಯ ಮಂತ್ರಿಗಳು ಈ ಸಭೆಗೆ ಸರಿಯಾದ ಮಾಹಿತಿಯನ್ನು ಒದಗಿಸುತ್ತಾ ಇಲ್ಲ. ಕೈಗಾರಿಕೆಯ ಬ್ಯಾಂಕಿನವರು ಇಂಡಸ್ಟ್ರಿಯಲ್ ಬ್ಯಾಂಕಿನವರು ಹಣವನ್ನು ಕೊಟ್ಟಿದ್ದರೂ ಅದರ ಬಗ್ಗೆ ಡಿಪಾರ್ಟ್‌ಮೆಂಟಿನಿಂದ ಇನ್ನೂ ಸರ್ಕ್ಯುಲರನ್ನು ಕೊಟ್ಟಿಲ್ಲ.

ಆದ್ದರಿಂದ ಅವರು ಒದಗಿಸುತ್ತಿರುವ ಮಾಹಿತಿ ಸರಿಯಲ್ಲ. ಇದರಿಂದ ಸರ್ಕಾರದಿಂದ ರೇಷ್ಮೆ ಬೆಳೆಗಾರರಿಗೆ ಕೊಟ್ಟಂಥ ಅಭಿಪ್ರಾಯ ಬರುತ್ತದೆ ನಮಗೆ ಸುಮಾರು 100 ಚಿಲ್ಲರೆ ಕೋಆಪರೇಟಿವ್ ಸೊಸೈಟಿ ಹಾಗೂ ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳಿಗೆ ಸರ್ಕಾರದಿಂದ ನೇರವಾಗಿ ಕೊಡುತ್ತಾ ಇಲ್ಲ. ಇದುವರೆಗೂ ಬ್ಯಾಂಕುಗಳು ಅದನ್ನು ಕೊಟ್ಟಿಲ್ಲ. ಇಂಡಸ್ಟ್ರಿಯಲ್ ಬ್ಯಾಂಕಿನವರು ಸ್ವಲ್ಪ ಮಟ್ಟಿಗೆ ಅಂದರೆ 500 ರೂಪಾಯಿಗಳ ವರೆಗೆ ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದಲೇ ಕ್ರ್ಯಾಷ್ ಪ್ರೋಗ್ರಾಂ ನಲ್ಲಿ 60 ಕೋಟಿ ರೂಪಾಯಿಗಳು ಎಂಬುದಾಗಿ ಹೇಳಿದ್ದಾರೆ. ಇದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ, ರೈತರಿಗೆ ಒದಗಿಸಿ ಕೊಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ನೇರವಾಗಿ ರೈತರಿಗೆ ಹೇಳಬೇಕು.

ಶ್ರೀ ವಿ. ಎಸ್. ಕೌಜಲಗಿ :— ಅದನ್ನು ಕಮರ್ಷಿಯಲ್ ಬ್ಯಾಂಕ್‌ನಿಂದ ಕೊಡುತ್ತಾರೆ. ಸರ್ಕಾರದಿಂದ ನೇರವಾಗಿ ಹೇಗೆ ಕೊಡುವುದಕ್ಕಾಗುತ್ತದೆ ?

ಶ್ರೀ ಸಿ. ಬೈರೇಗೌಡ :— 74 ಸಾವಿರ ಬಾವಿಗಳನ್ನು ತೆಗೆಯುವುದಕ್ಕೆ ಕ್ರ್ಯಾಷ್ ಪ್ರೋಗ್ರಾಂ ನಲ್ಲಿ ಒಂದು ಯೋಜನೆಯನ್ನು ಹಾಕಿದ್ದಾರೆ. ಆದರೆ ಒಂದೆರಡು ವರ್ಷಗಳಿಂದ ಎಷ್ಟು ಬಾವಿಗಳನ್ನು ತೆಗೆದಿದ್ದಾರೆ ? ಅದರ ಬಗ್ಗೆ ಈ ಸಭೆಗೆ ಅಂಕಿಅಂಶಗಳನ್ನು ಕೊಡಿ. ನಿಮ್ಮ ರಿಜರ್ವ್ ಬ್ಯಾಂಕಿನವರು ರೈತರಿಗೆ ಖಾತ್ರಿ ಕೊಡುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿಸಿ.

ಶ್ರೀ ವಿ. ಎಸ್. ಕೌಜಲಗಿ :— ಕಮರ್ಷಿಯಲ್ ಬ್ಯಾಂಕಿನವರು ನಮಗೆ ದುಡ್ಡು ಕೊಡಬೇಕಾದರೆ ಅವರು ರಿಜರ್ವ್ ಬ್ಯಾಂಕಿನಿಂದ ರೀಫೈನಾನ್ಸಿಂಗ್ ವಿಷಯವಾಗಿ ಕೇಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಅವರು ನಮಗೆ ಕೊಟ್ಟಮೇಲೆ ನಾವು ರೈತರಿಗೆ ಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ :— ರಿಜರ್ವ್ ಬ್ಯಾಂಕಿನವರು ಇದನ್ನು ಇನ್ನೂ ಒಪ್ಪಲಿಲ್ಲ. ಅದಿನ್ನೂ ಅವರ ಪರಿಶೀಲನೆಯಲ್ಲಿದೆಯೆಂದು ಮೊದಲು ಹೇಳಿದ ಉತ್ತರ. ಕ್ರ್ಯಾಷ್ ಪ್ರೋಗ್ರಾಂ ನಲ್ಲಿ 5 ಲಕ್ಷ ರೂಪಾಯಿಗಳಲ್ಲಿ ರೀಲರ್ಸ್‌ಗೆ ಎಷ್ಟು ಕೊಟ್ಟಿದ್ದಾರೆ, ಅದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತಿಳಿಸಿದರೆ ನಮಗೆ ಸಂತೋಷವಾಗುತ್ತದೆ.

‡ ಶ್ರೀ ಡಿ. ದೇವರಾಜ್ ಅರಸ್ :—ಕ್ರ್ಯಾಷ್ ಪ್ರೋಗ್ರಾಂ ಮಾಡಿದ್ದು ನಿಜ. ಹಣ ತೆಗೆದುಕೊಳ್ಳುವುದಕ್ಕೆ ಒಂದು ತೊಂದರೆ ಏನು ಬಂತೆಂದರೆ, ಮಾಮೂಲಾಗಿರತಕ್ಕ ಕೋಆಪರೇಟೀವ್ ಬ್ಯಾಂಕುಗಳು, ಕೋಆಪರೇಟೀವ್ ಸೊಸೈಟಿಗಳಲ್ಲಿ ರೈತರು ಸರ್ವೇ ಸಾಧಾರಣವಾಗಿ ಸದಸ್ಯರು ಆಗಿದ್ದರೆ, ಅಥವಾ ಷೇರುಹೋಲ್ಡರ್ಸ್ ಆಗಿದ್ದರೆ, ಅಂತಹುಗಳಿಗೆ ಕೆಲವು ಸಂದರ್ಭಗಳಲ್ಲಿ ಸಾಲ ಸಿಗುತ್ತದೆ. ಪಂಚಾಯತಿಯಲ್ಲಿ ಒಂದೇ ಒಂದು ಸೊಸೈಟಿ ಇರುತ್ತದೆ, ತಾಲ್ಲೂಕು ಕಮಿಟಿಯಲ್ಲಿರತಕ್ಕ ಒಂದು ಬ್ಯಾಂಕ್ ಮೂಲಕ ರೈತರಿಗೆ ಸಾಲ ತೆಗೆದುಕೊಳ್ಳಿ ಎಂದರೆ ಅಲ್ಲಿಯೂ ಒಂದು ತೊಂದರೆ ಬರುತ್ತದೆ. ಏಕೆಂದರೆ ಅಲ್ಲಿ ಅಗ್ರಿಕಲ್‌ಚರ್‌ಗೆ ಸಂಬಂಧಪಟ್ಟ ರೈತರು ಇರುತ್ತಾರೆ. ಅದಕ್ಕೆ ಸಂಬಂಧಪಡದೇ ಇರತಕ್ಕ ರೈತರೂ ಸಹ ಸದಸ್ಯರಾಗಿರುತ್ತಾರೆ. ಆ ಬ್ಯಾಂಕುಗಳಿಗೆ ಒಟ್ಟು ಮೊತ್ತ ಬಂದಾಗ ಪ್ರತ್ಯೇಕವಾಗಿ ಸದಸ್ಯರುಗಳಾಗಿ ರೈತರು ಸೇರಿದ ಕೂಡಲೇ ಸಾಲ ಕೊಡುವುದಿಲ್ಲ. 10 ಜನ ಸೆರಿ ಕಲ್ಚರ್‌ಗೆ ಸಂಬಂಧಪಟ್ಟ ರೈತರು ಇದ್ದು 25 ಜನರು ಬೇರೆ ಇದ್ದರೆ, ಆಗ ಪ್ರತ್ಯೇಕವಾಗಿ ಸಾಲ ಕೊಡುವ ಬಗ್ಗೆ ಯೋಚನೆ ಮಾಡಿ ನೋಡುವುದಿಲ್ಲ. ರೀಲರ್ಸ್ ಮತ್ತು ಬೆಳೆಗಾರರು ಸೇರಿದಂಥ ಒಂದು ಪ್ರತ್ಯೇಕವಾದಂಥ ಸೊಸೈಟಿಗಳನ್ನು ಬೇಕಾದರೆ ಮಾಡೋಣ, ಈಗಾಗಲೇ 10,20 ಸಂಘಗಳು ಈ ವಿಚಾರದಲ್ಲಿ ಕೋಲಾರ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದಾರೆ. ಆ ರೀತಿಯಾಗಿ ಪ್ರಾರಂಭ ಮಾಡಿದಮೇಲೆ ಫಾರಂ ವಗ್ಯೆರೆ ಮಾಡಿದಮೇಲೆ ಅವರು ಅಲ್ಲಿಗೆ ಹೋಗಿ ಕೇಳಿದಾಗ ರಿಜರ್ವ್ ಬ್ಯಾಂಕಿನವರು ಈ ಕೈಗಾರಿಕೆಗೆ ಎಷ್ಟು ಬಂಡವಾಳ ಹಾಕಿದರೂ ನೀವು ಪ್ರತ್ಯೇಕವಾದಂಥ ಸೊಸೈಟಿಯನ್ನು ಮಾಡಿದರೆ ನಾವು ಹಣ ಕೊಡುವುದಿಲ್ಲವೆಂದು ಹೇಳಿದರು. ಅದಕ್ಕೋಸ್ಕರ ಈ ನಮ್ಮ ಪ್ರೋಗ್ರಾಂ ಪ್ರಕಾರ ಹೋಗುವುದಕ್ಕೆ ಸ್ವಲ್ಪ ತೊಂದರೆಯಾಗಿದೆ. ಇದು ಬಹಳ ನಿಧಾನವಾಗಬೇಕಾಯಿತು. ರೈತರಿಗೆ ಯಾವ ಪ್ರಮಾಣದಲ್ಲಿ ಸಹಾಯ ದೊರಕಬೇಕಾಗಿತ್ತೋ ಆ ಪ್ರಮಾಣದಲ್ಲಿ ದೊರಕಿಲ್ಲ ನಮಗೆ ಅದಷ್ಟು ಪ್ರಯತ್ನಮಾಡಿ ರೈತರಿಗೆ ಸಹಾಯ ಮಾಡಬೇಕೆಂಬುದೇ ನಮ್ಮ ಉದ್ದೇಶ.

12-30 P. M.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಶಾರ್ಟ್ ಟರ್ಮ್ ಲೋನ್ ಎಂದು ಐದುನೂರು ರೂಪಾಯಿಗಳನ್ನು ಕೊಡುತ್ತಾರೆ ಅದರ ಮೇಲೆ ಕೊಡುವುದಿಲ್ಲ,

ಶ್ರೀ ಡಿ. ದೇವರಾಜ್ ಅರಸ್.—ಇದಕೆ ರಿಸರ್ವ್ ಬ್ಯಾಂಕಿನವರು ಅಡ್ಡಿ ತಂದುದ್ದು. ಇದರ ಬಗ್ಗೆ ನಾವು ರಿಸರ್ವ್ ಬ್ಯಾಂಕಿನ ಗೌರ್ನರ್ ಜೊತೆಯಲ್ಲಿ ಮಾತನಾಡಿದ್ದೇವೆ. ನೀವು ಪ್ರೋಗ್ರಾಂ ಕೊಟ್ಟು ಬಿಟ್ಟಿದ್ದೀರಿ ಈಗ ದುಡ್ಡು ಕೊಡುವುದಿಲ್ಲ ಎಂದು ಹೇಳಿದರೆ ನಮ್ಮ ರೈತರಿಗೆ ಇದರಿಂದ ಯಾವ ಪ್ರಯೋಜನ ವಾಗುವುದಿಲ್ಲ. ಅದನ್ನು ತಾತ್ವಿಕವಾಗಿ ಅವರು ಒಪ್ಪಿಕೊಂಡಿದ್ದಾರೆ. ಆದರೆ ಫಾರ್ಮಾಲಿಟೀಸ್ ಎಲ್ಲಾ ಕಂಪ್ಲೀಟ್ ಮಾಡುತ್ತಿದ್ದಾರೆ ಪ್ರತ್ಯೇಕವಾಗಿ ಸೊಸೈಟಿ ಗಳಿಗೆ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಾನು ರೇಷ್ಮೆ ಬೆಳೆಗಾರರ ಸಂಘ ಸ್ಥಾಪನೆ ಮಾಡಿದವರಲ್ಲಿ ನಾನು ಒಬ್ಬ. ಶ್ರೀಮಾನ್ ಉತ್ತಮನ್ ಎಂದು ಒಬ್ಬ ರೇಷ್ಮೆ ಇಲಾಖೆಯಲ್ಲಿ ಡೈರೆಕ್ಟರು ಇದ್ದರು ಅವರ ಕಾಲದಲ್ಲಿ ದೇಶದಲ್ಲೆಲ್ಲಾ ಪ್ರಚಾರಮಾಡಿ ಇದರಲ್ಲಿ ಕೆಲವು ಷೇರದಾರರು ಇದ್ದಾರೆ. ಡಿಸ್ಟ್ರಿಕ್ಟ್ ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಪ್ರೈಮರಿ ಸೊಸೈಟಿಗಳು ಷೇರುದಾರರು ಯಾವ ಡಿಸ್ಟ್ರಿಕ್ಟ್ ಬ್ಯಾಂಕುಗಳು ಸ್ಟೇಟ್ ಸೆಂಟ್ರಲ್ ಇಂಡಸ್ಟ್ರೀಯಲ್ ಬ್ಯಾಂಕಿನಿಂದ ಫೈನಾನ್ಸ್ ಬರಬೇಕು. ಡಿಸ್ಟ್ರಿಕ್ಟ್ ಬ್ಯಾಂಕುಗಳಿಂದ ನೇರವಾಗಿ ಡೀಲ್ ಮಾಡು ವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಸ್ಪಷ್ಟವಾಗಿ ಗೊತ್ತಿದೆ ಯಾವ ಬ್ಯಾಂಕಿನಿಂದ ಏಜನ್ಸಿ ಮುಖಾಂತರವಾಗಿ ಕೊಡಿಸುತ್ತೀರಾ ? ಶಾರ್ಟ್ ಟರ್ಮ್ ಲೋನ್ ಐದುನೂರು ರೂಪಾಯಿ ಕೊಡುತ್ತಾರೆ ಅದು 11 ತಿಂಗಳೊಳಗೆ ವಾಪಸ್ ಕೊಡಬೇಕು. ಅದರಿಂದ ಮೀಡಿಯಂ ಮತ್ತು ಲಾಂಗ್‌ಟರ್ಮ್ ಲೋನ್ ಯಾವಾಗ ಕೊಡಿಸುತ್ತೀರಿ ?

ಶ್ರೀ ಡಿ ದೇವರಾಜ ಅರಸ್ :— ಫಾರ್ಮಾಲಿಟೀಸ್ ಕಂಪ್ಲೀಟ್ ಆದ ತಕ್ಷಣ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಡಿಸ್ಟ್ರಿಕ್ಟ್ ವಿಷಯದಲ್ಲಿ ಪ್ರತ್ಯೇಕವಾಗಿ ಹಣ ಕೊಡಿಸುವುದಕ್ಕೆ ಕಮರ್ಷಿಯಲ್ ಬ್ಯಾಂಕಿನಿಂದ ಇನ್ನು ಇತರೆ ಬ್ಯಾಂಕುಗಳಿಂದ ಪ್ರೆಷರ್ ಮಾಡಿ ಎಷ್ಟೆಷ್ಟು ಸೊಸೈಟಿಗಳಿವೆ ಅವುಗಳನ್ನು ಸೇರಿಸಿ ಅವರಿಂದ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಮ್ಮ ಅನುಮಾನ ಪೂರ್ತಿಯಾಯಿತೆ ?

ಶ್ರೀ ಕೆ.ಹೆಚ್. ಹನುಮೇಗೌಡ.—ತಾವು ಕಮರ್ಷಿಯಲ್ ಬ್ಯಾಕಿನಿಂದ ಹಣ ಕೊಡಿಸುತ್ತೇನೆ ಎಂದು ಹೇಳುತ್ತೀರಿ ಕೆಲವರಿಗೆ ಸೊಸೈಟಿಗಳಿಂದ ಕೊಡಿಸುತ್ತೀರಿ ಆಗ

ಏನಾಗುತ್ತದೆ ಎಂದರೆ ಸೊಸೈಟಿ ಮುಖಾಂತರ ತೆಗೆದುಕೊಳ್ಳುವವರಿಗೆ 9 ಪರ್ಸೆಂಟ್ ಕಮರ್ಷಿಯಲ್ ಬ್ಯಾಂಕುಗಳಿಂದ ತೆಗೆದುಕೊಳ್ಳುವವರಿಗೆ 18 ಪರ್ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಅದ್ದರಿಂದ ಅವರು ಮಾಡಿದ ಪುಣ್ಯ ಏನು ಇವರು ಮಾಡಿದ ಪಾಪವಾದರೂ ಏನು ?

ಶ್ರೀ ಡಿ ದೇವರಾಜ್ ಅರಸ್ :—ಬಹುಶಃ ಅವರು ಹೇಳಿದ್ದು ಸರಿ ಆದರೆ ಅದರಿಂದ ಕೆಲವರಿಗೆ ತೊಂದರೆಯಾಗುತ್ತದೆ. ಅಗ್ರಿಕಲ್ಚರ್ಸ್ ಬಗ್ಗೆ ಪ್ರತ್ಯೇಕವಾದ ಒಂದು ನೀತಿಯನ್ನು ಅನುಸರಿಬೇಕಾಗುತ್ತದೆ ಅದನ್ನು ನಾನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ವಿ. ಎಸ್. ಕೌಜಲಗಿ—ಈ ಸಂಸ್ಥೆಗಳನ್ನು ಕೇಂದ್ರೀಕರಿಸುವ ಬಗ್ಗೆ ಕೆಲವು ಸಲಹೆಗಳನ್ನು ಹೇಳಿದ್ದಾರೆ. ಇದು ಕೇಂದ್ರ ಸರ್ಕಾರದಿಂದ ಸ್ಥಾಪನೆಯಾದಂಥ ಸಂಸ್ಥೆ. ಈ ಕೇಂದ್ರಕ್ಕೆ ಒಂದು ಹೆಕ್ಟೇರ್ ಎಕರೆಯಷ್ಟು ಭೂಮಿ ಇದ್ದು ಸುಮಾರು 20 ಸಾವಿರ ರೂಪಾಯಿ ಉತ್ಪಾದನೆಯಾಗುತ್ತದೆಂದು ಕೆಲವರು ಹೇಳಿದರು. ನಾವು ಅರ್ಥ ಮಾಡಿಕೊಳ್ಳಬೇಕು. ಯಾವ ರೀಸರ್ಚ್ ಸೆಂಟರ್‌ಗಳು ಕೂಡ ಎಕ್ಸ್‌ಪರಿಮೆಂಟಲ್ ಬೇಸಿಸ್ ಮೇಲೆ ಇವೆ ಅವುಗಳು ಕಮರ್ಷಿಯಲ್ ರೂಪಕ್ಕೆ ತರಬೇಕಾದರೆ ಅದನ್ನು ನಾವು ಅರ್ಥ ಮಾಡಿಕೊಂಡು ಪರಿಪೂರ್ಣವಾದಂಥ ಮಾಹಿತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ ಅವರು ಮೊಟ್ಟ ಮೊದಲು ಮಲ್ಬರಿಯನ್ನು ಬೆಳೆಸಬೇಕು ಮತ್ತು ಆ ಹುಳುಗಳಿಗೆ ಬರತಕ್ಕಂಥ ರೋಗಗಳನ್ನು ಯಾವ ರೀತಿಯಿಂದ ನಿವಾರಣೆ ಮಾಡಬಹುದು ಎಂದು ರೀಸರ್ಚನ್ನು ಹೆಚ್ಚಿನ ರೀತಿಯಲ್ಲಿ ನಮ್ಮ ರೈತರಿಗೆ ಮತ್ತು ನಮ್ಮ ಜನತೆಗೆ ಉಪಯೋಗವಾಗುವಂತೆ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶ. ಯಾವಯಾವ ಜಾಗದಲ್ಲಿ ಸ್ಥಾಪಿಸಬೇಕೆಂದು ಪರ್ಯಾಲೋಚನೆ ಮಾಡಿ ಶುರುಮಾಡುತ್ತೇವೆ. ನೆನ್ನೆ ನಡೆದಿರತಕ್ಕಂಥ ವಿಷಯದ ಚರ್ಚೆಯಲ್ಲಿ ಪರಿಪೂರ್ಣವಾಗಿ ಕಾರ್ಯಾಚರಣೆಯಲ್ಲಿ ಯೋಚನೆ ಮಾಡಬೇಕೆಂದು ತಿಳಿಸಲು ಇಚ್ಛೆಪಡುತ್ತೇನೆ. ನಾನು ಮಂಡಿಸಿರತಕ್ಕಂಥ ಒಂದು ಬೇಡಿಕೆಯನ್ನು ತಾವು ಎಲ್ಲರೂ ಅತ್ಯಾನಂದದಿಂದ ಒಪ್ಪಿಗೆ ಕೊಡುತ್ತೀರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ: ಒಂದು ಮುಖ್ಯವಾದ ಪ್ರಶ್ನೆ ಏನು ಎಂದರೆ ರಾಜ್ಯದಲ್ಲಿ 24 ಮಾರ್ಕೆಟ್ಟುಗಳು ಇದ್ದು ಅದರಲ್ಲಿ 5-6 ಮಾರ್ಕೆಟ್‌ಗಳನ್ನು ಬಿಟ್ಟರೆ ಉಳಿದ ಮಾರ್ಕೆಟ್‌ಗಳಲ್ಲಿ ಸ್ಥಳವಿಲ್ಲ. ಮಳೆಗಾಲದಲ್ಲಿ ಅವಕ್ಕೆ ಬಹಳ ತೊಂದರೆಯಾಗಿದೆ. ಅದಕ್ಕೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು 3–4 ತಿಂಗಳೊಳಗೆ ಮಳೆಗಾಲ ಪ್ರಾರಂಭವಾಗುವುದಕ್ಕೆ ಮೊದಲು ಕನಿಷ್ಟ ಪಕ್ಷ ಚಾವಣಿಯನ್ನಾದರೂ ಹಾಕಿದರೆ ಅನುಕೂಲವಾಗುತ್ತದೆ. ಇನ್ನು ಸೆಂಟ್ರಲ್ ಸಿಲ್ಕ್

(ಶ್ರೀ ಸಿ. ಬೈರೇಗೌಡ)

ಬೋರ್ಡ್ ಖಚೇರಿ ಬಾಂಬೆಯಲ್ಲಿ ಇದೆ. ಶೇಕಡ 80ರಷ್ಟು ಸಿಲ್ಕ್ ಉತ್ಪಾದನೆ ನಮ್ಮ ಕರ್ನಾಟಕದಲ್ಲಿ ಉತ್ಪಾದನೆಯಾಗುತ್ತಿದೆ. ಈ ಖಚೇರಿಯನ್ನು ಇಲ್ಲಿಗೆ ವರ್ಗಾವಣೆ ಮಾಡಬೇಕೆಂದು ಹೇಳುತ್ತೇನೆ. ರೀಸರ್ಚ್‌ಗೆ ಸಂಬಂಧಪಟ್ಟಹಾಗೆ ವ್ಯವಸಾಯದ ಒಂದು ವಿಶ್ವವಿದ್ಯಾನಿಲಯ ಇದೆ ಅದಕ್ಕೆ ಇದನ್ನು ನೋಡುವಂತೆ ಸರ್ಕಾರದವರು ಆದೇಶ ನೀಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ :—ಮಾರ್ಕೆಟ್ ಬಗ್ಗೆ ಹೇಳಿದಿರಿ ಅದನ್ನು ಗಮನಿಸುತ್ತೇನೆ. ಚಾವಣಿ ಹಾಕಿಸುವುದಕ್ಕೆ ಸಾಕಷ್ಟು ಹಣ ಒದಗಿಸಿಲ್ಲ ಅದನ್ನು ಜರೂರಾಗಿ ಮಾಡುವುದಕ್ಕೆ ಗಮನಿಸುತೇನೆ. ಇನ್ನು ಬಾಂಬೆಯಲ್ಲಿರುವ ಕಚೇರಿಯ ವಿಷಯ ಹೇಳಿದರು. ಅದು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಸೇರಿದ್ದು. ಆದ್ದರಿಂದ ಅದು ಅಲ್ಲಿ ಇದ್ದರೆ ತೊಂದರೆ ಏನು ಇದೆ? ಅದನ್ನು ಬೆಂಗಳೂರಿಗೆ ತರುವುದು ಮೈಸೂರಿನಲ್ಲಿ ಪ್ರಾರಂಭವಾಗಿರುವ ಸೆಂಟರ್‌ಗೆ ಶ್ರೀಮಾನ್ ಸಿ. ಸುಬ್ರಮಣ್ಯಂ ರವರು ಅಸ್ತಿಭಾರ ಹಾಕಿದರು ಈಗಾಗಲೇ ಮುಗಿಯುವುದರಲ್ಲಿ ಇದೆ. ಆದ್ದರಿಂದ ಈ ವಿಷಯವನ್ನು ಏತಕ್ಕೆ ಈಗ ಹೇಳುತ್ತಿದ್ದೀರಿ ಬಿಡಿ.

† ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ನೆನ್ನೆ ಶಾಸಕಾಂಗ, ಕೈಗಾರಿಕೆ ಮತ್ತಿತರ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟಂಥ ಚರ್ಚೆಯನ್ನು ಬಹಳ ಆಸಕ್ತಿಯಿಂದ ಕೇಳಿದ್ದೇನೆ. ಈ ಬೇಡಿಕೆಗಳ ಚರ್ಚೆಯ ಕಾಲದಲ್ಲಿ ಕಳೆದ ವರ್ಷ ನಾವು ಮಂಡಿಸಿದ ಬೇಡಿಕೆಗಳನ್ನು ಈ ಸಭೆ ಅನುದಾನ ಮಾಡಿದಮೇಲೆ ಈ ಇಲಾಖೆಗಳಲ್ಲಿ ಇದರ ವೃತ್ತದಲ್ಲಿ ಬಂದಿರತಕ್ಕಂಥ ಕೈಗಾರಿಕೆಗಳ ಬೆಳವಣಿಗೆಯಾಗಿರತಕ್ಕಂಥ ಕೈಗಾರಿಕೆಗಳು ಹೇಗೆ ಕೆಲಸ ಮಾಡಿವೆ ಆದರಿಂದ ರಾಷ್ಟ್ರೀಯ ಉತ್ಪಾದನೆ ಎಷ್ಟು ಹೆಚ್ಚಾಗಿದೆ ಮತ್ತು ಹೊಸ ಕೈಗಾರಿಕೆಗಳು ಬಂದಿವೆ, ಹಾಗೂ ಹೊಸ ಹೊಸ ಬಂಡವಾಳ ನಾವು ಎಷ್ಟು ರೂಢಿಸಿದ್ದೇವೆ ಅದರಿಂದ ಉಂಟಾಗಿರತಕ್ಕಂಥ ಉದ್ಯೋಗದ ಅವಕಾಶ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ಇವತ್ತಿನ ದಿವಸ ಸಿಂಹಾವಲೋಕನ ಮಾಡುವುದಕ್ಕೆ, ವಿಮರ್ಶೆ ಮಾಡುವುದಕ್ಕೆ ಅದರ ಒಳಿತು ಕೆಟ್ಟದು ಇವುಗಳನ್ನು ಹಾಗೂ ವಿಫಲತೆ ಸಾಧನೆ ಇವೆರಡನ್ನೂ ಕೂಡ ಚರ್ಚೆ ಮಾಡುವುದಕ್ಕೆ ಇದು ಒಂದು ಉತ್ತಮವಾದಂಥ ಅವಕಾಶ. ಕೈಗಾರಿಕೆಗಳ ಬಗ್ಗೆ ಹೇಳುವುದಕ್ಕೆ ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಹೆಚ್. ಡಿ. ದೇವೇಗೌಡರು ಸಂಸದೀಯ ಶಾಸಕಾಂಗದ ಬಗ್ಗೆ ನಾಲ್ಕು ಮಾತುಗಳನ್ನು ಬಹಳ ಕಳಕಳಿಯಿಂದ ಹೇಳಿದ್ದಾರೆ. ನಾನು ಕಳೆದ ಅಧಿವೇಶನದಲ್ಲಿ ತಾತ್ವಿಕವಾಗಿ ಶಾಸಕಾಂಗ ಮತು ಕಾರ್ಯಾಂಗ

ಬೇರೆ ಬೇರೆ ಇರಬೇಕು ಅಥವಾ ಅದಕ್ಕಿಂತಲೂ ಉತ್ತಮವಾದಂಥ ದೃಷ್ಟಿ ಯಾವುದು ಎಂದರೆ ಶಾಸಕಾಂಗಕ್ಕೆ ಹೆಚ್ಚಿಗೆ ಸ್ವಯಂ ಅಧಿಕಾರವನ್ನು ಕಲ್ಪಿಸಿ ಕೊಡತಕ್ಕಂಥ ಚೌಕಟ್ಟಿನಲ್ಲಿ ನಾವು ಕೆಲಸ ಮಾಡಬೇಕು ಎನ್ನತಕ್ಕಂಥದ್ದನ್ನು ತಾತ್ವಿಕವಾಗಿ ಸರ್ಕಾರದ ಪರವಾಗಿ ನಾನು ಒಪ್ಪಿದ್ದೇನೆ. ಇದರ ಬಗ್ಗೆ ಇತ್ತೀಚೆಗೆ ನೆರೆ ರಾಜ್ಯಗಳಲ್ಲಿ ಹೋಗಿ ಇದನ್ನು ನೋಡಿಕೊಂಡು ಬಂದಿದ್ದೇವೆ, ನಾವು ಅಧ್ಯಯನ ಮಾಡಿರತಕ್ಕಂಥವರ ಆಧಾರದ ಮೇಲೆ ಮತ್ತು ನಮ್ಮ ರಾಜ್ಯದ ಅವಶ್ಯಕತೆಗಳನ್ನು ಗಮನಿಸಿ ನಾವು ಯೋಗ್ಯವಾದಂಥ ಸರ್ವರಿಗೂ ಸಮಾಧಾನ ಕರವಾದಂಥ ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕಂಥದ್ದು ಮಾತ್ರ ಈಗ ಉಳಿದಿರತಕ್ಕಂಥ ವಿಚಾರ ಎಂದು ಈ ಸಮಯದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಎರಡನೆಯದಾಗಿ ಇಲ್ಲಿ ಕೆಲಸ ಮಾಡತಕ್ಕಂಥ ರಿಪೋರ್ಟರ್ಸ್ ಮತ್ತಿತರ ನಾಲ್ಕನೇ ದರ್ಜೆಯ ಕೆಲಸಗಾರರ ಬಗ್ಗೆ ಕೂಡ ಮಾನ್ಯ ಶ್ರೀ ಹೆಚ್. ಡಿ. ದೇವೇ ಗೌಡರವರು ಕೆಲವು ವಿಚಾರಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ ಹಾಗೂ ಸರ್ಕಾರದ ಗಮನಕ್ಕೂ ತಂದಿದ್ದಾರೆ, ಅವುಗಳನ್ನು ಕೂಡ ನಾವು ಯೋಗ್ಯವಾದಂಥ ರೀತಿಯಲ್ಲಿ ಪರಿಶೀಲನೆ ಮಾಡುವುದಕ್ಕೆ ಅರ್ಹವಾಗಿರತಕ್ಕಂಥ ವಿಚಾರಗಳು ಎಂದು ಈ ಸಮಯದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಹೆಚ್. ಟಿ ಕೃಷ್ಣಪ್ಪ :—ತಾವು ಕಳೆದ ಸಾರಿ ಉತ್ತರ ಕೊಡುತ್ತಾ, ವಿಧಾನ ಮಂಡಲದಲ್ಲಿರತಕ್ಕಂಥ ವರದಿಗಾರರಿಗೆ ವಿಶೇಷ ಭತ್ಯವನ್ನು ಕೊಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಟ್ಟಿದ್ದೀರಿ ಈಗ ಪುನಃ ಮತ್ತೆ ಅದೇ ಆಶ್ವಾಸನೆಯನ್ನು ಕೊಡುತ್ತಿದ್ದೀರಿ ಎನ್ನುವ ಚಿಂತೆಯಾಗಿದೆ.

ಶ್ರೀ ಎಸ್. ಎಂ. ಕೃಷ್ಣ :—ಮಾನ್ಯ ಸದಸ್ಯರುಗಳು ನಾನು ಉತ್ತರ ಕೊಡತಕ್ಕಂಥ ಕಾಲದಲ್ಲಿ, ನಾನು ಉತ್ತರ ಕೊಡಲಿಕ್ಕೆ ಅನಾನುಕೂಲವಾಗ ತಕ್ಕಂಥ ರೀತಿಯಲ್ಲಿ ಮಧ್ಯೆ ಪ್ರವೇಶ ಮಾಡಬಾರದೆಂದು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಹಾಗೆ ಏನಾದರೂ ಕ್ಲಾರಿಫಿಕೇಷನ್ ಬೇಕಾಗಿದ್ದರೆ, ವಿವರಣೆ ಬೇಕಾಗಿದ್ದರೆ ಅದನ್ನು ಮನಸ್ಸಿನಲ್ಲಿಟ್ಟು ಕೊಂಡು, ಇಲ್ಲ ಬರೆದಿಟ್ಟುಕೊಂಡು ಕೊನೆಯಲ್ಲಿ ಕೇಳಿದರೆ ವಿವರಣೆ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆಂದು ಹೇಳುತ್ತಿದ್ದೇನೆ ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಬಂಗಾರಪ್ಪನವರು ನಿನ್ನೆ ಅವರ ಭಯಂಕರವಾದಂಥ ಭಾಷಣದಿಂದ ಚರ್ಚೆಯನ್ನು ಪ್ರಾರಂಭ ಮಾಡಿದರು. ಆನಂದನಾಮ ಸಂವತ್ಸರ ಹೋಗಿ ರಾಕ್ಷಸನಾಮ ಸಂವತ್ಸರ ಬರತಕ್ಕಂಥದ್ದು ಇನ್ನು ಕೆಲವು ದಿವಸಗಳು ಉಳಿದಿದೆ ಆದರೆ ಅವರ ಭಯಂಕರ ಭಾಷಣದ ಪರಿಣಾಮವಾಗಿ ಏನಾಯಿತೆಂದರೆ ರಾಕ್ಷಸನಾಮ ಸಂವತ್ಸರ ಅವರ ಭಾಷಣದ ಜೊತೆಯಲ್ಲಿ ಈಗಲೇ ನಮ್ಮ ರಾಜ್ಯದಲ್ಲಿ ತಂದಿದ್ದಾರೆ ಎಂದು ಹೇಳಿದರೆ ಅವರು ತಪ್ಪಾಗಿ ತಿಳಿದುಕೊಳ್ಳಬಾರದೆಂದು ಹೇಳುತ್ತೇನೆ. ಅವರ ಭಾಷಣದ ಧಾಟಿ,

(ಶ್ರೀ ಎಸ್. ಎಂ. ಕೃಷ್ಣ)

ಹೋದ ರೀತಿ, ಹಿಡಿದ ದಿಕ್ಕು, ವೇಗ ಇವುಗಳೆಲ್ಲವನ್ನೂ ಗಮನಿಸಿದರೆ, ಹೊಸದಾಗಿ ಕಾರು ತೆಗೆದುಕೊಂಡವರಿಗೆ ಕಾರನ್ನು ಬಿಡುವುದಕ್ಕೆ ಬರುವುದಿಲ್ಲ, ಅಂಥವರು ಕಾರನ್ನು ಟ್ರಾಫಿಕ್ ಇರುವ ಕಡೆ ತೆಗೆದುಕೊಂಡು ಹೋದರೆ ಅಲ್ಲಿ ಹೇಗೆ ಅಸ್ತವ್ಯಸ್ತವಾಗುತ್ತದೆಯೋ ಆ ರೀತಿಯಾಗಿದೆ. ಒಂದು ರೀತಿಯಲ್ಲಿ ಟೀಕೆ ಮಾಡಬೇಕು ನಿಜ. ಟೀಕೆ ಮಾಡಬೇಕಾದರೆ ಟೀಕೆಯು ಅಂಕಿ ಅಂಶಗಳು ಭದ್ರವಾದಂಥ ಆಧಾರಸಹಿತವಾಗಿರಬೇಕು ; ವೈಯಕ್ತಿಕವಾದಂಥ ಟೀಕೆಗಳು ಹೇಗೆ ಇರಲಿ, ವ್ಯವಹಾರಗಳ ಬಗ್ಗೆ ಟೀಕೆ ಮಾಡತಕ್ಕಂಥ ಕಾಲದಲ್ಲಾದರೂ ಕೂಡ ಅಂಕಿಅಂಶಗಳ ಮೇಲೆ ಅವರು ಸಾಕಷ್ಟು ಹತೋಟಿಯನ್ನು ಹೊಂದಿದ್ದರೆ ಬಹುಶಃ ಅವರು ಆ ಮಾತುಗಳನ್ನು ಆಡುತ್ತಾ ಇರಲಿಲ್ಲವೆಂದು ನನಗಂತೂ ಸಂಪೂರ್ಣವಾಗಿ ನಂಬಿಕೆ ಇದೆ. ನಿನ್ನೆ ಅವರು ಭಾಷಣ ಮಾಡತಕ್ಕಂಥ ಕಾಲದಲ್ಲಿ ಹಲವಾರು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಪ್ರಧಾನವಾಗಿ ಈ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವಿಚಾರದಲ್ಲಿ ಅವರು ಟೀಕೆಗಳನ್ನು ಮಾಡಿದ್ದಾರೆ. ಉದ್ವೇಗ ಕೋಪ ಬಂದಾಗ, " ಐ ಚಾರ್ಜ್ ಯು " ಎಂದು ಅಂಗ್ರೇಜಿ ಭಾಷೆಯಲ್ಲಿ, ಇನ್ನು ಸ್ವಲ್ಪ ಸಮಾಧಾನವಾದಾಗ ಕನ್ನಡದ ಅಭಿಮಾನದಿಂದ ಕನ್ನಡದಲ್ಲಿಯೇ ಅವರು ಭಾಷಣವನ್ನು ಮಾಡಿದ್ದಾರೆ. ಈ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಬಗ್ಗೆ ಆಗಿಂದಾಗ್ಗೆ ಹಲವರು ಟೀಕೆ ಟಿಪ್ಪಣಿಗಳು ಆಗಿಂದಾಗ್ಗೆ ಬರುತ್ತಲೇ ಇರುತ್ತವೆ. 1968—69ನೇ ಇಸ್ವಿಯಲ್ಲಿ ಈ ಕಾರ್ಖಾನೆಯಲ್ಲಿ ಆದ ನಷ್ಟ 306,46 ಲಕ್ಷ ರೂಪಾಯಿಗಳು, 1969–70 ರಲ್ಲಿ 256,76 ಲಕ್ಷ, 1970–71ರಲ್ಲಿ 176–92 ಲಕ್ಷ ರೂಪಾಯಿಗಳ ನಷ್ಟ, 1971—72ರಲ್ಲಿ ಆದ ಲಾಭ 25.58 ಲಕ್ಷ, 1972 – 73ರಲ್ಲಿ ಆದ ಲಾಭ 71-17 ಲಕ್ಷ ರೂಪಾಯಿಗಳು, 1973 –74ರಲ್ಲಿ 200.36 ಲಕ್ಷ ರೂಪಾಯಿಗಳ ಲಾಭವಾಗಿದೆ. ಮಾನ್ಯ ಬಂಗಾರಪ್ಪನವರ ಭವಿಷ್ಯ ನುಡಿಯುತಕ್ಕಂಥ ಶಕ್ತಿ ಇರತಕ್ಕಂಥವರು, ತ್ರಿಕಾಲಜ್ಞಾನವುಳ್ಳವರು, ಅವರು ನಿನ್ನೆ ಭವಿಷ್ಯ ನುಡಿದಿದ್ದಾರೆ, ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ 1974–75ನೇ ಇಸ್ವಿಯಲ್ಲಿ ಒಂದು ಕೋಟಿ, ಒಂದೂವರೆ ಕೋಟಿ, ಇಲ್ಲ 2 ಕೋಟಿ ರೂಪಾಯಿಗಳ ನಷ್ಟವಾಗುತ್ತದೆಂದು ಅವರು ಈಗಾಗಲೇ ಭವಿಷ್ಯವನ್ನು ನುಡಿದಿದ್ದಾರೆ. ಈ ರಾಜ್ಯದ ಹಿತದೃಷ್ಟಿಯಿಂದ ಅವರ ಭವಿಷ್ಯ ಸುಳ್ಳು ಆಗಲಿ ಹಾಗೆಂದು ಹೇಳಿಯೂರನ್ನು ಕುರಿತು ಪ್ರಾರ್ಥನೆ ಮಾಡಬೇಕೋ ಗೊತ್ತಾಗುತ್ತಾ ಇಲ್ಲ. ಆದರೆ ಒಂದು ವಿಚಾರ ಸ್ಪಷ್ಟವಾಗಿರತಕ್ಕಂಥದು ಏನೆಂದರೆ ಕಳೆದ ವರ್ಷ ಈ ದೇಶದ ಮತ್ತು ಚರಿತ್ರೆಯ ಅರ್ಥಿಕ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಬಲ್ಲ ಚೈತನ್ಯ ಇರತಕ್ಕವರಿಂದ ತಿಳಿಮಬಂದಿರತಕ್ಕಂಥದು ಏನೆಂದರೆ ಇದು ಒಂದು ಗ್ಲೋಬಲ್ ರಿಸಿಷನ್ ಟ್ರೆಂಡ್ ಆಗಿದೆ ನಮ್ಮ ದೇಶದಲ್ಲಿ ಯಾವಾಗ ಶುರುವಾಯಿತೋ ಗೊತ್ತಿಲ್ಲ. ಇದು ನಮ್ಮ ದೇಶಕ್ಕೆ ಮಾತ್ರ ಸೀಮಿತ ಬೆಳವಣಿಗೆಯಲ್ಲ. ಇದು

ಎಲ್ಲಾ ಮುಖ್ಯವಾದಂಥ ರಾಷ್ಟ್ರಗಳಿಗೂ ಕೂಡ ಹರಡಿರತಕ್ಕಂಥ ಒಂದು ವ್ಯಾಧಿ ಇದು ಒಂದು ಕಂಟಿನ್‌ಜೆನ್ಸಿ ಡಿಸೀಸ್ ಆದುದರಿಂದ ನಾವು ಕಳೆದ ವರ್ಷ ನಮ್ಮಲ್ಲಿ ರತಕ್ಕಂಥ ಕಾರ್ಖಾನೆಗಳು ಕೆಲಸ ಮಾಡಿರುವಂಥ ರೀತಿ, ಬಗೆಯು ಬಗ್ಗೆ ವಿಶ್ಲೇಷಣೆ ಮಾಡಬೇಕಾದರೆ ಒಂದು ಮೂಲಭೂತವಾದ ಅಭಿಪ್ರಾಯವನ್ನು ಗಮನದಲ್ಲಿಟ್ಟು ಕೊಂಡು ನಾವು ನಮ್ಮ ಕಾರ್ಖಾನೆಗಳು ಮಾಡಿರತಕ್ಕಂಥ ಕೆಲಸಗಳನ್ನು ವಿಮರ್ಶೆ ಮಾಡಬೇಕಾಗುತ್ತದೆ. ನನಗೆ ಬಂದಿರತಕ್ಕ ಆಧಾರದ ಪ್ರಕಾರ ನಮ್ಮ ಭದ್ರಾವತಿ ಕಾರ್ಖಾನೆಯಲ್ಲಿ ಕನಿಷ್ಠ ಪಕ್ಷ 150 ಲಕ್ಷ ರೂಪಾಯಿಗಳನ್ನು 1974—75ನೇ ಸಾಲಿನಲ್ಲಿ ಲಾಭ ಮಾಡುತ್ತೇವೆ ಎನ್ನುವ ವಿಶ್ವಾಸ ನನ್ನಲ್ಲಿದೆ ಎಂಬುದನ್ನು ಬಹಳ ಸಂತೋಷದಿಂದ ಸಭೆಗೆ ತಿಳಿಸ ಬಿಚ್ಚಿಸುತ್ತೇನೆ, ಹಾಗೆ, ಎನ್. ಜಿ. ಇ. ಎಫ್. ಕೂಡ 1973—74ರಲ್ಲಿ 108 ಲಕ್ಷ ರೂಪಾಯಿ ಲಾಭ ಮಾಡಿದ್ದು, ಬಹುಶಃ ಈ ವರ್ಷದಲ್ಲಿ 100 ಲಕ್ಷ ರೂಪಾಯಿ ಲಾಭಕ್ಕೆ ನಿಲ್ಲಬಹುದು ಎಂದು ನನ್ನ ಅಂದಾಜು. ರೆಮ್ಕೋ ಕಾರ್ಖಾನೆಯಲ್ಲಿ ಕಳೆದ ವರ್ಷ 119 ಲಕ್ಷ ರೂಪಾಯಿಯು ನಷ್ಟವನ್ನು ಭರಿಸಿದಂಥ ಈ ಕಾರ್ಖಾನೆ, ಅದರ ನಷ್ಟ ಈ ವರ್ಷ 55 ಲಕ್ಷ ರೂಪಾಯಿಗಳಿಗೆ ನಿಲ್ಲಬಹುದೆಂದು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ ಹಟ್ಟಿ ಗೋಲ್ಡ್ ಮೈನ್‌ನಲ್ಲಿ ಕಳೆದ ವರ್ಷ 145 ಲಕ್ಷ ರೂಪಾಯಿ ಲಾಭ ಮಾಡಿದ್ದು, ಈ ವರ್ಷ ಅದರ ಲಾಭ 199 ಲಕ್ಷ 69 ಸಾವಿರಕ್ಕೆ ಹೋಗ ಬಹುದು ಎನ್ನುವ ಒಂದು ಆಶಾದಾಯಕವಾದ ನಿರೀಕ್ಷೆ ಇದೆ. ಮೈಸೂರು ಮಿನರಲ್ಸ್ ಕಂಪೆನಿಯದು ಕಳೆದ ವರ್ಷ 18 ಲಕ್ಷ ರೂಪಾಯಿ ಲಾಭ ಮಾಡಿದ್ದು, ಈ ವರ್ಷ ಸುಮಾರು 75 ಲಕ್ಷ ರೂಪಾಯಿಗೂ ಮೇಲೆ ಹೋಗಬಹುದು ಎಂದು ನಿರೀಕ್ಷಣೆ ಮಾಡುತ್ತಿದ್ದೇವೆ. ಮೈಸೂರು ಸೇಲ್ಸ್ ಇಂಟರ್‌ನೇಷನಲ್ ಸಂಸ್ಥೆಯು 1973—74ರಲ್ಲಿ ಏಳು ಲಕ್ಷ ಅರವತ್ತೇಳು ಸಾವಿರ ಲಾಭ ಮಾಡಿದ್ದು, ಈ ವರ್ಷ 16 ಲಕ್ಷ 96 ಸಾವಿರ ರೂಪಾಯಿ ಲಾಭ ಮಾಡಬಹುದೆಂದು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ I am sorry I know the Mysore Minerals was incurring heavy loss. It is now earning profit. You must compliment.

(Some opposition members applauded the Government for earning profit).

I appreciate this small mercies and I never question about it. ಮಾನ್ಯ ಸದಸ್ಯರಾರೂ ನನ್ನನ್ನು ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ದೇವೇಗೌಡರಾಗಲೀ, ಮಾನ್ಯ ಬಂಗಾರಪ್ಪನವರಾಗಲೀ ಟೀಕೆ ಮಾಡು ವಾಗ ರಾಜ್ಯದ ಹಿತದೃಷ್ಟಿಯನ್ನು ಇಟ್ಟುಕೊಂಡು ಮಾಡುವುದಿಲ್ಲ ಎಂದು ತಿಳಿದು ಕೊಂಡಿರುವ ಮೂರ್ಖ ನಾನಲ್ಲ. ತಮಗೂ ಕೈಗಾರಿಕೆಗಳ ಬೆಳವಣಿಗೆ ಮಾಡ

(ಶ್ರೀ ಎಸ್. ಎಂ. ಕೃಷ್ಣ)

ಬೇಕೆಂದು ಇಚ್ಛೆ ಇದೆ, ಆಸಕ್ತಿ ಇದೆ ; ಆದರೆ ಬೆಳವಣಿಗೆ ಮಾಡಬೇಕು ಎಂದು ಹೇಳುವ ಕಾಲದಲ್ಲಿ ಟೀಕೆ ಮಾಡುವಾಗ ಮತ್ತು ಸೂಚನೆ ಕೊಡುವಾಗ ಅಂಕಿ ಅಂಶಗಳನ್ನು ಸರಿಯಾಗಿ ತಿಳಿದುಕೊಂಡು ಸೂಚನೆ ಕೊಟ್ಟರೆ ಒಳ್ಳೆಯದು ಎಂದು ನಾನು ತಮಗೆ ಹೇಳುತ್ತಾ ಇರುವುದು.

SRI H. D. DEVE GOWDA :—If I want to make criticism I will never do it without any basis.

SRI S. M. KRISHNA :—If the cap fits somebody, let them wear it. Why do you take exception to that ? ನಾನು ಮಾನ್ಯ ದೇವೇಗೌಡರ ಒಬ್ಬರ ವಿಚಾರ ಹೇಳುತ್ತಾ ಇಲ್ಲ. ಸಾರ್ವತ್ರಿಕ ವಾದ ಸೂಕ್ತಿಯನ್ನು ಹೇಳುತ್ತಾ ಇದ್ದೇನೆ. ಅಂಕಿ-ಅಂಶವನ್ನು ತಿಳಿದುಕೊಂಡು ಟೀಕೆ ಮಾಡಿದರೆ ತಮಗೂ ಅನುಕೂಲವಾಗುತ್ತದೆ. ನಮಗೂ ಸಹಾಯವಾಗುತ್ತದೆ ಎಂದು ನಾನು ಹೇಳುತ್ತಾ ಇರುವುದು. ನಮ್ಮ ಕೈಗಾರಿಕೆಗಳು ಸಂಪೂರ್ಣ ವಾಗಿ ಚೆನ್ನಾಗಿ ನಡೆಯುತ್ತಾ ಇವೆ ಎಂದು ನಾನು ಹೇಳುವವನಲ್ಲ. ಯಾರೂ ಪರಿಪೂರ್ಣರಾಗುವುದಕ್ಕೆ ಸಾಧ್ಯವಿಲ್ಲ ವ್ಯಕ್ತಿಯಾಗಲೀ, ಸಂಸ್ಥೆಯಾಗಲೀ, ಅಥವಾ ಸರಕಾರವೇ ಆಗಲಿ, ಇವುಗಳಲ್ಲಿ ಕೊರತೆಗಳು, ತಪ್ಪುಗಳು ಇರುತ್ತವೆ. ಆ ಕೊರತೆ, ತಪ್ಪುಗಳನ್ನು ನಮ್ಮ ಗಮನಕ್ಕೆ ತಂದರೆ, ಆಸಕ್ತಿವಹಿಸಿ, ಶಕ್ತಿ ಮೀರಿ ತಿದ್ದುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಇಲಾಖೆಯಿಂದ ನೇರವಾಗಿ ನಡೆಸುತ್ತಾ ಇರತಕ್ಕ ಕಾರ್ಖಾನೆಗಳ ವಿಚಾರಕ್ಕೆ ಬರೋಣ. ಗೌವರ್ನಮೆಂಟ್ ಸೋಪ್ ಫ್ಯಾಕ್ಟರಿ, 1973-74ನೇ ಸಾಲಿನಲ್ಲಿ 62 ಸಾವಿರ ರೂಪಾಯಿ ಲಾಭ ಮಾಡಿತ್ತು, ಈ ಸಾಲಿಗೆ 54 ಲಕ್ಷ ರೂಪಾಯಿ ಆಗಬಹುದು ಎಂದು ಅಂದಾಜು ಇದೆ. ಮೈಸೂರು ಮತ್ತು ಶಿವಮೊಗ್ಗ ಸ್ಯಾಂಡಲ್ ಆಯಿಲ್ ಕಾರ್ಖಾನೆಗಳು ಕಳೆದ ವರ್ಷ ಸುಮಾರು 110 ಲಕ್ಷ ರೂಪಾಯಿ ಲಾಭ ಮಾಡಿದ್ದು, ಈ ಸಾರಿ 150 ಲಕ್ಷ ರೂಪಾಯಿ ಗಳನ್ನು ನಾವು ಲಾಭ ಮಾಡಿದ್ದೇವೆ. ಜಿ. ಇ. ಎಫ್ ಕಾರ್ಖಾನೆ ಕಳೆದ ವರ್ಷ 50 ಲಕ್ಷ ರೂಪಾಯಿ ನಷ್ಟ ಸಂಭವಿಸಿದ್ದು, ಈ ವರ್ಷ ಅದನ್ನು 22 ಲಕ್ಷಕ್ಕೆ ಇಳಿಸಿದ್ದೇವೆ. ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್ ಷಾಪ್ ಕಳೆದ ವರ್ಷ 7 ಲಕ್ಷ 78 ಸಾವಿರ ರೂಪಾಯಿ ನಷ್ಟ ಸಂಭವಿಸಿದ್ದು, ಈ ಸಾರಿ ಅದನ್ನು 3 ಲಕ್ಷಕ್ಕೆ ಇಳಿಸಿದ್ದೇವೆ. ಇನ್ನು ಹಾಸನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ ಕಳೆದ ವರ್ಷ 10 ಲಕ್ಷ 31 ಸಾವಿರ ರೂಪಾಯಿ ಇದ್ದು, ಅದು ಈ ವರ್ಷ 8 ಲಕ್ಷಕ್ಕೆ ಇಳಿಯಬಹುದು ಎಂದು ನಮ್ಮ ಅಂದಾಜು. ಗೌವರ್ನಮೆಂಟ್ ಸೆಂಟ್ರಲ್ ವರ್ಕ್‌ಷಾಪ್, ಮರ ಕೇರ ಇದರಲ್ಲಿ ಕಳೆದ ವರ್ಷ 63 ಸಾವಿರ ರೂಪಾಯಿ ನಷ್ಟವಾಗಿದ್ದು, ಈ ಸಾರಿಗೆ 26 ಸಾವಿರ ರೂಪಾಯಿ ಲಾಭವನ್ನು ಮಾಡುತ್ತಿದ್ದೇವೆ. ಪೋರ್ಸಲೇನ್ ಫಾಕ್ಟ್

ರಿಯಲ್ಲೂ ಕೂಡ ಲಾಭ ಬಂದಿದೆ. ಅಂದಮೇಲೆ, ಕೆಲವು ಕಾರ್ಖಾನೆಗಳು ಚೆನ್ನಾಗಿ ಕೆಲಸ ಮಾಡಿವೆ; ಇನ್ನೂ ಕೆಲವು ಕಾರ್ಖಾನೆಗಳು ಅದರ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಮುತುವರ್ಜಿ ವಹಿಸಿ ಮಾಡಬೇಕಾಗಿದೆ ಎಂಬುದು ಈ ಪಟ್ಟಿಯಿಂದ ಸ್ಪಷ್ಟವಾಗಿ ಉಲ್ಲೇಖವಾಗುತ್ತಿದೆ. ಆದರೆ, ನಮ್ಮ ದೇಶದಲ್ಲಿ ಕಳೆದ 12 ತಿಂಗಳಲ್ಲಿ ಏನೇನು ನಡೆದಿದೆ ಎನ್ನತಕ್ಕದ್ದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಒಂದು ಕಡೆ ಕಚ್ಚಾ ವಸ್ತುಗಳ ಬೆಲೆ ಜಾಸ್ತಿಯಾಗುತ್ತಾ ಇದೆ; ಇನ್ನೊಂದು ಕಡೆ ಕೇಂದ್ರ ಸರಕಾರದವರು ಈ ಕ್ರೆಡಿಟ್ ಸ್ಕ್ವೀಜ್ ಎನ್ನತಕ್ಕದ್ದನ್ನು ಎಲ್ಲಾ ಬ್ಯಾಂಕರುಗಳಿಗೂ ಅಪ್ಲೈ ಮಾಡಿದರು. ಇದರಿಂದ ಬೇಕಾದಷ್ಟು ಕೈಗಾರಿಕೆಗಳು ಮುಚ್ಚಿಹೋಗತಕ್ಕ ಪರಿಸ್ಥಿತಿ ನಮ್ಮ ದೇಶದಲ್ಲಿ ಬಂದಿದೆ. ಇದಕ್ಕೆ ಕಾರಣಗಳು ಇಂಥಾದ್ದೆ ಎಂದು ಗುರುತಿಸಿ ಹೇಳುವ ಶಕ್ತಿ ನನಗಿಲ್ಲ. ಆದರೆ, ಎಕನಾಮಿಸ್ಟ್ಸ ಇದ್ದಾರೆ, ಫೈನಾನ್ಷಿಯಲ್ ಅನುಭವಿಗಳು ಇದ್ದಾರೆ ಅವರು ಇದರ ಬಗ್ಗೆ ತೀವ್ರ ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದಾರೆ ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು, ಮಾನ್ಯ ಬಂಗಾರಪ್ಪನವರು ತಮ್ಮ ಭಾಷಣದಲ್ಲಿ ಒಂದು ಅಂಶವನ್ನು ಹೇಳಿದರು. ಅದನ್ನು ನಾನು ಕೂಡಾ ಸ್ವಾಗತಿಸುತ್ತೇನೆ. ಅವರು ಮಾತನಾಡುತ್ತಾ, ಕೈಗಾರಿಕೆಗಳನ್ನು ಕೇಂದ್ರೀಕರಣ ಮಾಡಿದ್ದಾರೆ. ಆದ್ದರಿಂದ ಇವುಗಳನ್ನು ವಿಕೇಂದ್ರೀಕರಣ ಮಾಡಿ ಎಂದು ಹೇಳಿದರು. ಇದರ ಬಗ್ಗೆ ಇಡೀ ಸಭೆಯೇ ಸ್ವಾಗತ ಮಾಡತಕ್ಕದ್ದಾಗಿದೆ: ಅದೇ ರೀತಿ ಇದರ ಧೋರಣೆ, ನಿಲುವು ಏನು ಇದೆ, ಅದನ್ನು ನಾನು ಕೂಡ ಸ್ವಾಗತ ಮಾಡುತ್ತೇನೆ. ಸ್ವಾಗತ ಮಾಡಿದ ಮೇಲೆ, ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ಕೇಳತಕ್ಕದ್ದು ನ್ಯಾಯವಾದ ವಿಚಾರ. 1971-72ನೇ ಇಸವಿಯಲ್ಲಿ ನಮ್ಮ ಕೈಗಾರಿಕೆಗಳಿಗೆ ಕೇಂದ್ರದಿಂದ ಬಂದಿರತಕ್ಕ ಲೈಸೆನ್ಸ್ ಸುಮಾರು 84. 1972-73ರಲ್ಲಿ ನಾವು 164 ಅರ್ಜಿಗಳನ್ನು ಕೇಂದ್ರಕ್ಕೆ ಶಿಫಾರಸು ಮಾಡಿದ್ದೆವು. ಅದರಲ್ಲಿ 92 ಅರ್ಜಿಗಳನ್ನು ಕೇಂದ್ರ ಸರ್ಕಾರದವರು ಒಪ್ಪಿದರು. 1973–74 ರಲ್ಲಿ 213 ಅರ್ಜಿಗಳನ್ನು ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೆವು. ಅವುಗಳಲ್ಲಿ 213 ಅರ್ಜಿಗಳೂ ಒಟ್ಟಿಗೆ ಮಂಜೂರಾಗಿದ್ದರೆ, ಒಟ್ಟು ಬಂಡವಾಳ 324 ಕೋಟಿ ರೂಪಾಯಿ ನಮ್ಮ ರಾಜ್ಯದಲ್ಲಿ ಆಗುತ್ತಿತ್ತು. ಆದರೆ, ಕೇಂದ್ರ ಸರಕಾರದವರು ಕೇವಲ 108 ಅರ್ಜಿಗಳನ್ನು ಮಾತ್ರ ಪುರಸ್ಕರಿಸಿದರು. ಇದರಿಂದ ಒಟ್ಟು ಬಂಡವಾಳ ಹೂಡಿಕೆ 88 ಕೋಟಿ 17 ಲಕ್ಷ ರೂಪಾಯಿ ಆಯಿತು. ಮತ್ತು ಇದರಿಂದ ಉಂಟಾಗತಕ್ಕ ಉದ್ಯೋಗವಕಾಶ 18,345. ಇದರಲ್ಲಿ ಸ್ವಾರಸ್ಯಕರವಾದ ವಿಚಾರ ಏನೆಂದರೆ ಇದರಲ್ಲಿನ ಶೇಕಡ 73 ರಷ್ಟು ಬಂಡವಾಳ ಬೆಂಗಳೂರು ಜಿಲ್ಲೆ ಬಿಟ್ಟು ಹೊರಗಡೆ ಹಾಕಿರತಕ್ಕ ಬಂಡವಾಳವಾಗಿದೆ. 1974–75 ರಲ್ಲಿ 214 ಅರ್ಜಿಗಳನ್ನು ಕೇಂದ್ರ ಸರಕಾರಕ್ಕೆ ನಾವು ಶಿಫಾರಸು ಮಾಡಿದೆವು. ಮೊದಲನೇ ಹನ್ನೊಂದು

ಶ್ರೀ ಎಸ್. ಎಂ. ಕೃಷ್ಣ)

ತಿಂಗಳಲ್ಲಿ 109 ಅರ್ಜಿಗಳ ಬಗ್ಗೆ ಅದರು ನಮಗೆ ಅವರು ಲೈಸೆನ್ಸ್ ಕೊಟ್ಟಿದಾರೆ. ಇದರಲ್ಲಿ 158 ಕೋಟಿ ರೂಪಾಯಿಗಳ ಬಂಡವಾಳ ಹೂಡಿದ್ದು, 18 ಸಾವಿರ ಜನಗಳಿಗೆ ಉದ್ಯೋಗ ಸಿಕ್ಕುತ್ತದೆ. ಆದರಲ್ಲಿ ಸ್ವಾರಸ್ಯಕರವಾದ ವಿಚಾರ ಏನೆಂದರೆ, ಇದರಲ್ಲಿ ಶೇಕಡ 93 ರಷ್ಟು ಬಂಡವಾಳ ಬೆಂಗಳೂರು ಜಿಲ್ಲೆಯನ್ನು ಬಿಟ್ಟು ಹೊರಗಡಿ ಪ್ರದೇಶದಲ್ಲಿ ಹಾಕಿರತಕ್ಕದ್ದು. ಈಗ ನಾವು 18 ಸಾವಿರ ಹೊಸ ಉದೋಗಗಳನ್ನು ನಾವು ಏನು ನಿರ್ಮಾಣ ಮಾಡುತ್ತೇವೆ, ಅದರಲ್ಲಿ ಶೇಕಡ 78 ರಷ್ಟು ಬೆಂಗಳೂರು ಮೆಟ್ರೋಪಾಲಿಟಿನ್ ಏರಿಯಾ ಮತ್ತು ತಾಲ್ಲೂಕು ಬಿಟ್ಟು ಹೊರಗಿನ ಪ್ರದೇಶಗಳಲ್ಲಿ ಹಾಕತಕ್ಕದ್ದು ಇದೆ.

ಇದು ಏನನ್ನು ಸೂಚಿಸುತ್ತದೆ ಎಂದರೆ ಸರ್ಕಾರದವರು 3 ವರ್ಷದ ಕೆಳಗೆ ಏನೊಂದು ಘೋಷಣೆಯನ್ನು ಮಾಡಿದರು ಬೆಂಗಳೂರು ನಗರದಲ್ಲಿ ಇನ್ನು ಹೆಚ್ಚು ಕೈಗಾರಿಕೆಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ, ಅದು ಒಳ್ಳೆಯದಲ್ಲ ಅಂತ ಏನು ಒಂದು ಧೋರಣೆಯನ್ನು ತಾಳಿದ್ದರು ಆ ಧೋರಣೆ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತಂದಿದ್ದೇವೆ ಎನ್ನುವುದಕ್ಕೆ ಇದಕ್ಕಿಂತಲೂ ಹೆಚ್ಚು ಪುರಾವೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

1-00 P. M.

ಇನ್ನು ಹಿಂದುಳಿದ ಪ್ರದೇಶಗಳಿಗೆ ನಾವು ಹೆಚ್ಚು ಗಮನ ಕೊಡುತ್ತಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆ ಗಮನ ಕೊಡತಕ್ಕಂಥ ಕಾಲದಲ್ಲಿ ಯಾರಾದರೂ ಒಬ್ಬರು ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆ ಅಂತ ಬಂದರೆ ಅವರು ಮೊದಲು ಕೇಳತಕ್ಕಂಥಾದ್ದು ನಮಗೆ ಏನೇನು ಸವಲತ್ತುಗಳನ್ನು ಕೊಡುತ್ತೀರಿ ಅಂತ ಕೇಳುತ್ತಾರೆ. ನಮ್ಮ ರಾಜ್ಯದವರೇ ಆಗಲಿ, ಹೊರಗಡೆ ರಾಜ್ಯದವರೇ ಆಗಲಿ ಬರತಕ್ಕಂಥ ಔದ್ಯೋಗಿಕಗಾರರು ನಮ್ಮನ್ನು ಏನು ಕೇಳುತ್ತಾರೆ ಎಂದರೆ ತಮಿಳುನಾಡಿನಲ್ಲಿ ಕೊಟ್ಟ ಹಾಗೆ ಏನು ಇನ್‌ಸೆಂಟಿವ್ ಕೊಡುತ್ತೀರಿ, ಗುಜರಾತ್‌ನಲ್ಲಿ ಕೊಟ್ಟ ಹಾಗೆ ಏನು ಇನ್‌ಸೆಂಟಿವ್ಸ್ ಕೊಡುತ್ತೀರಿ, ಮಹಾರಾಷ್ಟ್ರದಲ್ಲಿ ಕೊಡುವ ಹಾಗೆ ಏನು ಇನ್‌ಸೆಂಟಿವ್ ಕೊಡುತ್ತೀರಿ, ಮತ್ತು ಆಂಧ್ರದಲ್ಲಿ ಏನು ಇನ್‌ಫ್ರಾಸ್ಟ್ರಕ್ಚರ್ ಕೊಡುತ್ತಾರೆ ಆ ರೀತಿ ನೀವೂ ಕೊಡುತ್ತೀರಾ ಎಂದು ಕೇಳುತ್ತಾರೆ. ಸಾಮಾನ್ಯವಾಗಿ ಇದು ಎಲ್ಲರೂ ಕೇಳತಕ್ಕಂಥ ಪ್ರಶ್ನೆ. ಆದುದರಿಂದ ಇತ್ತೀಚೆಗೆ ನಮ್ಮ ರಾಜ್ಯ ಸರ್ಕಾರದವರು ಹೊಸದಾಗಿ ಏನು ಮಾಡಿದ್ದಾರೆ ಎಂದರೆ ಹಿಂದುಳಿದ ಪ್ರದೇಶಗಳಿಗೆ ಹೆಚ್ಚು ಆದ್ಯತೆ ಕೊಡಬೇಕು ಎನ್ನುವ ದೃಷ್ಟಿಯಿಂದ ಮತ್ತು ಆ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಹೊಸ ರಿಯಾಯಿತಿಗಳನ್ನು, ಹೊಸ ಫೆಸಿಲಿಟೀಸ್

ಗಳನ್ನು ಕೊಡಬೇಕು ಎನ್ನತಕ್ಕಂಥಾದ್ದನ್ನು ಈ ಸದನದ ಮುಂದೆ ಮೊಟ್ಟಮೊದಲು ಬಾರಿಗೆ ಪ್ರಕಟಣೆ ಮಾಡಬೇಕೆಂದು ನಾನು ಆಶಿಸುತ್ತೇನೆ. ಇದಕ್ಕಾಗಿ ನಮ್ಮ ಇಡೀ ರಾಜ್ಯವನ್ನು 3 ಭಾಗಗಳಾಗಿ ಗುರುತಿಸಿದ್ದೇವೆ. ಮೊದಲನೆಯ ವರ್ಗ ಬೆಂಗಳೂರು ಮೆಟ್ರೋಪಾಲಿಟನ್ ಏರಿಯಾ ಸೌತ್ ತಾಲ್ಲೂಕು ಮತ್ತು ನಾರ್ತ್ ತಾಲ್ಲೂಕು ಈಗಾಗಲೇ ಆ ಭಾಗಕ್ಕೆ ಹೆಚ್ಚು ಸವಲತ್ತುಗಳನ್ನು ಕೊಟ್ಟಿದ್ದೇವೆ. ಇನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದು ಇಂಡಸ್ಟ್ರೀಸ್ ಮುಂದುವರಿದಿರ ತಕ್ಕಂಥ ಭಾಗವಾಗಿದೆ. ಇನ್ನು ಎರಡನೇ ವರ್ಗದಲ್ಲಿ ಕೆಲವು ರಿಯಾಯಿತಿಗಳನ್ನು ಕೊಡಬೇಕು ಅಂತ ಮಾಡಿದ್ದೇವೆ. ಎರಡನೇ ವರ್ಗಕ್ಕೆ ಯಾವ ಯಾವ ಭಾಗ ಗಳು ಸೇರಿವೆ ಎಂದರೆ ಕೋಲಾರ ಶ್ರೀಮಾನ್ ಬೈರೇಗೌಡರ ಊರು, ಶಿವಮೊಗ್ಗ ಶ್ರೀಮಾನ್ ಶಿರನಾಳಿ ಚಂದ್ರಶೇಖರರವರ ಊರು ಮತ್ತು ಮಂಡ್ಯ, ಚಿಕ್ಕಮಗ ಳೂರು ಮತ್ತು ಚಿತ್ರದುರ್ಗ ಮತ್ತು ರಿಮೈನಿಂಗ್ ಪಾರ್ಟ್ಸ್ ಆಫ್ ಬೆಂಗಳೂರು ಡಿಸ್ಟ್ರಿಕ್ಟ್, ಬಳ್ಳಾರಿ ಅಂಡ್ ಕೂರ್ಗ್ ಇವು ಮಧ್ಯಮ ಗ್ರೂಪ್‌ಗೆ ಸೇರಿರ ತಕ್ಕಂಥಾದ್ದು. ಇನ್ನು 3 ನೇ ವರ್ಗದಲ್ಲಿ ಸೇರಿರುವ ಭಾಗಗಳು ಯಾವ್ಯಾವುದು ಎಂದರೆ ತುಮಕೂರು, ಹಾಸನ, ಸೌತ್ ಕೆನರಾ, ನಾರ್ತ್ ಕೆನರಾ, ಧಾರವಾಡ, ಬೆಳಗಾಂ, ಬಿಜಾಪುರ, ಗುಲ್ಬರ್ಗ, ರಾಯಚೂರು, ಮೈಸೂರು ಮತ್ತು ನೋಟಿ ಫೈಡ್ ಏರಿಯಾಸ್ ಎಕ್ಸೆಪ್ಟ್ ದೋಸ್ ಇನ್ ಗ್ರೂಪ್ ನಂಬರ್ ಒನ್. ಸ್ವಾ ಭಾವಿಕವಾಗಿ ಹೆಚ್ಚಿಗೆ ಇಂಡಸ್ಟ್ರೀಸ್ ಬೆಳೆಯದೇ ಇರತಕ್ಕಂಥ ಏರಿಯಾಸ್ ಯಾವ್ಯಾವು ಎನ್ನುವುದನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ಆ ಒಂದು ಏರಿಯಾದಲ್ಲಿ ರಾಜ್ಯ ಸರ್ಕಾರದವರು 10 ಪರ್ಸೆಂಟ್ ಸಬ್ಸಿಡಿಯನ್ನು ಕೊಡಬೇಕು ಎಂದು ನಿರ್ಧಾರ ಮಾಡಿದ್ದಾರೆ. ಅಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ರಾಜ್ಯ ಸರ್ಕಾರದ ವತಿಯಿಂದಲೂ ಕೂಡ ಅವರಿಗೆ ಉತ್ತೇಜನ ಕೊಡಬೇಕು ಎನ್ನುವ ದೃಷ್ಟಿಯಿಂದ ನೋಟಿಫೈಡ್ ಏರಿಯಾಸ್ ಏನು ಇದೆ ಆ ಏರಿಯಾದಲ್ಲಿ ಹೊಸ ಸವಲತ್ತುಗಳನ್ನು ಕೊಡಬೇಕು ಎನ್ನುವ ತೀರ್ಮಾನ ಮಾಡಿ ದ್ದಾರೆ. ಇದರ ಜೊತೆಗೆ ಇನ್ನು ಕೆಲವು ವೆಚ್ಚಗಳು ಏನು ಇವೆ ಬಡ್ಡಿ ರಹಿತ ಸಾಲ ವಗೈರೆ ಇದನ್ನೆಲ್ಲಾ ಕೊಡುತ್ತೇವೆ. In addition there is a scheme of interest-free loan based principally on sales tax by way of development loan towards the creation of new assets, working capital loan, etc. This financial support will be extended by the concerned departments and the specialised financing agencies of the State set up to promote industrial development. ಮಾನ್ಯ ಸದಸ್ಯರ ಗಮನಕ್ಕೆ ತರುವು ದಾದರೆ ಇದರ ಬಗ್ಗೆ ಹೊರಡಿಸಿರತಕ್ಕಂಥಾ ಒಂದು ಚಿಕ್ಕ ಪುರಾವೆ ಇದೆ, ಅದನ್ನು ಈಗ ತಮಗೆ ತಲುಪಿಸುತ್ತೇವೆ. ಅದನ್ನು ನೋಡಿದರೆ ಗೊತ್ತಾಗುತ್ತದೆ. ರಾಜ್ಯ ಸರ್ಕಾರದವರು ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವು

(ಶ್ರೀ ಎಸ್. ಎಂ. ಕೃಷ್ಣ)

ದಕ್ಕೆ ಕೊಟ್ಟಿರತಕ್ಕಂಥ ಮಹತ್ವ ಮತ್ತು ರಾಜ್ಯ ಸರ್ಕಾರದವರು ಇದರ ಬಗ್ಗೆ ತಂದಿರತಕ್ಕಂಥ ಧೋರಣೆ ಏನು ಅದನ್ನು ಈ ಸಭೆ ಸ್ವಾಗತಿಸುತ್ತದೆ ಎಂದು ನಾನಾದರೂ ಕೂಡ ಯೋಚನೆ ಮಾಡುತ್ತೇನೆ.

ಇನ್ನು ಇದರ ಬಗ್ಗೆ ಹೇಳುವುದಾದರೆ ಕಳೆದ ವರ್ಷ ನಮ್ಮ ರಾಜ್ಯದಲ್ಲಿ ವಿದ್ಯುತ್ ಖೋತಾ ಆದರೂ ಕೂಡ ನಮ್ಮ ರಾಜ್ಯದ ಕೈಗಾರಿಕೆಗಳು ಇಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧಿಸಿವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಕಳೆದ ವರ್ಷ ನಮ್ಮ ರಾಜ್ಯದಲ್ಲಿ ವಿದ್ಯುತ್ ಖೋತಾ ಆದದ್ದು ಈ ರೀತಿ ಇದೆ :—ಜೂನ್ 24 ರಿಂದ ಜುಲೈ 15 ರವರೆಗೆ 60 ಪರ್ಸೆಂಟ್ ವಿದ್ಯುತ್ ಖೋತಾ ಇತ್ತು. ಮತ್ತೆ ಜುಲೈ 15 ರಿಂದ ಆಗಸ್ಟ್ 12 ರವರೆಗೆ 40 ಪರ್ಸೆಂಟ್ ವಿದ್ಯುತ್ ಖೋತಾ ಇತ್ತು, ಮತ್ತೆ ಆಗಸ್ಟ್ 12 ರಿಂದ ಅಕ್ಟೋಬರ್ ಒಂದರವರೆಗೆ 30 ಪರ್ಸೆಂಟ್ ವಿದ್ಯುತ್ ಖೋತಾ ಇತ್ತು, ನಂತರ 35 ಪರ್ಸೆಂಟ್ ವಿದ್ಯುತ್ ಖೋತಾ ಆಯಿತು. ಈ ರೀತಿ 35 ಪರ್ಸೆಂಟ್ ವಿದ್ಯುತ್ ಖೋತಾ ಇದ್ದುದನ್ನು ನುಂಗಿ ನಮ್ಮ ಕೈಗಾರಿಕೆಗಳು ಲಾಭ ಮಾಡಿರಬೇಕಾದರೆ ಈ ಕೈಗಾರಿಕೆಗಳು ನಡೆಸತಕ್ಕಂಥ ಜನ ದಕ್ಷರೋ ಅದಕ್ಷರೋ ಎನ್ನತಕ್ಕಂಥಾದನ್ನು ತೀರ್ಮಾನ ಮಾಡತಕ್ಕಂಥಾದ್ದು ಈ ಮಹಾಸಭೆಗೆ ಸೇರಿಸತಕ್ಕಂಥಾದ್ದು ; ಮತ್ತು ಈ ಮಹಾಸಭೆಗೆ ಸೇರಿರತಕ್ಕಂಥಾ ಹಕ್ಕು ಆದುದರಿಂದ ಇದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ.

ಇನ್ನು ಭದ್ರಾವತಿ ಕಾರ್ಖಾನೆ ಬಗ್ಗೆ ಮಾನ್ಯ ಬಂಗಾರಪ್ಪನವರು ಪ್ರಸ್ತಾಪ ಮಾಡಿದರು. ನಾನು ಬಂದಮೇಲೆ ಕೇಂದ್ರ ಸರ್ಕಾರದ ಗುಮಾವನ್ನು ಜೊತೆಯಲ್ಲೇ ತೆಗೆದುಕೊಂಡು ಬಂದರು ಎಂದು. ಅವರ ಗಮನಕ್ಕೆ ತರುವುದಾದರೆ ಗೌರ್ನಮೆಂಟ್ ಆಫ್ ಇಂಡಿಯಾ ಷೇರು ಬಂಡವಾಳ 1971 ನೇ ಇಸವಿಯಲ್ಲಿ ಶ್ರೀಮಾನ್ ಧರ್ಮವೀರರ ಕಾಲದಲ್ಲೇ ನಡೆದಿರತಕ್ಕಂಥ ವ್ಯವಹಾರ. ಇದಕ್ಕೆ ಒಂದು ವರ್ಷ ಮುಂಚಿತವಾಗಿಯೇ ನಡೆದಿರುವುದರಿಂದ ಈ ಬಗ್ಗೆ ನನ್ನನ್ನು ಏತಕ್ಕೆ ಎಳೆಯುತ್ತೀರಿ. ನೀವೇನಾದರೂ ನನ್ನನ್ನು ಒಂದು ವರ್ಷ ಮುಂಚಿತವಾಗಿ ಮಂತ್ರಿಯನ್ನಾಗಿ ಮಾಡಿದಿರಾ ? ಶ್ರೀಮಾನ್ ದೇವರಾಜ ಅರಸ್‌ರವರ ಸರ್ಕಾರ ಬಂದದ್ದು 1972 ನೇ ಇಸವಿಯಲ್ಲಿ. ಆದುದರಿಂದ ಈ ಒಂದು ಅಪಾದನೆ ಮಾನ್ಯ ಸದಸ್ಯರು ಏನು ಮಾಡಿದ್ದಾರೆ, ಅದು ಸಮಾಧಾನವಾದುದೇ ಎನ್ನುವುದನ್ನು ಯೋಚನೆ ಮಾಡಿ.

ಇನ್ನು ಭದ್ರಾವತಿ ವಿಚಾರಣೆ ಬಗ್ಗೆ ಶಿರಾಳಿ ರಿಪೋರ್ಟ್‌ನ್ನು ಈ ಸದನದ ಮುಂದೆ ಇಟ್ಟರೂ ಕೂಡ ಬಂಗಾರಪ್ಪನವರು ವಿಶೇಷವಾಗಿ ಆಪಾದನೆ ಮಾಡಿ

ದ್ದಾರೆ. ಮತ್ತು ದತ್ ರಿಪೋರ್ಟನ್ನು ಕೂಡ ಈ ಸದನದ ಮುಂದೆ ಚರ್ಚೆ ಮಾಡೋಣ. ಇದರ ಬಗ್ಗೆ ಚರ್ಚೆ ಮೊದಲು ಆರಂಭ ಮಾಡಬೇಕಾದರೆ ಮೊದಲು ನೀವು ಅಧ್ಯಕ್ಷರಿಗೆ ನೋಟೀಸ್ ಕೊಡಬೇಕು. ಇದರ ಬಗ್ಗೆ ಚರ್ಚೆ ಆರಂಭ ಮಾಡಬೇಕಾದರೆ ಮೊದಲು ನಾನಲ್ಲ, ಈಗಲೂ ತಡವಾಗಿಲ್ಲ. ಈಗಲೂ ಬೇಕಾದರೆ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಡುವುದಾದರೆ ಚರ್ಚೆ ಆರಂಭ ಮಾಡಿ. ತಮ್ಮ ಹತ್ತಿರ ಅದರ ಕಾಪಿ ಏನಾದರೂ ಕಳೆದುಹೋಗಿದ್ದರೆ ಇನ್ನೊಂದು ಕಾಪಿಯನ್ನು ಕಳುಹಿಸಿ ಕೊಡುತ್ತೇನೆ ಇದರಲ್ಲಿ ತಪ್ಪಿತಸ್ಥರು ಯಾರು ಇದ್ದಾರೆ ಎನ್ನುವುದನ್ನು ಗುರತಿಸೋಣ. ಇದರಲ್ಲೇನೂ ನಿಮಗೆ ಮತ್ತು ನಿಮಗೆ ಏನೂ ಭಿನ್ನಾಭಿಪ್ರಾಯ ಇಲ್ಲ ತಾನೆ?

ಶ್ರೀ ಹೆಚ್. ಡಿ. ದೇವೇಗೌಡ:—ಚರ್ಚೆ ಇಲ್ಲದೇ ಹೋದರೆ ತಪ್ಪಿತಸ್ಥರನ್ನು ಗುರುತಿಸುವದಕ್ಕಾಗುವುದಿಲ್ಲವೇ? How long can this issue go on like this? Mr. Bangarappa has raised this issue several times and he wants to initiate the Industries demand every year. While initiating, the only subject-matter by Bangarappa is Shirali Report. Mr. Krishna says the same reply and I don't know how long this type of reply should continue and this type of demand from the Opposition should continue. I would like the Hon. Minister to put an end to this.

SRI S. M. KRISHNA:—We will put an end to it as early as possible. ಹಾಗೂ ಶ್ರೀ ಕೆ. ನಾರಾಯಣ ಸ್ವಾಮಿ ಇವರದ್ದೂ ಕೂಡ ರಿಪೋರ್ಟ್ ಬಂದಿದೆ. ನಿಜವಾಗಿ ಹೇಳುವುದಾದರೆ ಶಿರಾಳಿಯವರದ್ದು ಅದು ರಿಪೋರ್ಟ್ ಅಲ್ಲ ಅಂತ ಹೇಳಬಹುದು. He had made a very cursory enquiry into the matter. ಇದನ್ನು ಧರ್ಮವೀರರ ಕಾಲದಲ್ಲಿ ಸಿ. ಬಿ. ಐ. ಗೆ ಕಳುಹಿಸಿ ಕೊಟ್ಟಿದ್ದಾರೆ. 3 ವರ್ಷವಾದರೂ ಇನ್ನೂ ಎನ್‌ಕ್ವೈರಿ ನಡೆಯುತ್ತಾ ಇದೆ. ಇನ್ನೂ ಇದರ ಬಗ್ಗೆ ಫೈನಾಲ್ಟಿ ಆಗಿಲ್ಲ. ನಾನೂ ಕೂಡ 3–4 ಸಾರಿ ಹೇಳಿದ್ದೇನೆ. ಮುಖ್ಯ ಮಂತ್ರಿಗಳೂ ಕೂಡ ಹೇಳಿದ್ದಾರೆ. ಪ್ರತಿ ವರ್ಷವೂ ಶ್ರೀ ಬಂಗಾರಪ್ಪನವರು ಇದರ ಬಗ್ಗೆ ಕೇಳುತ್ತಲೇ ಬಂದಿದ್ದಾರೆ, ನಾನೂ ಕೂಡ ಸಿ. ಬಿ. ಐ. ಇನ್‌ಕ್ವೈರಿ ನಡೆಯುತ್ತಾ ಇದೆ ಎಂದು ಹೇಳುತ್ತಲೇ ಬಂದಿದ್ದೇನೆ. ಶ್ರೀಮಾನ್ ದೇವೇಗೌಡರು ಇದರ ಬಗ್ಗೆ ಆಕ್ಷೇಪಣೆ ತೆಗೆದುಕೊಳ್ಳುತ್ತಲೇ ಬಂದಿದ್ದಾರೆ. ಆದುದರಿಂದ ಈಗಲೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತೇನೆ ಈ ಸಿ. ಬಿ. ಐ. ರಿಪೋರ್ಟ್ ಮೇಲೆ ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮ ಬೇಗ ಆಗಬೇಕು ಎಂದು ನಾನು ಕೇಳುತ್ತೇನೆ.

(ಶ್ರೀ ಎಸ್. ಎಂ. ಕೃಷ್ಣ)

ಇನ್ನು ಜನರಲ್ ಮ್ಯಾನೇಜರು, ಪರ್ಸನಲ್ ಆಫೀಸರು, ಕಮರ್ಷಿಯಲ್ ಆಫೀಸರು ಇಂತಹ ಅಧಿಕಾರಿಗಳನ್ನು ಹೊಸದಾಗಿ ರಿಕ್ರೂಟು ಮಾಡಿದ್ದೀರಿ ಎಂದು ಅವರು ಹೇಳಿದರು. ಈ ವಿಷಯದಲ್ಲಿ ಕೆಲವು ಕಮರ್ಷಿಯಲ್ ಪ್ರಾಕ್ಟಿಸಸ್‌ಗಳಿರುತ್ತವೆ. ಅದರ ಮೇಲೆ ತಿಲಾಂಜಲಿ ಕೊಟ್ಟು ಇದಕ್ಕೆ ಬೆಲೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಕೇಂದ್ರ ಸರಕಾರದವರು ಇದರಲ್ಲಿ ಸೇಕಡಾ ನಲವತ್ತರಷ್ಟು ಪಾಲುದಾರರು ಆಗಿರುತ್ತಾರೆ. ಇದರಲ್ಲಿ ಕೆಲವು ಅಧಿಕಾರಿಗಳನ್ನು ತೆಗೆದುಕೊಳ್ಳುವಾಗ ಅಂತಹ ಪೋಸ್ಟುಗಳಿಗೆ ಅಡ್‌ವರ್‌ಟೈಸು ಮಾಡಿ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಪ್ರತಿಭಾವಂತರಾಗಿರುವ ಹಾಗೂ ಚೆನ್ನಾಗಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಇದೇ ಕಂಪನಿಯಲ್ಲಿದ್ದರೆ ಅವರನ್ನು ಮತ್ತೆ ಈ ಪೋಸ್ಟುಗಳಿಗೆ ಅರ್ಜಿ ಹಾಕಕೂಡದು ಎನ್ನುವ ನಿರ್ಬಂಧವನ್ನೇನೂ ಮಾಡಿಲ್ಲ. ಅಡ್‌ವರ್‌ಟೈಸ್‌ಮೆಂಟ್ ಮಾಡಿದಾಗ ಇವರೆಲ್ಲ ಏಕೆ ಅರ್ಜಿಗಳನ್ನು ಹಾಕಬಾರದಾಗಿತ್ತು ? ಇದಕ್ಕೆ ಯಾರೂ ಬೇಡ ಎಂದು ಹೇಳುತ್ತಿರಲಿಲ್ಲ.

SRI S. BANGARAPPA :—Whether this practice of calling applications by advertisements was practised in the past ? That was my question. I want to know the compelling reasons for not doing this in the past. ಇದರಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಬೈ ಪ್ರಮೋಷನ್ ಎಂದು ಮಾಡಿ ಇವರನ್ನು ನೇಮಕ ಮಾಡಬಹುದು ಎಂದು ನಾನು ಹೇಳಿದುದು.

ಶ್ರೀ ಎಸ್. ಎಂ. ಕೃಷ್ಣ :—ಯೋಗ್ಯತೆಯ ಆಧಾರದ ಮೇಲೆ, ಅನುಭವದ ಆಧಾರದ ಮೇಲೆ ನೇಮಕ ಮಾಡುವಾಗ ಕೆಲವು ತತ್ವಗಳನ್ನು ಅನುಸರಿಸಬೇಕಾಗುತ್ತದೆ. ಇಲ್ಲಿನ ಪೋಸ್ಟುಗಳಿಗೆ ಇಲ್ಲಿರುವ ಅಧಿಕಾರಿಗಳು ಯಾರಾದರೂ ಇದ್ದರೆ ಮತ್ತು ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಅವರು ಇಲ್ಲಿ ಅರ್ಜಿಗಳನ್ನು ಕರೆದಾಗ ಅವರ ಅರ್ಜಿಗಳನ್ನೂ ಅವರೂ ಹಾಕಬಹುದಾಗಿತ್ತು. ಇದಕ್ಕೆ ಯಾವ ನಿರ್ಬಂಧವೂ ಇರಲಿಲ್ಲ. ಇಲ್ಲಿರುವ ಕಾರ್ಖಾನೆಗೆ ಟೆಂಡರುಗಳನ್ನು ಕರೆದು ಮಾಡುವಾಗ ನಾನೇ ಇಲ್ಲಿಗೆ ಒಬ್ಬರನ್ನು ತಂದು ಟೆಂಡರನ್ನು ಹಾಕಿಸಿದ್ದೇವೆ ಎಂದರು. ಕಬ್ಬಿಣದ ಅದಿರನ್ನು ಸಪ್ಲೈ ಮಾಡುವಾಗ ಖಾಸಗಿ ಜನರಿಂದ ಟೆಂಡರು ಕರೆಯಬೇಕಾಗುತ್ತದೆ. ನಾವು 1969ನೇ ಮೇ ತಿಂಗಳಲ್ಲಿ ಟೆಂಡರ್ ಕರೆದದ್ದು ಏಕೆಂದರೆ ನಮ್ಮ ಪಿಗ್ ಐರನ್ ಪ್ಲಾಂಟುಗಳಿಗೆ ಹೈಗ್ರೇಡು ಓರು ಬೇಕಾಗುತ್ತದೆ. ಇದಕ್ಕಾಗಿ ನಾವು ಪೆನಿನ್‌ಸುಲಾರ್ ಸಿಂಡಿಕೇಟ್ ಲಿಮಿಟೆಡ್ ಎನ್ನುವವರಿಂದ ಟೆಂಡರನ್ನು ಕರೆದು ಅವರದು ಎಲ್ಲರಿಗಿಂತ ಲೋಯಸ್ಟು ಟೆಂಡರಾಗಿತ್ತು ಎಂದು

ಅವರಿಗೆ ಅದಿರನ್ನು ಸಪ್ಲೈ ಮಾಡಲು ವಹಿಸಲಾಯಿತು. ಅದರಂತೆ ಇವರು 25 ಸಾವಿರ ಟನ್ನುಗಳಷ್ಟು ಅದಿರನ್ನು ಸರಬರಾಜು ಮಾಡುತ್ತೇವೆಂದು ಒಪ್ಪಿದ್ದಾರೆ. ಇದಕ್ಕೆ ಕಾರಣ 1975ರಲ್ಲಿ ನಾವು ಹೊಸದಾಗಿ ಎರಡು ಪಿಗ್ ಐರನ್ ಪ್ಲಾಂಟು ಗಳನ್ನು ಆರಂಭ ಮಾಡಿರುವುದರಿಂದಾಗಿ ಇಲ್ಲಿರುವ ಪಿಗ್ ಐರನ್ ಫರ್ನೇಸುಗಳಿಗೆ ಹೈ ಗ್ರೇಡು ಓರನ್ನು ಸಪ್ಲೈ ಮಾಡಬೇಕಾಗುತ್ತದೆ ಮತ್ತು ನಮ್ಮ ಕೆಮ್ಮಣ್ಣು ಗುಂಡಿಯಲ್ಲಿ ಕಬ್ಬಿಣ ಅದಿರಿನ ಕಂಟೆಂಟ್ಸ್ ಸುಮಾರು ಶೇಕಡಾ 62 ರಿಂದ 65 ರ ವರೆಗೆ ಇರುತ್ತದೆ. ಇದು ಸಾಲದು ಎಂದು ನಾವು ಬೇರೆ ಒಂದು ಕಂಪನಿ ಎಂದರೆ ಫೋತ್‌ದಾರ್ ಎನ್ನುವವರಿಂದ ಕಬ್ಬಿಣದ ಓರ್ ಹೈ ಕಂಟೆಂಟ್ಸು ಇರುವು ದನ್ನು ಸಪ್ಲೈ ಮಾಡುತ್ತೇವೆಂದು ಹೇಳಿದರು. ಅದರಂತೆ ಅವರಿಗೇ ಟೆಂಡರನ್ನು ಕೊಡಲಾಗಿದೆ. ಇವರನ್ನು ನಾನೇನು ಇಲ್ಲಿಗೆ ಕರೆ ತರಲಿಲ್ಲ. ನಮ್ಮಲ್ಲಿ ಐರನ್ ಕಂಟೆಂಟ್ಸ್ ಸುಮಾರು ಶೇಕಡಾ 59 ರಿಂದ ಮೇಲೆ ಇಲ್ಲ ಎಂದು ಗೊತ್ತಾಗಿದೆ. ಇದಕ್ಕಾಗಿ ಕಡಿಮೆ ಐರನ್ ಕಂಟೆಂಟ್ಸ್ ಇರುವ ಅದಿರನ್ನು ಇಲ್ಲಿ ಉಪಯೋಗ ಮಾಡಲಾಗುವುದಿಲ್ಲ. ಇದಕ್ಕಾಗಿ ನಾವು ಫೋತದಾರ್ ಅಂಡ್ ಸನ್ಸ್ ರವರಿಗೆ ಕಬ್ಬಿಣದ ಅದಿರನ್ನು ಸಪ್ಲೈ ಮಾಡಲು ನಿಯಮಗಳ ಪ್ರಕಾರ ವಹಿಸಲಾಗಿದೆ. ಇದರಲ್ಲಿ ನಾನೇನೂ ಹೋಗಿ ಅವರನ್ನು ಇಲ್ಲಿಗೆ ಕರೆತರಲಿಲ್ಲ. ಇಂತಹ ಒಳ್ಳೆಯ ಮೆಚ್ಚಿಗೆ ಪಡೆದಂತಹ ಕಾರ್ಯವನ್ನು ಮಾಡಿದುದಕ್ಕೆ ಅವರು ಮೆಚ್ಚಬೇಕಾಗಿತ್ತು. ನಮ್ಮ ಮೈನಿಂಗು ಕಾಸ್ಟು ಏನಾಗುತ್ತದೆ ಎಂದು ವಿಚಾರ ಮಾಡಿದರೆ ಒಂದು ಟನ್‌ಗೆ ಮೈನಿಂಗು ಕಾಸ್ಟು 1969ರಲ್ಲಿ 43 ರೂಪಾಯಿ ಇತ್ತು. ಈಗ 1975ರಲ್ಲಿ ಮೈನಿಂಗು ಕಾಸ್ಟು ಒಂದು ಟನ್‌ಗೆ 55 ರೂಪಾಯಿಗಳಷ್ಟು ಏರಿದೆ. ಇದಕ್ಕೆ ಕಾರಣ ನಮ್ಮಲ್ಲಿರುವ ಮೆಷಿನರಿಗಾಗಿ ಹೆಚ್ಚು ಇನ್‌ವೆಸ್ಟ್‌ಮೆಂಟು ಮಾಡಲಾಗಿದೆ ಮತ್ತು ನಮ್ಮಲ್ಲಿ ಉತ್ಪಾದನೆಯಾಗುತ್ತಿರುವ ಅದಿರು ಎಂದರೆ ಲೋ ಗ್ರೇಡು ಐರನ್ ಓರು ಎಂದು ತಿಳಿದು ಬಂದುದರಿಂದ ನಾವು ಇಲ್ಲಿಗೆ ಖಾಸಗಿ ಜನರಿಂದ ಹೆಚ್ಚು ಐರನ್ ಓರು ಕಂಟೆಂಟ್ಸು ಇರುವ ಕಡೆಗಳಿಂದ ಟೆಂಡರುಗಳನ್ನು ಕರೆಯ ಬೇಕಾಗಿ ಬಂತು. ಈ ದೃಷ್ಟಿಯಿಂದ ಇಲ್ಲಿ ಅದಿರನ್ನು ಕೊಂಡುಕೊಳ್ಳುತ್ತಿದ್ದಾರೆ. ಆದುದರಿಂದ ಇಂತಹ ಒಂದು ಸ್ವಾಗತಾರ್ಹವಾದ ಕೆಲಸವನ್ನು ಮಾಡಿರುವುದರ ಬಗ್ಗೆ ಮೆಚ್ಚಬೇಕಾಗಿತ್ತು.

ಶ್ರೀ ಹೆಚ್ ಡಿ. ದೇವೇಗೌಡ :—ಪರ್ಸೆಂಟೇಜು ಆಫ್ ಓರು ಕಂಟೆಂಟ್ಸು ನಮ್ಮಲ್ಲಿರುವ ಮೈನಿಂಗು ಭಾಗದಲ್ಲಿ ಎಷ್ಟಿದೆ ?

SRI S. M. KRISHNA :—Our's is less than 60%. That is an accepted fact. ನಮ್ಮಲ್ಲಿ ಬಹು ಕಡಿಮೆ ದರ್ಜೆಯ ಅದಿರು ಸಿಗುತ್ತಿದೆ. ಐರನ್ ಕಂಟೆಂಟ್ಸು ಶೇಕಡಾ 58ಕ್ಕಿಂತ ಮೇಲೆ ಹೋಗಿಲ್ಲ. ಇದು ಕೆಮ್ಮಣ್ಣುಗುಂಡಿ ಮೈನ್ಸ್‌ನಲ್ಲಿರುವುದರಲ್ಲಿ ಕಡಿಮೆ ಓರು ಕಂಟೆಂಟ್ಸು ಇದೆ ಎಂದು ಗೊತ್ತಾಗಿದೆ.

(ಶ್ರೀ ಎಸ್. ಎಂ. ಕೃಷ್ಣ)

ಇನ್ನು ಮಾನ್ಯ ಸದಸ್ಯರಾದ ಶ್ರೀ ಖುದ್ದುಸ್‌ರವರು ಸ್ಲಾಗ್ ಸಿಮೆಂಟು ಬಗ್ಗೆ ಹೇಳುತ್ತಾ ಇಲ್ಲಿ ಅಡಲ್‌ಟ್ರೇಷನ್ ಆಗುತ್ತಿದೆ ಎಂದು ಹೇಳಿದರು. ಮಾನ್ಯ ಸದಸ್ಯರು ಇದರಲ್ಲಿ ಕೆಲಸ ಮಾಡಿರುವುದೇ ಒಂದು ದೊಡ್ಡ ತಪ್ಪು ಎಂದು ಕಾಣುತ್ತದೆ. ಇದರಲ್ಲಿ ಯಾವ ಅಡಲ್‌ಟ್ರೇಷನ್ ಕೂಡ ಇಲ್ಲ. ಇಲ್ಲಿ ಸ್ಲಾಗ್ ಸಿಮೆಂಟು ಎಂದು ಉಪಯೋಗಿಸದೆ ಇದ್ದರೆ ಒಳ್ಳೆಯ ಸಿಮೆಂಟು ಬರುವುದೇ ಇಲ್ಲ. ಸ್ಲಾಗ್ ಸಿಮೆಂಟು ಇದನ್ನು ಇಲ್ಲಿ ಸೇರಿಸಲೇ ಬೇಕಾಗುತ್ತದೆ. ಶ್ರೀ ವಿಶ್ವೇಶ್ವರಯ್ಯ ಎನ್ನುವವರು ದೆಹಲಿಯಲ್ಲಿರುವ ಸಿಮೆಂಟು ರೀಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿರುವ ಡಿವಿಜನ್‌ನ ಮುಖ್ಯಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಒಂದು ಸಾರಿ ನಮ್ಮ ಸಿಮೆಂಟು ಪ್ಲಾಂಟನ್ನು ನೋಡಲು ಬಂದು ಹೇಳಿದರು ಇಲ್ಲಿ ಶೇಕಡಾ 25 ರಷ್ಟು ಸ್ಲಾಗ್ ಸಿಮೆಂಟು ಹಾಕದೆ ಇದ್ದರೆ ಅದು ಪೋರ್ಟ್‌ಲೆಂಡು ಮೆಂಟು ಆಗುವುದೇ ಇಲ್ಲ ಎಂದು ಹೇಳಿದರು. ಅದರಂತೆ ಇಲ್ಲಿ ಶೇಕಡಾ 25 ರಷ್ಟು ಸ್ಲಾಗ್ ಸಿಮೆಂಟನ್ನೂ ಸೇರಿಸಿ ಇದಕ್ಕೆ ಪೋರ್ಟ್‌ಲ್ಯಾಂಡು ಬ್ಲಾಸ್ಟು ಫರ್ನೇಸು ಸಿಮೆಂಟು ಎಂದು ಇಲ್ಲಿ ಹೆಸರು ಕೊಟ್ಟಿರುವುದು. ಇದರಿಂದ ಮಾನ್ಯ ಸದಸ್ಯರು ಭದ್ರಾವತಿಯಲ್ಲಿರುವ ಸಿಮೆಂಟು ಅಡಲ್‌ಟ್ರೇಷನ್ ಆಗಿದೆ ಎಂದು ಯಾರಲ್ಲೂ ಹೇಳಲು ಹೋಗಬೇಡಿ ಮತ್ತು ಇಲ್ಲಿ ಹೇಳುವಾಗ ಮಾನ್ಯ ಸದಸ್ಯರು ಎಲ್ಲ ವಿಚಾರಗಳನ್ನೂ ಸರಿಯಾಗಿ ತಿಳಿದುಕೊಂಡು ಹೇಳಬೇಕು.

ಇನ್ನೊಂದು ವಿಚಾರವನ್ನು ಇಲ್ಲಿ ನಾನು ಬಹು ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಶ್ರೀ ಬಂಗಾರಪ್ಪನವರು ಮೈಸೂರು ಪೇಪರು ಮಿಲ್ಸ್ ಬಗ್ಗೆ ಕೆಲವಾರು ವಿಚಾರಗಳನ್ನು ಹೇಳಿದರು. ಇದರಲ್ಲಿ ಸರಕಾರದ ಷೇರು ಬಂಡವಾಳ ಶೇಕಡ ಎತ್ತರಷ್ಟು ಇದೆ ಇದು ಬಹಳ ಉತ್ತಮವಾದ ಒಂದು ಕಾಗದದ ಕಾರ್ಖಾನೆ ಎಂದು ಹೆಸರುವಾಸಿಯಾಗಿದೆ. ವಿಶ್ವೇಶ್ವರಯ್ಯನವರ ಕಾಲದಲ್ಲೇ ಇದು ಮಾಡಬೇಕೆಂದು ಮಾಡಿದ್ದು. ಇಲ್ಲಿಗೆ ಕಲ್ಕತ್ತಾದಿಂದ ಒಬ್ಬರು ಕೈಗಾರಿಕೋದ್ಯಮಿಗಳು ಬಂದು ಇಂತಹ ಉತ್ತಮವಾದ ಕಾಗದದ ಕಾರ್ಖಾನೆಯನ್ನು ಮಾಡಿದ್ದಾರೆ ಇದನ್ನು ಎಲ್ಲರೂ ಮೆಚ್ಚಬೇಕಾಗಿತ್ತು. ಇದರ ವ್ಯವಹಾರಗಳನ್ನು ನೋಡಿ ಮೆಚ್ಚಬೇಕು. ಇಂತಹ ಒಂದು ಕಾರ್ಖಾನೆಯಲ್ಲಿ ಮಾನ್ಯ ಶ್ರೀ ಬಂಗಾರಪ್ಪನವರು ನನ್ನ ಹೆಸರನ್ನು ಎಳೆದಿದ್ದಾರೆ. ಇಲ್ಲಿಗೆ ಈಚೆಗೆ ಶ್ರೀ ಮೋಹನ್ ದಾಸ್ ಎನ್ನುವವರನ್ನು ಜನರಲ್ ಮ್ಯಾನೇಜರಾಗಿ ನೇಮಕ ಮಾಡಿದ್ದಾರೆ. ಇವರು ಒಳ್ಳೆಯ ಹೆಸರನ್ನು ಪಡೆದಂತವರು. ಇವರು ಕಾಗದದ ವ್ಯವಹಾರ ಮಾಡುವುದರಲ್ಲಿ ಬಹಳ ಪ್ರಸಿದ್ಧಿ ಪಡೆದವರು. ಪಾಶ್ಚಿಮಾತ್ಯ ದೇಶಗಳಲ್ಲಿರುವ ಕೈಗಾರಿಕಾ ಕೇಂದ್ರಗಳಲ್ಲಿ ಅದರಲ್ಲೂ ಕಾಗದದ ಕಾರ್ಖಾನೆಗಳಲ್ಲಿ ತರಬೇತಿ

ಪಡೆದು ಬಂದಂತಹ ಅಧಿಕಾರಿಗಳು. ಇವರು ಇಲ್ಲಿಗೆ ಅರ್ಹರು ಎಂದು ನೇಮಕ ಮಾಡಲಾಗಿದೆ. ಏನೋ ಅದೃಷ್ಟವಶಾತ್ ನಾನೂ ಅವರೂ ಒಂದೇ ಜಾತಿಯವರೇ ಆಗಿರಬಹುದು. ಇದರಲ್ಲಿ ನನ್ನ ಸಂಬಂಧ ಏಕೆ ಬರಬೇಕು ? We don't choose our caste when we come to this world. It is an accident. ಕೇಂದ್ರ ಸರಕಾರದವರ ಅರ್ಹತೆ ಪಡೆದು ಇಲ್ಲಿಗೆ ಬಂದಿದ್ದಾರೆ ಮತ್ತು ಅಕಸ್ಮಾತ್ ಅವರು ನನ್ನ ಜಾತಿಯವರಾದ ಮಾತ್ರಕ್ಕೆ ಇಲ್ಲಿಗೆ ಬರಲು ಅನರ್ಹರು ಎಂದು ಹೇಳಬೇಕೇ?

ಶ್ರೀ ಹೆಚ್ ಡಿ. ದೇವೇಗೌಡ :—ನಾನು ನಿಮ್ಮ ಜಾತಿ. ಆದರೂ ನಿಮ್ಮ ಮೇಲೆ ಅಪಾದನೆಗಳನ್ನು ಮಾಡುತ್ತಲೇ ಇದ್ದೇನೆ.

ಶ್ರೀ ಎಸ್. ಎಂ. ಕೃಷ್ಣ :—ಮಾನ್ಯ ಸದಸ್ಯರಿಗೆ ಹೇಳಬೇಕಾದರೆ ಇವರು ಬೆಂಗಳೂರು ಜಿಲ್ಲೆಯ ಬೈರಾಪಟ್ಟಣದವರು. ನನ್ನ ಊರಿಗೂ ಇವರಿಗೂ ಸಂಬಂಧವಿಲ್ಲ. ಬೇಕಾದರೆ ಮಾನ್ಯ ಶ್ರೀ ಬಂಗಾರಪ್ಪನವರು ಶ್ರೀ ಹೆಚ್. ಟಿ. ಕೃಷ್ಣಪ್ಪನವರನ್ನು ಇವರ ಬಗ್ಗೆ ಕೇಳಿ ಎಲ್ಲ ವಿವರಗಳನ್ನೂ ಪಡೆಯಬಹುದು. ಇವರು ಕ್ಯಾನಡಾ ಜರ್ಮನಿ ಮುಂತಾದ ವಿದೇಶಗಳಿಗೆ ಹೋಗಿ ಒಳ್ಳೆಯ ತರಬೇತಿ ಪಡೆದು ಬಂದಂತಹ ಒಳ್ಳೆಯ ಅಧಿಕಾರಿಗಳು ಇಂತಹವರ ಬಗ್ಗೆ ಮಾನ್ಯ ಸದಸ್ಯರು ಹೇಳುವುದನ್ನು ಕೇಳಿ ನನಗೆ ಬಹಳ ಸಂಕಟವಾಗುತ್ತದೆ. ಸಾರ್ವಜನಿಕ ಜೀವನದಲ್ಲಿರುವಾಗ ಇಂತಹ ವಿಚಾರಗಳನ್ನು ಸರಿಯಾಗಿ ತಿಳಿದು ಹೇಳಬೇಕಾಗುತ್ತದೆ. ಇವರು ಸುಮಾರು ಹದಿನೈದು ವರ್ಷ ಕಾಲ ಇದರಲ್ಲಿ ತರಬೇತಿ ಹೊಂದಿದವರು. ಇವರಿಂದ ಇಂದು ಕಾಗದದ ಕಾರ್ಖಾನೆಗೆ ಒಳ್ಳೆಯ ಹೆಸರು ಬಂದಿದೆ.

SRI D. DEVARAJ URS : I remember in fact it is I who recommended that man to this post.

SRI H. D. DEVE GOWDA .—If that Officer is entitled to get that post we don't come in the way. I don't know what the Honbl'e member Sri Bangarappa said.

ಶ್ರೀ ಎಸ್. ಎಂ. ಕೃಷ್ಣ :—ನಾನು ಯಾರನ್ನಾದರೂ ನನ್ನ ಇಲಾಖೆಗೆ ಇಲ್ಲವೆ ನನಗೆ ಸಂಬಂಧಪಟ್ಟ ಕಂಪನಿಗಳಲ್ಲಿ ಇಲ್ಲವೇ ಕಾರ್ಪೊರೇಷನ್‌ಗಳಲ್ಲಿ ನೇಮಕ ಮಾಡುವಾಗ ಸಂಬಂಧಪಟ್ಟವರ ಅರ್ಹತೆಗಳನ್ನು ನೋಡಿ ಮಾಡಬೇಕಾಗುತ್ತದೆ. ಇದರಲ್ಲಿ ಈಗ ನೇಮಕ ಮಾಡಿರುವವರು ಬೆಂಗಳೂರು ಜಿಲ್ಲೆಯವರು. ಇವರೇನೂ ನನ್ನ ನೆಂಟರಲ್ಲ. ಬೆಂಗಳೂರಿನಲ್ಲಿ ನನ್ನ ನೆಂಟರು ಬೇರೆ ಯಾರೂ

(ಶ್ರೀ ಎಸ್. ಎಂ. ಕೃಷ್ಣ)

ಇರಬಹುದು. ಆದರೆ ಕಾರ್ಖಾನೆಗಳಿಗೆ ಧಕ್ಕೆ ತಗಲದಂತೆ ಮತ್ತು ಹೆಚ್ಚು ಪ್ರಯೋಜನವಾಗುವಂತಹ ಕೆಲಸಗಳನ್ನು ಮಾಡುವ ಅಧಿಕಾರಿಗಳು ಇದ್ದರೆ ಅಂತಹವರನ್ನು ಇಲ್ಲಿ ನೇಮಕ ಮಾಡಿದರೆ ಅದರಿಂದೇನು ತಪ್ಪಾಗುತ್ತದೆ? ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಿಂದಲೂ ಹೆಸರುವಾಸಿಯಾದ ಕಾಗದದ ಕಾರ್ಖಾನೆ ಇದು. ಇದರಲ್ಲಿ 24 ಸಾವಿರ ಟನ್‌ಗಳಷ್ಟು ಕಾಗದ ಉತ್ಪಾದನೆಯಾಗುತ್ತದೆ. ಹತ್ತು ವರ್ಷಗಳಿಂದ ಇದರ ಉತ್ಪಾದನೆ ಏನಿತ್ತು? ಈಗ ಎಷ್ಟಿದೆ ಇದನ್ನು ತಾವು ನೋಡಿರಿ. ಕಳೆದ ಒಂದು ವರ್ಷದಲ್ಲೇ ಉತ್ಪಾದನೆಯು ಮಟ್ಟ ಸುಮಾರು 24 ಸಾವಿರ ಟನ್‌ಗಳಷ್ಟಾಗಿತ್ತು. ಇದರ ಕೈಪಾಸಿಟಿ ಈ ಸಾಲಿನಲ್ಲಿ ಸುಮಾರು 26 ಸಾವಿರ ಟನ್‌ನಷ್ಟು ಕಾಗದ ಉತ್ಪಾದನೆಯಾಗುತ್ತದೆ ಎಂದು ಗೊತ್ತಾಗಿದೆ. ಇಂತಹ ಒಂದು ಕಾರ್ಖಾನೆಯ ಷೇರುಗಳನ್ನು ಶೇಕಡಾ 27, 28 ಇಲ್ಲವೇ 30 ರಷ್ಟು ಕೊಟ್ಟು ಇದನ್ನು ಬೇರೆಯವರು ಕೊಂಡುಕೊಳ್ಳಬೇಕೆಂದು ಇದ್ದರು. ಇದನ್ನು ನಮ್ಮ ಸರಕಾರ ತಡೆಗಟ್ಟುವುದರಲ್ಲಿ ಯಶಸ್ವಿಯಾಗಿದೆ. ಇದಕಾಗಿಯೇ ಸರಕಾರದ ಪರವಾಗಿರುವ ಡೈರೆಕ್ಟರುಗಳನ್ನು ಇದರಲ್ಲಿ ನೇಮಕ ಮಾಡಿರುವುದು.

ಶ್ರೀ ಹೆಚ್. ಡಿ. ದೇವೇಗೌಡ :—ಸರಕಾರವೇ ಶೇಕಡಾ 51ರಷ್ಟು ಷೇರು ಕೊಡುವಾಗ ಅವರೇ ಏಕೆ ಇದನ್ನು ನ್ಯಾಷನಲೈಸು ಮಾಡಬಾರದು?

ಶ್ರೀ ಎಸ್. ಎಂ. ಕೃಷ್ಣ :—ಇದರಲ್ಲಿ ಕಂಪನಿ ಲಾ ಬರುತ್ತದೆ. ಹಾಗೆಲ್ಲಾ ಮಾಡಲು ಆಗುವುದಿಲ್ಲ.

ಶ್ರೀ ಹೆಚ್. ಡಿ ದೇವೇಗೌಡ :— ಸರಕಾರ ಈಚೆಗೆ ಫಿಲಂ ಡೆವಲಪ್‌ಮೆಂಟು ಕಾರ್ಪೊರೇಷನ್‌ನಲ್ಲಿ ಶೇಕಡಾ 51ರಷ್ಟು ಷೇರು ಕೊಂಡುಕೊಳ್ಳಲಿಲ್ಲವೇ? ಇದಕ್ಕೆ ಕೇಂದ್ರ ಸರಕಾರದವರೂ ಪರ್ಮಿಶನ್ ಕೊಟ್ಟಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ.—ರಾಷ್ಟ್ರದಲ್ಲೇ ಮೊದಲ ಬಾರಿಗೆ ಪೇಪರ್ ಮಾರಾಟ ಮಾಡುವುದಕ್ಕೆ ಡೀಲರ್ಸ್ ಡಿಪಾಜಿಟ್ ಪದ್ಧತಿಯನ್ನು ಇಂಟ್ರಡ್ಯೂಜ್ ಮಾಡಿದವರು ನಾವು.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ಆಪಾದನೆ ಮಾಡುವಾಗ ತಿಳಿಯು ಕೊಂಡು ಮಾಡಿದೆ. ಡೀಲರ್ ಡಿಪಾಜಿಟ್ ಅನ್ನು ಯಾರು ಯಾರು ಎಷ್ಟೆಷ್ಟು ಕೊಟ್ಟಿದ್ದಾರೆ ಎಂಬ ಪಟ್ಟಿಯನ್ನು ಈ ಸಭೆಯ ಮುಂದೆ ಇಡಿ.

ಶ್ರೀ ಎಸ್. ಎಂ. ಕೃಷ್ಣ — ಆ ಕಾರ್ಖಾನೆಯಲ್ಲಿ ನಾವು 51 ಪರ್ಸೆಂಟ್ ಷೇರನ್ನು ಹೊಂದಿದ ದಿವಸ ಆ ಪಟ್ಟಿಯನ್ನು ಇಡುತ್ತೇನೆ. ಸರಕಾರದ ಬಂಡ

ವಾಳ 51 ಪರ್ಸೆಂಟ್ ಆಗುವವರೆಗೂ ಕಾಗದದ ಹಂಚಿಕೆಯ ಪಟ್ಟಿಯನ್ನು ಇಡು ವುದಕ್ಕೆ ಸಾಧ್ಯವಿಲ್ಲ.

SRI H. D. DEVEGOWDA.—Our Industry Department Director is the Chairman and the Managing Director is also our own man. Under those circumstances, if you shirk to place the list on the table of the House; I must come to the conclusion that there is something fishy in it.

SRI S. M. KRISHNA.—Our Leader of the Opposition can come to any conclusion. But, I am bound my certain rules and regulations. What is the rule of Company law? According to that law, I cannot place it on the table of the House. When he asked for M. I. S. L. I have readily placed it on the table of the House, and when the Members asked for such a list with regard to the cement dealings, I have readily placed it on the table of the House. But, here unless we have more than 51 percent of the shares in it, we cannot place it on the table of the House.

SRI H. D. DEVEGOWDA.— Then, shall I conclude that our own officers have colluded in the deal ?

SRI S. M. KRISHNA.—Whatever is within the powers of rules, I have to do it. When the opposition Members wanted a list with regard to M.I.S.L. and cement dealership, I have readily placed them on the table of the House.

SRI H. D. DEVEGOWDA.—With regard to Cement you have not placed on the table of the House.

SRI S. M. KRISHNA.—Yes, I have placed it.

SRI S. BANGARAPPA.—If you are fair enough you please do it.

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರ ನೇಮಕ ಮಾಡಿದ ಅಧಿಕಾರಿ ತಾನು ಮಾಡುವ ಕರ್ತವ್ಯವನ್ನು ಲೋಪ ಮಾಡಿದ್ದರೆ ಸರ್ಕಾರ ಅದನ ರೋಕ್ಷವಾಗಿ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಅದು ತಮ್ಮ ಅಭಿಮತ. ಕಾರ್ಖಾನೆಯಲ್ಲಿ ನಷ್ಟವಾಗಿರಬೇಕು, ಇಲ್ಲ ಉತ್ಪಾದನೆ ಸಾಮರ್ಥ್ಯದಲ್ಲಿ ಕಡಿಮೆ ಆಗಿರಬೇಕು. ಏನೂ ಇಲ್ಲದಿದ್ದರೆ ಯಾವ ರೀತಿ ಮಾಡುವುದಕ್ಕಾಗುತ್ತದೆ ? ಅದು ಬರೀ ವೈಡ್ ಅಲಿಗೇಷನ್ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಲಾಭ ಆಗಿದ್ದರೆ ಒಂದುವೇಳೆ ಅನ್ಯಾಯವಾಗಿದ್ದರೂ ಅದನ್ನು ನೋಡಬಾರದು ಎಂದು ಅರ್ಥವೇ ?

ಶ್ರೀ ಎಚ್. ಡಿ. ದೇವೇಗೌಡ.—ಅದರಲ್ಲಿ ಮಾನ್ಯ ಮಂತ್ರಿಗಳ ಕೈವಾಡ ಇದೆಯೆಂದಲ್ಲ. ಅದಕ್ಕೂ ನಿಮಗೂ ಸಂಬಂಧವಿಲ್ಲ. ಆದರೆ ನೀವು ನೇಮಕ ಮಾಡಿದಂತಹ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಅದು ultimately it reflects on the Government.

SRI S. M. KRISHNA.— Let me make it very clear. There is nothing fishy absolutely. Certain trade practices, and certain commercial practices have been followed here.

SRI H.D. DEVEGOWDA.—Even th enon dealers, who are not at all professional dealers, have been allotted 50-100 tons.

ಶ್ರೀ ಡಿ. ದೇವರಾಜ್ ಅರಸ್.—ಅದು ಪ್ರೈವೇಟ್ ಕಂಪನಿ. 51 ಪರ್ಸೆಂಟ್ ಷೇರನ್ನು ನಾವು ಮೊದಲೇ ಮಾತನಾಡಿ ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇರತಕ್ಕ ಷೇರ್ ಹೋಲ್ಡರುಗಳಿಂದ ಅದನ್ನು ತೆಗೆದುಕೊಳ್ಳಬೇಕು ಎಂದು ಷೇರುಗಳನ್ನು ಇನ್‌ಕ್ರೀಜ್ ಮಾಡಬೇಕು ಎಂದು ಇದ್ದೇವೆ. As long as this Paper Mill is registered under Company law, what the Minister is saying before this House is correct. We cannot give it because, we are bound by certain rules and regulations. Secondly, Mr. Devegowda, honestly feels that there are some people who might have taken the paper and sold it away in black market. There are two points involved. One is that this has been given to people who are non-dealers. The non-dealers it is said have sold this paper in black market. Let us not mix up the two. I for one whether the Minister has done it or not, if any non-dealers are given, I still hold that they are absolutely right and there are nothing wrong.

SRI H. D. DEVE GOWDA.—I am speaking about ad-hoc allotment. It is not a question of giving fresh dealership to a non-dealear. Ad hoc allotment has been made even to a non-dealer.

SRI D. DEVARAJ URS.—Again, I say and agree with him-whether the dealer or non-dealear if sold in the black market solely with a view to make money and not adhered to certain rules or instructions given on rates, it is wrong. The Department will look into it and find out the details. To say that he is not capable of placing before the House I can say that under Company law, I am sorry, it cannot be placed before the House as has been stated by the Minister.

SRI H. D. DEVE GOWDA.—The Government has got every right to intervene.

SRI D. DEVARAJ URS.—Let the Minister get it examined whether it is possible to place it or if it is not possible the reasons for that etc., That is a matter for verification.

SRI S. M. KRISHNA.—I agree with the Chief Minister. Action will be taken whether it is legally feasible or not. It will be certainly examined.

ಇನ್ನು ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾನ್ಯ ದೇವೇಗೌಡರು ಕೆಲವು ವಿಚಾರಗಳನ್ನು ಮಾತನಾಡಿದ್ದಾರೆ ಅವರು ಹೇಳಿದಂತಹ ಪ್ರತಿಯೊಂದು ವಾಕ್ಯವನ್ನೂ ನಾನು ಸಮರ್ಥನೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆ ಅಭಿವೃದ್ಧಿಯಾಗುವುದಕ್ಕೆ ಬಹಳ ಒಳ್ಳೆಯ ವಾತಾವರಣ ಇದೆ. ಈ ವಾತಾವರಣವನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿರತಕ್ಕ ಕಾಲ ಸನ್ನಿಹಿತವಾಗಿದೆ. ಆದರೆ ನಮಗೆ ಬಂದಿರತಕ್ಕ ತೊಂದರೆ ಏನು ಎಂದರೆ ನಾವು ಎಷ್ಟು ಬಂಡವಾಳವನ್ನು ಸಕ್ಕರೆ ಕಾರ್ಖಾನೆಗಳ ಮೇಲೆ ಹಾಕಿದ್ದೇವೆ ಅದಕ್ಕೆ ನಮ್ಮ ರಾಜ್ಯದಲ್ಲಿ ಚೈತನ್ಯ ಇದೆಯೇ ಎನ್ನತಕ್ಕಂಥಾದ್ದು ಯೋಚನೆ ಮಾಡಬೇಕಾಗಿದೆ. ಒಂದೊಂದು ಸಕ್ಕರೆ ಕಾರ್ಖಾನೆ ಮಾಡಬೇಕಾದರೆ ಕನಿಷ್ಟಪಕ್ಷ $6\frac{1}{2}$ ಕೋಟಿ 7 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಬೇಕು. ಒಂದೊಂದು ಸಕ್ಕರೆ

(ಶ್ರೀ ಎಸ್. ಎಂ. ಕೃಷ್ಣ)

ಕಾರ್ಖಾನೆಗೆ ಹಣವನ್ನು ಒದಗಿಸತಕ್ಕದ್ದು ಈ ದಿವಸ ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಎಷ್ಟು ಕಠಿಣವಾದ ಸಮಸ್ಯೆ ಎನ್ನತಕ್ಕಂಥಾದ್ದನ್ನು ನಾನು ಶ್ರೀ ದೇವೇಗೌಡರಿಗೆ ವಿಶೇಷವಾಗಿ ಹೇಳತಕ್ಕಂಥಾ ಅವಶ್ಯಕತೆ ಇಲ್ಲ. ಏತಕ್ಕೆಂದರೆ ಇದರ ಬಗ್ಗೆ ಸಂಪೂರ್ಣವಾಗಿ ನಾನು ವ್ಯಾಹಿತಿಯನ್ನು ಪಡೆದಿದ್ದೇನೆ. ಆದರೂ ನಾವು ಇದನ್ನು ಕೈಬಿಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ. ನಮಗೆ ಇರತಕ್ಕಂಥಾ ಲೈಸೆನ್ಸ್‌ಅನ್ನು ನಾವು ಪ್ರತಿವರ್ಷ ಉಪಯೋಗಿಸಿಕೊಂಡು ಸಕ್ಕರೆ ಕಾರ್ಖಾನೆಯನ್ನು ಮಾಡಬೇಕಾಗುತ್ತದೆ. ಈ ಕಾರ್ಖಾನೆಯನ್ನು ಕೋಆಪರೇಟೀವ್ ಸೆಕ್ಟಾರಿನಲ್ಲಿ ಮಾಡಬೇಕು ಎನ್ನುವುದು ರಾಜ್ಯ ಸರ್ಕಾರದ ಒಂದು ನಿಲುವು ಇದೆ. ಕೋಆಪರೇಟೀವ್ ಕಾರ್ಖಾನೆಗಳನ್ನು ಮಾಡಬೇಕಾದರೆ ಅದಕ್ಕೆ ಅವಶ್ಯಕವಾಗಿ ಬೇಕಾದ ಷೇರ್ ಹಣವನ್ನು ನಾವು ಸಾಮಾನ್ಯ ಜನಗಳಿಂದ ನಾವು ಸಂಗ್ರಹ ಮಾಡುವುದರಲ್ಲಿ ತೊಡಗಬೇಕು, ಈಗ ನಾವು ಹಾಸನ ಜಿಲ್ಲೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡಬೇಕು ಭದ್ರಾವತಿಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡಬೇಕು. ಚುಂಚನಕಟ್ಟೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಮಾಡಬೇಕು ಈ ವರ್ಷ ಗಂಗಾವತಿ ಮತ್ತು ಕೊಳ್ಳೆಗಾಲ ಈ ಕಡೆ ಸಕ್ಕರೆ ಕಾರ್ಖಾನೆಯನ್ನು ಮಾಡಬೇಕಾಗುತ್ತದೆ. ಇದರಲ್ಲಿ ಒಂದನ್ನು ಕೋಆಪರೆಟೀವ್ ಸೆಕ್ಟರ್‌ನಲ್ಲಿ ಇನ್ನೊಂದನ್ನು ಜಾಯಿಂಟ್ ಸೆಕ್ಟಾರಿನಲ್ಲಿ ಇವುಗಳು ಅಕ್ಟೋಬರ್ ತಿಂಗಳಿನಲ್ಲಿ ತಮ್ಮ ಕೆಲಸವನ್ನು ಪ್ರಾರಂಭ ಮಾಡುತ್ತವೆ. ಹಾಗೆ ಶಿವಮೊಗ್ಗದಲ್ಲಿ ಒಂದು ವಿಶೇಷವಾನಂಥ ತೊಂದರೆ ಬಂದಿದೆ ಯಾರೋ ಕೆಲವರು ಅಲ್ಲಿ ಲೈಸೆನ್ಸ್‌ಗೆ ಹಾಕುತ್ತಾರೆನ್ನೋಣ. ಆದರೆ ಲೈಸೆನ್ಸನ್ನು ಜಾಯಿಂಟ್ ಸೆಕ್ಟರಿನಲ್ಲಿ ಕೊಡುವುದಕ್ಕೆ ಇಷ್ಟವಿಲ್ಲ ಕೋ ಅಪರೇಟಿವ್ ಸೆಕ್ಟರಿನಲ್ಲಿ ವರ್ಗಾಯಿಸಿ ಎಂದು ಬರೆಯುತ್ತಾರೆಂದರೆ ಆಗ ಕೇಂದ್ರ ಸರ್ಕಾರದವರು ಅದಕ್ಕೆ ಅಡ್ಡಿ ಆತಂಕಗಳು ಕಾನೂನು ಪ್ರಕಾರ ಇವೆಯೆಂದು ಹೇಳಿ ಅದನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ. ಹೊಸ ಅಪ್ಲಿಕೇಶನ್ ಹಾಕಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಯೋಚನೆ ಮಾಡುತ್ತಿದ್ದೇವೆಂದರೆ ಇಂತಹ ಕೈಗಾರಿಕೆಗಳ ಬಗ್ಗೆ ಸಮರ್ಥವಾದ ನೀತಿಯನ್ನು ರೂಪಣೆ ಮಾಡುವುದಕ್ಕೆ ಹೊಸದಾಗಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಮಾಡುವುದಕ್ಕೆ ಒಂದು ಷುಗರ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ಮಾಡುತ್ತೇವೆ. ನಾವು ಈಗ ಈ ಕೆಲಸಗಳನ್ನು ಸಾದನೆ ಮಾಡಬೇಕಾಗಿದೆ. ಇದರ ಬಗ್ಗೆ ಸರ್ಕಾರದವರು ತೀವ್ರಾಲೋಚನೆಯನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಒಂದು ನಿರ್ಧಾರವನ್ನು ಕೂಡಲೇ ತೆಗೆದುಕೊಳ್ಳುತ್ತೇವೆ

1-30 P. M.

ಶ್ರೀ ಹೆಚ್. ಡಿ. ದೇವೇಗೌಡ :—ಅದು ಹಿಂದೆ ಮಾನ್ಯ ಶ್ರೀ ನಾಗಪ್ಪ ಆಳ್ವ ಅವರು ಹೇಳಿದಂತೆ ಆಗುತ್ತದೆ. We do not want such kind

of answer. We want you to tell us that you are going to do it.

SRI S. M. KRISHNA:— If the Hon. Leader of the Opposition wants a categorical answer much better than Dr. Nagappa Alva's answer, Yes; we will do it. ಮತ್ತೊಂದು ವಿಚಾರವನ್ನು ಮಾನ್ಯ ಶ್ರೀ ದೇವೇಗೌಡರು ಹೇಳಿದ್ದಾರೆ. ಅದು ಕೈಗಾರಿಕೆ ಇಲಾಖೆಯನ್ನು ಪುನರ್ರಚನೆ ಮಾಡುವುದು. ಅದು ನಿಜ. ನಾನೂ ಸಹ ಕಳೆದ ಎರಡು ವರ್ಷಗಳಿಂದ ಕೈಗಾರಿಕೆಯ ಇಲಾಖೆಯನ್ನು ಪುನರ್ರಚನೆಮಾಡ ಬೇಕೆಂದು ಯೋಚನೆ ಮಾಡುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ:— ಕಾಸಿಗೊಂದು ಕಾರ್ಪೊರೇಷನ್ ಈಗ ಆಗುತ್ತಿರುವಾಗ ನಾಳೆ ಬೆಳಕು ಆಗುವುದರೊಳಗೆ ಇದಕ್ಕೂ ಒಂದು ಕಾರ್ಪೊರೇಷನ್ ಮಾಡಬೇಡವೇ ? ಆದ್ದರಿಂದ ಈ ತರಹ ಹಾರಿಕೆ ಉತ್ತರ ನಮಗೆ ಬೇಡ.

SRI S. M. KRISHNA:—I had a meeting in my chamber in which the Chairman of the Hindustan Paper Corporation, Technical Officers, Conservator of Forest and the Minister of Forest were present. ಈಗಾಗಲೇ ಕೆಲವು ಕಾರ್ಖಾನೆಗಳ ಬಗ್ಗೆ ಬ್ಲೂ ಪ್ರಿಂಟ್ಸ್ ರೆಡಿ ಆಗಿದೆ. ಅದಕ್ಕೆ ಸ್ವಲ್ಪ ಹಣ ಬೇಕಾಗುತ್ತದೆ. ಆದರೆ ಹೆಚ್ಚು ಹಣ ಬೇಕಾಗುವುದಿಲ್ಲ ಆ ಹಣವನ್ನು ನಾವು ಒದಗಿಸಿದರೆ ರಿ ಆರ್ಗನೈಜೇಷನ್ ಆಫ್ ದಿ ಡಿಪಾರ್ಟ್‌ಮೆಂಟ್ ಮಾಡಬಹುದು. ನಾವು ಈಗ ಹೊಸದಾಗಿ ರಿಯಾಯಿತಿಗಳನ್ನು ಅನೌನ್ಸ್ ಮಾಡಿರುವುದು ಮತ್ತು ಇದರ ಹಿನ್ನೆಲೆಯಲ್ಲಿ ಇಲಾಖೆಯನ್ನು ಪುನರ್ರಚನೆ ಮಾಡುವುದು ಇವೆರಡೂ ಒಂದ ಕ್ಕೊಂದು ಹೊಂದಿಕೆಯಾಗಿರುವ ವಿಚಾರಗಳು. ಸರ್ಕಾರದವರು ಅದರ ಬಗ್ಗೆ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಂದು ನಾನು ಆಶಿಸಿದ್ದೇನೆ.

ಇನ್ನು ಸಿಮೆಂಟ್ ಕಾರ್ಖಾನೆ ನಮ್ಮ ರಾಜ್ಯದಲ್ಲಿ ಈಗ ಹೊಸದಾಗಿ ನಾಗರ ಹಳ್ಳಿಯಲ್ಲಿ ಆಗಬೇಕೆಂದು ಲೆಟರ್ ಆಫ್ ಇಂಡೆಂಟ್ ನಮಗೆ ಹೊಸದಾಗಿ ಬಂದಿದೆ.

ಶ್ರೀ ಹೆಚ್. ಡಿ. ದೇವೇಗೌಡ:—ಯಾರಿಗೆ ?

ಶ್ರೀ ಎಸ್. ಎಂ. ಕೃಷ್ಣ :—ಲೆಟರ್ ಆಫ್ ಇಂಟೆಂಟ್ ಈಗಾಗಲೇ ಅದಕ್ಕೆ ಇಶ್ಯೂ ಆಗಿದೆ.

(ಶ್ರೀ ಎಸ್. ಎಂ. ಕೃಷ್ಣ)

ಇನ್ನು ಚಿತಾಪುರದಲ್ಲಿ ಸಿಮೆಂಟ್ ಕಾರ್ಖಾನೆಗೆ ರೆಕಮಂಡೇಷನ್ ಮಾಡಿದ್ದಾರೆ. ಅದರಲ್ಲಿ ಮಾನಾಪಲಿ, ರಿಸ್ಟ್ರಿಕ್ಷನ್ ಎಲ್ಲವೂ ಇವೆ. ಕಮಿಷನ್ ಮುಂದೆ ಆ ಹೆಸರು ಹಾಗೆಯೇ ನಿಂತಿದೆ. ಇನ್ನು ತಾಳೀಕೋಟೆ, ಹೊಸದುರ್ಗ, ಮಂಡ್ಯ ಈ ಪ್ರದೇಶಗಳಲ್ಲಿ ಪೇಪರ್ ಮಿಲ್ಸ್‌ಗಳ ಎಕ್ಸ್‌ಪ್ಯಾನ್‌ಷನ್ ವಿಷಯವಾಗಿ ಮಾನ್ಯ ಶ್ರೀ ದೇವೇಗೌಡರು ಹೇಳಿದರು. ನಾನು ಸಹ ಅವುಗಳ ಎಕ್ಸ್‌ಪ್ಯಾನ್‌ಷನ್ನನ್ನು ಸ್ವಾಗತಿಸುತ್ತೇನೆ. ಅವರಿಗೆ ಬೇಕಾದಂಥ ರಾಮೆಟೀರಿಯಲ್ಸ್ ಏನಿವೆಯೋ ಅವನ್ನು ಕೊಡಬೇಕು. ಹಿಂದೆ ಒಂದುಸಾರಿ ನನ್ನ ಚೇಂಬರ್‌ನಲ್ಲಿಯೇ ಚೇರ್‌ಮನ್ ಆಫ್ ದಿ ಪೇಪರ್ ಕಾರ್ಪೊರೇಷನ್ಸ್, ಟೆಕ್ನಿಕಲ್ ಅಡ್ವೈಜರ್ಸ್, ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್, ಮಂತ್ರಿಗಳು ಮತ್ತು ಇತರ ಆಫೀಸರ್ಸ್ ಎಲ್ಲರೂ ಸೇರಿ ಈ ಕಾರ್ಖಾನೆಗಳ ಎಕ್ಸ್‌ಪ್ಯಾನ್‌ಷನ್ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಆಗಲೇ ಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅವರು ಇನ್ನೂ ಕೇಳುತ್ತಿದ್ದಾರೆ. ಬೊಂಬುಗಳು, ಯೂಕಲಿಪ್ಟಸ್ ಸಾಕಷ್ಟು ಸಿಗುವುದಿಲ್ಲ, ಅವನ್ನು ಎಷ್ಟೆಷ್ಟು ಪರ್ಸಂಟೇಜ್‌ನಲ್ಲಿ ಮಿಶ್ರ ಮಾಡಬೇಕೆಂದು ಯೋಚನೆ ಮಾಡಿ ಹೇಳಬೇಕೆಂದು ನಮಗೆ ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :— ಮಿನಿ ಪೇಪರ್ ಮಿಲ್ಸ್ ವಿಷಯ ಹೇಳಬೇಕು.

ಶ್ರೀ ಎಸ್. ಎಂ. ಕೃಷ್ಣ :— ಮಿನಿ ಪೇಪರ್ ಮಿಲ್ಸ್ ವಿಷಯವಾಗಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. Mini paper Mills are based on paddy husk as the major raw material and then waste paper and other raw materials are required. ಮಿನಿ ಪೇಪರ್ ಮಿಲ್‌ಗೆ ಸಾಕಷ್ಟು ಬೊಂಬುಗಳು, ಯೂಲಿಕಲಿಪ್ಟಸ್ ಸಿಕ್ಕಿಲ್ಲ. ರಿಫ್ರ್ಯಾಕ್ಟರೀಸ್ ವಿಷಯವಾಗಿ ದೂರುಗಳು ಇವೆಯೆಂದು ಹೇಳಿದರು. ಅದರ ಬಗ್ಗೆ ನಮಗೆ ಲೆಟರ್ ಆಫ್ ಇಂಡೆಂಟ್ ಬಂದಿದೆ. ಆದರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಇನ್ನು ಉದ್ದಿಮೆದಾರರು ಬಂದಿಲ್ಲ. ಮಾನ್ಯ ಶ್ರೀ ದೇವೇಗೌಡರು ಮಾಡಿರತಕ್ಕ ಸಲಹೆಗಳ ಪ್ರಕಾರ ಭದ್ರಾವತಿ ಮತ್ತು ಬಳ್ಳಾರಿಗಳಲ್ಲಿ ಅದನ್ನು ಹಾಕುವುದಕ್ಕೆ ಯಾರನ್ನಾದರೂ ಉದ್ದಿಮೆದಾರರನ್ನು ಕರೆದುಕೊಂಡು ಬಂದರೆ, ಅವರಿಗೆ ಆ ಕೆಲಸವನ್ನು ವಹಿಸಿ ಕೊಟ್ಟು ಈ ಕಾರ್ಯವನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಸಂದರ್ಭದಲ್ಲಿ ಹೇಳುತ್ತೇನೆ.

ಮಂಗಳೂರು ರಾಸಾಯನಿಕ ಗೊಬ್ಬರ ಕಾರ್ಖಾನೆಯ ಕೆಲಸಕಾರ್ಯಗಳನ್ನು ಹಿಂದೆಯೇ ಪ್ರಾರಂಭಮಾಡಿದ್ದರೂ ಆದಿನ್ನೂ ಪೂರ್ತಿಯಾಗಿ ಮಾಡಿಲ್ಲವೆಂದು ಹೇಳು

ತ್ತಿದ್ದಾರೆ. ಅವರು ಟೀಕೆ ಮಾಡುವುದಾದರೂ, ಅದರ ಉತ್ಪಾದನೆಯನ್ನು ಈಗಾಗಲೇ ಹೆಚ್ಚಿಗೆ ಮಾಡುತ್ತಿದ್ದೇವೆ, ಜೂನ್ ಮತ್ತು ಜುಲೈನಲ್ಲಿ ಇನ್ನೂ ಹೆಚ್ಚಿಗೆ ಉತ್ಪಾದನೆಯನ್ನು ಮಾಡುತ್ತೇವೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಮಾನ್ಯ ಶ್ರೀ ದೇವೇಗೌಡರಿಗೆ ಒಂದು ವಿಚಾರವನ್ನು ಬಹಳ ಕಳ ಕಳಿಯಿಂದ ಹೇಳಿಕೊಳ್ಳಬೇಕೆಂದು ನನ್ನ ಇರಾದೆ ಮಂಗಳೂರು ಕೆಮಿಕಲ್ಸ್ ಅದರ ಪೂರ್ವ ಚರಿತ್ರೆ ನನಗೆ ಚೆನ್ನಾಗಿ ಗೊತ್ತಿದೆ. ನಾವು ಅಧಿಕಾರಕ್ಕೆ ಬಂದಾಗ ಅದಕ್ಕೆ ಕತ್ತಲು ಹಿಡಿದಿತ್ತು. ಅನಂತರ 1972ನೇ ಇಸವಿಯಲ್ಲಿ ಪ್ರಪ್ರಥಮವಾಗಿ ಪ್ರಾರಂಭ ಮಾಡಿದ್ದೆವು. ಮಾನ್ಯ ಶ್ರೀ ಧರ್ಮವೀರ ಅವರು ರಾಜ್ಯಪಾಲರು ಆಗಿದ್ದಾಗ ಅದನ್ನು ಪ್ರಾರಂಭಮಾಡಿದರು. It would not be fair to forget Sri Dharma Veera. I should remember all those who have helped this factory to come up to this stage including the then Government. ಈಗ ಏನಾಗಿದೆಯೆಂದರೆ, ಮಂಗಳೂರು ಕೆಮಿಕಲ್ಸ್ ಎರಡುವರೆ ವರ್ಷಗಳಲ್ಲಿ 60 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಈ ಕಾರ್ಖಾನೆಯನ್ನು ನಾವು ಕಟ್ಟಿದ್ದೇವೆಂದು ನಾವು ಸಂತೋಷದಿಂದ ಹಾಗೂ ಹೆಮ್ಮೆಯಿಂದ ಹೇಳಿಕೊಂಡರೂ ಯಾರೂ ಕೂಡ ತಪ್ಪು ಅಭಿಪ್ರಾಯವನ್ನು ಮಾಡುವುದಕ್ಕೆ ಹೋಗುವುದಿಲ್ಲವೆಂದು ನಾನು ತಿಳಿದಿದ್ದೇನೆ. ಮಂಗಳೂರು ಗೊಬ್ಬರ ಕಾರ್ಖಾನೆ ಪ್ರಾರಂಭವಾಗುವುದಕ್ಕೆ ಮುಂಚೆಯೇ ಅದಕ್ಕೆ ಒಂದು ಸ್ಟಿಕ್ ಎಸ್ಟಿಮೇಟ್ ಮಾಡಿದ್ದರು. ಅದರ ಪ್ರಕಾರ ಸದರನ್ ಪೆಟ್ರೋ ಕೆಮಿಕಲ್ ಇಂಡಸ್ಟ್ರೀಸ್ ಅವರು ಮದ್ರಾಸ್‌ನಲ್ಲಿ ಅಂತಹ ಒಂದು ಕಾರ್ಖಾನೆಯನ್ನು ಆರಂಭ ಮಾಡಿದರು. ಆದ್ದರಿಂದ ಅದನ್ನು ಇತ್ತೀಚೆಗೆ ಮಾಡಲಿಲ್ಲ. ಅದನ್ನು ಹೋದ ವರ್ಷವೇ ಮಾಡಬೇಕಾಗಿತ್ತು. ಈ ವರ್ಷವಾದರೂ ಆ ಕೆಲಸಕಾರ್ಯಗಳನ್ನು ಪೂರ್ತಿಮಾಡಬಹುದೆಂದು ನಾನು ನಿರೀಕ್ಷೆ ಮಾಡಿದ್ದೇನೆ ಎರಡು ಮೂರು ತಿಂಗಳುಗಳಲ್ಲಿ ಆ ಕಾರ್ಯ ಪ್ರಾರಂಭವಾಗಲಿದೆ. ಮಂಗಳೂರು ಕೆಮಿಕಲ್ ವರ್ಕ್ಸ್ ಮತ್ತು ಸದರನ್ ಪೆಟ್ರೋ ಕೆಮಿಕಲ್ ಇಂಡಸ್ಟ್ರೀಸ್ ಒಟ್ಟಿಗೆ ಕೆಲಸ ಮಾಡುತ್ತವೆಂದು ನನ್ನ ನಿರೀಕ್ಷೆ ಹಿಂದೆ ಮಂಗಳೂರು ಫರ್ಟಿಲೈಜರ್ಸ್ ಕೆಲಸಕಾರ್ಯಗಳಿಗೆ 58 ಕೋಟಿ ರೂಪಾಯಿಗಳಷ್ಟು ಅಂದಾಜು ಆಗಬಹುದೆಂದು ತೀರ್ಮಾನ ಮಾಡಿದ್ದರು. ಈಗ ಅದು 67 ಕೋಟಿ ರೂಪಾಯಿಗಳಿಗೆ ಹೋಗಿದೆ. ಇನ್ನೂ ಆ ಕಾರ್ಯಗಳು ಪೂರ್ತಿಆಗುವಷ್ಟರಲ್ಲಿ ಸುಮಾರು 70 ಕೋಟಿ ರೂಪಾಯಿಗಳಿಂದ ಅದು 90 ಕೋಟಿ ರೂಪಾಯಿಗಳಿಗೂ ಹೋಗಬಹುದು. ಈಗ ಪ್ರೈಸ್ ಎಸ್‌ಕಲೇಷನ್ ಏನಿದೆಯೋ ಅದನ್ನು ನಾವೂ, ನೀವೂ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಇಂಪೋರ್ಟೆಡ್ ಮೆಷನರೀಸ್ ಏನಿದೆಯೋ ಅದು 10 ಕೋಟಿ ರೂಪಾಯಿಗಳಷ್ಟು ಆಗುತ್ತದೆ.

SRI H. D. DEVE GOWDA :—I am not going to make an unreasonable criticism. I want Sri Krishna to come out with all the facts relating to import duty paid for the

(Sri H. D. Deve Gowda)

machinery and the cost esclaration on account of this. I have made it clear that in the dredging, filling up to low laying areas, about Rs. 2 crores have been spent. That is my charge.

ಶ್ರೀ ಎಸ್. ಎಂ. ಕೃಷ್ಣ.—ಈ ಪ್ರೈಜ್ ಎಸ್ಕಲೇಷನ್ ಬಗ್ಗೆ ಮಾತನಾಡತಕ್ಕಂಥ ಕಾಲದಲ್ಲಿ ಕೇಂದ್ರ ಸರ್ಕಾರದ ನೀರಾವರಿಯ ಖಾತೆಯ ಸಚಿವರು ಉತ್ತರ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಇರಿಗೇಷನ್ ಪ್ರಾಜೆಕ್ಟ್‌ನಲ್ಲಿ ಎಸ್ಕಲೇಷನ್ 50 ಪರ್ಸೆಂಟ್ ಹಾಗೂ 14.1 ಪರ್ಸೆಂಟ್ ನಮ್ಮ ರಾಜ್ಯದಲ್ಲಿಯೂ ಸಹ ಹಾಗೇಯೇ 32-35 ಪರ್ಸೆಂಟ್ ಎಸ್ಕಲೇಷನ್ ಆಗಿದೆ. That should be reflected in this. ಜೊತೆಗೆ ಇನ್ನೊಂದು ವಿಷಯವೇನೆಂದರೆ, This company was entiled to 10.5 million pounds of foreign exchange. This is one of the few companies which has returned.

SRI H. D. DEVE GOWDA.—I know you are a good parliamentarian.

SRI S. M. KRISHNA —It is not as though I am trying to take any body by the away of rahetoric; it is the logic of could facts.

SRI H. D. DEVEGOWDA.—I was referring to the unncecessary expenditure.

ಶ್ರೀ ಎಸ್. ಎಂ. ಕೃಷ್ಣ.—Opreative part of your major allegation ಗೆ ಆಮೇಲೆ ಬರುತ್ತೇನೆ. ತಾವು ಡ್ರೆಡ್ಜಿಂಗ್ ವಿಷಯ ಹೇಳಿದಿರಿ. *A* good portion of foreign exchange has been surrendered by it. ಡ್ರೆಡ್ಜಿಂಗನ್ನು ಮಾಡಿದವರು ಹಾರ್ಬರ್‌ನವರು, ಅವರು ಮಾಡಿದ್ದು ಏನೆಂದರೆ 135 ಎಕರೆ ಅಲ್ಲಿ ಸಮ ಮಾಡಿದರು.

ಶ್ರೀ ಎಚ್. ಡಿ. ದೇವೇಗೌಡ —ಅದೇ ನಮಗೆ ಬೇಕಾಗಿರುವುದು. ತಾವು ತಮ್ಮ ಅಧಿಕಾರಿಗಳು ಕೊಟ್ಟಂಥ ರಿಪೋರ್ಟ್‌ನ ಮೇಲೆ ಮಾತನಾಡುವುದಕ್ಕೆ ಹೋಗಬೇಡಿ. ತಾವು ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ನೋಡಿದರೆ ಗೊತ್ತಾಗುತ್ತದೆ. ಈ ಹಾರ್ಬರ್‌ನವರು ಎಷ್ಟು ಚಾರ್ಜ್ ಮಾಡಿದ್ದಾರೆ

ಮತ್ತು ಲಾರಿಗಳ ಬಗ್ಗೆ ಲಾಗ್ ಬುಕ್‌ನ್ನು ಚೆಕ್ ಮಾಡಿ, ಅದೆಲ್ಲವನ್ನೂ ನೋಡಿ ಕೊಂಡು ಮಾತನಾಡಿ ಸುಮ್ಮನೇ ಕೂತುಕೊಂಡು ನಿಮ್ಮ ಅಧಿಕಾರಿಗಳು ಹೇಳಿದರು ಎಂದು ಹೇಳುವುದಕ್ಕೆ ಹೋಗಬೇಡಿ. ಆದುದರಿಂದ ತಾವು ಒಂದು ಇದಕ್ಕಾಗಿ ಒಂದು ಹೈ ಪವರ್ ಕಮಿಟಿ ಮಾಡಿ ವಿಚಾರಣೆ ಮಾಡಿ ಎಂದು ನಾವು ಹೇಳು ತ್ತಿರುವುದು.

ಶ್ರೀ ಎಸ್. ಎಂ. ಕೃಷ್ಣ.—ಡ್ರೆಡ್ಜಿಂಗ್ ಮಾಡಿದವರು ಹಾರ್‌ಬರ್ ಕಂಪೆನಿ ಯುವರು, ಈ ಕಂಪನಿಯುವರು 135 ಎಕರೆ ಪ್ರದೇಶವನ್ನು ಸಮ ಮಾಡಿದ್ದಾರೆ ಅದಕ್ಕೆ ಖರ್ಚು ಮಾಡಿರತಕ್ಕಂಥದ್ದು 76 ಲಕ್ಷದ 81 ಸಾವಿರ ರೂಪಾಯಿಗಳು. ಇದನ್ನು ಮಂಗಳೂರು ಕೆಮಿಕಲ್ಸ್ ಫರ್ಟಿಲೈಜರ್ಸ್‌ನವರು ಖರ್ಚು ಮಾಡಿದ್ದಾರೆ.

ಶ್ರೀ ಹೆಚ್ ಡಿ. ದೇವೇಗೌಡ.—ಹಾರ್‌ಬರ್‌ನವರು ಎಷ್ಟು ಖರ್ಚು ಮಾಡಿದ್ದಾರೆ ?

SRI S. M. KRISHNA.—It comes under Government of India.

SRI D. DEVARAJ URS.—I was sitting here when the Hon the Leader of the Opposition made the charge that this company has misused funds to the tune of Rs. 2 crores or so for levelling. What the Minister says is that the expenditure for levelling is only *R*s. 75 lakhs and odd. The harbour work is done by she Centre.

ಶ್ರೀ ಹೆಚ್. ಡಿ. ದೇವೇಗೌಡ :—ಡುಪ್ಲಿಕೇಷನ್ ಆಫ್ ವರ್ಕ್ಸ್ ಆಗಿದೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—135 ಎಕರೆಗಳನ್ನು ಸಮ ಮಾಡುವು ದಕ್ಕೆ 75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಅವರು ವಿಷಯವನ್ನು ತಿಳಿದುಕೊಂಡೇ ಹೇಳಿದ್ದಾರೆ, ಆದುದರಿಂದ ತಾವು ಸಹ ಇನ್ನೊಮ್ಮೆ ವಿಷಯ ತಿಳಿದುಕೊಂಡು ಮಾತನಾಡಿರಿ.

SRI S. M. KRISHNA : Tenders were called for and the lowest tenderer has been given the job of levelling. The total cost to this company, I am positive on my facts, is Rs. 76,81,000

ಶ್ರೀ ಕೋಣಂದೂರು ಲಿಂಗಪ್ಪ :—ಹಾಗಾದರೆ ಇಬ್ಬರಲ್ಲಿ ಒಬ್ಬರು ಲಾಭ ಮಾಡಿಕೊಂಡಿದ್ದಾರೆ. ಇಬ್ಬರೂ ಲೆಕ್ಕದಲ್ಲಿ ಖರ್ಚನ್ನು ತೋರಿಸಿದ್ದಾರೆ.

ಶ್ರೀ ಡಿ ದೇವರಾಜ್ ಅರಸ್ : ಹಾಗೆ ಹೇಳುವುದಾದರೆ ತಮ್ಮಲ್ಲಿಯೇ ಏನೋ ಲೋಪವಿದೆ. ಅದನ್ನು ತಿಳಿದುಕೊಂಡು ಸರಿಯಾಗಿ ಹೇಳಿ.

SRI S. M. KRISHNA : As minister in charge of Industries I have got to place facts squarely before this House. Otherwise, I will be failing in my duty.

ಶ್ರೀ ಹೆಚ್. ಡಿ. ದೇವೇಗೌಡ :—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ತಾವು ಏನು ಸಭೆಯ ಮುಂದೆ ಹೇಳುತ್ತೀರಿ ಅದನ್ನು ವಿಚಾರಣೆ ಸರಿಯಾಗಿ ಮಾಡಿ ಹೇಳಿ ಎಂದು ಹೇಳುತ್ತಿರುವುದು.

ಶ್ರೀ ಎಸ್. ಎಂ. ಕೃಷ್ಣ :—ಮಾನ್ಯ ದೇವೇಗೌಡರವರು ಸಹ ಇತ್ತಕಡೆ ಅಧಿಕಾರಕ್ಕೆ ಬಂದಮೇಲೆ ಅಧಿಕಾರಿಗಳ ಮೂಲಕವೇ ಅಂಕಿ ಅಂಶಗಳನ್ನು ತರಿಸಿ ಕೊಳ್ಳಬೇಕಾಗುತ್ತದೆ. ಇನ್ನು ಸೇಲ್ಸ್ ಇಂಟರ್‌ನ್ಯಾಶನಲ್ ವಿಚಾರಕ್ಕೆ ಬರೋಣ. ಮಾನ್ಯ ದೇವೇಗೌಡರವರು ಮಾತನಾಡುತ್ತಾ, ಬಹಳ ಕಳೆ ಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ಹೋದಸಾರಿಯೂ ಪ್ರಾರ್ಥನೆ ಮಾಡಿದ್ದೆ, ಈ ಸೇಲ್ಸ್ ಇಂಟರ್ ನ್ಯಾಶನಲ್ ಸಂಸ್ಥೆಯ ವಿಚಾರವಾಗಿ ತಾವು ಉತ್ತರ ನೀಡಿ'' ಎಂದು ಹೇಳಿದರು. ವಿಚಾರಗಳನ್ನು ಕೊಂಚಮಟ್ಟಿಗೆ ತಾವು ಅರ್ಥಮಾಡಿಕೊಂಡರೆ, ಈ ಸಮಸ್ಯೆ ಯನ್ನು ನೀವು ಸರಿಯಾಗಿ ಪ್ರಾಸ್ಪೆಕ್ಟಿವ್ ಆಗಿ ಅರ್ಥ ಮಾಡಿಕೊಳ್ಳುವುದಕ್ಕೆ ಆಗುತ್ತದೆ. ತಾವು ಪಿ. ಎ. ಸಿ. ಕಮಿಟಿ ಅಧ್ಯಕ್ಷರಾಗಿದ್ದೀರಿ ತಾವೇ ಹೋಗಿ ಬೇಕಾದರೆ ವಿಚಾರ ಮಾಡಿ. If there are any defects in this organisation we shall correct it. ಇನ್ನು ಬಿಲ್ಡಿಂಗ್ ವಿಚಾರ ಅವರು ಹೇಳಿದರು, 'who asked them to build this building' ಎಂದು ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ :—ಇಂಟರನಲ್ ಡೆಕೊರೇಷನ್ ಬಗ್ಗೆ ಹೇಳಿದ್ದೆ.

ಶ್ರೀ ಎಸ್. ಎಂ. ಕೃಷ್ಣ:—45 ಲಕ್ಷ ಖರ್ಚಾಗಿದೆಂದು ಮಾನ್ಯ ದೇವೇಗೌಡ ರವರು ಹೇಳಿದ್ದಾರೆ ಆದರೆ, I completely repudiate that no money has been spent for internal decoration for sales international. 1969 ನೇ ಇಸ್ವಿಯಲ್ಲಿ ಈ ಸೇಲ್ಸ್ ಇಂಟರ್‌ನ್ಯಾಶನಲ್ ಬಿಲ್ಡಿಂಗ್‌ನ್ನು ಕಾಶ್ಮೀರದ ಮಹಾರಾಜರಿಂದ ಕೊಂಡುಕೊಂಡರೆಂದು ಕಾಣುತ್ತದೆ. ಅದಕ್ಕೆ

ಖರ್ಚು ಮಾಡಿರತಕ್ಕಂಥದ್ದು 38 ಲಕ್ಷ ರೂಪಾಯಿಗಳು, ಅದು 9 ಅಂತಸ್ತಿನ ಕಟ್ಟಡ. ಇದರಿಂದ ಪ್ರತಿ ತಿಂಗಳ ಬಾಡಿಗೆಯೇ 42 ಸಾವಿರ ರೂಪಾಯಿ ಬರುತ್ತಿದೆ. ಇದರಿಂದ ನಾವು ಖರ್ಚು ಮಾಡಿರತಕ್ಕಂಥದ್ದು 8 ವರ್ಷಗಳಲ್ಲಿ 38 ಲಕ್ಷ ರೂಪಾಯಿಗಳ ಆಸ್ತಿ ನಮ್ಮದಾಗುತ್ತದೆ.

ಶ್ರೀ ಕೊಣಂದೂರು ಲಿಂಗಪ್ಪ :—ಮಾನ್ಯ ದೇವೇಗೌಡರವರು ಇದರ ಬಗ್ಗೆ ಹೇಳಲಿಲ್ಲ, ಇಂಟರನಲ್ ಡೆಕೋರೇಷನ್ ಬಗ್ಗೆ ಹೇಳಿದ್ದರು.

ಶ್ರೀ ಹೆಚ್. ಡಿ ದೇವೇಗೌಡ :—ನಾನು ಬಿಲ್ಡಿಂಗ್ ಬಗ್ಗೆ ಹೇಳಲಿಲ್ಲ. ಇಂಟೀರಿಯರ್ ಡೆಕೋರೇಷನ್ ಬಗ್ಗೆ ಹೇಳಿದ್ದು.

ಶ್ರೀ ಎಸ್. ಎಂ. ಕೃಷ್ಣ :—ಅಧ್ಯಕ್ಷರೇ, ಇನ್ನು ಈ ಕರ್ನಾಟಕ ಸ್ಟೇಟ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ಇಂಟೀರಿಯರ್ ಡೆಕೋರೇಷನ್ನಿಗೆ 1 ಲಕ್ಷದ 60 ಸಾವಿರ ರೂಪಾಯಿಗಳು ಖರ್ಚಾಗಿರುವುದು. 8 ಲಕ್ಷ ರೂಪಾಯಿಗಳು ಅಲ್ಲ. ಇನ್ನು ಈ ಸ್ಯಾಂಡಲ್ ಸೋಪ್ ವಿಚಾರವನ್ನು ಹೇಳಿದರು. ಇದರಿಂದ ಗ್ರಾಹಕರಿಗೆ ಬಹಳ ತೊಂದರೆಯಾಗುತ್ತಿದೆಂದು ಹೇಳಿದರು. ಈ ಸ್ಯಾಂಡಲ್ ಸೋಪನ್ನು ಉಪಯೋಗಿಸತಕ್ಕಂಥ ಗ್ರಾಹಕರಿಗೆ ಬಹಳ ತೊಂದರೆ ಆದರೆ ತೀರಾ ಪಶ್ಚಾತ್ತಾಪ ಪಡಬೇಕಾದ್ದು ಇಲ್ಲ. ಅದು ಇವತ್ತಿನ ದಿವಸ 1 ಸೋಪಿಗೆ 1.95 ಪೈಸೆ ಇದೆ.

ಶ್ರೀ ಕೊಣಂದೂರು ಲಿಂಗಪ್ಪ ;—ಅಶೋಕ ಹೋಟಲ್‌ನಲ್ಲಿ ಕುಳಿತು ಇದನ್ನು ವಿಚಾರ ಮಾಡಿದರೆ ಪರವಾಗಿಲ್ಲ.

ಶ್ರೀ ಎಸ್. ಎಂ. ಕೃಷ್ಣ :—ಒಂದು ಪೇಪರ್ ಕಾರ್ಖಾನೆ ನಮ್ಮ ರಾಜ್ಯಕ್ಕೆ ಬರುವುದು ಒಬ್ಬ ಅಧಿಕಾರಿಯ ತಪ್ಪಿಗಾಗಿ ಬೇರೆ ರಾಜ್ಯಕ್ಕೆ ಹೋಯಿತೆಂದು ಮಾನ್ಯ ದೇವೇಗೌಡರವರು ಹೇಳಿದರು. ಅವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲವೆಂದು ಹೇಳಿದರು. ಹಾಗಾದರೆ ಆ ಅಧಿಕಾರಿಯವನ್ನು ಅಶೋಕ ಹೋಟಲ್‌ಗೆ ಕರೆದುಕೊಂಡು ಹೋಗಬೇಕಾಗಿತ್ತೆಂದು ಹೇಳುತ್ತೀರೋ ?

ಶ್ರೀ ಕೊಣಂದೂರು ಲಿಂಗಪ್ಪ:—ಸರ್ಕಾರದವರು ಆ ಅಧಿಕಾರಿಯವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎನ್ನುವುದಕ್ಕೂ, ಅಶೋಕ ಹೋಟಲ್‌ಗೆ ಹೋಗುವುದಕ್ಕೆ ವ್ಯತ್ಯಾಸವಿಲ್ಲವೇ ?

ಶ್ರೀ ಎಸ್ ಎಂ. ಕೃಷ್ಣ :—ಈಗ ಕೈಗಾರಿಕೆಗಳನ್ನು ಮಾಡುವುದಕ್ಕೆ ಬರುವಂತಹ ಜನರನ್ನು ಅಶೋಕ ಹೊಟೆಲ್‌ನಲ್ಲಿ ಇಳಿಸುವುದು ಬೇಡ ತೋಟದಪ್ಪನ ಚತ್ರದಲ್ಲಿ ಇಳಿಸು ಎಂದು ಹೇಳುತ್ತೀರಾ ?

ಶ್ರೀ ಕೋಣಂದೂರು ಲಿಂಗಪ್ಪ : .. ಬೇಡ ಅಶೋಕ ಹೊಟಲ್‌ನಲ್ಲಿ ರೌಂಡ್ ಟೇಬಲ್ ಕಾನ್‌ಫ್ರೆನ್ಸ್ ಮಾಡಿ, ಬೇಡ ಎಂದು ಯಾರು ಹೇಳುತ್ತಾರೆ ? ಆದರೆ ಸಾರ್ವಜನಿಕ ಹಣ ಖರ್ಚುಮಾಡುವುದರ ಬಗ್ಗೆ....

ಶ್ರೀ ಎಸ್. ಎಂ ಕೃಷ್ಣ :—ಸಣ್ಣ ಹೋಟೆಲಿಗೆ ಕರೆದುಕೊಂಡು ಹೋದರೆ ನೀವು ಅವರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಆ ಸಂಸ್ಥೆ ಬೇರೆಕಡೆಗೆ ಹೋಯಿತು ಎಂದು ಹೇಳುತ್ತೀರಿ ಸರಿಯಾಗಿ ನೋಡಿಕೊಂಡರೆ ಏತಕ್ಕೆ ಅಶೋಕ ಹೋಟೆಲಿಗೆ ಅಂಥ ದೊಡ್ಡ ದೊಡ್ಡ ಕಡೆಯಲ್ಲಿ ಹಣ ಪೋಲು ಮಾಡುತ್ತೀರಿ ಎಂದು ಹೇಳುತ್ತೀರಿ ?

ಶ್ರೀ ಸಿ ಬೈರೇಗೌಡ :....ತಮ್ಮನ್ನು ಯಾರು ಬೇಡ ಎಂದು ಹೇಳುತ್ತಾರೆ ಚಂದ್ರಲೋಕವನ್ನೇ ಸೃಷ್ಟಿಮಾಡಿ ?

ಶ್ರೀ ಎಸ್. ಬಂಗಾರಪ್ಪ :—ಒಂದು ನಿಮಿಷ ಅಶೋಕ ಹೋಟೆಲ್ ವಿಷಯ ಹೇಳಿದ್ದೀರಿ....

SRI S M KRISHNA :—am I a Policeman to investigate into who pays how much to Ashoka Hotel or Lalitmahal Hotel ? If they go, let them go. 25 ಸಾವಿರ ರೂಪಾಯಿ ಬಿಲ್ ಕೊಡುತ್ತಾರೆ ಎಂದು ಹೇಳಿದರೆ ಅದಕ್ಕೆ ನಾನು ಏನು ಮಾಡಬೇಕು ?

ಶ್ರೀ ಎಸ್. ಬಂಗಾರಪ್ಪ :- ಅವರು ನಿಮ್ಮ ಚೇರ್‌ಮನ್‌ಗಳು ಮತ್ತು ಡೈರೆಕ್ಟರುಗಳು ಅದು ನಿಮಗೆ ಬರುವುದಿಲ್ಲವೇ ? ಅವರು ಗೌರ್ನಮೆಂಟ್ ಆಫೀಸರ್ಸ್ ? ಅದು ಅಬ್ಲಿಗೇಷನ್‌ಗೆ ಬರುವುದಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ :—ಇನ್ನು ಪೋಲೀಸರ ಸಮವಸ್ತ್ರದ ವಿಚಾರ ಹೇಳಿದರು. ಬಿನ್ನಿ ಮಿಲ್ಲಿನ ಬಟ್ಟೆಯನ್ನು ಕೊಟ್ಟರೆ ತುಂಬಾ ಬಾಳಿಕೆ ಬರುತ್ತದೆ, ಐರನ್ ಸರಿಯಾಗಿ ನಿಲ್ಲುತ್ತದೆಂದು ಹೇಳಿದರು. ಆದರಿಂದ ಬಿನ್ನಿ ಬಟ್ಟೆಯನ್ನು ಅವರಿಗೆ ಕೊಟ್ಟಿದ್ದೇವೆ ಇದಕ್ಕೆ ಒಂದು ಸಣ್ಣ ಕಮಿಟಿ ಕೂಡ ಇದೆ.

ಶ್ರೀ ಹೆಚ್. ಡಿ. ದೇವೇಗೌಡ :—ಬಿನ್ನಿ ಬಟ್ಟೆ ಕೊಡಬೇಡ ಎಂದು ಹೇಳಲಿಲ್ಲ. ಕೊಂಡುಕೊಳ್ಳಿ ಆದರೆ ಅಲ್ಲಿ ಅವ್ಯವಹಾರ ನಡೆದಿದೆ ಎಂದು ಹೇಳಿದೆವು ?

ಶ್ರೀ ಎಸ್. ಎಂ ಕೃಷ್ಣ :....Seamless Pipes ವಿಚಾರ ಹೇಳಿದರು I will look into it. I have called for files and let you know what has happened. ಇನ್ನು ಸ್ಟೇನ್‌ಲೆಸ್ ಸ್ಟೀಲ್ ವಿಚಾರ ಹೇಳಿದರು. Government has received the report of the Enquiry Officer and I will report to the House as to what action Government will take.

ಇನ್ನು ಕೈಗಾರಿಕೆ ಷೆಡ್ಡುಗಳ ವಿಚಾರ 1975ರ ಜುಲೈನಲ್ಲಿ 1150 ಷೆಡ್ಡುಗಳು ತಯಾರಾಗಿವೆ. ಅವು ಸಂಪೂರ್ಣವಾಗಿ ಕೈಗಾರಿಕೆಗಳಿಗೆ ವಿತರಣೆಯಾಗಿರುತ್ತವೆ.

ಇನ್ನು ಕಾಗೋಡು ತಿಮ್ಮಪ್ಪನವರು ಭದ್ರಾವತಿ ಫ್ಯಾಕ್ಟರಿಯಲ್ಲಿ ನೋಡಿದರೆ ಸಂಪೂರ್ಣವಾಗಿ ಮಂಡ್ಯದವರನ್ನು ತುಂಬಿದ್ದಾರೆಂದು ಬಹಳ ಗಂಭೀರವಾದ ಅಪಾದನೆಯನ್ನು ಮಾಡಿದರು. ನಾನು ಮಂಡ್ಯಾಕ್ಕೆ ಹೋದರೆ ಮಂಡ್ಯಾದ ಜನರು ಶ್ರೀಮಾನ್ ಕೃಷ್ಣರವರು ನಮಗೆ ಕೆಲಸ ಕೊಡಿಸಲಿಲ್ಲವೆಂದು ಹೇಳುತ್ತಾರೆ. ಈ ರೀತಿಯಾದರೆ ನನ್ನನ್ನು ತಿರುಪತಿ ತಿಮ್ಮಪ್ಪನೇ ರಕ್ಷಣೆಮಾಡಬೇಕು. ನಿನ್ನೆ ದಿವಸ ಶ್ರೀಮತಿ ಮಡಿಮನ್‌ರವರು ಹೇಳಿದರು ಗುಜರಾತಿನಲ್ಲಿ ಯಾರಾದರೂ ಕೈಗಾರಿಕೆಗಳನ್ನು ಪ್ರಾರಂಭಮಾಡುತ್ತೇವೆಂದು ಬಂದರೆ ಅವರನ್ನು ಏರ್ ಕಂಡೀಷನ್ ಕಾರಿನಲ್ಲಿ ಕರೆದುಕೊಂಡು ಹೋಗಿ ತೋರಿಸುತ್ತಾರೆ ಮತ್ತು ಅವರನ್ನು ಬಹಳ ಗೌರವದಿಂದ ನೋಡಿಕೊಳ್ಳುತ್ತಾರೆಂದು. ಆ ರೀತಿ ಏನಾದರೂ ನಾನೂ ಏರ್ ಕಂಡೀಷನ್ ಕಾರು ಮುಂತಾದುವುಗಳನ್ನು ಮಾಡಿ ಅವರಿಗೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದರೆ ನನ್ನನ್ನು ಗಲ್ಲಿಗೆ ಹಾಕಿಸುತ್ತಿದ್ದರು. ಇನ್ನು ಶ್ರೀಮಾನ್ ಬಂಗಾರಪ್ಪನವರು ಬೆಂಜ್ ಕಾರಿನ ವಿಚಾರದಲ್ಲಿ ಹೇಳಿದರು. ಅದು ನಾನು ಕೊಂಡದ್ದು ಅಲ್ಲ ನಾನು ಹೋಗುವಾಗ ತೆಗೆದುಕೊಂಡು ಹೋಗುವುದಿಲ್ಲ. ಅದರಿಂದ ನನಗೆ ಬರಬೇಕಾದ ಟಿ. ಎ. ಕೂಡ ಬರುವುದಿಲ್ಲ ಅದೇ ನಮ್ಮ ಸರ್ಕಾರಿ ಕಾರಿನಲ್ಲಿ ಹೋದರೆ ಮೈಲಿಗೆ 0-75ಪೈಸೆ ಟಿ. ಎ ಸಿಕ್ಕುತ್ತದೆ ಆದರಿಂದ ನಮ್ಮ ಸರ್ಕಾರಕ್ಕೆ ಹಣ ಉಳಿತಾಯವಾಗುತ್ತಿದೆ. ಮಾನ್ಯ ದೇವೇಗೌಡರಿಗೆ ಯಾವಾಗಲೂ ಜುಬ್ಬವನ್ನೇ ಏತಕ್ಕೆ ಹಾಕುತ್ತೀರಿ ಎಂದು ಕೇಳಿದರೆ ಹೇಗೆ ಆಗುತ್ತದೆ ? ಸೈಕಲ್ ಮೇಲೆ ಬಂದರೆ ಏತಕ್ಕೆ ಸೈಕಲ್ ಮೇಲೆ ಬರುತ್ತೀರಿ ಎನ್ನುತ್ತಾರೆ ಅಥವಾ ಬೆಂಜ್ ಕಾರಿನಲ್ಲಿ ಬಂದರೆ ಏತಕ್ಕೆ ಬೆಂಜ್ ಕಾರಿನಲ್ಲಿ ಬರುತ್ತೀರಿ ಎಂದರೆ ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ :—ನಾವು ಹೇಳುವುದು ಅದನ್ನು ಪತ್ರಿಕೆಗಳಿಗೆ ಕೊಡುತ್ತೀರಿ ಮತ್ತು ಫೋಟೋಗಳನ್ನು ತೆಗೆಸಿಕೊಳ್ಳುತ್ತೀರಿ ? Why this publicity ?

Sri S. M. Krishna:—You proceed against the newspaper who published it and not against me. I do not draw T. A. when I go in that. It is savings to the State exchequer.

ಶ್ರೀ ಎಸ್. ಬಂಗಾರಪ್ಪ :....ತಮಗೆ ಅಂಬಾಸಿಡರ್ ಕಾರ್ ಕೊಟ್ಟಿಲ್ಲವೇ? ತಮಗೆ ಬೆಂಜ್ ಕಾರ್ ಏತಕ್ಕೆ? ಇದಕ್ಕೆ ಉತ್ತರ ಕೊಡಿರಿ.

ಶ್ರೀ ಎಸ್. ಎಂ. ಕೃಷ್ಣ :—ಉತ್ತರ ಕೊಟ್ಟಿದ್ದೇನೆ

ಶ್ರೀ ಎಸ್. ಬಂಗಾರಪ್ಪ :—ಉತ್ತರ ಬಂದಿಲ್ಲ? ಇದು ಸರ್ಕಾರದ ಹಣ

ಶ್ರೀ ಎಸ್. ಎಂ. ಕೃಷ್ಣ :—ನಾನು ಅಂಬಾಸಿಡರ್ ಕಾರ್‌ನಲ್ಲಿ ಓಡಾಡಿದರೆ 75 ಪೈಸೆ ಬರುತ್ತದೆ ಬೆಂಜ್ ಕಾರಿನಲ್ಲಿ ಓಡಾಡಿದರೆ ಯಾವುದು ಬರುವುದಿಲ್ಲ ಅದರಿಂದ ಸರ್ಕಾರಕ್ಕೆ ಉಳಿತಾಯವಾಗುತ್ತದೆ. ಮಧ್ಯೆ ಮಧ್ಯೆ ಸೈಕಲ್ಲಿನಲ್ಲಿಯೂ ಬರಬೇಕಾಗುತ್ತದೆ. ಇದು ಹೇಗೆ ಆಗುತ್ತದೆ ಎಂದರೆ ತಾವು ಹಾಕಿರುವ ಬಟ್ಟೆಯಲ್ಲಿ ಪಳಪಳನೆ ಹೊಳೆಯುವ ಗುಂಡಿಗಳನ್ನು ಏತಕ್ಕೆ ಹಾಕಿದ್ದೀರಿ ಎಂದು ಕೇಳಿದ ಹಾಗೆ ಆಗುತ್ತದೆ. ಆದನ್ನು ಹಾಕಿಕೊಂಡು ಬರಬೇಡಿ ಎಂದು ಹೇಳುವುದಕ್ಕೆ ನಾವು ಯಾರು?

ಶ್ರೀ ಎಸ್. ಬಂಗಾರಪ್ಪ :-ತಳ ತಳ ಹೊಳೆಯುವ ಗುಂಡಿಗಳು ಸರ್ಕಾರದ್ದು ಅಲ್ಲ. ಅಡ್ಡ ಅಡ್ಡ ಉತ್ತರ ಕೊಟ್ಟಿದ್ದೀರಿ?

ಶ್ರೀ ಎಸ್. ಎಂ. ಕೃಷ್ಣ :—ಇನ್ನು ಕದುರೆಮುಖ ಯೋಜನೆಯ ಬಗ್ಗೆ ಯಾರೂ ಪ್ರಸ್ತಾಪ ಮಾಡದೆ ಇರತಕ್ಕಂಥಾದ್ದು ನನಗೆ ಬಹಳ ಖೇದವನ್ನು ಉಂಟುಮಾಡಿದೆ. ಮಾನ್ಯ ದೇವೇಗೌಡರು ಇದರ ಬಗ್ಗೆ ಔದಾರ್ಯವನ್ನು ತೋರಿಸಬೇಕು. ಕುದುರೆಮುಖ ಯೋಜನೆ ಸುಮಾರು 4-5 ನೂರು ಕೋಟಿ ರೂಪಾಯಿ ಯೋಜನೆ. ಇದಕ್ಕೆ ವಿದೇಶಿ ವಿನಿಮಯ ಬೇಕಾಗುತ್ತದೆ. ಇದರ ಬಗ್ಗೆ ತಾವು ಒಂದು ಚಕಾರವನ್ನು ಎತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ ;—ತಾವು ಮೂರು ವರ್ಷಗಳಿಂದಲೂ ತಾವು ಹೇಳುತ್ತಲೇ ಬಂದಿದ್ದೀರಿ ಸುಮ್ಮನೆ ಏತಕ್ಕ ಭರವಸೆ ಕೊಡಬೇಕು?

ಶ್ರೀ ಡಿ. ದೇವರಾಜ್ ಅರಸ್.—ಸ್ವಾಮಿ, ತಾವು ಆಡುವ ಮಾತಿನಿಂದ ಬರುವುದನ್ನು ಹಿಂದಕ್ಕೆ ಕಳುಹಿಸಬೇಡಿ. ತಮ್ಮ ಮನೆಯ ಮುಂದೆ ಕಸ ಬಿದ್ದ ಹಾಗೆ ಬಿದ್ದಿದೆ ಏನು ದುಡ್ಡು?

2-00 P.M.

ಶ್ರೀ ಕೋಣಂದೂರು ಲಿಂಗಪ್ಪ :—ಸ್ವಾಮಿ, ಕಸದಿಂದ ರಸ ತೆಗೆಯಬೇಕು. ಸುಮಾರು ಮೂರು ವರ್ಷದಿಂದ ಒಂದೇ ಸಮನೆ ಭರವಸೆಗಳನ್ನು ಕೊಡುತ್ತಲೇ ಇದ್ದೀರಿ.

ಶ್ರೀ ಡಿ. ದೇವರಾಜ ಅರಸ್ :—ಅದು ಮುನ್ನೂರು ವರ್ಷದಿಂದಲೂ ಆಗಿಲ್ಲ, ನಾವು ಮೂರು ವರ್ಷದಿಂದಲಾದರೂ ಮಾಡುತ್ತಿದ್ದೇವೆ ಅದನ್ನು ತಿಳಿದು ತಾವು ಹೆಮ್ಮೆಪಡಿ.

ಶ್ರೀ ಎಸ್. ಎಂ. ಕೃಷ್ಣ :—ಈ ಕುದುರೆಮುಖ ಐರನ್ ಓರ್ ಡೆವಲಪ್‌ಮೆಂಟ್‌ಗೆ ಪೂರಕವಾಗಿ ನಾವು ಈಗಾಗಲೇ ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಮಾಡಿರುವಂತೆ ಪಿಟಿಂಗ್ ಕಾರ್ಪೋರೇಷನ್ ಒಂದನ್ನು ನಮ್ಮ ರಾಜ್ಯದಲ್ಲೂ ಪ್ರಾರಂಭಮಾಡಬೇಕು ಎಂದು ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ. ಮಾನ್ಯ ದೇವೇಗೌಡರು ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್ ಬಗ್ಗೆ ಭಾಷಣ ಮಾಡುತ್ತಾ ನಾನು ಹಾಸನದಲ್ಲಿ ಭಾಷಣ ಮಾಡಿದ್ದನ್ನು ಉಲ್ಲೇಖಿಸಿದ್ದಾರೆ. ಈಗಲೂ ಒಂದು ವಿಚಾರವನ್ನು ಹೇಳುತ್ತೇನೆ. The Karnataka State Financial Corporation, according to the world Bank team which came and visited, it is one of the three best managed Corporations in the country in terms of volume of work But my grouse is that sufficient attention has not been paid to the rural areas Now we are giving a direction to the Karnataka State Financial Corporation that certain portion of the money they give shall have been meant for the rural areas. That is a matter which the House would certainly agree with me that we should do.

ಶ್ರೀ ಕೆ ಹೆಚ್. ಹನುಮೇಗೌಡ:— ಫೈನಾನ್ಸ್ ಕಾರ್ಪೋರೇಷನ್ ಅರ್ಥ ಸಚಿವರ ಕಂಟ್ರೋಲ್‌ನಲ್ಲಿ ಇದೆ. ಆದುದರಿಂದ ತಾವು ಕೊಟ್ಟಿರುವ ಡೈರೆಕ್ಷನ್ ಏನು ಇದೆ ಅದನ್ನು ಅವರು ಅನುಸರಿಸುತ್ತಾ ಇಲ್ಲ ಎಂದು ಜನ ಮಾತನಾಡಿಕೊಳ್ಳುತ್ತಾ ಇದ್ದಾರೆ.

SRI S. M. KRISHNA:--There is absolutely no difference between the Finance Minister, Industries Minister and the Chief Minister, so far as this matter is concerned. It is not correct. It is factually incorrect. Necessary

(Sri S M. Krishna)

directive will be given to the Karnataka State Financial Corporation, who are bound by certain restrictions or conditions, imposed by the Industrial Development Bank of India, which is a refinancing organisation.

ಇನ್ನು ಕಾಯಿರ್ ಡೆವಲಪ್‌ಮೆಂಟ್ ವಿಚಾರದಲ್ಲಿ ನಮ್ಮ ಸಹ ಸಚಿವರಾದ ಮಾನ್ಯ ಮೊಯಿಲಿ ಅವರು ವಿಶೇಷವಾದಂತಹ ಆಸಕ್ತಿಯನ್ನು ವಹಿಸಿದ್ದಾರೆ ಇತ್ತೀಚೆಗೆ ಕೆಲವು ಸಣ್ಣ ಕೈಗಾರಿಕೋದ್ಯಮಿಗಳ ತಂಡ ಸಿಲೋನ್ ದೇಶಕ್ಕೆ ಹೋಗಿ ಅಲ್ಲಿ ಕಾಯಿರ್ ಅಭಿವೃದ್ಧಿ ಬಗ್ಗೆ ನಡೆದಿರತಕ್ಕ ಪ್ರಗತಿಯನ್ನು ವೀಕ್ಷಿಸಿ, ಗಮನಿಸಿ ಬಂದಿದ್ದಾರೆ. ಈಗ ಈ ಕಾಯಿರ್ ಡೆವಲಪ್‌ಮೆಂಟ್ ಬಗ್ಗೆ ಒಂದು ವಿಶೇಷವಾದಂತ ಸಂಸ್ಥೆಯನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ ನಾವು ಈಗಾಗಲೇ ಪ್ರಕಟಿಸಿರುವ ಹಾಗೆ ಶ್ರೀಮಾನ್ ಮೊಯಿಲಿ ಅವರ ನೇತೃತ್ವದಲ್ಲಿ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಒಂದನ್ನು ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದಕ್ಕಾಗಿ ಈ ಬಡ್ಜೆಟ್‌ನಲ್ಲಿ 10 ಲಕ್ಷ ರೂಪಾಯಿಗಳನ್ನು ಬಂಡವಾಳವಾಗಿ ಒದಗಿಸಿದ್ದೇವೆ. ಇದರ ಜೊತೆಗೆ ಫೈನಾನ್ಸಿಯಲ್ ಇನ್ಸ್ಟಿಟ್ಯೂಷನ್ಸ್ ಮತ್ತು ಮತ್ತು ಲೀಡಿಂಗ್ ಬ್ಯಾಂಕುಗಳ ಪ್ರತಿನಿಧಿಗಳನ್ನೊಳಗೊಂಡಂತೆ, ನೇಕಾರರ ದುಸ್ಥಿತಿಯನ್ನು ಅರಿತು ಅವರಿಗೆ ಯೂರನ್‌ಸಪ್ಲೈ ಮಾಡುವುದರಿಂದ ಹಿಡಿದು ಮಾರುಕಟ್ಟೆಗೆ ಬರುವತನಕ ಬೇಕಾಗುವಂಥ ಅನುಕೂಲಕರವಾದಂತ ವಾತಾವರಣವನ್ನು ಕ್ರಿಯೇಟ್ ಮಾಡುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಮಾನ್ಯ ದೇವೇಗೌಡರು ಸಿಮೆಂಟ್ ಬಗ್ಗೆ ಮಾತನಾಡುತ್ತಾ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆ....

ಶ್ರೀ ಕೆ. ಹೆಚ್. ಹನುಮೇಗೌಡ :—ಮಾನ್ಯ ಸಚಿವರು ಹಾಸನಕ್ಕೆ ಬಂದಾಗ ಲ್ಯಾಂಡ್ ಕನ್‌ವರ್ಷನ್ ಮಾಡುವುದು, ಪವರ್ ಕೊಡತಕ್ಕದ್ದು, ಲೋನ್ ಸ್ಯಾಂಕ್ಷನ್ ಮಾಡುವುದು ಈ ಮೂರಕ್ಕೂ ಬೇರೆ ಬೇರೆ ಏಜೆನ್ಸಿ ಇರುವುದರಿಂದ ಕೊಟ್ಟ ಅರ್ಜಿಗಳು ತಿಂಗಳಾನುಗಟ್ಟಲೆ, ವರ್ಷಾನುಗಟ್ಟಲೆಯಾದರೂ ಮಂಜೂರು ಆಗುವುದಿಲ್ಲ, ಆದುದರಿಂದ ಸಂಬಂಧಪಟ್ಟ ಡೆಪ್ಯುಟಿ ಕಮಿಷನರ್ ಅವರನ್ನು ಚೇರ್‌ಮನ್ ಮಾಡಿ ಒಂದು ಕೋ ಆರ್ಡಿನೇಷನ್ ಕಮಿಟಿ ಎಂದು ಮಾಡಿ ಅರ್ಜಿಗಳನ್ನು ಶೀಘ್ರವಾಗಿ ಪ್ರೋಸೆಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ಇದರ ಬಗ್ಗೆ....

SRI S. M. KRISHNA:—Whatever he has to say he may add it at the end of my reply. ಸಿಮೆಂಟ್ ಬಗ್ಗೆ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯಲ್ಲಿ ಬಂದಿರುವ ಲೇಖನವನ್ನು ಮಾನ್ಯ ದೇವೇಗೌಡರು ಉಲ್ಲೇ

ಖಿಸಿದ್ದಾರೆ. ಅದು ನನ್ನ ಗಮನಕ್ಕೆ ಬಂದಿರಲಿಲ್ಲ. ಈ ಹಿಂದೂಸ್ಥಾನ ಟೈಮ್ಸ್ ಪತ್ರಿಕೆ ಯಾರಿಗೆ ಸೇರಿತಕ್ಕದ್ದು ಎಂದು ಎಲ್ಲರಿಗೂ ಗೊತ್ತಿರುವ ವಿಚಾರ. ಇದು ಮೂನ್ಯ ಬಿರ್ಲಾ ಅವರಿಗೆ ಸೇರಿರತಕ್ಕದ್ದು. ಇವರದು ಅಮ್ಮಸಂದ್ರ ಹತ್ತಿರ ಕೂಡ ಒಂದು ಸಿಮೆಂಟ್ ಫ್ಯಾಕ್ಟರಿ ಇದೆ; ಇದು ಒಂದೇ ಕಂಪೆನಿ ಅಲ್ಲ; ಈ ದೇಶದಲ್ಲಿ 5-6 ಸಿಮೆಂಟ್ ಕಾರ್ಖಾನೆಗಳು ಇವೆ. ಅದಕ್ಕೋಸ್ಕರ ಪ್ರಚೋಧನೆ ಮಾಡಿ ಈ ರೀತಿ ಆರ್ಟಿಕಲ್ಸ್ ಬರೆದಿದ್ದಾರೆ. ಬೆಂಗಳೂರು ನಗರದಲ್ಲಿರುವ ಡೆಕನ್‌ಹೆರಾಲ್ಡ್ ಪತ್ರಿಕೆಗಾಗಲಿ, ಪ್ರಜಾವಾಣಿ ಪತ್ರಿಕೆಗಾಗಲಿ, ಕನ್ನಡ ಪ್ರಭ ಪತ್ರಿಕೆಗಾಗಲಿ, ಹಿಂದೂ ಪತ್ರಿಕೆಗಾಗಲಿ, ಸಂಯುಕ್ತ ಕರ್ನಾಟಕ ಪತ್ರಿಕೆಗಾಗಲಿ, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಾಗಲಿ, ಗೊತ್ತಿಲ್ಲದೇ ಇರತಕ್ಕ ಸತ್ಯ ಸಂಗತಿಯನ್ನು ಈ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನವರು ಹೇಗೆ ಬರೆದುಕೊಟ್ಟಿದ್ದಾರೆ ಎನ್ನುವುದು ಅರ್ಥವಾಗುವುದಿಲ್ಲ. ಇದರಲ್ಲಿ ಟೋಟಲ್ ಅಲೊಕೇಷನ್ ನಮ್ಮ ರಾಜ್ಯಕ್ಕೆ 8 ಲಕ್ಷ. ಅದರಲ್ಲಿ 60 ಪರ್‌ಸೆಂಟ್ ಗವರ್ನಮೆಂಟ ಯೂಸ್‌ಗೆ ಕೊಡುತ್ತಾರೆ. 10 ಪರ್‌ಸೆಂಟ್ ಅಟಾನಮಸ್ ಬಾಡಿಸ್, ಕಾರ್ಪೊರೇಷನ್, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಇನ್‌ಕ್ಲೂಡ್ ತಾಲ್ಲೋಕ್ ಬೋರ್ಡ್ಸ್, ಮುನಿಸಿಪಾಲಿಟೀಸ್. Public consumption 30 ಪರ್‌ಸೆಂಟ್. ಇದರಲ್ಲಿ 25 ಪರ್‌ಸೆಂಟ್ ಅಪವ್ಯಯ ಆಗಿದೆ ಎಂದರೆ 25 ಪರ್ ಸೆಂಟ್ ಅಪವ್ಯಯ ಯಾವುದರಲ್ಲಿ ಆಗಿದೆ. ಇದರಲ್ಲಿ 60 ಪರ್‌ಸೆಂಟ್ ಗವರನ್‌ಮೆಂಟ್ ಯೂಸ್‌ಗೆ ಕೊಡುತ್ತಾರೆ, ಪಬ್ಲಿಕ್ ವರ್ಕ್ಸ್ ಇಲಾಖೆ, ಮುನಿಸಿಪಲ್ ಆಡ್ಮಿನಿಸ್ಟ್ರೇಷನ್ ಇಲಾಖೆ, ಮತ್ತು ವಾಟರ್ ಸಪ್ಲೈ ಅಂಡ್ ಸಿವಿರೇಜ್ ಬೋರ್ಡ್ ಇಲ್ಲೆಲ್ಲಾದರೂ ಒಂದು ಕಡೆ ಆಗಿರಬೇಕಾಗುತ್ತದೆ. ಈಗ 30 ಪರ್‌ಸೆಂಟ್ ಕಂಪ್ಲೀಟ್‌ಯಾಗಿ ಅಪವ್ಯಯ ಆಯಿತು ಎಂದು ಲೆಕ್ಕ ಹಾಕಿದರೂ ಕೂಡ ಒಟ್ಟು ವ ನೂರು ಕೋಟಿ ರೂಪಾಯಿಗಳಿಗಿಂತ ಮೇಲೆ ಬರುವುದಿಲ್ಲ. ಇಂಥಾದ್ದರಲ್ಲಿ 15 ಕೋಟಿ ರೂಪಾಯಿಗಳ ಸಿಮೆಂಟ್ ಅಪವ್ಯಯವಾಗಿದೆ ಎಂದು ಮಾಡಿರುವ ಅಪಾದನೆಗೆ ನಾನು ಅಳಬೇಕೋ, ನಗಬೇಕೋ ಗೊತ್ತಾಗುವುದಿಲ್ಲ.

ಶ್ರೀ ಎಂ. ಎಸ್ ಕೃಷ್ಣನ್ :—ಈಗ ಅಮ್ಮಸಂದ್ರದಲ್ಲಿ ತಯಾರಾಗುತ್ತಿರುವ ಸಿಮೆಂಟ್ ಸೂಪರ್ ಫೈನ್ ಎಂದು ಹೇಳಿ ಕೇವಲ ಸಾಧಾರಣ ಸಿಮೆಂಟ್ ತುಂಬಿ ಕಳುಹಿಸುತ್ತಿದ್ದಾರೆ, ಹೀಗೆ ಮಾಡಿ ಅವರು ಲಾಭ ಮಾಡಿಕೊಳ್ಳುತ್ತಾ ಇದ್ದಾರೆ, ಅದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಸ್. ಎಂ. ಕೃಷ್ಣ :—ನಿರ್ದಿಷ್ಟವಾಗಿ 10 ಪರ್‌ಸೆಂಟ್ ಸೂಪರ್ ಫೈನ್ ಮಾಡಬೇಕೆಂದು ಕೇಂದ್ರ ಸರ್ಕಾರದ ಅನುಮತಿ ಇದೆ, ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಈಗ ಭಾರತದಲ್ಲಿರುವ ಸಿಮೆಂಟ್ ತಯಾರಕರು ಎಲ್ಲಾ ಸೇರಿ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ. ಈಗ ಕೇಂದ್ರ ಸರ್ಕಾರದವರು

(ಶ್ರೀ ಎಸ್. ಎಂ. ಕೃಷ್ಣ)

ಪ್ರೈಸ್ ಕಂಟ್ರೋಲ್ ಬಗ್ಗೆ ಜಾಹಿರಾತು ಮಾಡಿದ್ದಾರೆ, ಅದನ್ನು ವಿರೋಧ ಮಾಡಬೇಕೆಂಬುದೇ ಇವರ ಸಂಚು. ಈ ಸಂಚಿಗೆ ಹಿಂದೂಸ್ಥಾನ್ ಟೈಮ್ಸ್‌ನವರಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನವರು ಕೊಟ್ಟಿರತಕ್ಕ ಹೇಳಿ .

ಶ್ರೀ ಹೆಚ್. ಡಿ. ದೇವೇಗೌಡ :— ಶ್ರೀಮಾನ್ ಕೃಷ್ಣ ಅವರು ಸಿಮೆಂಟ್‌ನ್ನು ಬಹಳ ಸ್ವಚ್ಛತೆಯಿಂದ ನಿರ್ಮಲವಾದ ಹಸ್ತದಿಂದ ವಿತರಣೆ ಮಾಡಿಸಿದ್ದಾರೆ ಎಂದು ಒಪ್ಪಿಕೊಳ್ಳೋಣ. ಈ ಮೂರು ವರ್ಷದಲ್ಲಿ ತಾವು ಈ ಸಿಮೆಂಟ್‌ನ್ನು ವಿತರಣೆ ಮಾಡುವ ಬಗ್ಗೆ ಒಂದು ಪಟ್ಟಿಯನ್ನು ಈ ಸಭೆಗೆ ಒದಗಿಸಿ.

ಶ್ರೀ ಎಸ್. ಎಂ. ಕೃಷ್ಣ :—ಬೆಂಗಳೂರು ನಗರದ್ದೇ ?

ಶ್ರೀ ಹೆಚ್ ಡಿ. ದೇವೇಗೌಡ :—ಇಡೀ ರಾಜ್ಯದ್ದು.

ಶ್ರೀ. ಸ್ ಎಂ. ಕೃಷ್ಣ :—ಅದನ್ನು ತರಿಸಿಕೊಡುತ್ತೇನೆ. Even if it is a question of adding some more people for that work you will get the list and it will be supplied to the House.

SRI H. D. DEVEGOWDA :—In Shimoga district the Deputy Commissioner went to the extent of prosecuting some of the people.

SRI S. M. KRISHNA :—I do agree. ನಾನು ಈ ಸಿಮೆಂಟ್ ವ್ಯವಹಾರದಲ್ಲಿ ಅಲ್ಲಿ ಒಂದು ರೀತಿ, ಇಲ್ಲಿ ಒಂದು ರೀತಿ ನಡೆದುಕೊಂಡಿಲ್ಲ. ಶುದ್ಧ ಹಸ್ತವಾಗಿ ನಡೆಸಿದ್ದೇವೆ ಎಂದು ಹೇಳಲಿಲ್ಲ. ಇದನ್ನು ಯಾರ ಮೂಲಕ ನಡೆಸ ಬೇಕು ಎಂದರೆ ಕೈ ಕೆಳಗಿನ ಅಧಿಕಾರಿಗಳ ಮೂಲಕ ನಡೆಸಬೇಕಾಗುತ್ತದೆ.

Can I vouch for that ? Here and there, there are bound to be lapses. But, as compared to other States, the distribution of cement is fair by and large. There might be minor omissions and commissions. We have got to take an overall view of the things. ಬೆಂಗಳೂರು ಸುತ್ತಮುತ್ತ ಇರುವ ಕಟ್ಟಡ ನೋಡಿ ಸಿಮೆಂಟ್ ಇಲ್ಲದೇ ಕಟ್ಟಡ ನಡಿಯುತ್ತಾ ಇದೆ ಏನು ? ನಾನು ಈ ಮಾತನ್ನು ಹೇಳಿದರೆ ಮುನಾಪಲಿ ಹೌಸೆಸ್‌ಗೆ ಸಪೋರ್ಟ್ ಮಾಡುತ್ತೇನೆ ಅಂತಲ್ಲ. ಅದಕ್ಕೆ ಯಾರೂ ಸಪೋರ್ಟ್ ಮಾಡಬಾರದು. ನೀವು

ಹಿಂದೂಸ್ತಾನ್ ಟೈಂಸ್ ಒಂದನ್ನೇ ಆಧಾರವಾಗಿ ಇಟ್ಟುಕೊಂಡು ಹೇಳಿದಿರಿ. ಇನ್ನೂ there are ulterior motives.

ಶ್ರೀ ಎಂ. ಎಸ್ ಕೃಷ್ಣನ್.—ತಾವು ಹಿಂದೂಸ್ತಾನ್ ಟೈಂಸ್ ಬಗ್ಗೆ ಹೇಳಿದುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಬೆಂಗಳೂರಿನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಏನು ಇದೆ ಅದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸೇರಿ ನಡೆಸತಕ್ಕಂಥಾದ್ದು. ಅವರು ಕೊಟ್ಟಿರತಕ್ಕಂಥಾ ಒಂದು ಲೇಖನವನ್ನು ಹಿಂದೂಸ್ತಾನ್ ಟೈಂಸ್ ಪೇಪರ್‌ನವರು ಪ್ರಕಟಣೆ ಮಾಡಿದ್ದಾರೆ. ಆದುದರಿಂದ ಈ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮೇಲೆ ತಾವು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಅದು ನಮ್ಮ ಪರ್‌ವ್ಯೂಗೆ ಬರುತ್ತದೋ ಇಲ್ಲವೋ ಅನ್ನುವುದನ್ನು ಆಲೋಚನೆ ಮಾಡಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಮನಪಾಲಿ ಹೌಸಸ್‌ಗೆ ಯಾರೂ ಸಪೋರ್ಟ್ ಮಾಡಬಾರದು ಅಂತ ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದೇ ಮಾತನ್ನು ಶ್ರೀಮತಿ ಇಂದಿರಾಗಾಂಧಿಯವರಿಗೂ ಹೇಳಬೇಕು.

ಶ್ರೀ ಎಸ್. ಎಂ. ಕೃಷ್ಣ.—ಟೆಲೆಕ್ಸ್ ತೆಗೆದುಕೊಂಡು ಹೇಳಿಬಿಡೋಣ. ಆದುದರಿಂದ ಸಂಪೂರ್ಣವಾಗಿ ಎಲ್ಲವೂ ಕ್ರಮವಾಗಿ ನಡೆಯುತ್ತಾ ಇದೆ ಎಂದು ಹೇಳುವುದಿಲ್ಲ ಸರ್ಕಾರದವರು ಬೇಕಾದಷ್ಟು ತಪ್ಪು ಮಾಡಬಹುದು. ನಾವೇ ಇರಲಿ, ನೀವೇ ಇರಲಿ, ಆ ರೀತಿ ಏನಾದರೂ ತಪ್ಪು ಇದ್ದಲ್ಲಿ ಆ ತಪ್ಪನ್ನೇ ಮಾಗ್ನಿಫೈಡ್ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಆದರೆ ಅದನ್ನು ಹಿಂದೂಸ್ತಾನ್ ಟೈಂಸ್‌ನಲ್ಲಿ ಮಾತ್ರ ಪ್ರಕಟಣೆ ಮಾಡಿದ್ದಾರೇ ವಿನಾ ಬೆಂಗಳೂರಿನಲ್ಲಿ ಹೊರಡತಕ್ಕಂಥ ಪತ್ರಿಕೆಯಲ್ಲಿ ಏತಕ್ಕೆ ಪ್ರಕಟಣೆ ಮಾಡಿಲ್ಲಾ ? ಇಂಥಾ ಒಂದು ಆಪಾದನೆಯನ್ನು ಶ್ರೀ ಬಂಗಾರಪ್ಪನವರು ಮಾಡಿದ್ದಾರೆ.

SRI H. D. DEVE GOWDA.—I can name them.

SRI S. M. KRISHNA.—The Hon. the Leader of the Opposition can certainly do so, and if there is any action to be taken, we will certainly take action.

ಶ್ರೀ ಹೆಚ್. ಡಿ. ದೇವೇಗೌಡ.—ಆ ಪಟ್ಟಿಯನ್ನು ಟೇಬಲ್ ಮುಂದೆ ಇಡಿ.

SRI S. M. KRISHNA.—Legally it will be examined and if it is within the frame work of the rules, I will certainly place it on the Table of the House.

(ಶ್ರೀ ಎಸ್. ಎಂ. ಕೃಷ್ಣ)

ಇನ್ನು ಹರಿಜನರ ಪ್ರಾತಿನಿಧ್ಯದ ವಿಚಾರದಲ್ಲಿ ಶ್ರೀಮಾನ್ ಸಿದ್ದಮಾದಯ್ಯನವರು ಮತ್ತು ಶ್ರೀಮಾನ್ ಸಿದ್ದಯ್ಯನವರು ಮತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳೂ ಕೂಡ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಒಂದು ಸುತ್ತೋಲೆಯನ್ನೂ ಕೂಡ ಕಳುಹಿಸಿದ್ದಾರೆ. ಕನಿಷ್ಠಪಕ್ಷ 18 ಪರ್ಸೆಂಟ್‌ನ್ನಾದರರೂ ಗೌರ್ನಮೆಂಟ್ ರನ್ಡ್ ಇಂಡಸ್ಟ್ರೀಸ್, ಗೌರ್ನಮೆಂಟ್ ರನ್ಡ್ ಕಾರ್ಪೋರೇಷನ್ಸ್ ಮತ್ತು ಗೌರ್ನಮೆಂಟ್ ರನ್ಡ್ ಕಂಪೆನೀಸ್ ಇವುಗಳಲ್ಲಿ ಅವರಿಗೆ ಮೀಸಲು ಸ್ಥಾನಗಳನ್ನು ಕೊಡಬೇಕು ಎಂದು. ನಾವು ಕಳೆದ ವರ್ಷ ಇದರ ಬಗ್ಗೆ ತಳೆದಂಥ ಒಂದು ನಿಲುವನ್ನು ಈ ಸಭೆಯ ಮುಂದೆ ಇಡಲು ಇಚ್ಛಿಸುತ್ತೇನೆ.

ಇನ್ನು ಮಾನ್ಯ ಸಿದ್ದಯ್ಯನವರು ಮತ್ತು ಮಾನ್ಯ ಸಿದ್ದಮಾದಯ್ಯನವರು ಈ ಸಿಮೆಂಟ್ ಮತ್ತು ಕಬ್ಬಿಣದ ಕಾರ್ಖಾನೆಯಲ್ಲಿ ಹರಿಜನ ವಿದ್ಯಾವಂತ ನಿರುದ್ಯೋಗಿಗಳಿಗೆ ಏಜನ್ಸಿ ಕೊಡುವ ಬಗ್ಗೆ ಹೇಳಿದರು ಆ ಬಗ್ಗೆ ಹೇಳುವುದಾದರೆ ಎಲ್ಲರಿಗೂ ಇದಕ್ಕೆ 10 ಸಾವಿರ ರೂಪಾಯಿ ಡಿಪಾಜಿಟ್ಟು ಇಟ್ಟಿದ್ದರೆ ಇವರಿಗೆ 5 ಸಾವಿರ ರೂಪಾಯಿ ಡಿಪಾಸಿಟ್ ಮಾಡಿದ್ದೇವೆ. ಅವರಿಗೆ ಇದರಲ್ಲೂ ಕಡಿಮೆ ತೋರಿಸಿದ್ದೇವೆ. ಇವೆಲ್ಲವನ್ನೂ ಏತಕ್ಕೆ ಮಾಡಿದ್ದೇವೆ ಎಂದರೆ ಹರಿಜನರು ಸಮಾಜದಲ್ಲಿ ಹಿಂದುಳಿದಿರತಕ್ಕಂಥಾವರು ಅವರಿಗೆ ನಾವು ಸವಲತ್ತುಗಳನ್ನು ವಿಶೇಷವಾಗಿ ಕೊಡಬೇಕು ಅಂತ ಮಾಡಿದ್ದೇವೆ.

ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಲೋಕವಸ್ತ್ರ ಬಗ್ಗೆ ಹೇಳಿದರು 40 ಲಕ್ಷ ಆಗುತ್ತದೆ ಎಂದು. ಅದರಲ್ಲಿ ಕೇವಲ 1.5 ಲಕ್ಷ ಮಾತ್ರ ಆಗುವುದಿಲ್ಲ. 40 ಲಕ್ಷ ಹಾಕಿದರೆ 30 ಲಕ್ಷವಾದರೂ ಲೋಕವಸ್ತ್ರಗಳು ದೊರಕಬೇಕು.

ಇನ್ನು ಟೆಕ್ನಿಕಲ್ ಕನ್‌ಸಲ್ಟೆನ್ಸಿ ಸೆಲ್ ವಿಷಯದ ಬಗ್ಗೆ ಶ್ರೀಮತಿ ಮುಡಿಮನ್ ಅವರು ಮಾತನಾಡಿದ್ದಾರೆ. ಈಗಾಗಲೇ ಇದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೇವೆ. ಮೊಟ್ಟಮೊದಲಾಗಿ ಇದನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡುತ್ತೇವೆ. ಜೊತೆಗೆ ಇದನ್ನು ರಿಯಾಯಿತಿಯಲ್ಲಿ ವಿತರಣೆ ಮಾಡುವುದಕ್ಕೆ ಇಂಡಸ್ಟ್ರೀಸ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಸಣ್ಣ ಹೈಪವರ್ ಕಮಿಟಿ ಮಾಡಿದ್ದೇವೆ. ಅವರಿಗೆ ಎಲ್ಲ ರಿಯಾಯತಿಗಳನ್ನೂ ಕೊಟ್ಟು ಬೆಂಗಳೂರು ನಗರ ಬಿಟ್ಟು ಹೊರಗಡೆ ಪ್ರದೇಶದಲ್ಲಿ ವಿತರಣೆ ಮಾಡಬೇಕು.

ಇನ್ನು ಶ್ರೀಮಾನ್ ಬಂಗಾರಪ್ಪನವರು ವೈಯಕ್ತಿಕವಾಗಿ ಆಪಾದನೆ ಮಾಡಿದ್ದಾರೆ. ಶ್ರೀಮಾನ್ ಚಿಕ್ಕಣ್ಣನವರನ್ನು ಮಂಡ್ಯ ಸಕ್ಕರೆ ಕಾರ್ಖಾನೆಗೆ ಡೈರೆಕ್ಟರನ್ನಾಗಿ ಮಾಡಿದ್ದಾರೆ ಅಂತ. ಶ್ರೀಮಾನ್ ಚಿಕ್ಕಣ್ಣನವರು 1952ರಲ್ಲಿ ಪಿ. ಎಸ್. ಪಿ. ಯಿಂದ ಚುನಾವಣೆಗೆ ನಿಂತಿದ್ದರು. ಜೊತೆಗೆ ಕಬ್ಬು ಬೆಳೆಗಾರರ ಹೋರಾಟದಲ್ಲಿ ಹೋರಾಡಿದವರು. ಅವರು ಬಂಧುಗಳೇ ಆಗಿರಲಿ ಅಥವಾ ಇನ್ನೊಬ್ಬರೇ ಆಗಿರಲಿ ಅವರು ಸರ್ಕಾರದ ಹಿತವನ್ನು ಕಾಪಾಡಬೇಕು ಎನ್ನುವ ದೃಷ್ಟಿಯಿಂದ ಆ ಸಕ್ಕರೆ ಕಾರ್ಖಾನೆಯಲ್ಲಿ ಡೈರೆಕ್ಟರನ್ನಾಗಿ ನೇಮಿಸಿದ್ದೇವೆ. ಇದು ತಪ್ಪು ಎನ್ನುವುದು ಸರ್ಕಾರದ ಅಭಿಪ್ರಾಯವಾದರೆ ಆ ತಪ್ಪನ್ನು ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ.

ಇನ್ನು ಪಾರ್ಥಸಾರಥಿ ವಿಚಾರದಲ್ಲಿ ಎರಡು ಸಾರಿ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಹೇಳಬೇಕಾದರೆ ಈ ಪಬ್ಲಿಕ್ ಸೆಕ್ಟಾರ್‌ನಲ್ಲಿ ಫಿಲಾಸಫಿಯಲ್ಲಿ ನಂಬಿಕೆ ಇರತಕ್ಕಂಥವರನ್ನು ಅಲ್ಲಿಗೆ ಹಾಕಬೇಕು ಎನ್ನುವ ಉದ್ದೇಶದಿಂದ ಹಾಕಿದ್ದೇವೆ. ಈ ಪಾರ್ಥಸಾರಥಿಯವರನ್ನು ಗಂಗಾವತಿ ಸಕ್ಕರೆ ಕಾರ್ಖಾನೆಗೆ, ಮೈಸೂರು ಪೇಪರ್ ಮಿಲ್‌ಗೆ ಮತ್ತು ಮೈಸೂರು ಲ್ಯಾಂಪ್ ವರ್ಕ್ಸ್‌ಗೆ ಡೈರೆಕ್ಟರನ್ನಾಗಿ ಹಾಕಿದ್ದೇವೆ. ಇದೇನೂ ಪರ್ಮನೆಂಟ್ ಹುದ್ದೆ ಅಲ್ಲ. ಇದರ ಮೀಟಿಂಗ್ 3–4 ತಿಂಗಳಿಗೊಮ್ಮೆ ಒಂದೊಂದು ನಡೆಯುತ್ತದೆ. ಹೀಗಿರುವಾಗ ಅವರ ಸಂಬಂಧವಾದರೂ ಇದರಲ್ಲಿ ಹೇಗೆ ಆಗುತ್ತದೆ? ಆದುದರಿಂದ ಶ್ರೀಮಾನ್ ಬಂಗಾರಪ್ಪನವರು ಇದನ್ನೇ ದೊಡ್ಡದನ್ನಾಗಿ ಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಸಂಬಂಧಿಕರನ್ನು ಹಾಕಬಾರದು ಅಂತಲ್ಲ. ಹಾಗೆ ಹಾಕುವುದಾದರೆ ಒಂದು ಕಂಪೆನಿಗೆ ಡೈರೆಕ್ಟರನ್ನಾಗಿ ಹಾಕಿ. ಅದಕ್ಕಿಂತಲೂ ಹೆಚ್ಚಿನ ಅನುಭವ ಇರುವವರಿಗೆ ಒಂದು ಅವಕಾಶ ಮಾಡಿಕೊಡಬೇಕಾದ್ದಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಬಂಗಾರಪ್ಪನವರು ಈ ಬಗ್ಗೆ ಏನು ಆಕ್ರೋಶದಿಂದ ಹೇಳಿದರೂ ನನಗೇನೂ ಬೇಜಾರು ಇಲ್ಲ. ಅದನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಇನ್ನು ನನ್ನ ಮೇಲೆ ಇನ್ನೊಂದು ಆಪಾದನೆ ಮಾಡಿದ್ದಾರೆ. ಅದು ಯಾವುದೆಂದರೆ ನನ್ನ ತಮ್ಮನ ಹೆಂಡತಿಯನ್ನು ಮಂಡ್ಯ ಸೋಷಿಯಲ್ ವೆಲ್‌ಫೇರ್ ಬೋರ್ಡಿಗೆ ಮೆಂಬರನ್ನಾಗಿ ಮಾಡಿದ್ದಾರೆ ಎಂದು. ಇದಕ್ಕೆ ಶ್ರೀಮತಿ ದಮಯಂತಿ ಬೋರೆಗೌಡ ಅವರು ಚೇರ್ಮನ್‌ರು. ಆ ಜಿಲ್ಲೆಯಲ್ಲಿ ಯಾರೂ ಈ ಗೌರವದ ಕೆಲಸಕ್ಕೆ ಮುಂದೆ ಬರದೇ ಇದ್ದುದರಿಂದ ನನ್ನ ತಮ್ಮನ ಹೆಂಡತಿ

(ಶ್ರೀ ಎಸ್. ಎಂ. ಕೃಷ್ಣ)

ಯನ್ನು ಮೆಂಬರು ಆಗಬೇಕು ಅಂತಾ ಮೆಂಬರು ಮಾಡಿದ್ದಾರೆ. ಇದು ಗೌರವ ಹುದ್ದೆ. ಮೇಲಾಗಿ ಇದು ನಾನು ಮಂತ್ರಿಯಾಗಿ ಬರುವುದಕ್ಕೆ ಮುಂಚೆ ಆದದ್ದು. ಆದುದರಿಂದ ನಾನು ಬಂಗಾರಪ್ಪನವರಲ್ಲಿ ಕೇಳುವುದು ಇಷ್ಟೆ. ಯಾರು ಸ್ವಜನಪಕ್ಷಪಾತ ಮತ್ತು ಭ್ರಷ್ಟರಾಗಿರತಕ್ಕಂಥಾವರು ಇದ್ದಾರೋ ಅವರು ಅಧಿಕಾರದಲ್ಲಿರಕೂಡದು.

ಶ್ರೀ ಗಂಗಾಧರ್ ಚಾರ್ಟರ್ಡ್ ಅಕೌಂಟೆಂಟರ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಚಾರ್ಟರ್ಡ್ ಅಕೌಂಟೆಂಟರುಗಳು ಮೊದಲಿಗೆ ಐದಾರು ಜನರು ಸೇರಿ ಒಂದು ಫರ್ಮ್ ರೀತಿ ಕೆಲಸ ಮಾಡುತ್ತಿದ್ದರು. ಅನಂತರ ಅವರುಗಳು ಬೇರೆ ಬೇರೆಯಾಗಿ ಚಾರ್ಟರ್ಡ್ ಅಕೌಂಟೆಂಟರುಗಳಾಗಿ ಕೆಲಸ ಮಾಡಲು ಯೋಚನೆ ಮಾಡಿ ಅದರಂತೆ ಹಲವಾರು ಕಡೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಜಾತಿಯ ಪ್ರಶ್ನೆ ತರಬಾರದು. Without getting a single paise, he was working in Bramhiah & Co., for 7 years. The Company was a reputed Firm. After 7 years of service the e, all these 3 people got out of the Firm and they had their own Chartered Accountants Firm. If they are appointed as in ernal Auditors of the Sales International and other Firms, it should not be stated that because I used influence they have been appointed. They are appointed as internal Auditors in Sales International, Porcelien Factory and Mysore Asetate Factory. The Auditors are different. ಇವರು ಮೂರು ಕಂಪೆನಿಗಳು ಎಂದರೆ ಸೇಲ್ಸ್ ಇಂಟರ್‌ನ್ಯಾಷನಲ್, ಮಂಡ್ಯ ಅಸಿಟೇಟ್ ಕಂಪೆನಿ ಮತ್ತು ಮೈಸೂರು ಪೋರ್ಸಿಲೀನ್ ಫ್ಯಾಕ್ಟರಿಗಳಲ್ಲಿ ಚಾರ್ಟರ್ಡ್ ಅಕೌಂಟೆಂಟರಾಗಿ ಇಂಟರ್‌ನಲ್ ಆಡಿಟರ್ ಕೆಲಸ ಮಾಡಲು ನೇಮಕ ಮಾಡಲಾಗಿದೆ. ದೊಡ್ಡ ದೊಡ್ಡ ಕಂಪೆನಿಗಳಲ್ಲಿ ಲೆಕ್ಕ ಪರಿಶೋಧಕರಾಗಿ ನೇಮಕ ಮಾಡುವಾಗ ಸರಕಾರ ಯೋಚನೆ ಮಾಡಿ ಮಾಡುತ್ತದೆ. ನಾನು ಚೇರ್ಮನ್ ಆಗಿರುವ ಮೈಸೂರು ಐರನ್ ಅಂಡ್ ಸ್ಟೀಲು ಕಂಪೆನಿಯಲ್ಲಿ ಆಡಿಟ್ಸ್ ಕೆಲಸ ಮಾಡಲು ಕೇಂದ್ರ ಸರಕಾರದವರು ಮದ್ರಾಸಿನ ಫ್ರೇಜರ್ ಅಂಡ್ ರಾಸ್ ಕಂಪೆನಿಯವರನ್ನು ನೇಮಕ ಮಾಡಿದ್ದಾರೆ ನಮ್ಮ ರಾಜ್ಯದಲ್ಲಿ ಚಾರ್ಟರ್ಡ್ ಅಕೌಂಟೆಂಟರುಗಳು ಅನುಭವ ಪಡೆದವರು ಇದ್ದರೂ ಕೇಂದ್ರ ಸರಕಾರ ಮದ್ರಾಸಿನವರನ್ನು ಇಲ್ಲಿ ಆಡಿಟರ್ ಕೆಲಸ ಮಾಡಲು ನೇಮಿಸಿದ್ದಾರೆ. ನಮ್ಮಲ್ಲಿ ಕನ್ನಡಿಗರು ಬೇಕಾದಷ್ಟು ಜನರು ಒಳ್ಳೆಯ ತರಬೇತಿ ಹಾಗೂ ಅನುಭವ ಉಳ್ಳವರಿಗೆ ಒಂದು ಅವಕಾಶ ಕೊಡಬೇಕೆಂದು ಇಲ್ಲಿ ನಾವು ನಮ್ಮ ರಾಜ್ಯದವರೇ ಇರಲಿ ಎಂದು ಇಂಟರ್‌ನಲ್ ಆಡಿಟರಾಗಿ ಮಾಡಲಾಗಿದೆ.

ಇದರಲ್ಲಿ ಏನೂ ತಪ್ಪಿಲ್ಲ. ಪರ ದೇಶಗಳವರಿಗೆ ಇಲ್ಲಿ ಹೆಚ್ಚು ಅವಕಾಶ ಕೊಡ ಬಾರದು ಎನ್ನುವುದು ಸರಿ. ಆದರೆ ನಮ್ಮ ರಾಜ್ಯದ ಕನ್ನಡಿಗರಿಗೆ ಹೆಚ್ಚು ಅವ ಕಾಶ ಕೊಡಬೇಕೆಂದು ಇಲ್ಲಿ ಮಾಡಲಾಗಿದೆ ಇದರಲ್ಲಿ ಆಡಿಟ್ ಮಾಡುವವರು ಬೇರೆ ಇದ್ದಾರೆ. ಇವರು ಇಂಟರ್‌ನಲ್ ಆಡಿಟ್ಟು ಮಾತ್ರ ಮಾಡುತ್ತಾರೆ. ಇನ್ನು ಶ್ರೀ ಪಾರ್ಥಸಾರಥಿಯವರ ನೇಮಕ ಮಾಡಿರುವುದರ ಬಗ್ಗೆ ಹೇಳಿದರು. He is a Director in the Company. This is a question which relates to individual's integrity. If it is done like that he is the person to answer that. I do not know anything.

ಶ್ರೀ ಎಸ್. ಬಂಗಾರಪ್ಪ :—ಇವರಿಗೆ ಇಂಫಾಲ್ ಕಾರು ಕೊಟ್ಟು ಕಳು ಹಿಸಿದ್ದರೋ ?

ಶ್ರೀ ಎಸ್. ಎಂ. ಕೃಷ್ಣ :—ಇದು ನನಗೆ ಗೊತ್ತಿಲ್ಲ. ಇದರ ಬಗ್ಗೆ ಅವರನ್ನೇ ಕೇಳಬೇಕಾಗುತ್ತದೆ. ಇದು ನನಗೆ ಸಂಬಂಧಪಟ್ಟದ್ದಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ಬೇರೆ ಚಾರ್ಜುಗಳ ಬಗ್ಗೆ ಹೇಗೆ ವಿವರ ಗಳನ್ನು ತರಿಸಿ ಹೇಳಿದರೋ ಅದರಂತೆ ಇದನ್ನು ತಾವೇ ತರಿಸಿ ಹೇಳಬೇಕಾಗು ತ್ತದೆ. ಇದು ಸರಕಾರಕ್ಕೆ ಸಂಬಂಧಪಟ್ಟದ್ದು.

ಶ್ರೀ ಎಸ್. ಎಂ. ಕೃಷ್ಣ :—ವಿಚಾರ ಮಾಡಿ ಆನಂತರ ಇದರ ವಿವರ ಗಳನ್ನೂ ಒದಗಿಸಿ ಕೊಡುತ್ತೇನೆ ನಾನು ಇಲ್ಲಿ ಮಂಡಿಸಿರುವ ಬೇಡಿಕೆಗಳ ಬಗ್ಗೆ ಕೆಲವಾರು ಸದಸ್ಯರು ಸ್ವಾಗತ ಮಾಡುತ್ತಾ ಬಹುವಾಗಿ ಟೀಕೆಗಳನ್ನೂ ಮಾಡಿದ್ದಾರೆ ಮತ್ತು ಒಳ್ಳೆಯ ಸಲಹೆಗಳನ್ನೂ ಕೊಟ್ಟಿರುವುದಕ್ಕಾಗಿ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮತ್ತು ನನಗೆ ಸಂಬಂಧಪಟ್ಟ ಎಲ್ಲ ಇಲಾಖೆಗಳ ವಿವರಗಳನ್ನು ಕೊಡುವಾಗ ಅಲ್ಲಲ್ಲಿ ತಪ್ಪಿರಬಹುದು ಅಂತಹ ತಪ್ಪುಗಳನ್ನು ತೋರಿಸಿ ಕೊಟ್ಟರೆ ಅದನ್ನು ತಿದ್ದಿಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಈ ದೃಷ್ಟಿಯಿಂದ ಇಂದು ಸದನ ದಲ್ಲಿ ಬಂದಿರುವ ಎಲ್ಲ ಟೀಕೆಗಳನ್ನೂ ನಾನು ಸ್ವಾಗತ ಮಾಡುತ್ತೇನೆ. ಇಷ್ಟು ಸಾವಧಾನವಾಗಿ ನನ್ನ ಎರಡು ಮಾತುಗಳನ್ನು ಕೇಳುವುದಕ್ಕೆ ಅವಕಾಶ ಮಾಡಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ :—ಸರಕಾರದ ನಿಯಂತ್ರಣದಲ್ಲಿರುವ ಕೈಗಾರಿಕೆ ಗಳನ್ನು ಬೇರೆಯವರಿಗೆ ಮಾರಬೇಕು ಎಂಬುದರ ವಿಚಾರದಲ್ಲಿ ಕೇಂದ್ರ ಸರಕಾರದ ಮಂತ್ರಿಗಳಾಗಿರುವ ಶ್ರೀ ಟಿ. ಎ. ಪೈ ಹಾಗೂ ಶ್ರೀ ಗಣೇಶ ಇವರುಗಳು ಒಂದು

(ಶ್ರೀ ಎಂ. ಎಸ್. ಕೃಷ್ಣನ್

ರೀತಿ ಹೇಳುತ್ತ ಬರುತ್ತಿದ್ದಾರೆ. ಮತ್ತು ಇದರ ಎಲ್ಲ ಷೇರುಗಳನ್ನೂ ಬೇರೆ ಯುವರು ತೆಗೆದುಕೊಳ್ಳುವುದರಲ್ಲಿದ್ದಾರೆ ಎನ್ನುವ ವಿಚಾರದಲ್ಲಿ ವಾದ ವಿವಾದಗಳು ಎದ್ದಿರುವುದು ಕೇಳಿ ಬರುತ್ತಿದೆ. ಇದರ ಬಗ್ಗೆ ನಮ್ಮ ರಾಜ್ಯ ಸರಕಾರದ ನಿಲುವೇನು? ಇದು ಮೊದನೆಯದು. ಎರಡನೇದು ರೆಂಕೋ ಬಗ್ಗೆ ಇದು ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದರು. ಇದರ ಬಗ್ಗೆ ಮಾನ್ಯ ಶ್ರೀ ಘೋರ್ಪಡೆಯ ವರು ಒಂದು ರೀತಿ ಹೇಳಿದರು. ಯಾವ ರೀತಿಯಾದ ಹೊಸ ಅಬಿಪ್ರಾಯಗಳು ಇದರ ಬಗ್ಗೆ ತಮಗೆ ಇದೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ :—ಮೊದಲನೇ ವಿಚಾರದ ಬಗ್ಗೆ ನಮ್ಮ ಸರಕಾರಕ್ಕೇನೂ ಗೊತ್ತಿಲ್ಲ. ಎರಡನೇದು ರೆಂಕೋ ವಿಚಾರವಾಗಿ ಹೇಳುವುದಾದರೆ ಇದರಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆಯಾಗಿದೆ ಎನ್ನುವುದನ್ನು ಶ್ರೀಮಾನ್ ಕೃಷ್ಣನ್ ರವರು ಒಪ್ಪುತ್ತಾರೆಂದು ನಂಬುತ್ತೇನೆ. ಇದರಲ್ಲಿ ಇನ್ನೂ ಸುಧಾರಣೆಯಾಗಬೇಕು ಎಂದು ಕೇಂದ್ರ ಸರಕಾರದಲ್ಲಿರುವ ಬಾರತ್ ಹೆವಿ ಎಲೆಕ್ಟ್ರಿಕಲ್ಸ್ ಕಂಪೆನಿ ಯುವರು ಇದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನೂ ಇದು ಪ್ರಿಲಿಮಿನರಿ ಹಾಗೂ ಪ್ರಿಮಿಟೀವ್ ಸ್ಟೇಜುಗಳಲ್ಲಿದೆ ಈಗ ಏನೂ ಹೇಳಲಾಗುವುದಿಲ್ಲ.

(ಶ್ರೀಯುತ ಕೆ. ಎಂ. ನಾಗಣ್ಣ, ಕೊಣಂದೂರು ಲಿಂಗಪ್ಪ, ಹೆಚ್. ಟಿ. ಕೃಷ್ಣಪ್ಪ, ಎಸ್. ಬಂಗಾರಪ್ಪನವರು ಎದ್ದು ಎಲ್ಲರೂ ಒಟ್ಟಿಗೆ ಮಾತನಾಡುತ್ತಿದ್ದರು).

MADAM SPEAKER :—I will put the motion to the vote of the House ;

The question is :

"That the respective sums not exceeding the amounts mentioned in the list of Demands be granted to Government to defray the charges which will come in course of payment during the financial year for the period ending with 31st day of March 1976 in respect of Demand Nos. 1, 16, 49 and 50."

(*The motion was adopted and the sums were granted.*)

As Ordered by the Chair the motion for Demands for grants adopted by the House are reproduced below:

MINISTER FOR INDUSTRIES AND PARLIAMENTARY AFFAIRS

DEMAND NO. 1—STATE LEGISLATURE AND ELECTIONS

"That a sum not exceeding Rs, 2,02, 96,000 be granted to the Government to defray the charges which will come in course of payment during the financial year ending 31st day of March 1976 in respect of "State Legislature and Elections".

DEMAND NO. 16 SUPPLIES AND DISPOSALS

"That a sum not exceeding Rs. 4,90,000 be granted to the Government to defray the charges which will come in course of payment during the financial year ending 31st day of March 1976 in respect of "Supplies and Disposals".

DEMAND NO. 49—INDUSTRIES AND MINES AND GEOLOGY: (EXCLUDING SERICULTURE

"That a sum not exceeding Rs. 33,44,40,000 be granted to the Government defrary to the charges which will come in course of payment during the financial year ending 31st day of March 1976 in respect of "Industries and Mines and Geology (Excluding Sericulture)".

DEMAND NO. 50 SERICULTURE.

"That a sum not exceeding Rs. 1,87 61,000 be granted to the Government to defray the charges which will come in course of payment during the financial year ending 31st day of March 1976 in respect of "Sericulture"-

DEMAND No. 42, 51 AND 52

SRI SUBHAS ASTHURE :....On the recommendation of the Governor,

I beg to move :

"That a sum not exceeding Rs. 8,83,00,000 be granted to the Government to defray the charges which will come in course of payment during the financial year ending 31st day of March 19 6 in respect of Demand No. 42 'Area Development'."

SRI H. C. SRIKANTIAH : –On the recommendation of the Governor, I beg to move :

"That a sum not exceeding Rs. 25,42,00,000 be granted to the Government to defray the charges which will come in course of Payment during the financial year ending 31st day of March 1976 in respect of Demand No. 52 'power Projects.' "

MADAM SPEAKER :—Motion moved : Demand No 42.

"That a sum not exceeding Rs. 8,83,00,000 be granted to the Government to defray the chages which will come in course of payment during the financial year ending 31st day of March 1976 in respect of Demand No 42 Area Development.' "

The other Demands are also before the House for discussion.

ಶ್ರೀ ಕೋಣಂದೂರು ಲಿಂಗಪ್ಪ :—ಇದು ಸತ್ಸಂಪ್ರದಾಯವೇ ?

ಶ್ರೀ ಹೆಚ್ ಟಿ ಕೃಷ್ಣಪ್ಪ :— ಅಧ್ಯಕ್ಷರೇ, ನಾವು ಮಾನ್ಯ ಮಂತ್ರಿಗಳು ಮಾತನಾಡುತ್ತಿರುವಾಗ ಒಂದು ಚಿಕ್ಕ ಸ್ಪಷ್ಟೀಕರಣವನ್ನು ಕೇಳಿದ್ದಕ್ಕೆ ಸ್ವಲ್ಪ ಕಡೆಯವರಿಗೂ ಕುಳಿತು ಕೊಂಡರೆ ಇಂತಹ ಕ್ಲಾರಿಫಿಕೇಷನ್‌ಗಳಿಗೆ ಅವಕಾಶ ಮಾಡಿಕೊಡುತ್ತೇವೆಂದು ತಾವು ಹೇಳಿ ಈಗ ಒಮ್ಮೆಗೇ ಹೀಗೆ ಡಿಮ್ಯಾಂಡುಗಳನ್ನು ಓಟಿಗೆ ಹಾಕಿದರೆ ಹೇಗೆ ? ಮುಂದೆ ಇದಕ್ಕೆ ಅವಕಾಶವಾದರೂ ಯಾವಾಗ ಸಿಗುತ್ತದೆ ?

ಅಧ್ಯಕ್ಷರು : ನಿನ್ನೆ ಮಾನ್ಯ ಸದಸ್ಯರುಗಳೆಲ್ಲರೂ ಒಪ್ಪಿದಂತೆ ಇದು ಎರಡು ಗಂಟೆಯ ವೇಳೆಗೆ ಮುಗಿಯಬೇಕಾಗಿತ್ತು. ಈಗ ಅರ್ಧ ಗಂಟೆ ಹೆಚ್ಚಾಗಿದೆ ಮುಂದಿನ ಡಿಮ್ಯಾಂಡುಗಳ ಚರ್ಚೆ ಬೇಡವೇ ? ಈಗ ತಾವುಗಳು ಕುಳಿತುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ :....ಉತ್ತರ ಕೊಟ್ಟ ಮೇಲೆ ಕ್ಲಾರಿಫಿಕೇಷನ್‌ಗಳನ್ನು ಕೇಳಲು ನಮಗೆ ಅವಕಾಶವಿಲ್ಲವೇ ? ಇದೇನಿದು ? ಸದನದಲ್ಲಿ ನಾವು ಏತಕ್ಕಾದರೂ ಇಲ್ಲಿಗೆ ಬರಬೇಕು ?

ಅಧ್ಯಕ್ಷರು :—ಮಾನ್ಯ ಸದಸ್ಯರು ಹೀಗೆಲ್ಲ ಮಾತನಾಡುತ್ತಾ ಹೋದರೆ ನಾನು ಅವರನ್ನು ಹೊರಗೆ ಹೋಗಬೇಕೆಂದು ಹೇಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ :— ನಾವು ಹೋಗುವುದಿಲ್ಲ. ನಮ್ಮನ್ನು ಬೇಕಾದರೆ ತಾವು ಹೊರಕ್ಕೆ ಕಳುಹಿಸಿ ನಿಮಗೆ ಬೇಕಾದಂತೆ ಡಿಮ್ಯಾಂಡುಗಳನ್ನು ಪಾಸು ಮಾಡಿಕೊಳ್ಳಿ. ನಮ್ಮ ಕಷ್ಟವೇನು ಎನ್ನುವುದು ತಮಗೆ ಗೊತ್ತಾಗುತ್ತಿಲ್ಲ. ಉತ್ತರವಾದ ಮೇಲೆ ಸ್ಪಷ್ಟೀಕರಣ ಕೇಳಲು ಅವಕಾಶವಿಲ್ಲ ಎಂದರೇನು ?

ಶ್ರೀ ಕೆ. ಹೆಚ್. ಹನುಮೇಗೌಡ : —ಕೆಲವು ವಿವರಣೆಗಳನ್ನು ನಾವು ಕೇಳಲೇಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ :—ನಾವು ವಿವರಣೆಗಳನ್ನು ಕೇಳಬೇಡವೇ ?

ಅಧ್ಯಕ್ಷರು :—ವಿವರಣೆಗಳನ್ನು ಮಧ್ಯದಲ್ಲಿ ಕೇಳಿ ಅರ್ಧ ಗಂಟೆ ಹೆಚ್ಚು ಕಳೆದು ಹೋಯಿತು. ಇದಕ್ಕಾಗಿ ಇಂದು 12 ಗಂಟೆಯಿಂದ ನಾವು ಇಲ್ಲಿಗೆ ಬರಲಿಲ್ಲವೇ ? ಇದು ತಮಗೂ ಗೊತ್ತಿದೆ.

ಶ್ರೀ ಎಸ್. ಬಂಗಾರಪ್ಪ :—ಅರ್ಧಗಂಟೆ ಕಾಲ ವಿವರಣೆ ಕೇಳಿಲ್ಲ. ತಾವು ಸ್ವಲ್ಪ ಇಂತಹ ವಿವರಣೆಗಳಿಗೆ ಅವಕಾಶ ಮಾಡಿಕೊಡಬೇಕು.

2-30 .P.M

ಅಧ್ಯಕ್ಷರು .—ನಿನ್ನೆಯ ದಿನ ನಡೆದದ್ದು ಏನು ಎಂದರೆ 12 ಗಂಟೆಯಿಂದ 2 ಗಂಟೆಯವರೆಗೆ ಉತ್ತರ ಕೊಡಬೇಕು ಎನ್ನುವ ಮಾತಿಗೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಕೊಂಡಿದ್ದರು. ಆ ಮಾತಿನಂತೆ ಮಾನ್ಯ ಸದಸ್ಯರು ನಡೆದುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ :—ಈ ಚರ್ಚೆಗೆ ಸಂಬಂಧಪಟ್ಟ ಹಾಗೆ ನಾಲ್ಕೈದು ಕ್ಲಾರಿಫಿಕೇಷನ್‌ಗಳನ್ನು ಕೇಳಬೇಕಾಗಿತ್ತು ಅದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಕೊಡಬೇಕಾಗಿತ್ತು.

ಅಧ್ಯಕ್ಷರು :—ನಿನ್ನೆ ದಿವಸ ತಾವುಗಳೆಲ್ಲರೂ ಏನು ಮಾತನಾಡಿದ್ದಿರಿ ಆದರಂತೆ ನಡೆದುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ :—ಈ ಒಂದು ಚರ್ಚೆಗೋಸ್ಕರ ನಾವು ಪ್ರಶ್ನೋತ್ತರ ವೇಳೆಯನ್ನು ಕೂಡ ತ್ಯಾಗ ಮಾಡಿದ್ದೇವೆ.

ಅಧ್ಯಕ್ಷರು :—ಈ ದಿವಸ ಪ್ರಶ್ನೆಗಳು ಬೇಡ, 2 ಗಂಟೆಯವರೆಗೂ ಮಾನ್ಯ ಕೈಗಾರಿಕಾ ಮಂತ್ರಿಗಳು ಉತ್ತರ ಕೊಡಲಿ. ಆ ಮೇಲೆ 2 ಗಂಟೆಯ ಮೇಲೆ ಮುಂದಿನ ಡಿಮ್ಯಾಂಡ್ ತೆಗೆದುಕೊಳ್ಳೋಣ ಎಂದು ಹೇಳಿದ್ದೆ. ಈಗ ಎರಡೂವರೆ ಗಂಟೆಯಾಗಿದೆ. ಆದ್ದರಿಂದ ಈಗ ನಾವು ಮುಂದಿನ ಡಿಮ್ಯಾಂಡಿಗೆ ಹೋಗ ಬೇಕಾಗಿದೆ. ಈಗ ಮಾನ್ಯ ದೇವೇಗೌಡರು ಮೇಜರ್ ಇರಿಗೇಷನ್ ಮತ್ತು ವಿದ್ಯುಚ್ಛಕ್ತಿ ಇಲಾಖೆಗೆ ಸಂಭಂಧಪಟ್ಟ ಬೇಡಿಕೆಗಳ ಮೇಲೆ ತಮ್ಮ ಚರ್ಚೆಯನ್ನು ಪ್ರಾರಂಭಿಸಬಹುದು.

‡ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ) :— ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಮುಖ್ಯ ಮಂತ್ರಿಗಳ ಇಲಾಖೆಗಳಿಗೆ ಸಂಬಂಧಪಟ್ಟ ಮೇಜರ್ ಇರಿಗೇಷನ್, ವಿದ್ಯುಚ್ಛಕ್ತಿ, ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ಈ ಸಭೆಯಮುಂದೆ ಮಂಡಿಸಿದ್ದಾರೆ. ಈ ಒಂದು ಬೇಡಿಕೆಗಳ ಬಗ್ಗೆ ಚರ್ಚೆ ಮಾಡತಕ್ಕ ಕಾಲದಲ್ಲಿ ನಾನು ಇವೊತ್ತು ಹೆಚ್ಚು ಕಾಲವನ್ನು ಕೂಡ ತೆಗೆದುಕೊಳ್ಳುವುದಿಲ್ಲ. ಕಾರಣ ಬೃಹತ್ ನೀರಾವರಿಯೋಜನೆ, ಮತ್ತು ಮಧ್ಯಮ ನೀರಾವರಿ ಯೋಜನೆಗಳ ಬಗ್ಗೆ ಹಲವಾರು ಸಾರಿ ನಾವು ಪ್ರಸ್ತಾಪ ಮಾಡಿದ್ದೇವೆ. ಸರ್ಕಾರ ಕೂಡ ಈ ದಿಶೆಯಲ್ಲಿ ಕಳಕಳಿಯಿಂದ ಕೆಲಸ ಮಾಡಬೇಕು ಎಂದು ಪ್ರಯತ್ನ ಮಾಡಿದರೂ ಕೂಡ ಸಾಕಷ್ಟು ಹಣವನ್ನು ಒದಗಿಸುವುದರಲ್ಲಿ ಸಾಧ್ಯವಾಗಿಲ್ಲ. ಮುಖ್ಯ ಮಂತ್ರಿಗಳು ಅನೇಕಸಾರಿ ಹೇಳಿದ್ದಾರೆ. ರಾಜ್ಯದಲ್ಲಿರತಕ್ಕ ಎಲ್ಲಾ ಬೃಹತ್ ನೀರಾವರಿ ಯೋಜನೆಗಳನ್ನೂ ಮತ್ತು ಮಧ್ಯಮ ವರ್ಗದ ನೀರಾವರಿ ಯೋಜನೆಗಳನ್ನೂ ಪೂರೈಸುವುದಕ್ಕೆ 500-600 ಕೋಟಿ ರೂಪಾಯಿಗಳು ಬೇಕು ಎನ್ನುವ ಮಾತನ್ನು ಅನೇಕಸಾರಿ ಹೇಳಿದ್ದಾರೆ. ಬಹುಶಃ ಇವೊತ್ತು ಈ ಬಾಬಿಗೆ ಒದಗಿಸಿರತಕ್ಕ ಹಣದ ಪ್ರಮಾಣವನ್ನು ನೋಡಿದರೆ ಈ ಒಂದು ಯೋಜನೆಯನ್ನು ಮುಗಿಸುವುದಕ್ಕೆ ಅವರು ಏನೊಂದು ಆಶಯವನ್ನು ವ್ಯಕ್ತಪಡಿಸಿದ್ದಾರೆ ಎಂದರೆ 10 ವರ್ಷಗಳಲ್ಲಿ ಈ ಯೋಜನೆಗಳನ್ನು ಮುಗಿಸುತ್ತೇವೆ ಎನ್ನುವ ಒಂದು ಆಶಯವನ್ನೇನು ವ್ಯಕ್ತಪಡಿಸಿದ್ದಾರೆ

ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಪ್ರಾಜೆಕ್ಟ್‌ಗಳ ಅಂದಾಜು ಪ್ರತಿಯೊಂದು ಯೋಜನೆಗೂ ಸಂಬಂಧಪಟ್ಟ ಅಂದಾಜನ್ನೂ ಪುನರ್ ವಿಮರ್ಶೆ ಮಾಡವುದಕ್ಕೆ ಹಲವಾರು ಕಾರಣಗಳು ಇವೆ. ಇದರಲ್ಲಿ ಬಹಳ ವಿಶೇಷವಾದ ಕಾರಣವೇನೆಂದರೆ ಬೆಲೆಗಳ ಏರಿಕೆ. ಇದರ ಪರಿಣಾಮವಾಗಿ 500-600 ಕೋಟಿ ರೂಪಾಯಿಗಳ ಅಂದಾಜು ಮಾಡಿರತಕ್ಕ ಯೋಜನೆಗಳು ಏನಿವೆ ಇವು ಬರುವುದರೊಳಗೆ ಒಂದು ಸಾವಿರ ಕೋಟಿ ರೂಪಾಯಿಗಳಿಗೆ ಹೋದರೆ ತಪ್ಪು ಆಗುವುದಿಲ್ಲ. ಇವೊತ್ತು ಸರ್ಕಾರದವರು ಈ ಯೋಜನೆಗಾಗಿ ವರ್ಷಕ್ಕೆ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎನ್ನುವ ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಇದರಂತೆ ಖರ್ಚು ಮಾಡುವುದಾದರೆ ಈ ಯೋಜನೆಗಳನ್ನು ಪೂರ್ತಿ ಮಾಡಬೇಕಾದರೆ 25 ವರ್ಷಗಳು ಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಉತ್ತರ ಕೊಡುವಾಗ ಹೇಳಿದ್ದಾರೆ ಕಳೆದ ಮೂರು ವರ್ಷಗಳಿಂದ ಇದಕ್ಕೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು. 1970-71ರಲ್ಲಿ ಬೆಲೆಗಳ ಪರಿಸ್ಥಿತಿ ಏನಿತ್ತು, ಅವೊತ್ತು ಏನು ವೆಚ್ಚ ಮಾಡಿದ್ದಾರೆ ಇವೊತ್ತು ಬೆಲೆಗಳ ಪರಿಸ್ಥಿತಿ ಏನಿದೆ ಇವೊತ್ತು ಏನು ಖರ್ಚು ಮಾಡಿದ್ದಾರೆ ಎಂಬುವನ್ನು ನಾವು ನೋಡಬೇಕಾಗುತ್ತದೆ. ಆ ಹೊತ್ತು ಒಂದು ಮೂಟೆ ಸಿಮೆಂಟಿಗೆ 10 ರೂಪಾಯಿಗಳು ಇತ್ತು. ಅದು ಇವೊತ್ತು 19 ರೂಪಾಯಿಗಳಾಗಿದೆ. ಆದ್ದರಿಂದ ಸರ್ಕಾರದವರು ನಿರ್ಣಯ ಮಾಡಿರುವ ಪ್ರಕಾರ ಇವೊತ್ತು ನಮ್ಮ ಯೋಜನೆಗಳ ಒಂದು ವಾರ್ಷಿಕ ಪ್ರೋಗ್ರೆಸ್ ಏನು ನಿರೀಕ್ಷಣೆ ಮಾಡುತ್ತೇವೆ, 1971ರಲ್ಲಿ ಏನು ನಿರೀಕ್ಷಣೆ ಮಾಡಬಹುದಾಗಿತ್ತು ಅದಕ್ಕಿಂತ ಹೆಚ್ಚು ಇಲ್ಲ ಎಂಬುದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಅರಿವು ಆಗಿಲ್ಲ ಎಂದು ಹೇಳುತ್ತೇನೆ. ಇವೊತ್ತು ಕೆಲವರಲ್ಲಿ ಒಂದು ಭಾವನೆ ಇದೆ. ನೀರಾವರಿ ಯೋಜನೆಗಳಿಗೆ ಹಣವನ್ನು ಖರ್ಚು ಮಾಡುವುದರಿಂದ ತಾತ್ಕಾಲಿಕವಾಗಿ ಪ್ರಯೋಜನ ಸಿಕ್ಕುವುದಿಲ್ಲ. ಅಥವಾ ಕೆಲವು ವರ್ಗದ ಜನರಿಗೆ ಅನುಕೂಲವಾಗುತ್ತದೆ, ಭೂ ಮಾಲೀಕರಿಗೆ ಭೂಹಿಡುವಳಿ ಹೊಂದಿರತಕ್ಕ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುತ್ತದೆ, ಎಂಬ ಮಾತನ್ನು ಕೆಲವರು ಮಾತನಾಡಿರತಕ್ಕದ್ದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈ ಸಭೆಯಲ್ಲಿ ನನ್ನ ಮಿತ್ರರಾದ ಶ್ರೀಮಾನ್ ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದರು. ಆ ಹಣವನ್ನು ಖರ್ಚು ಮಾಡುವುದರಿಂದ ಒಂದು ವರ್ಗದ ಜನತೆಗೆ ಅನುಕೂಲವಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಇವೊತ್ತು ನಾನು ನೊಂದ ಮನಸ್ಸಿನಿಂದ ಒಂದು ವಿಷಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಅಭ್ಯುದಯ ಏನಾದರೂ ಆಗಬೇಕು ಎಂದು ಇದ್ದರೆ ನಮ್ಮಲ್ಲಿರತಕ್ಕ ಪೂರ್ತಿ ಸಂಪನ್ಮೂಲಗಳನ್ನು ಇವೊತ್ತು ಬಳಸಿಕೊಳ್ಳುವುದಕ್ಕೆ ಪ್ರಯತ್ನ ಮಾಡದೇ ಹೋದರೆ ರಾಜ್ಯದ ಆರ್ಥಿಕ ಪ್ರಗತಿ ಯಾವುಯಾವುದೇ ಕಾರಣದಿಂದ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

(ಶ್ರೀ ಹೆಚ್. ಡಿ. ದೇವೇಗೌಡ)

ಇವತ್ತು ಯಾವುದೋ ಒಂದು ಎರಡು ಕೋಟಿ ರೂಪಾಯಿಗಳು ಬರೀ ಅನುತ್ಪಾದಕ ವೆಚ್ಚಗಳನ್ನು ಮಾಡುವುದರ ಮುಖೇನ ತಾತ್ಕಾಲಿಕವಾಗಿ ಕೆಲವು ಜನಗಳಿಗೆ ಸಮಾಧಾನ ಮಾಡುತ್ತಾ ಇದ್ದಾರೆ. ಹೀಗೆ ಪ್ರಯತ್ನ ಮಾಡಿದರೂ ಕೂಡ ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕಾದರೆ ಸಂಪನ್ಮೂಲಗಳನ್ನು ಪೂರ್ಣವಾಗಿ ಬಳಕೆ ಮಾಡುವುದರ ಮುಖಾಂತರ ಇವತ್ತು ದೇಶದಲ್ಲಿ ಜನತಾ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಆದೀತೆಂಬ ಭಾವನೆಯನ್ನು ಪ್ರತಿಯೊಬ್ಬರೂ ಮರೆಯಬಾರದು. ಉದಾಹರಣೆಗೆ ಹೇಳುವುದಾದರೆ ತುಂಗಭದ್ರಾ ಪ್ರಾಜೆಕ್ಟ್ ಹಿಂಭಾಗದಲ್ಲಿ ಹೋಗಿ ನೋಡುವುದಾದರೆ ಕೂಲಿ ಮಾಡುವ ಜನರೂ ಕೂಡ ಇವತ್ತು ಒಂದು ದಿವಸಕ್ಕೆ 10-15ರಷ್ಟು ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಆದರೆ ಅದೇ ಮರುಳು ಭೂಮಿಯಲ್ಲಿ ಕೆಲಸ ಮಾಡುವ ಕೂಲಿಗಾರರಿಗೆ ಕೇವಲ ಎರಡು ರೂಪಾಯಿಗಳೂ ಸಹ ಸಿಗುವುದಿಲ್ಲ. ಅದು ತಮಗೂ ಗೊತ್ತಿದೆ. ನನಗೂ ಗೊತ್ತಿದೆ ನೀರಾವರಿ ಹೆಚ್ಚಿಗೆ ಆದ ಕಡೆಗಳಲ್ಲಿ ಭೂ ಮಾಲೀಕರೇ ಇರಲಿ, ಚಿಕ್ಕ ಪುಟ್ಟ ಹಿಡುವಳಿದಾರರೇ ಇರಲಿ ಅಥವಾ ಒಬ್ಬ ಕಾರ್ಮಿಕನೇ ಇರಲಿ, ಅವರೆಲ್ಲರ ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದಕ್ಕೆ, ನಾಂದಿ ಆಗುವುದಕ್ಕೆ ಬದಲು ನಮ್ಮ ಆಹಾರ ಸಮಸ್ಯೆ ಈಗ ಏನಿದೆಯೋ ಅದು ಒಂದು ಭದ್ರ ಬುನಾದಿ ಆಗುತ್ತದೆಂಬ ದೃಷ್ಟಿಯಿಂದ ಮಧ್ಯಮ ನೀರಾವರಿ ಯೋಜನೆಗಳಿಗೆ ಖರ್ಚು ಮಾಡುವುದು ಅವಶ್ಯಕವಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದನ್ನು ಪೂರ್ವಭಾವಿಯಾಗಿ ತಿಳಿಸಲಿಚ್ಛಿಸುತ್ತೇನೆ. ಇವತ್ತು ಒಟ್ಟಾರೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಅನೇಕ ಬೃಹತ್ ಸಮಸ್ಯೆಗಳನ್ನು ಅವರು ಅರ್ಥಮಾಡಿಕೊಂಡೇ ಕೇಂದ್ರ ಸರ್ಕಾರದವರು ನಮಗೆ ನೆರವು ಕೊಡಬೇಕು. ಕೇಂದ್ರ ಸರ್ಕಾರದವರು ನೆರವು ಕೊಡುವುದರಲ್ಲಿ ಈಗಾಗಲೇ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಒಟ್ಟು ನಮ್ಮ ಆಯವ್ಯಯದಲ್ಲಿ ಒಂದು ಅಂಶವನ್ನು ಮಾತ್ರ ಕೊಡುತ್ತೇವೆಂದು ಅವರು ಹೇಳಿರುವುದನ್ನು ನಾನು ಕೇಳಿದ್ದೇನೆ. ಅಂದಮೇಲೆ ನಮ್ಮ ಪ್ರಾಜೆಕ್ಟ್‌ಗಳಿಗೆ ಅನುಗುಣವಾಗಿ ಕೇಂದ್ರ ಸರ್ಕಾರದವರು ಸಹಾಯ ಮಾಡುವ ಒಂದು ಪರಿಸ್ಥಿತಿಯಲ್ಲಿಲ್ಲ ಅದನ್ನು ಈಗ ಅವರು ಮಾರ್ಪಾಟು ಮಾಡಿದ್ದಾರೆ. ನಮ್ಮ ವಾರ್ಷಿಕ ಯೋಜನೆಯನ್ನು ನಿರ್ಣಯ ಮಾಡುವಾಗ ಈ ಯೋಜನೆಗಳ ವೆಚ್ಚವನ್ನು ಪರಿಗಣನೆಗೆ ತೆಗೆದುಕೊಂಡು ಕೇವಲ ಒಂದು ಅಂಶವನ್ನು ಕೊಡುವುದರಲ್ಲಿಯೂ ಸಹ ಕೇಂದ್ರ ಸರ್ಕಾರದವರು ತನ್ನ ಒಂದು ನೀತಿಯನ್ನು ಮಾರ್ಪಾಡು ಮಾಡಿಕೊಂಡಿದೆಯೆಂಬುದಾಗಿ ನಾನು ಕೇಳಿದ್ದೇನೆ, ಇದರಿಂದ ಇವತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ಯೋಜನೆಗಳನ್ನು ತ್ವರಿತವಾಗಿ ಮುಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಸಭೆಯ

ಮೂಲಕ ಕೇಂದ್ರ ಸರ್ಕಾರಕ್ಕೂ ಕೂಡ ಒತ್ತಾಯ ಮಾಡಿ ಹೇಳಿದ್ದೇವೆ. ಅದರ ಬಗ್ಗೆ ಒಂದು ನಿರ್ಣಯವನ್ನೂ ಸಹ ಪಾಸ್ ಮಾಡಿ ಕಳುಹಿಸಿದ್ದೇವೆ. ಅದರಲ್ಲೂ ಕೃಷ್ಣಾ ಯೋಜನೆಗೆ ವಿಶ್ವ ಬ್ಯಾಂಕಿನಿಂದ ಸಾಕಷ್ಟು ಹಣವನ್ನು ದೊರಕಿಸಿ ಕೊಡುವುದಕ್ಕೆ ತಕ್ಕ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿದ್ದೇವೆ. ಇವತ್ತು ಒಂದು ದುರ್ದೈವ ಸಂಗತಿ. ಅದೇನೆಂದರೆ, ಕೇಂದ್ರ ಸರ್ಕಾರದವರು ಇದರ ಬಗ್ಗೆ ಯಾವುದೇ ರೀತಿಯಾದಂಥ ಸಹಾಯ ಮಾಡುವುದಕ್ಕೆ ನಮ್ಮ ಅಧಿಕಾರಿಗಳ ಜೊತೆಯಲ್ಲಿ ವಿಷಯಗಳನ್ನು ಅರಿತುಕೊಂಡು ಸೂಕ್ತ ಸಹಾಯವನ್ನು ಮಾಡುವುದಕ್ಕೆ ತಯಾರಾಗಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಇಲ್ಲಿಗೆ ಬಂದಾಗ ರಾಜ್ಯ ಸರ್ಕಾರದವರು ಹೇಳಿದ್ದಾರೆ. ನಾವೂ ಸಹ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದೇವೆ. ಅವರೂ ಸಹಾಯವನ್ನು ಒದಗಿಸುತ್ತೇವೆಂದು ನಮ್ಮ ರಾಜ್ಯ ಸರ್ಕಾರಕ್ಕೆ ವಾಗ್ದಾನ ಮಾಡಿದ್ದರೂ ಇವತ್ತು ನಾವು ನಿರೀಕ್ಷಿಸಿದ ಮಟ್ಟದಲ್ಲಿ ಹಣ ದೊರೆಯದ ಈ ಯೋಜನೆಗಳು ಈಗ ಕುಂಠಿತವಾಗುವುದಕ್ಕೆ ಅವಕಾಶವಿದೆ. ಮಾನ್ಯ ಮುಖ್ಯ ಮಂತ್ರಿಗಳೂ ಸಹ ಇದು ಬಹಳ ಮುಖ್ಯವಾದಂಥ ಯೋಜನೆ, ಇದಕ್ಕಾಗಿ ವರ್ಲ್ಡ್ ಬ್ಯಾಂಕಿನಿಂದ ಸಾಕಷ್ಟು ಹಣವನ್ನು ತೆಗೆದುಕೊಂಡು ಬರುತ್ತೇನೆಂದು ಹೇಳಿದರು. ಅವರು ಅದಕ್ಕೆ ಏನು ಪ್ರಯತ್ನ ಮಾಡಿದರೋ ಅದರಿಂದ ಯಾವ ಫಲವೂ ಸಹ ಇದುವರೆಗೆ ದೊರೆತಿಲ್ಲವೆಂದು ನನ್ನ ಅಭಿಪ್ರಾಯ. ಇವತ್ತು ಒಂದು ವಿಷಯವನ್ನು ಕೇಂದ್ರ ಸರ್ಕಾರ ಅರ್ಥಮಾಡಿಕೊಂಡದು. ಕರ್ನಾಟಕ ರಾಜ್ಯವನ್ನು ಆಂಧ್ರ ಪ್ರದೇಶಕ್ಕೇ ಹೋಲಿಸಿಕೊಳ್ಳಲಿ, ತಮಿಳು ನಾಡಿಗೇ ಹೋಲಿಸಿಕೊಳ್ಳಲಿ, ಇವತ್ತು ನಮ್ಮ ನದಿಗಳಲ್ಲಿ ನೀರನ್ನು ಬಳಕೆ ಮಾಡುವುದರಲ್ಲಿ ನಾವು ಸಾಕಷ್ಟು ಶಕ್ತರಾಗಲಿಲ್ಲವೆಂದು ಕೇಂದ್ರ ಸರ್ಕಾರ ಅರಿಯಬೇಕಾಗಿದೆ. ಅದಕ್ಕೆ ಯಾವ ದೋಷವನ್ನೂ ಕಟ್ಟುವುದಕ್ಕೆ ಹೋಗುವುದಿಲ್ಲ. ಈ ಸರ್ಕಾರ ಇದ್ದರೂ ಆಗುವುದಿಲ್ಲ. ಇನ್ನೊಂದು ಸರ್ಕಾರ ಬಂದರೂ ಆಗುವುದಿಲ್ಲ. ಇದಕ್ಕೆ ಖರ್ಚು ಮಾಡುವ ಹಣ ಬಹಳ ಜಾಸ್ತಿ ಆಗುತ್ತದೆ. ಒಂದು ಸಾವಿರ ಕೋಟಿ ರೂಪಾಯಿಗಳನ್ನು ಇದರ ಮೇಲೆ ವೆಚ್ಚ ಮಾಡುವುದಕ್ಕೆ ಅಷ್ಟು ಸುಲಭ ಸಾಧ್ಯವಲ್ಲ. ನಮ್ಮ ಸಂಪನ್ಮೂಲಗಳಿಂದಲೇ ಈ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದರೆ ಅದು ಬಹಳ ಕಷ್ಟವಾಗುತ್ತದೆ. ನಾವು ಕಳೆದ ನಾಲ್ಕಾರು ವರ್ಷಗಳಿಂದಲೂ ಅದರ ಬಗ್ಗೆ ತೀವ್ರವಾದಂಥ ಆಸಕ್ತಿಯನ್ನು ವಹಿಸದೇ ಇರುವುದಕ್ಕಾಗಿ ಈ ಸಮಸ್ಯೆಗಳು ಬಗೆಹರಿಸುವುದಕ್ಕೆ ಸಾಕಷ್ಟು ಶಕ್ತರಾಗಿಲ್ಲವೆಂದು ಮನಗಂಡು ಕೇಂದ್ರ ಸರ್ಕಾರದವರು ವಿಶೇಷವಾದಂಥ ಹಣವನ್ನು ಕೊಡುವುದಕ್ಕೆ ಪ್ರಯತ್ನ ಪಡಬಹುದಾಗಿತ್ತು. ಕಳೆದ ಸಾರಿ ಬಜೆಟ್ ಮೇಲೆ ಮಾತನಾಡುವ ಕಾಲದಲ್ಲಿ ಕೆಲವು ರಾಜ್ಯಗಳಿಗೆ ವಿಶೇಷವಾದಂಥ ಸಹಾಯ ಕೊಟ್ಟಿರುವುದನ್ನು ಪ್ರಸ್ತಾಪ ಮಾಡಿದ್ದೇವೆಂದು ಮಾನ್ಯ ಶ್ರೀ ಘೋರ್ಪಡೆಯವರು ಹೇಳಿದರು. ಕೇಂದ್ರದಿಂದ ಸ್ಪೆಷಲ್ ಅಸಿಸ್ಟೆನ್ಸ್

(ಶ್ರೀ ಹೆಚ್. ಡಿ. ದೇವೇಗೌಡ)

ಕೊಟ್ಟಿದ್ದಾರೆ. ಕೆಲವು ಕಡೆಗಳಲ್ಲಿ ಅದನ್ನು ಎಲ್ಲಾ ರಾಜ್ಯಗಳಿಗೂ ಅನ್ವಯ ಮಾಡಿದ್ದಾರೆ ಆದರೆ ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನೂ ಸಹ ನಾನು ನೋಡಿದ್ದೇನೆ. ಅದರ ಬಗ್ಗೆ ಕ್ಲಾರಿಫಿಕೇಷನ್ನಿಗಾಗಿ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಅದು ಬಂದ ಮೇಲೆ ಅದರ ಸಾರಾಂಶವನ್ನು ಕೊಡುತ್ತೇವೆಂದು ಹೇಳಿದರು, ಆ ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಕೆಲವು ರಾಜ್ಯಗಳಿಗೆ ವಿಶೇಷ ಧನ ಸಹಾಯವನ್ನು ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ನೀರಾವರಿ ಯೋಜನೆಗಳನ್ನು ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನು ಪೂರೈಕೆ ಮಾಡುವುದಕ್ಕೆ ರಾಜ್ಯ ಸರ್ಕಾರದ ಸಂಪನ್ಮೂಲಗಳ ಮೇಲೆ ಅವಲಂಬನ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದನ್ನು ಕೇಂದ್ರ ಸರ್ಕಾರದವರು ತಿಳಿದಿದ್ದರೂ ಅವರು ಸಹಾನುಭೂತಿ ತೋರಿಸದೇ ಇರುವುದು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ನಾನು ಇದರ ಬಗ್ಗೆ ಹಿಂದೆ ಬಹಳ ಕಟುವಾಗಿ ಮಾತನಾಡಿದ್ದೇನೆ. ಬಹುಶಃ ಲೋಕಸಭಾ ಸದಸ್ಯರೂ ಕೂಡ ಈ ಒಂದು ದಿಸೆಯಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕಾಗುತ್ತದೆ. ಆ ರೀತಿಯಾಗಿ ತರದೇ ಹೋದರೆ ಕೇಂದ್ರ ಸರ್ಕಾರದವರನ್ನು ಇವರಿಗೆ ಒಲಿಸುವುದಕ್ಕೆ ಸಾಧ್ಯವಾಗಲಿಲ್ಲವೆಂದು ಗೊತ್ತಾಗುತ್ತದೆ. ಯಾವುದೇ ರಾಜಕೀಯ ಪಕ್ಷವಿರಲಿ, ಚುನಾವಣೆಗಳು ಬಂದಾಗ ಪಕ್ಷದ ಪರವಾಗಿ ಹೋರಾಡುವುದು ಸ್ವಾಭಾವಿಕ ಶ್ರೀಮತಿ ಇಂದಿರಾ ಗಾಂಧಿಯವರು 1969-70ರಲ್ಲಿ ಸುಮಾರು 30-32 ಕೋಟಿ ರೂಪಾಯಿಗಳನ್ನು ವಿಶೇಷ ಧನಸಹಾಯವನ್ನು ಪಡೆದ ಒಂದು ಸಂದರ್ಭದಲ್ಲಿ ಡಿ. ಎಂ. ಕೆ. ಪಕ್ಷದವರೇ ಆ ವಿಚಾರವನ್ನು ಎತ್ತಿದರು. ಈ ತರಹದಲ್ಲಿ ರಾಜಕೀಯ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ಸಹಾಯ ಮಾಡುತ್ತಿದೆ. ಆದಕಾರಣ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಸಮಸ್ಯೆಯ ಗಾತ್ರವನ್ನು ಅರಿತುಕೊಂಡು ಇಂತಹ ಬೃಹತ್ ನೀರಾವರಿ ಯೋಜನೆಗಳನ್ನು ಪೂರೈಸುವುದಕ್ಕೆ ವಿಶೇಷ ಧನ ಸಹಾಯವನ್ನು ಕೊಡಬೇಕಾಗಿದೆ. ಆ ಬಗ್ಗೆ ಒಂದು ನಿರ್ಣಯ ಮಾಡಿದ್ದರೆ ಬಹಳ ಒಳಿತು ಆಗುತ್ತಿತ್ತು ಎಂಬುದಾಗಿ ಹೇಳುತ್ತೇನೆ. ಕರ್ನಾಟಕ ಜನ ಬಹಳ ಸೌಮ್ಯ ಜನರು. ಆದರೆ ನಮ್ಮ ಒಳ್ಳೆಯತನವನ್ನು ಅಪಾರ್ಥದಲ್ಲಿ ಕಲ್ಪನೆ ಮಾಡಬಾರದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೃಷ್ಣಾ ಯೋಜನೆಯ ಬಗ್ಗೆ ನಮಗೆ ಕೊಡುವ ನೀರನ್ನು ಬಳಕೆಮಾಡುವುದಕ್ಕೆ ಶಕ್ತಿ ಇಲ್ಲ. ಸಾಮರ್ಥ್ಯವಿಲ್ಲ. ಆದಕಾರಣ ಕೇಂದ್ರ ಸರ್ಕಾರದ ಕಡೆ ಇವರು ಒತ್ತಾಯವನ್ನು ಹೆಚ್ಚಿಗೆ ಹಾಕಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ. ಒಂದುವೇಳೆ ಕೇಂದ್ರ ಸರ್ಕಾರದವರು ಸಾಕಷ್ಟು ಧನಸಹಾಯವನ್ನು ಕೊಡುವುದಕ್ಕ ತಯಾರು ಇಲ್ಲದಿದ್ದರೆ ನಾವೇ ಷೆಡ್ಯೂಲ್ಡ್

ಬ್ಯಾಂಕುಗಳಿಂದ ಹಣ ಸಹಾಯ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಅದರ ಬಗ್ಗೆ ಕೇಂದ್ರ ಸರ್ಕಾರದವರಲ್ಲೂ ಆದೇಶವನ್ನು ಕೊಡಬೇಕು. ಅದನ್ನು ಕೇಂದ್ರ ಸರ್ಕಾರದ ಮುಂದಿಡಬೇಕು. ಇವತ್ತು ನ್ಯಾಷನಲೈಜ್ಡ್ ಬ್ಯಾಂಕುಗಳಿಂದ ಸಹಾಯ ಪಡೆಯುವುದಕ್ಕೆ ರಾಜ್ಯ ಸರ್ಕಾರಕ್ಕೆ ಅನುಮತಿ ಕೊಟ್ಟರೆ, ಆ ಸಾಲವನ್ನು ಎತ್ತಿಯಾದರೂ ಈ ಯೋಜನೆಗಳನ್ನು ಮುಗಿಸಬಹುದು. ನಾವು ಈಗ ವರ್ಲ್ಡ್ ಬ್ಯಾಂಕಿನಿಂದಲೂ ಸಹ ಸಹಾಯವನ್ನು ದೊರಕಿಸಿಕೊಳ್ಳುತ್ತಾ ಇಲ್ಲ ಕೇಂದ್ರ ಸರ್ಕಾರದವರೂ ಸಹ ವಿಶೇಷ ಧನಸಹಾಯವನ್ನು ಕೊಡುವುದಕ್ಕೆ ಮುಂದೆ ಬರುತ್ತಾ ಇಲ್ಲ. ಈ ಸಂದರ್ಭದಲ್ಲಿ ಇನ್ನೆಷ್ಟು ಕಾಲ ಈ ಯೋಜನೆಗಳನ್ನು ಮುಗಿಸುವುದಕ್ಕೆ ಹಿಡಿಯುತ್ತದೋ ಗೊತ್ತಿಲ್ಲ. ಇಂತಹ ಯೋಜನೆಗಳನ್ನು ಮಾಡಿದ ಮೇಲೆ ಒಂದಲ್ಲ, ಒಂದು ರೀತಿಯಲ್ಲಿ ಅವನ್ನು ಪೂರ್ತಿಯಾಗಿ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ನಿಮಗೆ ಪೂರ್ವಭಾವಿಯಾಗಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೃಷ್ಣಾ ಟ್ರಿಬ್ಯೂನಲ್ ಬಗ್ಗೆ ಒಂದು ನಿರ್ಣಯಮಾಡಿದ್ದಾರೆ. ಬಹುಶಃ ಆ ವಿಷಯವನ್ನು ನಾನು ಇಲ್ಲಿ ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಇದರ ಬಗ್ಗೆ ಸರ್ಕಾರ ಹಾಗೂ ಈ ಸಭೆ ತಂದಂಥ ನಿಲುವನ್ನು ಒಪ್ಪಿಕೊಂಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ಈ ಒಂದು ಕೃಷ್ಣಾ ಟ್ರಿಬ್ಯೂನಲ್‌ನಲ್ಲಿ ನ್ಯಾಯ ದೊರೆಯುವುದಿಲ್ಲವೆಂಬ ನಿಲುವನ್ನು ತೆಗೆದುಕೊಂಡರೆ, ನಮ್ಮ ಮುಖ್ಯ ಮಂತ್ರಿಗಳೇ ಅಲ್ಲ, ನಮ್ಮ ಪ್ರತಿನಿಧಿಗಳು ಏನು ಟ್ರಿಬ್ಯೂನಲ್ಲಿದ್ದರೂ ಏಕೀಭಾವವನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು. ಸರ್ಕಾರದವರು ಈ ವಿಚಾರವನ್ನು ಹಿಂದೆ ಎತ್ತಿರಬಹುದು. ಹಿಂದೆ ಇದ್ದಂಥ ಸರ್ಕಾರದವರು ಈ ದೇಶವನ್ನು ಹೆಚ್ಚು ಕಷ್ಟಪಟ್ಟು ಕಟ್ಟಿರಬಹುದು. ಆದರೆ ಅದರ ಬಗ್ಗೆ ಬಂದಂಥ ನಿರ್ಣಯವನ್ನೂ ಸಹ ನಾವು ಹಿಂದೆ ಎಷ್ಟೋ ಸಾರಿ ವಿಚಾರ ಮಾಡಿದ್ದೇವೆ.

ಪುನಃ ಪಂಚಾಯತಿ ಮುಂದೆ ಹೋಗಬೇಕೆಂದು ಏನು ನಿರ್ಣಯ ಮಾಡಿದ್ದಾರೆ ಇದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕೇಂದ್ರ ಸರ್ಕಾರ ಸೂಚನೆ ಕೊಟ್ಟಿರಬಹುದು ಆದರೆ ಈಗಲಾದರೂ ಕರ್ನಾಟಕದ ಜನತೆಯ ಒಂದು ಅಸಂತೋಷ ಮತ್ತು ಅಸಂತೃಪ್ತಿ ಇದೆ ಅನ್ಯಾಯದ ಬಗ್ಗೆ ಅದನ್ನು ಮನಗಂಡು ಪಂಚಾಯತಿ ಸದಸ್ಯರು ಏನು ಇದ್ದಾರೆ ಅವರುಗಳು ತಮ್ಮ ನಿಲುವನ್ನು ಮಾರ್ಪಾಡು ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಈಗ ಇದರಲ್ಲಿರುವ ಸಮಸ್ಯೆಯ ಗಾಂಭೀರ್ಯವನ್ನು ಅವರು ತಿಳಿದು ನಿರ್ಣಯ ಮಾಡಬೇಕಾಗುತ್ತದೆ. ಇದರ ಪ್ರತಿಕ್ರಿಯೆ ಏನೇ ಇರಲಿ ಇವೊತ್ತು ಇದರ ಬಗ್ಗೆ ಕ್ಲಾರಿಫಿಕೇಷನ್ ಮುಖಾಂತರ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ಪಂಚಾಯತಿಯವರು ಅದನ್ನು ಸರಿಪಡಿಸುವುದಕ್ಕೆ ಅನುವು ಮಾಡಿ ಕೊಡಬೇಕೆಂದು ಹೇಳುತ್ತೇನೆ. ಕರ್ನಾಟಕದ ಬಹುಭಾಗ ಜನ ಇದರ ಬಗ್ಗೆ ಬಹಳ ಅಸಮಾಧಾನ ಹೊಂದಿದ್ದಾರೆ. ಅದನ್ನು

(ಶ್ರೀ ಹೆಚ್ ಡಿ. ದೇವೇಗೌಡ)

ಕೇಂದ್ರವು ಅರಿತಿದೆ. ಮತ್ತೊಂದು ವಿಷಯ ಕಾವೇರಿ ಕಣಿವೆಗಳ ಬಗ್ಗೆ ತಮಿಳು ನಾಡು ತೆಗೆದುಕೊಂಡಿರತಕ್ಕಂಥಾದ್ದು ಬಹಳ ಸುಲಭವಾಗಿ ಬಗೆಹರಿಸತಕ್ಕಂಥಾದ್ದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಸೂಚನೆ ಕೊಡಲಿಕ್ಕೆ ಬಯಸುತ್ತೇನೆ ಇನ್ನು ಮುಂದ ಕರ್ನಾಟಕದ ಜನತೆಯ ಪರವಾಗಿ ಯಾವುದೇ ಔದಾರ್ಯವನ್ನು ತೋರಿಸ ಬಾರದು ಎಂದು ಅದರಿಂದ ನಮ್ಮ ಕರ್ನಾಟಕಕ್ಕೆ ಪೆಟ್ಟಾಗುತ್ತದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಕರುಣಾನಿಧಿಯವರು ಎಲ್ಲಾ ನೀರನ್ನು ಬಿಡ ಬೇಕೆಂದು ಹೇಳುತ್ತಿದ್ದಾರೆ. ನಾವು ಏನು ಮಾನವೀಯತೆ ದೃಷ್ಟಿಯಿಂದ ಅವರಿಗೆ ನೀರನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಇನ್ನು ಕಬಿನಿಯಲ್ಲಿ 19 ಟಿ ಎಂ ಸಿ ನೀರಿನ ಸರ್ವ ಹಕ್ಕು ಇದ್ದರೂ ಕೂಡ ಕೇವಲ 13 ಟಿ ಎಂ ಸಿ ಉಪಯೋಗಿಸಿ ಇನ್ನು 5 ಟಿ ಎಂ ಸಿ ನೀರನ್ನು ತಮಿಳುನಾಡಿನವರು ಬೆಳೆ ಒಣಗಿ ಹೋಗುತ್ತದೆಂದು ಹೇಳಿ ಕೂಗು ಹರಿಸಿದ್ದಕ್ಕೆ ಅದಕ್ಕೆ ಮನವೀಯತೆಯಿಂದ ನೀರನ್ನು ಕೊಟ್ಟೆವು. ಈಗಲೂ ಅದೇ ರೀತಿ ಕೇಂದ್ರಕ್ಕೆ ಒತ್ತಾಯ ತಂದಿದ್ದಾರೆ. ಒಂದೊಂದು ಸಾರಿ ತಾವು ತೆಗೆದುಕೊಳ್ಳುವ ನಿರ್ಣಯದಿಂದ ನಮ್ಮ ರಾಜ್ಯ ಇಕ್ಕಟ್ಟಿಗೆ ಸಿಕ್ಕಬೇಕಾಗುತ್ತದೆ. ಕೇಂದ್ರದವರು ಹೇಳಬಹುದು. ಕರ್ನಾಟಕದಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ಇದ್ದ ಸಂದರ್ಭದಲ್ಲಿ ಕೊಯ್ನಾದಿಂದ 5 ಟಿ ಎಂ ಸಿ ನೀರಿಗೆ ಸುಮಾರು 15 ಲಕ್ಷ ರೂಪಾಯಿ ವಿದ್ಯುಚ್ಛಕ್ತಿಯನ್ನು ಕೊಟ್ಟು ಆದರ ನೀರನ್ನು ಪಡೆಯ ಬೇಕಾಯಿತು. ಕೇಂದ್ರ ಸರ್ಕಾರ ಮಹಾರಾಷ್ಟ್ರ ಸರ್ಕಾರಕ್ಕೆ ಹೇಳಿ ಪುಕ್ಕಟೆ ನೀರನ್ನು ಕೊಡಿ ಎಂದು ಏಕೆ ಹೇಳಲಿಲ್ಲ ? ನಾವು ತಮಿಳುನಾಡಿಗೆ ಮಾನವೀಯತೆ ದೃಷ್ಟಿಯಿಂದ ನೀರನ್ನು ಕೊಟ್ಟೆವು. ನಮ್ಮ ಕರ್ನಾಟಕ ಜನತೆಯ ಒಳ್ಳೆಯ ಆದರ್ಶಗಳನ್ನು ಅವರು ಪರೀಕ್ಷೆ ಮಾಡುವುದಕ್ಕೆ ಈಗ ಹೊರಟಿದ್ದಾರೆ. ಶ್ರೀಮಾನ್ ಕರುಣಾನಿಧಿಯವರು ನಮ್ಮ ಒಳ್ಳೆಯತನವನ್ನು ದುರುಪಯೋಗ ಪಡಿಸಿಕೊಳ್ಳುವುದಾದರೆ ಇದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡು ಹೋರಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಇದರ ಜೊತೆಗೆ ಈವೊತ್ತು ಕೇಂದ್ರ ಸರ್ಕಾರವು ಕೂಡ ಅರಿವು ಮಾಡಿಕೊಳ್ಳಬೇಕಾಗುತ್ತದೆ. ಇನ್ನು ಕಾವೇರಿ ಜಲಾನಯನದಲ್ಲಿ ನಾವು ಬಹಳ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. 29 ಲಕ್ಷ ನೀರಾ ವರಿ ಮಾಡಿದ್ದರೆ ತಮಿಳುನಾಡು 6 ಲಕ್ಷ ಎಕರೆ ನೀರಾವರಿ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ಕೂಡ ಪೂರ್ಣ ಡೆವಲಪ್ ಆಗಿದೆಯೋ ಎನ್ನುವುದು ಅನು ಮಾನ ಇದೆ. ಇವೊತ್ತು ಕಾವೇರಿ ಜಲಾನಯನದಲ್ಲಿ ಅರ್ಧ ಬೇಕಾದರೂ ನಮ್ಮಲ್ಲಿ ಒದಗುತ್ತದೆ, ಇದು ನಮ್ಮ ಕರ್ನಾಟಕದ ದುರ್ದೈವ. ತಮಿಳುನಾಡು ತೆಗೆದುಕೊಂಡಿರತಕ್ಕಂಥ ನಿಲುವು ಏನು ಅದಕ್ಕೆ ನಾವು ವಿಷಾದ ಪಡಬೇಕಾಗು ತ್ತದೆ ಎಲ್ಲರಿಗೂ ಆಸೆ ಇರುತ್ತದೆ, ಆದರೆ ಅದು ದುರಾಸೆಯಾಗುವುದು ಒಳ್ಳೆಯದಲ್ಲ. ನಾನು ನಮ್ಮ ರಾಜ್ಯ ಸರ್ಕಾರಕ್ಕೆ ಇದನ್ನು ಸೂಚಿಸುತ್ತೇನೆ,

ಯಾವುದೇ ಕಾರಣದಿಂದಲೂ ಸರ್ಕಾರಕ್ಕೆ ಸಹಕಾರ ಕೊಡುವುದರಲ್ಲಿ ನಾವು ಹಿಂದೆ ಸರಿಯುವುದಿಲ್ಲವೆಂದು ಹೇಳಲಿಚ್ಛೆಪಡುತ್ತೇನೆ. ಒಂದು ಇಂಚು ಹಿಂದೆ ಹೋಗ ಬೇಕಾದ ಅವಶ್ಯಕತೆಯಿಲ್ಲ. ಇದರಲ್ಲಿ ಯಾವ ಪರಿಸ್ಥಿತಿಗೆ ಬೇಕಾದರೂ ಹೋಗೋಣ ಎಂದು ತಿಳಿಸಿ ಕರ್ನಾಟಕ ರಾಜ್ಯ ಕಾವೇರಿ ಕಣಿವೆಗಳನ್ನು ಮುಗಿಸ ತಕ್ಕಂಥಾದ್ದರಲ್ಲಿ ಮತ್ತು ಡ್ಯಾಮ್‌ಗಳನ್ನು ಕಟ್ಟುವ ಕೆಲಸದಲ್ಲಿ ಬಹಳ ವೇಗದಲ್ಲಿ ಕೆಲಸ ಮಾಡಬೇಕೆಂದು ಹೇಳಿ ಯಾವ ಕಾರಣದಿಂದಲೂ ಕಬಿನಿ ನೀರು, ಹೇಮಾ ವತಿ ನೀರು ಮತ್ತು ಮಧ್ಯಮವರ್ಗದ ಪ್ರಾಜೆಕ್ಟ್ ಏನು ಇವೆ, ತಾರಕ ಇನ್ನು ಗುಂಡ್ಲುಪೇಟೆಯಲ್ಲಿ 2 ಕೋಟಿ ರೂಪಾಯಿ ಪ್ರಾಜೆಕ್ಟ್‌ಗೆ ಶಂಕುಸ್ಥಾಪನೆ ಮಾಡಿ ದ್ದಾರೆ, ಇನ್ನು ಹಲವಾರು ಮಧ್ಯಮ ನೀರಾವರಿ ಯೋಜನೆಗಳು ವೇಗದಲ್ಲಿ ನಡೆದರೆ ಒಳ್ಳೆಯದು. ಇನ್ನು ಮುಂದೆ ಯಾವ ರೀತಿಯಾದ ರಿಯಾಯಿತಿ ತೋರಿಸ ಕೂಡದೆಂದು ಹೇಳುತ್ತೇನೆ ತೋರಿಸಬೇಕಾದ ಅವಶ್ಯಕತೆಯಿಲ್ಲ. ನಾನು ಇದನ್ನು ಬಹಳ ಕಠೋರವಾದ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ. ಇವೊತ್ತು ನಮ್ಮ ರಾಜ್ಯದಲ್ಲಿ ಎಷ್ಟು ನೀರನ್ನು ಒದಗಿಸುತ್ತಿದ್ದಾರೆ ತಮಿಳುನಾಡಿನಲ್ಲಿ ಎಷ್ಟು ನೀರನ್ನು ಒದಗಿಸುತ್ತಿದ್ದಾರೆ, ಕೇರಳದಲ್ಲಿ ಮತ್ತು ಕರ್ನಾಟಕದಲ್ಲಿ ಪ್ರೊಪೋಷ ನೇಟ್ ಆಗಿ ನೋಡಬೇಕು. ಇದಕ್ಕೆ ರಾಜಕೀಯ ಮಾಡಬೇಕಾಗುತ್ತದೆ. ಎಷ್ಟು ಏರಿಯಾ ಡೆವಲಪ್ ಮಾಡಿದ್ದಾರೆ. ಸುಮಾರು 6-7 ಲಕ್ಷ ಎಕರೆ ನೀರಾವರಿ ಮಾಡಿದರೆ ನಾವು ಅದಕ್ಕೆ ಜವಾಬ್ದಾರರಲ್ಲ. ಅದರ ಹೊಣೆಗಾರಿಕೆಯನ್ನು ನಾವು ಹೊರತಕ್ಕದ್ದಲ್ಲ. ಇದಕ್ಕೆ ಪಂಚಾಯತಿಯವರೇ ಒದ್ದರಾಗಿರಬೇಕೆಂದು ತಿಳಿಸ ಬೇಕಾಗುತ್ತದೆ. ಇನ್ನು ಡ್ರೈವೆಟ್ ಬಗ್ಗೆ ಕರುಣಾನಿಧಿಯವರು ಹೇಳಬೇಕಾಗು ತ್ತದೆ. ನಮ್ಮ ರಾಜ್ಯಕ್ಕೆ ಬರಬೇಕಾದ್ದು ಬರಲೇಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಲು ಇಚ್ಛಿಸುತ್ತೇನೆ. ಮಾನ್ಯ ಅಧ್ಯಕ್ಷಣಿಯವರೇ ಮತ್ತೊಂದು ವಿಚಾರ ನಮಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬೇಕಾಗಿಲ್ಲವೆಂದು ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗಲೇ ಹೇಳಿದೆ.

3-00 P. M.

ಇದನ್ನು ಕೂಡ ಈಗಿನ ಮುಖ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಹಣಕಾಸಿನ ಪರಿಸ್ಥಿತಿ ಬಿಕ್ಕಟ್ಟಿನಲ್ಲಿರತಕ್ಕಂಥ ಕಾಲದಲ್ಲಿ ಆಡಹಾಕ್ ಅಲಾಟ್‌ಮೆಂಟ್ ಮೂಲಕವಾದರೂ ಕೇಂದ್ರ ಸರ್ಕಾರದವರು ಕೊಡುವುದಕ್ಕೆ ಪ್ರಾಮಾಣಿಕವಾದಂಥ ಒಂದು ಮಮತೆ ಕರ್ನಾಟಕದ ಮೇಲಿದ್ದರೆ ಈ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡುವುದಕ್ಕೆ ನಮಗೆ ಅವರಿಂದ ಸಹಾಯ ದೊರೆಯುತ್ತಿತ್ತು. ಅದನ್ನು ಕೊಡಲಿಲ್ಲ. ಕೇಂದ್ರ ಸರ್ಕಾರ ಪ್ರಾಮಾಣಿಕವಾಗಿ ಈ ದಿಶೆಯಲ್ಲಿ ಕರ್ನಾಟಕಕ್ಕೆ ಒಂದು ಸಹಾಯ ಮಾಡಬೇಕು ಎನ್ನತಕ್ಕಂಥದ್ದು ನಿಜವಾಗಿಯೂ ಇಲ್ಲ ಎಂದು ಹೇಳಿದರೆ ಬಹುಶಃ ಮುಖ್ಯ ಮಂತ್ರಿಗಳು ಅದನ್ನು

(ಶ್ರೀ ಹೆಚ್. ಡಿ. ದೇವೇಗೌಡ)

ತಪ್ಪಾಗಿ ತಿಳಿದುಕೊಳ್ಳಬೇಕಾದ್ದು ಇಲ್ಲ. ಇದನ್ನು ನಾನು ನೊಂದ ಹೃದಯದಿಂದ ಹೇಳುತ್ತಿದ್ದೇನೆ. ಕೇಂದ್ರ ಸರಕಾರದವರು ಕೇವಲ ಒಂದು ರಾಜಕೀಯದ ಸನ್ನಿವೇಶ ಬಂದಾಗ ಮಾತ್ರ ಕರ್ನಾಟಕದ ಬಗ್ಗೆ ಒಳ್ಳೆಯ ಮಾತನಾಡತಕ್ಕಂಥದ್ದು ಕರ್ನಾಟಕದ ಸನ್ನಿವೇಶಗಳನ್ನು ಅರ್ಥಮಾಡಿಕೊಂಡು ಸಹಾಯ ಮಾಡತಕ್ಕಂಥದ್ದನ್ನು ಅವರು ಯಾವುದೇ ಸಂದರ್ಭದಲ್ಲಿ ಅವರು ರಿಯಾಯಿತಿಯನ್ನು ತೋರಿಸಿಲ್ಲವೆಂದು ಹೇಳಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿ ಆಗಲೀ ಅವರು ಒಂದು ರಿಯಾಯಿತಿಯನ್ನೂ ತೋರಿಸಿಲ್ಲ. ಕೃಷ್ಣಾ ಪ್ರಾಜೆಕ್ಟ್ ಒಂದೇ ಅಲ್ಲ, ಇವೊತ್ತು ಕಾವೇರಿ ಬೇಸಿನ್ ಪರಿಸ್ಥಿತಿಯನ್ನು ನೋಡಿದಾಗ ಸುಮಾರು 15 ವರ್ಷಗಳಿಂದ ಈ ಪ್ರಾಜೆಕ್ಟ್ ನೆನೆಗುದಿಗೆ ಬಿದ್ದಿಲ್ಲವೇ? ಟೆಕ್ನಿಕಲ್ ಕ್ಲಿಯರೆನ್ಸ್ ಸಹ ಹೋಗಿ 12-13 ವರ್ಷಗಳಿಗಿಂತ ಹೆಚ್ಚಾಗಿದೆ ಈ ಒಂದು ಚಿಕ್ಕ ಪ್ರಮಾಣದ ಸ್ಮಾಲ್ ಕಪ್ಯಾಸಿಟಿಯಲ್ಲಿರತಕ್ಕಂಥ ಪ್ರಾಜೆಕ್ಟ್‌ಗೆ ಕೂಡ ಕ್ಲಿಯರೆನ್ಸ್ ಸಿಕ್ಕಿಲ್ಲ. ಆದುದರಿಂದ ಕೇಂದ್ರ ಸರಕಾರದವರು ಒಂದು ಆಡಹಾಕ್ ಅಲಾಟ್‌ಮೆಂಟ್‌ನ್ನಾದರೂ ಮಾಡಿ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ತಾವು ಒತ್ತಾಯ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ತಿಳಿಸುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷಣಿಯವರೇ ಇವತ್ತು ಕಾವೇರಿ ಬೇಸಿನ್‌ಗೆ 11,12 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆಂದು ಮುಖ್ಯ ಮಂತ್ರಿಗಳು ಹೇಳಿದರು. ಅದರಲ್ಲಿ ಸುಮಾರು ಐದು-ಐದೂವರೆ ಕೋಟಿ ರೂಪಾಯಿಗಳನ್ನು ಹೇಮಾವತಿಗೆ ಕೊಟ್ಟಿದ್ದೇವೆಂದು ಹೇಳಿದಿರಿ ಅದಕ್ಕೆ ಒಂದು ಮಾತನ್ನು ಹೇಳುತ್ತೇನೆ. 1976ನೇ ಜೂನ್‌ನಲ್ಲಿ ಅಲ್ಲಿ ನೀರನ್ನು ಶೇಖರಣೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅಲ್ಲಿ ನೀರು ನಿಲ್ಲತಕ್ಕಂಥದಕ್ಕೆ ಸಾಧ್ಯವಿಲ್ಲ. ಅಲ್ಲಿ ನೀರನ್ನು ಹಂತ ಹಂತವಾಗಿ ಶೇಖರಣೆ ಮಾಡುವುದಕ್ಕೆ ಸಾಧ್ಯ. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳವರು ಪೂರ್ಣ ವಿವರಣೆಯನ್ನು ತರಿಸಿಕೊಂಡು ನೋಡಬೇಕು, ಈ ಬಲಭಾಗದ ನಾಲೆಯನ್ನು ಮುಗಿಸುವುದಾದರೆ ಅದಕ್ಕೆ ಹೆಚ್ಚು ಹಣ ಖರ್ಚಾಗುವುದಿಲ್ಲ ಇದಕ್ಕೆ ಸುಮಾರು 50 ಲಕ್ಷ ರೂಪಾಯಿಗಳವರೆಗೂ ಹಣ ಖರ್ಚಾಗಬಹುದು. ಇದನ್ನು ಮಾಡುವುದರಿಂದ ಸುಮಾರು 16-18 ಸಾವಿರ ಎಕರೆ ನೀರಾವರಿ ಆಗಬಹುದೆಂದು ಕಾಣುತ್ತದೆ. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು ಮತ್ತೊಂದು ವಿಷಯ ಈ ಎಡಭಾಗದ ನಾಲೆಯ ಆಕ್ವಡಕ್ಟ್ ಕೆಲಸ ಕಂಪ್ಲೀಟ್ ಆಗದೇ ಹೋದರೆ ಬಹುಶಃ ಯಾವುದೇ ಕಾರಣದಿಂದಲೂ ನೀರನ್ನು ಅಲ್ಲಿ ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಸುಮಾರು 19 ಕಿಲೋಮೀಟರ್ ಎಂದು ಕಾಣುತ್ತದೆ. ಅಲ್ಲಿಯವರೆಗೂ ಇರತಕ್ಕಂಥ ಹೇಮಾವತಿ ನಾಲೆಯನ್ನು ಮುಗಿಸಿದರೆ ಬಹುಶಃ ಹಾಸನ ತಾಲ್ಲೂಕಿನಲ್ಲಿ ಸುಮಾರು 3-4 ಸಾವಿರ ಎಕರೆ, ಈ ಆಕ್ವಡಕ್ಟ್‌ನಿಂದ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತದೆ.

ಆದುದರಿಂದ ಈ ಒಂದು ಕೆಲಸವನ್ನಾದರೂ ಮಾಡತಕ್ಕಂಥದ್ದಕ್ಕೆ ಹಣವನ್ನು ದೊರಕಿಸತಕ್ಕಂಥದ್ದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇದಕ್ಕೆ ಖರ್ಚು ಆಗತಕ್ಕಂಥ, ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸೂಚನೆ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಸಭಾಧ್ಯಕ್ಷಣೀಯವರೇ ಇವತ್ತು ಈ ಮೀಡಿಯಂ ಪ್ರಾಜೆಕ್ಟ್‌ಗಳನ್ನು ನೀವು ಗುಲ್ಬರ್ಗ ಜಿಲ್ಲೆಯಲ್ಲಿ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಬ್ರಿಡ್ಜ್‌ನ್ನು ಮಾಡಿಸುವುದಕ್ಕೆ ಪ್ರಾರಂಭ ಮಾಡಿದಿರಿ, ಇದನ್ನು ಬರಗಾಲದ ಸನ್ನಿವೇಶದಲ್ಲಿ ಶುರು ಮಾಡಿದ ಮೇಲೆ ಸಾಕಷ್ಟು ಹಣವನ್ನು ಇವತ್ತು ತೊಡಗಿಸಲಿಲ್ಲ. ಇದರಲ್ಲಿ ಸಾಕಷ್ಟು ಹಣವನ್ನು ತೊಡಗಿಸಿದಲ್ಲಿ ಇವತ್ತು ಆ ಬ್ರಿಡ್ಜ್‌ಗಳನ್ನು ಅತೀ ಶೀಘ್ರದಲ್ಲಿ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಅದರಿಂದ ಫಲ ದೊರಕಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಅವಕ್ಕೆ ದೊರಕಿಸಿರತಕ್ಕಂಥದ್ದು ಸಾಕಷ್ಟು ಕಡಿಮೆ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ, ಮತ್ತೆ ಕೆಲವು ಕಡೆ ಚಿನಾಲ್ಸ್ ಆಗದೇನೇ ಇರುವ ಬಗ್ಗೆ ಇವತ್ತು ಉದಾಹರಣೆಗೆ ಘಟಪ್ರಭಾ, ಮಲಪ್ರಭಾ ಇವುಗಳ ಬಗ್ಗೆ ಸಾಕಷ್ಟು ಈ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಒಂದು ಕಡೆ ಡ್ಯಾಮ್ ಕಟ್ಟಿದರೆ, ಮತ್ತೊಂದು ಕಡೆ ಚಾನಲ್ಸ್ ಆಗಿರುವುದಿಲ್ಲ. ಎಲ್ಲಾ ಕಡೆಯೂ ಹಣಕಾಸಿನ ಆರ್ಥಿಕ ಪರಿಸ್ಥಿತಿಯಿಂದ ತೊಂದರೆಯಾಗುವುದರಿಂದ ಒಂದು ಫೇಸ್ಡ್ ಪ್ರೋಗ್ರಾಮ್ ಹಾಕಿಕೊಂಡು ಕೆಲಸ ಮಾಡಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ. ಮತ್ತೆ ಪಕ್ಕದ ರಾಜ್ಯಗಳಿಗೆ ನೀರನ್ನು ಕೊಡತಕ್ಕಂಥ ಕಾಲದಲ್ಲಿ ನಮ್ಮ ರಾಜ್ಯದ ನೀರಿನ ಬಳಕೆಯನ್ನು ಸಹ ಗಮನದಲ್ಲಿಟ್ಟುಕೊಂಡು ಮಾಡಬೇಕು ಎನ್ನುವ ಸೂಚನೆಯನ್ನು ಕೂಡ ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಇನ್ನು ಈ ಬೃಹತ್ ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಏತಕ್ಕೆಂದರೆ ಹಲವಾರು ಸಾರಿ ನಾವು ಈ ಪ್ರಾಜೆಕ್ಟ್‌ಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿ ಹೇಳಿದ್ದೇವೆ. ಪ್ರತಿಯೊಂದು ಪ್ರಾಜೆಕ್ಟ್‌ಗಳ ಬಗ್ಗೆಯೂ ಚರ್ಚೆ ಮಾಡಿದ್ದೇವೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಒಂದು ಇಂಟರ್‌ಪಿಲೇಷನ್ ಕಾಂಪನ್‌ಸೇಷನ್ ಕೊಟ್ಟು ಹೇಳಿದ್ದಾರೆ. ಮತ್ತು ಅದರಲ್ಲಿರತಕ್ಕಂಥ ದೋಷಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅದರ ಬಗ್ಗೆ ಕೂಡ ಡೈರೆಕ್ಷನ್ ಕೊಡಬೇಕು.

ಇನ್ನು ಮಾನ್ಯ ಅಧ್ಯಕ್ಷಣೀಯರೇ, ಈ ಪವರ್ ಪ್ರಾಜೆಕ್ಟ್ ಬಗ್ಗೆ ಕೊಟ್ಟಿರತಕ್ಕಂಥ ರಿಪೋರ್ಟ್‌ನ್ನು ನೋಡಿದರೆ ಯಾವ ಆಧಾರದ ಮೇಲೆ ಕೊಟ್ಟಿರಿ ಎನ್ನತಕ್ಕಂಥದ್ದು ಅರ್ಥವಾಗಲಿಲ್ಲ. ಪೇಜ್ 21 ರಲ್ಲಿ It is understood that the Government of India have moved the World Bank to assist Uarahi and Bedathi Hydro Electric Project. ಎಂದು ಹೇಳಿದ್ದಾರೆ. ಆದರೆ ಕಾಳಿ ಬಗ್ಗೆ ನಮ್ಮ ವರ್ಲ್ಡ್ ಬ್ಯಾಂಕ್‌ನವರಿಂದ ಸಹಾಯ ಪಡೆದು ಕಾಳಿ ನದಿ ಪ್ರಾಜೆಕ್ಟ್‌ನ್ನು ಮುಗಿಸಿದರೆ ಸಾಕಾಗಿದೆ ವರಹಿ

(ಶ್ರೀ ಹೆಚ್ ಡಿ. ದೇವೇಗೌಡ)

ಪ್ರಾಜೆಕ್ಟ್ ಬೇಡವೆಂದು ಹೇಳುವುದಿಲ್ಲ. ಕಾಳಿ ನದಿಯನ್ನು ಮುಗಿಸತಕ್ಕಂಥದ್ದೇ ನಮಗಿರತಕ್ಕಂಥ ಕಷ್ಟ, ರಾಜ್ಯ ಸರ್ಕಾರಕ್ಕಿರತಕ್ಕಂಥ ಕಷ್ಟ ಏನು ಎಂಬುದು ಅರ್ಥವಾಗಿದೆ. ತಾವು ಪವರ್ ಪ್ರಾಸ್ಪರಿಟಿ ವೀಕ್ ಎಂದು ಮಾಡಿ ಇವತ್ತು ಇಡೀ ರಾಜ್ಯದಲ್ಲಿ ಜನತೆಯಿಂದ ಡಿಪಾಸಿಟ್ ಸ್ಕೀಂ ಎಂದು ತೆಗೆದು ಕೊಳ್ಳಬೇಕೆಂದು ಮಾಡಿದ್ದೀರಿ. ಇವತ್ತು ನಾನೊಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮ ಎಲೆಕ್ಟ್ರಿಸಿಟಿ ಬೋರ್ಡ್ ಚೇರ್ಮನ್‌ರವರ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳಬೇಕಾಗುತ್ತದೆ ಏತಕ್ಕೆಂದರೆ ಅವರು ನಮ್ಮ ರೈತರ ಬಗ್ಗೆ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನತೆಯ ಬಗ್ಗೆ ಕಳಕಳಿಯಿಂದ ಅಭಿಮಾನವನ್ನು ಇಟ್ಟಿರತಕ್ಕಂಥ ವ್ಯಕ್ತಿ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾವು ಹೇಳಬೇಕಾಗುತ್ತದೆ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರುವಂಥ ಜನತೆಯ ಒಂದು ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರತಕ್ಕಂಥ ವ್ಯಕ್ತಿ ಎಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಆದುದರಿಂದ ಇವತ್ತು ನಾನು ಕೇಳುತ್ತೇನೆ ಇಲ್ಲಿ ಇಟ್ಟಿರತಕ್ಕಂಥ ಹಣ ಯಾವುದೇ ಕಾರಣದಿಂದ ಸಾಧ್ಯವಾಗುವುದಿಲ್ಲ. ಇವತ್ತು ಒಂದು ಕೋಟಿ ಹಣದಲ್ಲಿ ನೀವು ಮೊದಲನೆಯದಾಗಿ ರೂರಲ್ ಎಲೆಕ್ಟ್ರಿಫಿಕೇಷನ್‌ಗೆ, ಐ ಪಿ. ಸೆಕ್ಟ್ ಇವೆರಡಕ್ಕೂ ಇಟ್ಟಿರತಕ್ಕಂಥ ಹಣ ಏನಿದೆ ಅದು ಸಾಲದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಶ್ರೀಮಾನ್ ಘೋರ್ಪಡೆಯವರು ಇಲ್ಲಿಯೇ ಕೂತಿದ್ದಾರೆ, ಅವರು ಏನು ಒಂದು ನಿರೀಕ್ಷಣೆ ಮಾಡಿದ್ದರೋ ಆ ಒಂದು ನಿರೀಕ್ಷಣೆಯಂತೆ ಸಾಧನೆ ಮಾಡುವುದಕ್ಕೆ ಆಗಲಿಲ್ಲ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಅದಕ್ಕೆ ಕಾರಣ ಮೆಟೀರಿಯಲ್ಸ್ ಇಲ್ಲ ಮತ್ತೊಂದು ಇಲ್ಲ. ಇವತ್ತು ಐ. ಪಿ, ಸೆಟ್‌ಸ್ 7 ಸಾವಿರ, 10 ಸಾವಿರ ಮಾರ್ಚ್ 31 ಒಳಗೆ ಆಗಬಹುದು ಎನ್ನತಕ್ಕಂಥ ಅಭಿಪ್ರಾಯಕ್ಕೆ ಬಂದಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ :– ಇನ್ನೂ ಜಾಸ್ತಿಯಾಗಿದೆ.

ಶ್ರೀ ಹೆಚ್. ಡಿ, ದೇವೇಗೌಡ :....ಜಾಸ್ತಿಯಾದರೆ ನೋಡೋಣ. ನಮ್ಮ ಕೊರತೆಯನ್ನು ಪೂರ್ತಿ ಮಾಡುವುದಕ್ಕೆ ಸಾಧ್ಯವೇ ಈ ವರ್ಷ ನಾನು ಇಷ್ಟು ಮಾತ್ರ ಹೇಳುತ್ತೇನೆ. ನಿಮಗೆ ಬೇಕಾದಂಥ ಏನೊಂದು ಕಾಪರ್ ವೈರ್, ಅಲ್ಯೂಮಿನಿಯಂ ಕಂಡಕ್ಟರ್, ಮತ್ತು ಯಾವುದೇ ಪದಾರ್ಥಗಳು ಆಗಿರಲಿ, ಇದನ್ನು ಒದಗಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ನಮ್ಮ ರಾಜ್ಯ ಸರ್ಕಾರದವರು ಹಾಕಬೇಕು. ಏತಕ್ಕೆಂದರೆ ಹರಿಯಾಣದಲ್ಲಿ 100 ಪರ್ಸೆಂಟ್ ರೂರಲ್ ಎಲೆಕ್ಟ್ರಿಫಿಕೇಷನ್ ಆಗಿದೆ. ಆದರೆ ಕರ್ನಾಟಕದಲ್ಲಿ ಆ ಮಟ್ಟದಲ್ಲಿ ಬರುವುದಕ್ಕೆ ಸಾಧ್ಯವಾಗಲಿಲ್ಲ 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರತಿಯೊಂದು ಹಳ್ಳಿಗೂ

ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂಥ ಆಸೆಯನ್ನು ಇಟ್ಟು ಕೊಂಡಿದ್ದೀರಿ ಆದರೆ ನಿಮ್ಮ ಪ್ರಗತಿಯ ಸಾಧನೆಯನ್ನು ನೋಡಿದಾಗ ಆ ಒಂದು ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥದ್ದು ವ್ಯಕ್ತವಾಗುತ್ತದೆ ನಾನು ಕಳೆದ ಸಾರಿ ಈ ಸಭೆಯಲ್ಲಿ ಬಹುಶಃ ವಿಷಯಗಳನ್ನು ಅದರಲ್ಲೂ ನಮ್ಮ ರಾಷ್ಟ್ರದ ವ್ಯಾಪ್ತಿಯಲ್ಲಿ ನಡೆದಿರತಕ್ಕಂಥ ಪ್ರಗತಿಯ ಹಲವಾರು ಅಂಕೆ ಅಂಶಗಳನ್ನು ಕೂಡ ಪ್ರಸ್ತಾಪಿಸಲಿಕ್ಕೆ ಅವಕಾಶವಿಲ್ಲ. ಇವತ್ತು ಈ ಒಂದು ರೂರಲ್ ಎಲೆಕ್ಟ್ರಿಫಿಕೇಷನ್ ಐ. ಪಿ. ಸೆಟ್‌ಗಳಿಗೆ ಬಹಳ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಡಿಮ್ಯಾಂಡ್ ಚಾರ್ಜಸ್ ಬಗ್ಗೆ ಮಾನ್ಯ ಹನುಮೇಗೌಡರು ಏನು ಹೇಳಿದ್ದಾರೆ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದರಲ್ಲಿ ಇದ್ದೆ. ಆದರೆ, ಮಾನ್ಯ ಚನ್ನಬಸಪ್ಪನವರು, ಇದೇ ಜಾಗದಲ್ಲಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರು. ಆದರೆ, ಮಾನ್ಯ ಶ್ರೀಕಂಠಯ್ಯನವರು ಹೇಳುವಾಗ, ಇದನ್ನು ತೆಗೆದುಕೊಳ್ಳತಕ್ಕ ಬಗ್ಗೆ ಸರಕಾರದ ನಿರ್ಣಯ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಇದನ್ನು ಅವರು ಬಹಳಷ್ಟು ದೂರ ಹೋಗಿ ಹೇಳಿದ್ದಾರೆ. ಇದು ಪತ್ರಿಕೆಗಳಲ್ಲಿಯೂ ಕೂಡ ವರದಿಯಾಗಿದೆ. ಅದು ಏನೇ ಇರಲಿ, ಇದನ್ನು ತೆಗೆದುಕೊಳ್ಳುವುದಕ್ಕೆ ಸರಕಾರ ಪ್ರಯತ್ನ ಮಾಡಬೇಕೆಂಬುದನ್ನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸುಬ್ರಮಣ್ಯಂ ಅವರು ಅಮೇರಿಕಾ ದೇಶದ ಪ್ರವಾಸ ಮಾಡಿ, ವಿಶ್ವಬ್ಯಾಂಕಿನಿಂದ ಸಹಾಯ ತರತಕ್ಕ ಬಗ್ಗೆ ಮತ್ತು ಐ. ಎಂ. ಎಫ್ ನಿಧಿ ತರತಕ್ಕದ್ದರ ಬಗ್ಗೆ ಪ್ರಯತ್ನ ಮಾಡಿದರು. ಆ ಒಂದು ಸಂದರ್ಭದಲ್ಲಿ ಅಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಕಳೆದ ಸಾರಿ ನಾನು ಓದಿ, ಅಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅವರು ಕರ್ನಾಟಕದ ಕಾಳಿ ಯೋಜನೆಗಾಗಲೀ, ಅಥವಾ ನ್ಯೂಕ್ಲಿಯರ್ ಪವರ್ ಸ್ಟೇಷನ್ ಮಾಡುವ ಬಗ್ಗೆಯಾಗಲೀ ಹಣವನ್ನು ಒದಗಿಸುತ್ತಾರೆ ಎನ್ನುವ ಮಾತನ್ನು ಅವರ ಹೇಳಿಕೆಯಲ್ಲಿ ವ್ಯಕ್ತಪಡಿಸಿಲ್ಲ. ಬೇರೆ ಬೇರೆ ರಾಜ್ಯಗಳಿಗೆ ಸಂಬಂಧಪಟ್ಟಂತೆ ಕೆಲವು ಯೋಜನೆಗಳಿಗೆ ಹಣವನ್ನು ಒತ್ತಾಯ ಮಾಡುತ್ತಿದ್ದೇವೆ ಎನ್ನುವ ಮಾತನ್ನು ತಿಳಿಸಿದ್ದಾರೆ. ಆದುದರಿಂದ, ಇವತ್ತಿನ ದಿವಸ, ಸುಬ್ರಮಣ್ಯಂ ಅವರು ಕೂಡ ಕರ್ನಾಟಕದಲ್ಲಿರತಕ್ಕ ಈ ಒಂದು ವಿದ್ಯುತ್ ಯೋಜನೆಗಳ ಪೂರೈಕೆ ಬಗ್ಗೆ ಅವರಿಗೆ ತೀವ್ರತೆ ಇರಲಿಲ್ಲವೇ ಎನ್ನತಕ್ಕದ್ದನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ಇದು ಮಾನ್ಯ ಸುಬ್ರಮಣ್ಯಂ ಅವರ ಗಮನಕ್ಕೆ ಬಂದಿರಲಿಲ್ಲವೇ? ಅಥವಾ ನಮ್ಮ ರಾಜ್ಯ ಸರಕಾರದವರು ಇದನ್ನು ತಿಳಿಸಿದ್ದರೂ ಕೂಡ ಅವರಿಗೆ ಇದರ ಬಗ್ಗೆ ಅಲಕ್ಷ್ಯ ಮನೋಭಾವನೆ ಇತ್ತೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆ ರೀತಿ ಅವರಿಗೆ ಅಲಕ್ಷ್ಯ ಮನೋಭಾವನೆ ಇದ್ದರೆ, ಅದನ್ನು ನಾವು ಧಿಕ್ಕರಿಸಬೇಕಾಗುತ್ತದೆ. ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಕಾಳಿ ಯೋಜನೆ ಕೇವಲ ಕರ್ನಾಟಕದ ಒಂದು ಹಿತದೃಷ್ಟಿಯಿಂದ

(ಶ್ರೀ ಹೆಚ್. ಡಿ. ದೇವೇಗ ಡ)

ಮಾಡುತ್ತಾ ಇರುವುದಲ್ಲ; ಇಡೀ ರಾಷ್ಟ್ರದ ಹಿತದೃಷ್ಟಿಯಿಂದ ಮಾಡುತ್ತಾ ಇರ ತಕ್ಕದ್ದಾಗಿದೆ. ಇಂಥಾ ಒಂದು ಯೋಜನೆ ಇಷ್ಟು ಸುಲಭದರಲ್ಲಿ ವಿದ್ಯುಚ್ಛಕ್ತಿ ಯನ್ನು ಉತ್ಪನ್ನ ಮಾಡತಕ್ಕ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್, ಬಹುಶ; ಇಡೀ ಇಂಡಿಯಾ ದೇಶದಲ್ಲಿ ಯಾವುದೂ ಇಲ್ಲ ಎಂದು ಹೇಳಿದರೆ, ಅದು ತಪ್ಪಾಗಲಾರದು ಆ ಒಂದು ದೃಷ್ಟಿಕೋನದಿಂದ ಕೇಂದ್ರ ಸರಕಾರ ಈ ಒಂದು ಯೋಜನೆಗೆ ನೆರವು ಕೊಡಬೇಕಾಗುತ್ತದೆ. ಕೇಂದ್ರ ಸರಕಾರ ಅನುತ್ಪಾದನ ವೆಚ್ಚವನ್ನು ಕಡಮೆ ಮಾಡುತ್ತೇವೆ ಎನ್ನುವಂಥ ಧೋರಣೆಯನ್ನು ಅನುಸರಿಸಿದರೂ ಕೂಡ ಕಾಳಿ ಯೋಜನೆಗೆ ಈ ಒಂದು ಧೋರಣೆಯನ್ನು ಅನ್ವಯಿಸುವುದು ವಿಷಾದನೀಯ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮಾನ್ಯ ಪ್ರಧಾನ ಮಂತ್ರಿಯವರ ಈ ಒಂದು ಕಾಳಿ ನದಿ ಯೋಜನೆಗೆ ಶಂಕುಸ್ಥಾಪನೆ ಮಾಡುವ ಕಾಲದಲ್ಲಿ ಕೊಟ್ಟಂಥ ಹೇಳಿಕೆ ಅವರು ಮರೆಯಬಾರದು. ರಾಜ್ಯಸರಕಾರದವರು ಮುಂದಿಟ್ಟ ಬೇಡಿಕೆಗಳ ಬಗ್ಗೆ ಅವರು ಕೊಟ್ಟ ಪ್ರತಿಕ್ರಿಯೆಗಳು ಏನು ಇವೆ, ಅವು ಪತ್ರಿಕೆ ಗಳಲ್ಲಿ ಪ್ರಕಟವಾಗಿವೆ; ಆದುದರಿಂದ ಅವನ್ನು ಮರೆಯಬಾರದೆಂದು ಹೇಳುತ್ತೇನೆ.

ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲೇ ಇದ್ದಾರೆ. ಕಾಳಿ ಯೋಜನೆಗೆ ಸಂಬಂಧಪಟ್ಟ ಹಾಗೆ ಕೆಲವು ಟೆಂಡರುಗಳನ್ನು ವಿಲೇವಾರಿ ಮಾಡತಕ್ಕದ್ದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ಇದರ ಬಗ್ಗೆ ಅವರು ಈ ಸಭೆಗೆ ಸ್ಪಷ್ಟೀಕರಣ ಮಾಡಬೇಕು. ಸೂಪಾ ಡ್ಯಾಮಿಗೆ ಸಂಬಂಧ ಪಟ್ಟ 35 ಕೋಟಿ ರೂಪಾಯಿಗಳ ಟೆಂಡರನ್ನು ಅಂದರೆ, ಬಹುಶ: ಸ್ಟೀಲ್ ಮತ್ತು ಸಿಮೆಂಟ್ ಈ ಎರಡು ಬಿಟ್ಟು, ಉಳಿದ ಸಣ್ಣ ಸಣ್ಣ ಟೆಂಡರುಗಳನ್ನು ಡಿಸ್ಪೋಸ್ ಮಾಡತಕ್ಕ ಕಾಲದಲ್ಲಿ ನಡೆದಂತ ಹಗರಣವನ್ನು ಪ್ರಸ್ತಾಪ ಮಾಡದೇ ಗತ್ಯಂತರವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನ ದಿವಸ ಸಭೆಯಲ್ಲೇ ಇರು ವುದರಿಂದ, ಈ ಒಂದು ಸನ್ನಿವೇಶದಲ್ಲಿ ಅವರಿಂದ ಉತ್ತರವನ್ನು ಅಪೇಕ್ಷೆ ಮಾಡು ತ್ತೇನೆ. ಈಗ 35 ಕೋಟಿ ರೂಪಾಯಿಗಳ ಟೆಂಡರ್ ಕರೆದಂತಕಾಲದಲ್ಲಿ ಗ್ಯಾಮನ್ಸ್ ಕಂಪೆನಿ ಹಿಂದುಸಾನ್ ಕನ್ಸ್ಟ್ರಕ್ಷನ್ ಕಂಪೆನಿ ಮತ್ತು ಹಿಂದೂಸ್ಥಾನ್ ಸ್ಟೀಲ್ ಇನ್ಸ್ಟ್ರ ಕ್ಷನ್ ಕಂಪೆನಿ ಇದು ಗೌವರ್ನಮೆಂಟ್ ಆಫ್ ಇಂಡಿಯಾ ಪಬ್ಲಿಕ್ ಸೆಕ್ಟಾರ್ ಕಂಪೆನಿ. ಈ ಸಂಸ್ಥೆಗಳವರು ಟೆಂಡರುಗಳನ್ನು ಕೊಟ್ಟಿದ್ದಾರೆ. ಈ ಟೆಂಡರುಗಳನ್ನು ಪರಿಶೀಲನೆ ಮಾಡಿ ಯಾರಿಗೆ ಕೊಡಬೇಕು ಎನ್ನತಕ್ಕದ್ದನ್ನು ಪವರ್ ಕಾರ್ಪೊರೇಷನ್ ನಿರ್ಣಯ ಮಾಡತಕ್ಕ ಕಾಲದಲ್ಲಿ ಆದಂಥ ಗೊಂದಲವನ್ನು ಒಂದು ದೊಡ್ಡ ಕರ್ಮಕಾಂಡ ಎಂದು ಹೇಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಟೆಂಡರ್ ಕೊಡತಕ್ಕದ್ದು ಮುಖ್ಯವಲ್ಲ; ನಾನು ಇದನ್ನು ಸ್ಪಷ್ಟೀಕರಣ ಮಾಡುತ್ತೇನೆ. ಪವರ್ ಕಾರ್ಪೊರೇಷನ್ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದರಲ್ಲಿ ಸರ

ಕಾರಕ್ಕೂ ಅಧಿಕಾರ ಇದೆ. ಪವರ್ ಕಾರ್ಪೋರೇಷನ್ ನಮ್ಮದೇ ಆದಂಥ ಒಂದು ಸಂಸ್ಥೆ. ಇದರಲ್ಲಿನ 100 ಪರ್ಸೆಂಟ್ ಬಂಡವಾಳವನ್ನು ರಾಜ್ಯ ಸರಕಾರ ತೊಡಗಿಸಿದೆ ಆದ್ದರಿಂದ ಇವತ್ತಿನದಿವಸ ನಿರ್ಣಯ ತೆಗೆದುಕೊಳ್ಳತಕ್ಕ ಕಾಲದಲ್ಲಿ ಟೆಂಡರ್ ಕಡಮೆ ಇತ್ತು, ಹೆಚ್ಚು ಇತ್ತು ಎನ್ನುವ ಪ್ರಶ್ನೆ ಬೇರೆ. ಕಡಮೆ ದರದ ಟೆಂಡರ್ ಕೊಟ್ಟಿದ್ದವರನ್ನು ಬಿಟ್ಟು, ಹೆಚ್ಚು ಟೆಂಡರ್ ಕೊಟ್ಟಿದ್ದವರಿಗೇ ಕೊಡುವಂಥ ಅಧಿಕಾರವೂ ಆದೆ. ಆದರೆ, ಇಲ್ಲಿ ಟೆಂಡರನ್ನು ನಿರ್ಣಯ ಮಾಡತಕ್ಕ ಕಾಲದಲ್ಲಿ ಮಾನ್ಯ ಹೆಚ್. ಟಿ. ರೆಡ್ಡಿ ಅವರು ಪವರ್ ಕಾರ್ಪೋರೇಷನ್ನಿನ ಚೇರ್ಮನ್, ಮ್ಯಾನೇಜಿಂಗ್ ಡೈರೆಕ್ಟರುಗಳು ಅಂದು ಸೇರಿ 15 ಲಕ್ಷ ರೂಪಾಯಿಗಳ ಲಂಚವನ್ನು ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪೆನಿಯವರಿಂದ ಪಡೆದು, ಈ ಟೆಂಡರಿನ ಬಗ್ಗೆ ನಿರ್ಣಯ ಮಾಡಬೇಕು ಎಂದು ತೀರ್ಮಾನ ಮಾಡಿದ್ದಾರೆ ಎಂದು ಅಪಾದನೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಪತ್ರ ಬರೆದಿದ್ದಾರೆ ಮಾಜಿ ಚೇರ್ಮನ್ ಅವರು 15 ಲಕ್ಷ ರೂಪಾಯಿಗಳ ಲಂಚವನ್ನು ಪಡೆದು, ಈ 35 ಕೋಟಿ ರೂಪಾಯಿಗಳ ಟೆಂಡರನ್ನು ವಿಲೇವಾರಿ ಮಾಡತಕ್ಕ ಕೆಲಸಕ್ಕೆ ಕೈಹಾಕಿದ್ದಾರೆ. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಇದನ್ನು ನಿರ್ಣಯ ಮಾಡಬೇಕಾಗುತ್ತದೆ. ನಾನು ಈ ಮಾತನ್ನು ಬೇಜವಾಬ್ದಾರಿಯಿಂದ ಹೇಳುತ್ತಾ ಇಲ್ಲ. ಈ ಒಂದು ಪವರ್ ಕಾರ್ಪೋರೇಷನ್ನಲ್ಲಿ ಕೆಲಸ ಮಾಡತಕ್ಕ ಡೈರೆಕ್ಟರುಗಳು, ಮ್ಯಾನೇಜಿಂಗ್ ಡೈರೆಕ್ಟರ್ ಅಂಡ್ ದಿ ಚೇರ್ಮನ್;—ಈ ಎಲ್ಲಾ ವ್ಯಕ್ತಿಗಳೂ ಸೇರಿ 15 ಲಕ್ಷ ರೂಪಾಯಿಗಳನ್ನು ಪಡೆದಿದ್ದಾರೆ ಎಂದು ಅಪಾದನೆಯನ್ನು ಮಾಡಿದ್ದಾರೆ ಅವರು ಬರೆದಿರುವ ಕಾಗದ ನನಗೆ ಗೊತ್ತಿರುವ ರೀತಿ 10ನೇ ತಿಂಗಳು 1974ನೇ ಇಸವಿಯಲ್ಲಿ; ನನಗೆ ತಾರೀಖು ಗೊತ್ತಿಲ್ಲ. ಈ ಒಂದು ಅಪಾದನೆಯನ್ನು ದೃಢೀಕರಿಸಲ್ಪಡದೇ ಹೋದರೆ.......

ಶ್ರೀ ಡಿ. ದೇವರಾಜ್ ಅರಸ್ :—ಪತ್ರಿಕೆಗಳಲ್ಲಿ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ :—ಇದನ್ನು ನಾನೇ ಹೇಳುತ್ತಿದ್ದೇನೆ. ಇದನ್ನು ದೃಢೀಕರಿಸಲ್ಪಡದೇ ಹೋದರೆ, ಯಾರು ಈ ಅಪಾದನೆ ಮಾಡಿದ್ದಾರೆ, ಅವರು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಇದನ್ನು ದೃಢೀಕರಿಸಿದರೆ, The Director, Managing Director and the Chairman must not only be sent out of office but they must also be prosecuted. This is a very severe charge made by an Hon. Member of the other House and the General Secretary of the Pradesh Congress Committee.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ :—ಅವರಿಗೆ ಕೆಲಸ ಕೊಟ್ಟಿಲ್ಲವಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ತಾನೇ ಹೇಳಿದರು, ಟೆಂಡರ್ ಹೆಚ್ಚು ಕೊಟ್ಟಿದ್ದರೂ ಕೂಡ, ಕೊಡುವುದಕ್ಕೆ

(ಶ್ರೀ ಹೆಚ್. ಡಿ. ದೇವೇಗೌಡ)

ಅಧಿಕಾರ ಇದೆ ಎಂದು. ಕೊಡುವಾಗ ಸರ್ಕಾರಕ್ಕೆ ಡಿಸ್ಕ್ರಿಪ್ಲಿನರಿ ಪವರ್ಸ್ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ ಅದನ್ನು ನೀವು ಉಪಯೋಗಿಸಿದ್ದೀರಾ ? ಈವೊತ್ತು ಒಬ್ಬ ಜವಾಬ್ದಾರಿಯುತವಾದಂಥ ವ್ಯಕ್ತಿ ಮೇಲೆ ಗುರುತರವಾದ ಅಪಾದನೆ ಮಾಡತಕ್ಕಂಥಾದ್ದಕ್ಕೆ ತಾವು ದೃಡೀಕರಿಸುವುದಾದರೆ ಇದರ ಹೊಣೆಗಾರಿಕೆ ನೀವೇ ಆಗಬೇಕಾಗುತ್ತದೆ. ಇಲ್ಲದೆ ಹೋದರೆ ಅವರ ಮೇಲೆ ಪ್ರಾಸಿಕ್ಯೂಟ್ ಮಾಡಬೇಕು. ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ತಾವು ಮಾಡುವುದಕ್ಕೆ ಸಾಧ್ಯತೆ ಇಲ್ಲದೇ ಹೋದರೆ including the Minister the Managing Director must be prosecuted. ಇದು ಬಹಳ ಮಹತ್ವವಾದ ವಿಷಯ.

SRI H. D. DEVE GOWDA:—We are eager to know whether the Chief Minister has received such letters alleging that Rs. 15 lakhs were paid either to the Chairman or the Managing Director. The Leader of the Opposition states that such a letter was addressed to the Chief Minister. we are eager to know what is the truth ?

SRI D. DEVARAJ URS I will answer at the appropriate time.

ಶ್ರೀ ಹೆಚ್. ಡಿ. ದೇವೇಗೌಡ :—ಅಪ್ರೋಪ್ರಿಯೇಟ್ ಅನ್ನುವ ಪದವನ್ನು ಮಾನ್ಯ ಚೆನ್ನಬಸಪ್ಪನವರು ಏನು ಆಡುತ್ತಿದ್ದರೋ ಆ ಪದ ಈಗ ಮಾನ್ಯ ಮುಖ್ಯ ಮಂತ್ರಿಗಳ ಬಾಯಿನಿಂದ ಬಂದಿದೆ.

ಇನ್ನೊಂದು ಬಹಳ ಮಹತ್ವವಾದ ವಿಷಯ ಏನೆಂದರೆ ಈ ಒಂದು ಟೆಂಡರ್ ವಿಲೇವಾರಿ ಆಗಿರತಕ್ಕಾಂಥಾದ್ದು ಹೇಗೆಂದರೆ 4_5 ದಿವಸ ಕೂತು ತರಾತುರಿಯಿಂದ ಈ ಟೆಂಡರನ್ನು ನಿರ್ಣಯ ಮಾಡಿದರು ಎಂದರೆ ಇದರ ಅರ್ಥ ಒಂದು ವೇಳೆ ಪವರ್‌ಫೋರ್ಟ್‌ಫೋಲೀಯೋವನ್ನು ಇವರು ಎಲ್ಲಿ ಬಿಟ್ಟು ಹೋಗುತ್ತಾರೋ ಎನ್ನುವುದೇನಾದರೂ ಇತ್ತೆ ? ಇದು ಒಂದು ಸಂಶಯಾತ್ಮಕವಾದ ವಿಷಯವಾಗುತ್ತದೆ. ಏತಕ್ಕೆಂದರೆ ಈ 35 ಕೋಟಿ ರೂಪಾಯಿನ ಒಂದು ಟೆಂಡರನ್ನು ಕೇವಲ 4-5 ದಿವಸ ಕೂತು ಏನು ನಿರ್ಣಯ ಮಾಡಿದರು ಇದರ ಬಗ್ಗೆ ಸಂಶಯ ವ್ಯಕ್ತಪಡಿಸುವುದಿಲ್ಲ. ಈ ನಿರ್ಣಯ ಆದ ಪರಿಸ್ಥಿತಿ ಬಗ್ಗೆ ಸಂಶಯಪಡಬೇಕಾಗುತ್ತದೆ. ಇದನ್ನು ಟೆಕ್ನಿಕಲ್ ಕಮಿಟಿಯವರು ಪರೀಕ್ಷೆ ಮಾಡಿದ್ದಾರೆ ಎಂದು ಕೇಳಿದ್ದೇನೆ. ಈ ಒಂದು ನಿರ್ಣಯವನ್ನು 4-5 ದಿವಸ ಕೂತು ತೆಗೆದುಕೊಂಡಿದ್ದಾರೆ

ಎಂದು ಕೇಳಿದ್ದೇನೆ. ಆದರೆ ಇಬ್ಬರು ಡೈರೆಕ್ಟರುಗಳಾದ ಶ್ರೀ ಬಾಲರಾಜ್‌ರವರು ಮತ್ತು ಶ್ರೀ ಮುಗ್ಧಂ ಅವರು ಇದನ್ನು ಒಂದು ವಾರ ಪೋಸ್ಟ್ ಪೋನ್ ಮಾಡಬೇಕು ಎನ್ನುವುದನ್ನು ಪ್ಲೀಡ್ ಮಾಡಿದರು. 4-5 ದಿವಸ ಕೂತು ಇದರ ಬಗ್ಗೆ ನಿರ್ಣಯ ಮಾಡಿದ್ದಾರೆ. ಟೆಕ್ನಿಕಲ್ ಕಮಿಟಿಯವರು ಮತ್ತು ಪವರ್ ಕಾರ್ಪೋರೇಷನನ್ನಿನವರು ಇದನ್ನು ಪರಿಶೀಲನೆ ಮಾಡಿದ ಮೇಲೆ ಒಂದು ವಾರ ಇದನ್ನು ಪೋಸ್ಟ್‌ಪೋನ್ ಮಾಡಬೇಕು ಎನ್ನುವುದನ್ನು ಪವರ್ ಕಾರ್ಪೋರೇಷನ್ನಿನಲ್ಲೇ ಇಟ್ಟಿದ್ದರು ಎಂದು ನಾನು ತಿಳಿದಿದ್ದೇನೆ. ಇದೂ ಕೂಡ ರಿಕಾರ್ಡ್ ಆಗಿದೆ ಎಂದು ಕೇಳಿದ್ದೇನೆ ಮತ್ತು ಇದರ ಬಗ್ಗೆ ಡಿಸೆಂಟಿಂಗ್ ನೋಟ್ ಬರೆದಿದ್ದಾರೆ ಎಂದು ನಾನು ಕೇಳಿದ್ದೇನೆ. ಇದನ್ನು ಒಂದು ವಾರ ಪೋಸ್ಟ್ ಪೋನ್ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಈ ಸರಕಾರದ ಇಬ್ಬರು ಪ್ರತಿನಿಧಿಗಳು ಈ ಕಾರ್ಪೋರೇಷನ್ನಿನಲ್ಲಿ ಈ ಒಂದು ವಾದವನ್ನು ಮುಂದೊಡ್ಡಬೇಕಾದರೆ, ಬಹುಶಃ ಒಂದು ವಾರ ಕಳೆದ ಮೇಲೆ ಶ್ರೀಮಾನ್ ಚನ್ನಬಸಪ್ಪನವರ ಪೋರ್ಟ್‌ಪೋಲಿಯೋ ಹೋಗುತ್ತದೆ ಅಂತ ಏನಾದರೂ ಇತ್ತೋ ಅಥವಾ ಮತ್ತೇನು? ಆದುದರಿಂದ ಇದನ್ನು ಪರಿಶೀಲನೆ ಮಾಡಿ ಎಂದು ಹೇಳುತ್ತೇನೆ. We can probe into the matter. ಅಥವಾ ಇದನ್ನು ಕ್ಲೋಸೆಸ್ಟ್ ಸ್ಕ್ರೂಟನಿ ಮಾಡಬೇಕು ಅನ್ನುವ ಭಾವನೆ ಏನಾದರೂ ಇತ್ತೆ? ಈ ಒಂದು ಟೆಂಡರನ್ನು ಹಿಂದೂಸ್ಥಾನ್ ಸ್ಟೀಲ್ ಕನ್‌ಸ್ಟ್ರಕ್ಷನ್‌ಗೆ ಕೊಡತಕ್ಕಂಥಾದ್ದು ಅದಕ್ಕೆ ಹಿನ್ನಲೆ ಏನು ಎನ್ನುವುದನ್ನು ಈ ಸಭೆಗೆ ಸ್ಪಷ್ಟೀಕರಣ ಮಾಡಬೇಕು. ಈ ಸಭೆಯಲ್ಲಿ ನಿರ್ಮಾಣ ಇಂಜನಿಯರಿಂಗ್ ಬಗ್ಗೆ ಪ್ರಸ್ತಾಪ ಬಂದಾಗ ಸಾಕಷ್ಟು ಚರ್ಚೆ ಮಾಡಿದ್ದೇವೆ. ಯಾವ ಒಬ್ಬ ವ್ಯಕ್ತಿಯನ್ನು ಕುರಿತು ಮಾತನಾಡಿದ್ದೇವೋ ಆ ಒಂದು ವ್ಯಕ್ತಿ ಈ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥಾ ಕಾಲದಲ್ಲಿ ಸರ್ಕಾರದ ಹಿತಾಸಕ್ತಿಗೂ ಮತ್ತು ಸರ್ಕಾರದ ಕೆಲಸಕ್ಕೂ ಅಡ್ಡಿ ಆತಂಕ ಬರಬಾರದು ಸರ್ಕಾರದ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳುನಮಗಿಂತಲೂ ಒಂದು ಪಟ್ಟು ಜಾಸ್ತಿ ಇದ್ದಾರೆ ಎಂದು ಹೇಳುತ್ತೇನೆ. ಈವೊತ್ತು ಈ ಒಂದು ಸಂಸ್ಥೆ ನಿರ್ಣಯ ಮಾಡಿದಂಥ ಕಾಲದಲ್ಲಿ ಅದನ್ನು ಒಂದು ವಾರ ಮುಂದೂಡಬೇಕು ಎನ್ನುವುದಾದರೆ ಈ ಒಂದು ನಿರ್ಣಯವನ್ನು ಈ ಇಬ್ಬರು ಡೈರೆಕ್ಟರುಗಳು ಸೇರಿ ನಿರ್ಣಯ ತೆಗೆದುಕೊಂಡರೇ ಎಂದು ನಾನು ಕೇಳುತ್ತೇನೆ. ಅದರಲ್ಲಿ ಇನ್ನೂ ಕೆಲವು ಡೈರೆಕ್ಟರುಗಳು ಇದ್ದಾರೆ. ಶ್ರೀಮಾನ್ ಬಾಳೆಕುಂದ್ರು ಅವರು ಇದ್ದಾರೆ. ಶ್ರೀ ಎ. ಕೆ. ಚಾರ್ ಅವರು ಇದ್ದಾರೆ. ಶ್ರೀ ಪಂಡಿತಾರಾಧ್ಯ ಅವರು ಇದ್ದಾರೆ. ಶ್ರೀ ಸತೀಶಚಂದ್ರ ಅವರು ಇದ್ದಾರ ಇವರೆಲ್ಲಾ ಅಪ್ರಮಾಣಿಕ ಅಧಿಕಾರಿಗಳು ಅಂತ ಅವರು ಈ ಒಂದು ನಿರ್ಣಯ ತೆಗೆದುಕೊಂಡರೇ? ಇದು ಒಂದು ಪಬ್ಲಿಕ್‌ಸೆಕ್ಟಾರ್ ಸಂಸ್ಥೆ. ಇವರು ಇದನ್ನು ತಡೆಹಿಡಿಯಬೇಕು ಎನ್ನುವುದನ್ನು ಉಚಿತವೇ? ಅಥವಾ ಈ ಒಂದು ಪೋರ್ಟ್‌ಪೋಲಿಯೋ ಬದಲಾವಣೆಯಾಗುತ್ತದೆ ಮುಂದೆ ಇದನ್ನು ಯೋಚನೆ ಮಾಡೋಣ ಅನ್ನುವ ಅಭಿ

(ಶ್ರೀ ಹೆಚ್. ಡಿ. ದೇವೇಗೌಡ)

ಪ್ರಾಯಕ್ಕೆ ಅವರು ಬಂದಿದ್ದರೇ? ಈ ಸಂಶಯ ನಿವಾರಣೆ ಆಗಬೇಕು ಆ ದೃಷ್ಟಿಯಿಂದ ಇದರ ಬಗ್ಗೆ ವಿವರಣೆ ಕೊಡಬೇಕು ಎಂದು ನಾನು ಕೇಳುತ್ತೇನೆ. ಅಥವಾ ಇದನ್ನು ಗ್ಯಾಮನ್ಸ್ ಅವರಿಗೆ ಕೊಡಬೇಕು ಎಂದು ಸಾಕಷ್ಟು ಯೋಜನೆ ಮಾಡಿದ್ದರೇ? ಗ್ಯಾಮನ್ಸ್ ಕೊಟ್ಟರೆ 50 ಲಕ್ಷ ಜಾಸ್ತಿಯಾಗುತ್ತದೆ ಅಥವಾ ಕಡಿಮೆಯಾಗುತ್ತದೆ ಅನ್ನುವುದು ಬೇರೆ ವಿಷಯ. ಈವೊತ್ತು ಪವರ್ ಕಾರ್ಪೋರೇಷನ್‌ಅನ್ನುವುದು ಒಂದು ಸರ್ಕಾರೀ ಸಂಸ್ಥೆ. ಆ ಸಂಸ್ಥೆಯಲ್ಲಿ ಈ ರೀತಿಯಾದ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದನ್ನು ತಪ್ಪಿಸಬೇಕು. ಗ್ಯಾಮನ್ಸ್‌ಗೆ ಕೊಟ್ಟು ಒಬ್ಬನನ್ನು ಬಂಡವಾಳಶಾಹಿಯನ್ನಾಗಿ ಮಾಡತಕ್ಕಂಥ ವ್ಯವಸ್ಥೆಗೆ ಒಂದು ನಿರ್ಣಯ ಮಾಡುವುದು ಅದು ನಿರ್ಣಯವಲ್ಲ. ಇದರ ಬಗ್ಗೆ ಏನಾದರೂ ನಿರ್ಣಯ ತೆಗೆದುಕೊಂಡರೆ ಪವರ್ ಕಾರ್ಪೋರೇಷನ್ನಿನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವಂಥ ಒಂದು ನಿರ್ಣಯ ಆಗಬೇಕು. ಇದರ ಬಗ್ಗೆ ಯಾವು ಯಾವುದರಲ್ಲಿ ಎಷ್ಟೆಷ್ಟು ಜನರ ಹಿತಾಸಕ್ತಿ ಇದೆ ಎನ್ನುವುದನ್ನು ತಿಳಿಯಬೇಕಾದರೆ ತಾವು ಈ ಬಗ್ಗೆ ಸ್ಪಷ್ಟ ವಿವರಣೆ ಕೊಡಬೇಕು. ಆವಾಗ ನಾವು ಒಂದು ಅಭಿಪ್ರಾಯಕ್ಕೆ ಬರಬಹುದು. ಆದುದರಿಂದ ಇದರ ಬಗ್ಗೆ ವಿವರಣೆ ಈ ಸಭೆಗೆ ಕೊಡಬೇಕು ಎಂದು ಕೇಳುತ್ತೇನೆ.

ಇನ್ನು ಒಂದು ಮಾತು ಹೇಳುತ್ತೇನೆ. ಅವರ ಮೇಲೆ ಇನ್ನೊಂದು ಅಪಾದನೆ ಇರುವುದು ಅವರನ್ನು ಟೆಕ್ನಿಕಲ್ ಕಮಿಟಿಗೆ ಚೇರ್ಮನ್ ಮಾಡಿದ್ದೀರಿ ಇದರ ಬಗ್ಗೆಯೂ ನನಗೆ ವಿವರಣೆ ಕೊಡಿ. ಮತ್ತು ಇನ್ನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಅದರಲ್ಲೂ ಸೂಪಡ್ಯಾಮ್ ಟೆಂಡರನ್ನು ಡಿಸ್‌ಪೋಸ್ ಮಾಡಿರತಕ್ಕಂಥಾದ್ದರ ಬಗ್ಗೆ ಇವುಗಳ ಬಗ್ಗೆಯೂ ಪೂರ್ಣ ವಿವರಗಳನ್ನು ಈ ಸಭೆಯ ಮುಂದೆ ಇಡಬೇಕು ಎಂದು ಹೇಳುತ್ತೇನೆ. ಮತ್ತೊಂದು ಮಾತು ಏನೆಂದರೆ ಈ ಒಂದು ಮೀಟಿಂಗಿನಲ್ಲಿ 4-5 ದಿವಸ ಕೂತು ನಡೆದಿರತಕ್ಕಂಥ ನಡವಳಿಕೆಗಳನ್ನೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ಕೊಡಬೇಕು.

ಶ್ರೀ ಡಿ. ದೇವರಾಜ ಅರಸ್ :—ಅದು ಹೇಗೆ ಸ್ವಾಮಿ ?

SRI H. D. DEVEGOWDA :—It is hundred percent Government owned Company. ಈ ಬಗ್ಗೆ ನಾನು ಏತಕ್ಕೆ ಅಪಾದನೆ ಮಾಡಿದ್ದೇನೆಂದರೆ ಇದನ್ನು ತಾವು ನಿರಾಕರಣೆ ಮಾಡಿದರೆ ಈ ಜಾಗದಲ್ಲಿ ಕೂತು ಕೆಲಸ ಮಾಡುವುದಕ್ಕೆ ನಾಲಾಯಕ್ ಆಗಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್:—ಈ ಅಪಾದನೆಯಲ್ಲಿ ನಿಮ್ಮ ಶಂಕೆ ಏನು ಇದೆ?.

ಶ್ರೀ ಹೆಚ್. ಡಿ. ದೇವೇಗೌಡ:— ಇದರಲ್ಲಿ ಏನೂ ನನಗೆ ಶಂಕೆ ಇಲ್ಲ. ನಾನು ಏನು ಅಪಾದನೆ ಮಾಡಿದ್ದೇನೆ. ಅದನ್ನು ನಾನು ತಿಳಿದುಕೊಂಡೇ ಮಾಡಿದ್ದೇನೆ. ಆದುದರಿಂದ ಇದರ ಬಗ್ಗೆ ತಾವು ಪೂರ್ಣ ವಿವರಣೆ ಕೊಡಬೇಕು ಎಂದು ತಿಳಿಸುತ್ತೇನೆ

ಶ್ರೀ ಡಿ. ದೇವರಾಜ ಅರಸ್.— ತಿಳಿದುಕೊಂಡಿದ್ದರೆ ಸಾಕು.

ಶ್ರೀ ಹೆಚ್. ಕೆ. ದೇವೇಗೌಡ.—ದಯಮಾಡಿ ತಾವು ಉತ್ತರ ಕೊಡುವಾಗ ಇದರ ವಿವರಣೆ ಕೊಡಿ. ಇಷ್ಟು ಹೇಳಿ ಈ ಬೃಹತ್ ನೀರಾವರಿ ಮತ್ತು ವಿದ್ಯುತ್ ಬೇಡಿಕೆಗಳ ಬಗ್ಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ನನಗೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P. M.

Mr. Deputy Speaker in the Chair.

‡ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ). - ಮಾನ್ಯ ಅಧ್ಯಕ್ಷರೇ, ಕಾವೇರಿ ನೀರಿನ ವಿವಾದದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ನಮ್ಮ ನಾಯಕರು ಅಗಿರುವ ಮಾನ್ಯ ಶ್ರೀ ದೇವರಾಜ ಅರಸ್‌ನವರು ಚಾಕಚಕ್ಯತೆಯಿಂದ ಹಾಕಿದ ಪಟ್ಟನ್ನು ನಾವು ಮೆಚ್ಚಬೇಕು ಎಂದು ಹೇಳಿ ಈ ಸದನದಲ್ಲಿ ನನ್ನ ಮೆಚ್ಚಿಕೆಯನ್ನೂ ಅವರಿಗೆ ತಿಳಿಸಲು ಇಚ್ಚಿಸುತ್ತೇನೆ. ಇಂತಹ ಒಂದು ಒಳ್ಳೆಯ ಒಟ್ಟುಗಳನ್ನು ಹಾಕಿದ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸ್‌ರವರಿಗೆ ಮಾನ್ಯ ಶ್ರೀ ದೇವೇಗೌಡರವರು ಇಲ್ಲಿ ಮಾತನಾಡುತ್ತ ಐದು ಟಿ. ಎಂ. ಸಿ. ಯಷ್ಟು ನೀರನ್ನು ಬಿಟ್ಟುಕೊಡುವ ವಿಚಾರದಲ್ಲಿ ಒಂದು ಮಾತು ಹೇಳಿದರು, ಈ ರೀತಿ ಐದು ಟಿ. ಎಂ. ಸಿ. ಯಷ್ಟು ನೀರನ್ನು ಬಿಟ್ಟು ಕೊಡುವುದರಲ್ಲಿದ್ದಂತಹ ಔಚಿತ್ಯವಾದರೂ ಏನಿತ್ತು ಎಂದು ಪ್ರಶ್ನೆ ಮಾಡಿದರು. ನಾನು ಮಾನ್ಯ ಶ್ರೀ ದೇವೇಗೌಡರವರಿಗೆ ಇಲ್ಲಿ ಒಂದು ಮಾತನ್ನು ನೆನಪಿಗೆ ತರಬೇಕಾಗಿದೆ. ಕೃಷ್ಣಾ ನದಿ ನೀರಿನ ವಿವಾದವನ್ನು ತೆಗೆದುಕೊಂಡು ಹೋಗಿ ಪಂಚಾಯತಿಗೆ ವಹಿಸಿ ಅಲ್ಲಿ ತೀರ್ಪು ಕೊಡುವಾಗ ಮಾನ್ಯ ಶ್ರೀ ಸಂಜೀವ ರೆಡ್ಡಿಯವರು ಹಾಗೂ ಶ್ರೀ ನಿಜಲಿಂಗಪ್ಪನವರ ಮಿತ್ರತ್ವದ ಕೊಡುಗೆಯಿಂದ ಈಗ ಏನಾಯಿತು ಎನ್ನುವುದನ್ನು ಅವರಿಗೆ ತೋರಿಸಿಕೊಡಬೇಕಾಗಿದೆ. ಮಾನ್ಯ ದೇವೇಗೌಡರು ಇಲ್ಲಿ ಮಾತನಾಡುವಾಗ ಸಾಕಷ್ಟು ಚಾಕಚಕ್ಯತೆಯನ್ನು ತೋರಿಸಿದ್ದಾರೆ. ಇಂತಹ ಒಂದು ಒಳ್ಳೆಯ ಕೆಲಸವನ್ನು ನಮ್ಮ ಸರಕಾರ ಮಾಡಿರುವಾಗ ಇದಕ್ಕೆ ಸಾಕಷ್ಟು ಔದಾರ್ಯವನ್ನು ಮಾನ್ಯ ಶ್ರೀ ದೇವೇಗೌಡರು ಇಲ್ಲಿ ತೋರಿಸ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಕರ್)

ಲಿಲ್ಲ. ಅವರು ಯಾವಾಗ ಮಾತನಾಡುವಾಗಲೂ ನಮ್ಮ ರಾಜ್ಯದ ನೆಲ ಹಾಗೂ ಜಲದ ಪ್ರಶ್ನೆ ಬಗ್ಗೆ ಹೇಳಿಕೆಯನ್ನು ಪದೇ ಪದೇ ಹೇಳುತ್ತಲೇ ಬರುತ್ತಿದ್ದಾರೆ. ನೆಲ ಹಾಗೂ ಜಲದ ಗಾಯತ್ರೀ ಮಂತ್ರ ಜಪ ಮಾಡುತ್ತಲೇ ಇದ್ದಾರೆ. ಪ್ರಧಾನ ವಾಗಿ ನೆಲ ಹಾಗೂ ಜಲ ವಿವಾದದ ಬಗೆಗೇ ಒಂದು ರೀತಿಯಾದ ದೊಡ್ಡ ಟೀಕೆ ಗಳನ್ನು ಮಾಡಿಕೊಂಡೇ ಬರುತ್ತಿದ್ದಾರೆ. ನಮ್ಮ ನಾಯಕರು ಕೊಟ್ಟಿರುವ ಹೇಳಿಕೆ ಯಿಂದ ನಮಗೆ ಒಂದು ವಿಚಾರದಲ್ಲಿ ಶಂಕೆಯಾಗುತ್ತಿದೆ: ಇವರು ಕೊಡುತ್ತಿರುವ ಹೇಳಿಕೆಯಂತೆ ವಿಚಾರ ಮಾಡಿದರೆ ಅನೇಕ ನೀರಾವರಿ ಯೋಜನೆಗಳನ್ನು ಹಾಕಿ ಕೊಂಡು ಬೇಗನೆ ಕೆಲಸಗಳನ್ನು ಪ್ರಾರಂಭ ಮಾಡಬೇಕು. ಇಲ್ಲದೆ ಹೋದರೆ ಇವುಗಳ ಮೌಲ್ಯಗಳು ದಿನೇ ದಿನೇ ಬದಲಾವಣೆಯಾಗುತ್ತಿವೆ. ಇದಕ್ಕಾಗಿ ಸರ್ಕಾರದಲ್ಲಿ ನಾನು ಒತ್ತಾಯಮಾಡಿ ಆದಷ್ಟು ಬೇಗನೆ ಎಲ್ಲ ಯೋಜನೆಗಳನ್ನೂ ಮುಗಿಸಬೇಕು. ಇದಕ್ಕಾಗಿ ಅಲ್ಲಲ್ಲಿರುವ ಅಚ್ಚುಕಟ್ಟುದಾರರುಗಳಿಂದ ವಂತಿಗೆ ರೂಪವಾಗಿ ಸಾಲವನ್ನು ಪಡೆದು ಇಲ್ಲವೇ ನ್ಯಾಷನಲೈಸ್ಡ್ ಬ್ಯಾಂಕುಗಳ ಮೂಲಕ ಸಾಲಗಳನ್ನು ಪಡೆದು ಆದಷ್ಟು ಬೇಗ ರಾಜ್ಯದ ಬೃಹತ್ ನೀರಾವರಿ ಯೋಜನೆ ಗಳನ್ನು ಮುಗಿಸಲು ತಕ್ಕ ಪ್ರಯತ್ನವನ್ನು ಸರಕಾರ ಮಾಡಬೇಕು. ನಮ್ಮ ಕರ್ನಾಟಕ ರಾಜ್ಯದಿಂದ 27 ಸೀಟುಗಳನ್ನು ನಮ್ಮ ಸರಕಾರ ಲೋಕ ಸಭೆಗೆ ಪೂರ್ತಿಯಾಗಿ ಒದಗಿಸಿ ಕೊಟ್ಟಿರುವಾಗ ಕೇಂದ್ರ ಸರಕಾರಕ್ಕೆ ನಮ್ಮ ಕರ್ನಾಟಕ ರಾಜ್ಯದ ಬಗ್ಗೆ ಸ್ವಲ್ಪ ಅಭಿಮಾನವಿರಬೇಕು ಎಂದು ಅವರಿಗೆ ಹೇಳಿ ಒತ್ತಾಯ ಪೂರ್ವಕವಾಗಿ ಕೇಂದ್ರ ಸರ್ಕಾರದವರಿಗೆ ಮನವರಿಕೆಯಾಗುವಂತೆ ಮಾಡಿ ನಮ್ಮ ಯೋಜನೆಗಳು ಕಾರ್ಯಗತವಾಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಶರಾವತಿ ನದಿಯಲ್ಲಿ ನೀರು ಪೋಲಾಗುವುದನ್ನು ನಿಲ್ಲಿಸ ಬೇಕು. ಇದು ಅತಿ ಮುಖ್ಯ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಿಂದೆ ಕೂಡ ಅರಿಕೆ ಮಾಡಿದ್ದೆವು ಮತ್ತು ನಮ್ಮ ಜಿಲ್ಲೆಗೆ ಅವರು ಬಂದಾಗಲು ಅವರಿಗೆ ಇದನ್ನು ಅರಿಕೆ ಮಾಡಿದ್ದೆವು. ಇಲ್ಲಿ ಪೋಲಾಗುತ್ತಿರುವ ನೀರನ್ನು ತಡೆದರೆ ಇದರ ಕೆಳಗೆ ಬರುವ ಭೂಮಿಯವರು ಈ ನೀರನ್ನುಪಯೋಗಿಸಿಕೊಂಡು ಬೆಳೆ ಬೆಳೆಯಲು ಸಹಾಯವಾಗುತ್ತದೆ. ಇಲ್ಲಿ ಪೋಲಾಗುತ್ತಿರುವ ನೀರು ವಿನಿದೆ ಅದನ್ನು ತಡೆದರೆ ಆ ನೀರಿನಿಂದ ಇಲ್ಲಿನ ಜನರು ವ್ಯವಸಾಯ ಮಾಡಲು ಸಹಾಯವಾಗುತ್ತದೆ. ಅಪ್ಪಣೆ ಇಲ್ಲದೆ ಕೆಲವರು ಇಲ್ಲಿನ ನೀರನ್ನು ದುರುಪಯೋಗ ಮಾಡುತ್ತಿದ್ದಾರೆ. ಸರಕಾರ ಇದನ್ನು ನಿಲ್ಲಿಸಬೇಕು. ಇದನ್ನು ಪ್ರತಿ ಸಲವೂ ಸರಕಾರಕ್ಕೆ ತರು ತ್ತಿದ್ದೇವೆ. ಇದರ ಬಗ್ಗೆ ಇನ್ನೂ ಸರಿಯಾದ ಕಾರ್ಯಕ್ರಮವಾಗಲಿಲ್ಲ ನಮ್ಮ ರಾಜ್ಯ ಮಂತ್ರಿಗಳಾದ ಶ್ರೀಕಂಠಯ್ಯನವರ ಬಗ್ಗೆ ನನ್ನ ಮೆಚ್ಚಿಕೆ ವ್ಯಕ್ತಪಡಿಸ ಬೇಕಾಗಿದೆ. ನಾನು ಅವರಲ್ಲಿ ನಮ್ಮ ಭಾಗದ ಕಾರ್ಕೊಳ್ಳ ಹಳ್ಳದ ಯೋಜನೆ ಅಗತ್ಯವಾಗಿ ಮಾಡಬೇಕೆಂದು ಹೇಳಿದ್ದೆ. ಇದರ ಬಗ್ಗೆ ಕ್ಲಿಯರೆನ್ಸ್‌ಗೆ ಆರ್ಡರು

ಮಾಡಲಾಗಿದೆ ಎಂದು ತಿಳಿಸಿದರು. ಇದಕ್ಕಾಗಿ ನಾನು ಅವರನ್ನು ಅಭಿನಂದನೆ ಮಾಡುತ್ತೇನೆ. ಈ ಯೋಜನೆಯು ನೀರನ್ನು ಉಪಯೋಗಿಸಿಕೊಂಡು ಇಲ್ಲಿನ ಜನರು ವ್ಯವಸಾಯ ಮಾಡಲು ಬಹಳ ಸಹಾಯವಾಗುತ್ತದೆ. ಇದಕ್ಕಾಗಿ ನಾನು ನನ್ನ ಮೆಚ್ಚಿಗೆಯನ್ನು ಅವರ ಬಗ್ಗೆ ವ್ಯಕ್ತಪಡಿಸಲೇಬೇಕು. ಇನ್ನು ನಮ್ಮ ಭಾಗದಲ್ಲಿ ಮಿನಿಮಂ ನೀಡ್ ಪ್ರೋಗ್ರಾಂ ಎಂದು ಸರಕಾರ ಮಾಡಿರುವುದು ಇನ್ನೂ ಬರೀ ಕಾಗದದಲ್ಲೇ ಉಳಿದಿದೆ. ಶರಾವತಿ ಪ್ರದೇಶದಲ್ಲಿದ್ದ ಜನಗಳಿಗೆ ಬೇರೆ ಜಾಗವನ್ನು ಕೊಡಬೇಕೆಂದು ಮಾಡಿದ್ದರೋ ಅಂತಹ ಜನರ ಅವಶ್ಯಕತೆಗಳಿಗಾಗಿ ಕೆಲವು ಮಿನಿಮಂ ಪ್ರೋಗ್ರಾಂಗಳನ್ನು ಮಾಡಬೇಕೆಂದು ಕೇಂದ್ರ ಸರಕಾರದವರು ಸೂಚಿಸಿದ್ದರು. ಅದರಂತೆ ರಾಜ್ಯ ಸರಕಾರವೂ ಒಪ್ಪಿತ್ತು. ಆದರೆ ಪ್ರೋಗ್ರಾಂ ಪ್ರಕಾರ ಶರಾವತಿಯಲ್ಲಿ ಭೂಮಿ ಕಳೆದುಕೊಂಡಿರುವ ನೂರಾರು ಜನರು ಇನ್ನೂ ಯಾವ ಸೌಕರ್ಯಗಳನ್ನೂ ಪಡೆಯದೇ ಹಾಗೇ ಕಾಯುತ್ತಿದ್ದಾರೆ. ಇವರಿಗಾಗಿ ಮಾಡಬೇಕೆಂದಿರುವ ಯೋಜನೆಗಳು ಇನ್ನೂ ಬರೀ ಕಾಗದದಲ್ಲೇ ಉಳಿದಿದೆ. ಇದರ ಬಗ್ಗೆ ಆದಷ್ಟು ಬೇಗ ಸರಕಾರ ತೀರ್ಮಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವರ್ಷ ವರ್ಷವೂ ನಾವು ಇದೇ ಜನರ ಸಮಸ್ಯೆ ಬಗ್ಗೆ ಕೇಳುತ್ತಲೇ ಬರುತ್ತಿದ್ದೇವೆ. ಇಲ್ಲಿರುವ ಜನರು ಬಹುತೇಕ ಕೂಲಿ ಮಾಡುವ ಜನರು ಇವರಿಗೆ ಸಾಕಷ್ಟು ಸೌಕರ್ಯಗಳನ್ನು ಸರಕಾರ ಬೇಗನೆ ಮಾಡಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಲಿಂಗನಮಕ್ಕಿ ಜಲಾಶಯದಲ್ಲಿ ನೀರು ಸೋರಿ ಹೋಗುತ್ತಿದೆ. ಇದು ಶಿವಮೊಗ್ಗದಲ್ಲಿರುವ ಎಲ್ಲ ಶಾಸಕರಿಗೂ ತಿಳಿದಿರುವ ವಿಷಯವೇ ಆಗಿದೆ. ಅನೇಕ ಸಂದರ್ಭಗಳಲ್ಲಿ ಎಲ್ಲ ಶಾಸಕರೂ ಸರಕಾರದ ಗಮನಕ್ಕೆ ಇದರ ವಿಚಾರವನ್ನು ಹೇಳುತ್ತಲೇ ಬರುತ್ತಿದ್ದಾರೆ. ಇದುವರೆಗೂ ಸರಕಾರ ಏನು ಮಾಡಲಿಲ್ಲ. ಇದರ ಕಟ್ಟೆ ಒಡೆದು ಸೋರುತ್ತಿದೆ ಎಂದು ಹೇಳುವುದು ಇಲ್ಲಿರುವ ತಾಂತ್ರಿಕ ತಜ್ಞರು ಪರಿಶೀಲನೆ ಮಾಡಿ ಹೇಳಬೇಕಾದ ವಿಚಾರ ಎಂದು ಹೇಳಬಹುದು. ದಿನ ನಿತ್ಯವೂ ಇದರ ಸುತ್ತಮುತ್ತ ಇರುವ ಜನರು ನೀರು ಸೋರುತ್ತಿರುವುದನ್ನು ನೋಡುತ್ತಲೇ ಇದ್ದಾರೆ. ಇದರಿಂದ ನೀರು ಅಪವ್ಯಯವಾಗುತ್ತಿದೆ ಎಂದು ಸರಕಾರಕ್ಕೆ ಹೇಳುತ್ತಲೇ ಬರುತ್ತಿದ್ದರೂ ಇದುವರೆಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಇನ್ನಾದರೂ ಕೂಡ ಇಂತಹ ಅಪವ್ಯಯವನ್ನು ತಡೆಗಟ್ಟಲು ತಕ್ಕ ಕಾರ್ಯಕ್ರಮವನ್ನು ಬೇಗನೆ ತೆಗೆದುಕೊಳ್ಳಬೇಕು ಎಂದು ಇಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಮಾನ್ಯ ಶ್ರೀ ದೇವೇಗೌಡರವರು ಕೃಷ್ಣಾ ನೀರಿನ ಡಿಸ್‌ಪ್ಯೂಟ್ ಬಗ್ಗೆ ನಮ್ಮ ರಾಜ್ಯದ ಪರಿಣತರು ಏತಕ್ಕಾಗಿ ವಾಪಸು ಬಂದರು ಮತ್ತು ಅವರಿಗೆ ಹೀಗೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಬರಲು ಯಾರು ತಿಳಿಸಿದ್ದರು ಎಂದು. ರಾಜ್ಯಸರಕಾರದ ಅಪ್ಪಣೆ ಇಲ್ಲದೆ ಅಥವಾ ಆದೇಶವಿಲ್ಲದೆ ಯಾರೂ ಕೋರ್ಟುಗಳಿಂದ ವಾಪಸು ಬರಲು ಸಾಧ್ಯವಿಲ್ಲ. ರಾಜ್ಯ ಸರಕಾರದ ಸೂಚನೆಯಂತೆ ಅವರು ವಾಪಸು ಬಂದಿದ್ದಾರೆ. ಇದರಲ್ಲಿ ಸರಕಾರದ ದಿಟ್ಟನಿಲವು ಏನಿತ್ತು ಎನ್ನುವುದನ್ನು ತಿಳಿದುಕೊಂಡು ಸರಕಾರ ಕೊಟ್ಟು ಆದೇಶ ದಂತೆ ಅವರು ವಾಪಸು ಬಂದಿದ್ದಾರೆ. ರಾಜ್ಯ ಸರಕಾರದ ನಿಲುವಿಗೆ ಮನ್ನಣೆ ಕೊಡಬೇಕಾದ್ದು ಅವರ ಅಗತ್ಯ ಮತ್ತು ಕರ್ತವ್ಯ. ಇದಕ್ಕೆ ಸರಕಾರಕ್ಕೆ ಎಲ್ಲರೂ ಮೆಚ್ಚಬೇಕಾಗಿತ್ತು ಎಂದು ಇಲ್ಲಿ ಹೇಳಲು ಇಚ್ಛಿಪಡುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಅನೇಕ ಯೋಜನೆಗಳನ್ನು ಮಾಡಿರುತ್ತಾರೆ. ದಿನ ದಿನವೂ ಮಾಲಿನ ಬೆಲೆಗಳು ಏರುತ್ತಲೇ ಹೋಗುತ್ತಿವೆ. ನಮ್ಮ ಭಾಗದಲ್ಲೇ ಮೂರು ಕೋಟಿ ರೂಪಾಯಿನ ಒಂದು ಯೋಜನೆ ಎರಡು ವರ್ಷಕ್ಕೆ ಮುಂಚೆ ಆಗಿದ್ದರೆ ಅದು ಮೂರು ಕೋಟಿಯೊಳಗೆ ಮಾಡಿ ಮುಗಿಸಬಹುದಾಗಿತ್ತು. ಇಂದು ಎರಡು ವರ್ಷಗಳಾದ ನಂತರ ಇದನ್ನು ಮಾಡಲು ಹೋದಾಗ ಇದರ ಬೆಲೆ ಸುಮಾರು 4.20 ಕೋಟಿಯ ವರೆಗೆ ಬರುತ್ತದೆ. ಅದುದರಿಂದ ಅದಷ್ಟು ಜಾಗ್ರತೆಯಾಗಿ ಸರಕಾರ ಯೋಜನೆ ಗಳನ್ನು ಮಾಡಿ ಅದನ್ನು ಮುಗಿಸುವುದರ ಕಡೆಗೆ ಸರಕಾರ ತೀವ್ರವಾಗಿ ಪ್ರಯತ್ನ ಮಾಡಬೇಕು. ಇಲ್ಲದೇ ಇದ್ದರೆ ವರ್ಷ ವರ್ಷವೂ ಬೆಲೆಗಳು ಏರುತ್ತಿರುವುದರಿಂದ ಯಾವ ಯೋಜನೆಗಳನ್ನೂ ನಿರ್ದಿಷ್ಟ ಅವಧಿಯಲ್ಲಿ ಪೂರ್ಣಮಾಡಲು ಆಗುವುದಿಲ್ಲ. ಇದಕ್ಕೆ ಕಾರಣ ಬೆಲೆಗಳು ಏರುತ್ತಿರುವುದು. ಉದಾಹರಣೆಯಾಗಿ ನಮ್ಮ ಕ್ಷೇತ್ರ ದಲ್ಲಿ ಸುಮಾರು ಎರಡು ಲಕ್ಷ ರೂಪಾಯಿಗಳ ಒಂದು ಕನ್‌ಸ್ಟ್ರಕ್ಷನ್ ಸ್ಕೀಂ 69 ರಲ್ಲಿ ಬಡ್ಜೆಟ್ಟಿನಲ್ಲಿ ಸೇರಿಸಲಾಗಿತ್ತು. ಇದು ಹೆಗ್ಗರನಹಳ್ಳಿ ಸೇತುವೆ ಮಾಡಬೇಕೆಂದು. ಈ ಸೇತುವೆಯನ್ನು 69 ರಲ್ಲಿ ಸೇರಿಸಿದ್ದರೂ ಕೂಡ ಇದನ್ನು ಆಗ ಮಾಡಲಾಗಲಿಲ್ಲ. ಈಗ ಆ ಯೋಜನೆ ಮಾಡಬೇಕಾದರೆ ಇದರ ಅಂದಾಜು ಸುಮಾರು ಆರು ಲಕ್ಷದ ವರೆಗೆ ಬರುತ್ತದೆ ಎಂದು ಹೇಳುತ್ತಾರೆ. ಈಗಲಾದರೂ ನಾನು ವಿನಂತಿ ಮಾಡು ವುದು ಈ ಯೋಜನೆಯನ್ನು ಸರಕಾರ ಬೇಗನೆ ಮಾಡಿ ಮುಗಿಸಿಕೊಡಬೇಕೆಂದು ಹೇಳುತ್ತೇನೆ. ಇದಕ್ಕಾಗಿ ಇತರ ಕೆಲವು ಕಾರ್ಯಕ್ರಮಗಳನ್ನು ಸ್ಥಗಿತ ಮಾಡಿದರೂ ಸರಿಯೇ ಈ ಸೇತುವೆ ಯೋಜನೆಯನ್ನು ಕೂಡಲೇ ಮಾಡಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತು ಯೋಜನೆಯನ್ನು ವೇಳೆಗೆ ಸರಿಯಾಗಿ ಮುಗಿಸಲೇ ಬೇಕು ಎಂದು ಸರಕಾರದ ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದೂ ಸಲಹೆ ಮಾಡುತ್ತೇನೆ.

ಅನಂತರ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಆಪಾದನೆ ಗಳನ್ನು ಮಾಡಿದರು. ಆಪಾದನೆಗಳನ್ನು ಮಾಡುವಾಗ ಯಾವ ಕಾಗದ ಪತ್ರಗಳು ಹಾಗೂ ಪುರಾವೆಗಳು ಇಟ್ಟುಕೊಂಡು ಅವರು ಇಲ್ಲಿ ಮಾಡಿದರೋ ನನಗಂತೂ

ಅರ್ಥವಾಗುತ್ತಿಲ್ಲ. ಹಿಂದೆ ಒಂದು ಸಂದರ್ಭದಲ್ಲಿ ಹೇಳುವಾಗ ನಮ್ಮ ಆಡಳಿತ ಪಕ್ಷದ ಅಧ್ಯಕ್ಷರ ಮೇಲೆ ಆಪಾದನೆಗಳನ್ನು ಮಾಡಿದರು. ಇಂದು ನಮ್ಮ ಪಕ್ಷದ ಕಾರ್ಯದರ್ಶಿಗಳ ಒಗ್ಗ ಆಪಾದನೆ ಮಾಡಿದ್ದಾರೆ. ಪ್ರತಿಯೊಂದು ಸಂದರ್ಭದಲ್ಲೂ ಬರೀ ಕ್ಯಾರೆಕ್ಟರು ಅಸಾಸಿನೇಷನ್ ಮಾಡುವುದೇ ಇದರ ಉದ್ದೇಶವಾಗಿರಬಹುದು ಎಂದು ನನಗೆ ತೋರುತ್ತೆ. ಇದು ಸಭೆಯ ಸದಸ್ಯರಿಗೆ ಗೌರವ ತರುವಂತಹವುಗಳಲ್ಲ ಎಂದು ಇಲ್ಲಿ ಹೇಳಬೇಕಾಗಿದೆ. ಏನಾದರೂ ಆಪಾದನೆಗಳು ಇದ್ದರೆ ತಕ್ಕ ಕಾಗದ ಪತ್ರಗಳು ಹಾಗೂ ಇತರ ಪುರಾವೆಗಳನ್ನು ಇಟ್ಟು ಇಲ್ಲಿ ಹೇಳಬೇಕು ಯಾವ ಆಧಾರಗಳು ಇಲ್ಲದೆ ಇಲ್ಲಿ ಕೇವಲ ಪೊಳ್ಳು ಆಪಾದನೆ ಮಾಡಲಿಕ್ಕೆ ಏಕೆ ಹೋಗಬೇಕು ?

ಶ್ರೀ ಕೋಣಂದೂರು ಲಿಂಗಪ್ಪ :—ಪೊಳ್ಳು ಆಪಾದನೆ ಮಾಡುತ್ತಿಲ್ಲ. ನಮ್ಮಲ್ಲಿ ಇದಕ್ಕೆ ಸಾಕಷ್ಟು ಆಧಾರಗಳಿವೆ.

ಶ್ರೀ ಹೆಚ್. ಡಿ. ದೇವೇಗೌಡ :—ಮಾನ್ಯ ಸದಸ್ಯರು ಇಲ್ಲಿ ಹತೋಟಿ ಮೀರಿ ಮಾತಾಡುತ್ತಿದ್ದಾರೆ. He must withdraw what he has said.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ :—ಹಾಗಾದರೆ ಅವರು ಏನು ಬೇಕಾದರೂ ಮಾತನಾಡಬಹುದೇ ? This House is not meant only for Sri Deve Gowda. Can he talk as he likes ?

ಶ್ರೀ ಕೋಣಂದೂರು ಲಿಂಗಪ್ಪ :—ಯಾರದು ಪೊಳ್ಳು ಮಾತು ಎಂಬುದು ಆಮೇಲೆ ಗೊತ್ತಾಗುತ್ತದೆ.

SRI S. M. SHEERNALY CHANDRASHEKHAR :—This House is not meant only for the Opposition.

MR. DEPUTY SPEAKER :—I request the Hon. Member to repeat what he said

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ :—ನಾನು ಹೇಳಿದ್ದು ಏನೆಂದರೆ ಈ ಶಾಸನ ಸಭೆಯಲ್ಲಿ ನಮ್ಮ ವಿರೋಧ ಪಕ್ಷದ ಮಿತ್ರರು ಆಪಾದನೆಗಳನ್ನು ಮಾಡುವ ರಿವಾಜು ಮಾಡಿಕೊಂಡು ಬಂದಿದ್ದಾರೆ. ಯಾವ ಕಾಗದ ಪತ್ರಗಳೂ ಇಲ್ಲದ, ಯಾವ ಪುರಾವೆಗಳೂ ಇಲ್ಲದ ಸಾಧನ ಸೌಕರ್ಯಗಳೂ ಇಲ್ಲದ ಇಂಥಾ ಪೊಳ್ಳು ಆಪಾದನೆಗಳನ್ನು ಮಾಡುವುದನ್ನು ನಿಲ್ಲಿಸಬೇಕು ಎಂದು ನಾನು ಹೇಳಿದ್ದೇನೆ. Is it unparliamentary ? If it is unparliamentary I will withdraw.

ಶ್ರೀ ಕೆ. ಎಂ ನಾಗಣ್ಣ :—ಪೊಳ್ಳು ಎಂದರೆ ಸುಳ್ಳು

SRI S. M. SHEERNALY CHANDRASHEKHAR :—It means hollow ; it means it is a baseless statement.

SRI H. M. CHANNABASAPPA : —There is not much difference between ಪೊಳ್ಳು and ಹಾಲೊ both means hollow. I do not see any reason for anybody to get upset.

MR. DEPUTY SPEAKER :—In either case, it means hollow, without substance. There is no further insinuation. We should leave it at that only. These things are not uncommon.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :—ಸ್ವಾಮಿ ನಾನು ಈ ಸದನದ ಮುಖಾಂತರ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಇಂಥಾ ಪದ್ಧತಿಯನ್ನು ಕೈ ಬಿಡುವುದು ಒಳ್ಳೆಯದು. ಏತಕ್ಕೆಂದರೆ ಇದು ಶೋಭಾಯಮಾನವಾಗಿಲ್ಲ. ಏನಾದರೂ ಆಪಾದನೆಗಳು ಇದ್ದರೆ ನೋಟೀಸ್ ಕೊಟ್ಟು ರಾಜಾರೋಷವಾಗಿ ಮಾತನಾಡಲಿ. ಏನೂ ಆದಾರವಿಲ್ಲದೆ ಆಪಾದನೆಯನ್ನು ಮಾಡುವುದು ಅದೆಲ್ಲವೂ ಪತ್ರಿಕೆಯಲ್ಲಿ ಬರುವುದು ಇದೆಲ್ಲಾ ಏತಕ್ಕೆ ? ಇದು ಅಷ್ಟು ಚೆನ್ನಾಗಿರುವುದಿಲ್ಲ

ಒಟ್ಟಿನಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಇಷ್ಟೆ. ವಿದ್ಯುಚ್ಛಕ್ತಿ ಮಂಡಲಿಯವರು ಪದೇ ಪದೇ ಕರೆಂಟ್ ಹೋಗುವುದನ್ನು ದಯವಿಟ್ಟು ನಿಲ್ಲಿಸಬೇಕು. ನಾನು ಅಮೆರಿಕಾದಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಒಂದು ದಿವಸವಾದರೂ ಕರೆಂಟ್ ಹೋದದ್ದನ್ನು ನಾನು ನೋಡಲಿಲ್ಲ ಶುಭ ಕಾರ್ಯದಲ್ಲಿ ಕರೆಂಟ್ ಹೋದರೆ ತುಂಬಾ ತೊಂದರೆಯಾಗುತ್ತದೆ. ಮದುವೆ ಲಗ್ನದಲ್ಲಿ ಕರೆಂಟ್ ಹೋದರೆ ಗಂಡು ಹೆಂಡತಿ ಕೊರಳಿಗೆ ಕಟ್ಟುವ ಮಾಂಗಲ್ಯವನ್ನು ಪಕ್ಕದಲ್ಲಿರುವ ಅತ್ತೆ ಕೊರಳಿಗೆ ಕಟ್ಟುವಂತಹ ಪರಿಸ್ಥಿತಿ ಬರುತ್ತದೆ. ಏತಕ್ಕೆಂದರೆ ಎಷ್ಟೋ ಸಂದರ್ಭದಲ್ಲಿ ರಾತ್ರಿ ಹೊತ್ತು ಗೋಧೂಳಿ ಲಗ್ನ ಇರುವಂತಹ ಸಮಯದಲ್ಲಿ ಮುಹೂರ್ತ ನಡೆದು ಗಂಡು ಹೆಂಡತಿಗೆ ಮಾಂಗಲ್ಯವನ್ನು ಕಟ್ಟುವ ಸಂದರ್ಭದಲ್ಲಿ ಕರೆಂಟ್ ಹೋದರೆ ಅವನು ಏನು ಮಾಡುತ್ತಾನೆ ?. ಪಕ್ಕದಲ್ಲಿ ಧಾರೆ ಎರೆದುಕೊಡುವುದಕ್ಕೆ ಅತ್ತೆ ಮಾವ ಕುಳಿತು ಕೊಂಡಿರುತ್ತಾರೆ ಆಗ ಗಂಡು ಕತ್ತಲೆಯಲ್ಲಿ ಕಾಣದ ಹೆಂಡತಿಗೆ ಕಟ್ಟುವ ಮಾಂಗಲ್ಯವನ್ನು ಅತ್ತೆ ಕೊರಳಿಗೆ ಕಟ್ಟುತಾನೆ ಆದ್ದರಿಂದ ಇಂಥಾ ಅವ್ಯವಸ್ಥೆಯಾಗುವುದನ್ನು ದಯವಿಟ್ಟು ಬಂದು ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಮನೆಯಲ್ಲಿ ಎಷ್ಟೋ ಕರೆಂಟ್ ಇನ್‌ಫ್ಲೋ ಆಫ್ ಹೈವೋಲ್ಟೇಜ್ ಆಗಿ ತೊಂದರೆ ಆಯಿತು. ನನ್ನ ಮನೆಯಲ್ಲಿ

4—5 ಸಲ ಈ ತರಹ ಆಯಿತು ಅದರ ಚಾರ್ಜ್ ಅನ್ನು ನಾನು ಎಲ್ಲಿ ಕ್ಲೈಮ್ ಮಾಡಬೇಕು : ಅದರ ರಿಪೇರಿಗಾಗಿ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿಗೆ 700—800 ರೂಪಾಯಿಗಳನ್ನು ನಾನು ಕೊಟ್ಟಿದ್ದೇನೆ. ಇನ್‌ಫ್ಲೋ ಆಫ್ ಹೈ ವೋಲ್ಟೇಜ್ ನಿಂದ ನಮ್ಮ ಮನೆಯ ರೆಫ್ರಿಜರೇಟರ್ ಕೆಟ್ಟು ಹೋಯಿತು. ಇದನ್ನು ರಿಪೇರಿ ಮಾಡುವುದಕ್ಕೆ ಹಣ ಖರ್ಚು ಮಾಡಬೇಕಾಯಿತು. ಆದಕಾರಣ ಇಂಥಾ ನ್ಯೂನತೆಯನ್ನೆಲ್ಲಾ ತಪ್ಪಿಸಬೇಕು ಎಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಭಾಷಣ ವನ್ನು ಮುಗಿಸುತ್ತೇನೆ.

* ಶ್ರೀ ಹೆಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ) :— ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡ ನಂಬರ್ 42, 51, 52, ಈ ಮೂರು ಡಿಮ್ಯಾಂಡುಗಳನ್ನೂ ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಆಡಲು ಇಚ್ಛೆಪಡುತ್ತೇನೆ. ಬೃಹತ್ ನೀರಾವರಿ ಯೋಜನೆ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ವಿಚಾರವಾಗಿ ಮತ್ತು ದೇಶದ ನೀರಿನ ಸಂಪತ್ತನ್ನು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ಎಲ್ಲರ ಹೊಣೆಗಾರಿಕೆಯೂ ಇರಬೇಕು. ಎಲ್ಲರೂ ಇದನ್ನು ದೇಶದ ಸ್ವತ್ತು ಎಂದು ತಿಳಿದುಕೊಂಡು ಯೋಚನೆ ಮಾಡಬೇಕು. ಮಾನ್ಯ ದೇವೇಗೌಡರು ಹೇಳಿದ ಹಾಗೆ ಈ ನೀರನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ಸಂಕುಚಿತಭಾವನೆ ಇರುವುದು, ಇದನ್ನು ಸಂಕುಚಿತಭಾವನೆಯಿಂದ ನೋಡುವುದು ತಪ್ಪು. ಈ ಬೃಹತ್ ನೀರಾವರಿ ಯೋಜನೆಗಳನ್ನು ಕೈಗೊಂಡರೆ ಯಾರಿಗೋ ಕೆಲವರಿಗೆ ಅನುಕೂಲವಾಗುತ್ತದೆ. ಅದರಿಂದ ನಮಗೆ ಅನುಕೂಲವಾಗುವುದಿಲ್ಲ ಮೈನರ್ ಇರಿಗೇಷನ್ನಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು; ಮತ್ತು ಬೇರೆ ಕಾರ್ಯಗಳಿಗೂ ಹೆಚ್ಚು ಪ್ರೋತ್ಸಾಹ ಕೊಡಬೇಕು ಎಂದು ಏನು ಅವರು ಹೇಳಿದರು ಅವರ ವಾದ ಸರಿಯಲ್ಲ. ಹಿಂದಿನ ಸರ್ಕಾರದವರು ಮುಖ್ಯ ಮಂತ್ರಿಗಳು ಯಾರೇ ಆಗಿರಲಿ, ಸರಿಯಾದ ರೀತಿಯಲ್ಲಿ ನಮ್ಮ ದೇಶದಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ಧೈರ್ಯವಾಗಿ ಕಾರ್ಯಗತ ಮಾಡದೆ ನಮ್ಮ ನೀರಿನ ಸಂಪತ್ತನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ನಮಗೆ ಬಹಳ ನಷ್ಟ ಮಾಡಿದ್ದಾರೆ. ಕರ್ತವ್ಯ ಲೋಪ ಮಾಡಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈಗ ಉದಾಹರಣೆಗೆ ಆಂಧ್ರದವರು 400 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಾಗಾರ್ಜುನ ಸಾಗರ ಅಣೆಕಟ್ಟನ್ನು ಕಟ್ಟಿದ್ದಾರೆ. ಅವರು ಅದನ್ನು ತ್ವರಿತವಾಗಿ ಮಾಡಿ ಸುಮಾರು 20 ಸಾವಿರ ಎಕರೆಗೆ ನೀರನ್ನು ಒದಗಿಸಿ ಅಲ್ಲಿ ಜನ ಜನತೆಗೆ ಬಹಳ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ತಮಿಳುನಾಡಿ ನವರು ಹಿಂದೆ ಅನೇಕ ಪ್ರಾಜೆಕ್ಟ್‌ಗಳನ್ನು ಕೇಂದ್ರ ಸರ್ಕಾರದ ಅನುಮತಿಯನ್ನು

(ಶ್ರೀ ಹೆಚ್. ಬಿ. ಕೆಂಚೇಗೌಡ)

ಪಡೆಯದೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯದೆ ಅವುಗಳನ್ನು ಕಾರ್ಯಗತ ಮಾಡಿ ಸುಮಾರು 29 ಲಕ್ಷ ಎಕರೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದಾರೆ. ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಕಾವೇರಿ ಬೇಸಿನ್‌ನಲ್ಲಿ ಪೂರ್ಣ ನೀರಾವರಿ ಸೌಲಭ್ಯ ದೊರೆತಿಲ್ಲ ಎಲ್ಲರಿಗೂ ಗೊತ್ತಿರುವ ಹಾಗೆ ಕೃಷ್ಣಾ ವಾಟರ್ ಡಿಸ್‌ಪ್ಯೂಟ್, ಕಾವೇರಿ ವಾಟರ್ ಡಿಸ್‌ಪ್ಯೂಟ್ ನಡೆಯುತ್ತಿವೆ. ನಮ್ಮ ರಾಜ್ಯಕ್ಕೆ ಬರಬೇಕಾದ ನೀರಿನ ಭಾಗವನ್ನು ಉಪಯೋಗಿಸಿಕೊಳ್ಳದೇ ಇರುವುದರಿಂದ ಈಗ ನಮ್ಮ ಕರ್ನಾಟಕ ರಾಜ್ಯಕ್ಕೆ ನಷ್ಟವಾಗಿದೆ. ಈಗ ನಮ್ಮ ರಾಜ್ಯದಲ್ಲಿ ಆಹಾರ ಸಮಸ್ಯೆ ಬಹಳ ಕಠಿಣವಾಗಿರುವಾಗ ನೀರಾವರಿ ಯೋಜನೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡದೇ ಹೋದರೆ ಮುಂದೆ ನಮ್ಮ ದೇಶದಲ್ಲಿ ಆಹಾರ ಪರಿಸ್ಥಿತಿಗೆ ಹೆಚ್ಚು ಧಕ್ಕೆ ಬರುತ್ತದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಆದನ್ನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ದೇಶದಲ್ಲಿ ನೀರಾವರಿ ಯೋಜನೆಗಳು ಕಾರ್ಯಗತ ಮಾಡುವುದರಲ್ಲಿ ಎಲ್ಲಾ ದಯಾದಾಕ್ಷಿಣ್ಯಕ್ಕೊಳಗಾಗಿ ಅನೇಕ ಯೋಜನೆಗಳನ್ನು ಕೈಗೊಂಡು ಯಾವ ಯೋಜನೆಯನ್ನೂ ಪೂರ್ತಿಗೊಳಿಸದೆ ಈಗ ಹಾಕಿರತಕ್ಕ ದುಡ್ಡಿಗೆ ರಿಟರ್ನ್ಸ್ ಬಾರದೆ ಡೆಡ್ ಕ್ಯಾಪಿಟಲ್ಲಾಗಿ ನಿಲ್ಲುವುದಕ್ಕೆ ಅವಕಾಶವಾಗಿದೆ. ಈಗ ಕಪಿನಿ ಪ್ರಾಜೆಕ್ಟ್ ಏನಿದೆಯೋ ಅದನ್ನು ನೋಡಿದರೆ, ಅಲ್ಲಿನ ಬಿ. ಟಿ. ಎಂ. ಸಿ. ಯವರು ಹೆಚ್ಚು ವಾಟರನ್ನು ಸ್ಟೋರ್ ಮಾಡಿದ್ದಾರೆ ಈ ನೀರನ್ನು ಉಪಯೋಗ ಮಾಡುವ ಯೋಜನೆ ಏನೆಂದರೆ ಈ ಕಾಲುವೆಗಳನ್ನು ಪೂರ್ತಿಗೊಳಿಸಿ ಆದನ್ನು ಡಿಸ್ಟ್ರಿಬ್ಯೂಟ್ ಮಾಡಬೇಕಾಗುತ್ತದೆ. ಮದ್ರಾಸಿನಲ್ಲಿ ಈಗಾಗಲೇ ಬೆಳೆಗಳು ಒಣಗುತ್ತಾ ಇವೆ. ಅಲ್ಲಿ ಕಪಿನಿ ವಾಟರನ್ನು ಸ್ಟೋರ್ ಮಾಡಿಕೊಂಡಿರುವುದರಿಂದ ವಾಟರ್ ಅಲ್ಲಿಯೇ ಸ್ಟಾಗ್‌ನೇಟ್ ಆಗುತ್ತಿದೆ. ಮಳೆಗಾಲದಲ್ಲಿ ನೀರು ಬಿಡುತ್ತಾ ಇಲ್ಲ ನಮ್ಮ ಪಾಲಿನ ನೀರನ್ನೂ ಸಹ ಕೊಡುತ್ತಾ ಇಲ್ಲವೆಂಬುದು ಇದರಿಂದ ಎತ್ತಿ ತೋರಿಸುತ್ತದೆ. ಇಂತಹ ಒಂದು ಪ್ರಾಜೆಕ್ಟ್ ಮಾಡುವಾಗ ಈ ಕೆನಾಲ್‌ಗಳಿಗೆ ಎಷ್ಟು ಖರ್ಚಾಗುತ್ತದೆ, ಇನ್ನೂ ಇತರೇ ಮಿಸಲೇನಿಯಸ್ ವರ್ಕ್ಸ್ ಏನೇನಿವೆ, ಕಂಪೆನ್‌ಸೇಷನ್ ಎಷ್ಟು ಆಗಿದೆ, ಅದಕ್ಕೆ ಎಷ್ಟು ದುಡ್ಡು ಖರ್ಚು ಆಗುತ್ತದೆಂದು ನೋಡಬೇಕು. ನಾವು ಹೆಚ್ಚಿಗೆ ದುಡ್ಡನ್ನು ಇದಕ್ಕಾಗಿ ಅಲಾಟ್ ಮಾಡದೇ ಹೋದರೆ ಕಪಿನಿ ಪ್ರಾಜೆಕ್ಟ್‌ನಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ಕಾಲುವೆಗಳನ್ನು ತೆಗೆದು ವ್ಯವಸಾಯಕ್ಕೆ ಬೇಕಾದಷ್ಟು ನೀರನ್ನು ಒದಗಿಸಬೇಕಾದರೆ ಸುಮಾರು 25 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಈ ಸಾರಿ ಕೇವಲ ಇದಕ್ಕೆ ಎರಡೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಈ ಕಾಲುವೆಗಳನ್ನು ಕಟ್ಟಿ ಮುಗಿಸ

ಬೇಕಾದರೆ ಇನ್ನೂ ಕನಿಷ್ಠ ಪಕ್ಷ 10 ವರ್ಷಗಳಾದರೂ ಬೇಕಾಗುತ್ತದೆ. ಇನ್ನು ನಮ್ಮ ಹಾರಂಗಿ ಪ್ರಾಜೆಕ್ಟ್ ವಿಚಾರ. ಇದು ಬಹಳ ಮಹತ್ವವಾದಂಥ ಯೋಜನೆ ಯಾಗಿದೆ. ಇದರಿಂದ ಮೂರ್‍ನ್ಯ ಮುಖ್ಯ ಮಂತ್ರಿಗಳ ತಾಲ್ಲೂಕುಗಳಿಗೆ ಹೆಚ್ಚಿಗೆ ಅನುಕೂಲವಾಗುವುದು. ಈ ಪ್ರಾಜೆಕ್ಟ್ ಕೆಲಸವನ್ನು 10 ವರ್ಷಗಳ ಮುಂಚೆಯೇ ತೆಗೆದುಕೊಂಡಿದ್ದರೆ ಕೇವಲ 11 ಕೋಟಿ ರೂಪಾಯಿಗಳ ಎಸ್ಟಿಮೇಟ್‌ನಲ್ಲಿ ಕೆಲಸ ವಾಗುತ್ತಿತ್ತು. ಈಗ ಅದಕ್ಕೆ 33 ಕೋಟಿ ರೂಪಾಯಿಗಳವರೆಗೆ ಹೋಗಿದೆ. ಆಗಲೇ ಅದನ್ನು ಶೀಘ್ರವಾಗಿ ಕಾರ್ಯಗತ ಮಾಡಿದ್ದರೆ, ಈ ಪ್ರಾಜೆಕ್ಟ್ ವಿಚಾರದಲ್ಲಿ ಇನ್ನೂ ಹೆಚ್ಚು ಉಳಿತಾಯವಾಗುತ್ತಿತ್ತು. ಆದ್ದರಿಂದ ಹಿಂದೆ ಯೋಚನೆ ಮಾಡಿರುವುದರ ಪ್ರಕಾರ ಈ ಒಂದು ಪ್ರಾಜೆಕ್ಟ್ ಪೂರ್ತಿಯಾಗಿ ಕಾರ್ಯಗತವಾಗಿ ಎಲ್ಲಾ ಕಾಲುವೆ ಗಳನ್ನು ತೆಗೆದು 94 ಸಾವಿರ ಎಕರೆಗಳಷ್ಟು ನೀರಾವರಿಯಾಗುತ್ತಿತ್ತು. ಈಗ ಸದ್ಯದ ಪರಿಸ್ಥಿತಿಯಲ್ಲಿ 74ನೇ ಜೂನ್‌ವರೆಗೆ ಏಳೂವರೆ ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. 76ನೇ ಇಸವಿ ಜೂನ್‌ಗೆ ಸುಮಾರು 2 ಸಾವಿರ 87 ಎಕರೆ ಗಳಷ್ಟು ಲೆವಲ್‌ಗೆ ನೀರು ಸ್ಟೋರ್ ಆಗುತ್ತದೆ. ಆದರೆ ಇದರಿಂದ ಉಪಯೋಗ ಮಾಡತಕ್ಕ ಕಾಲುವೆಗಳನ್ನು ಇವರು ಇನ್ನೂ ತೆಗೆದಿಲ್ಲ ಅಲ್ಲಿನ ಕೆಲಸಕಾರ್ಯಗಳೂ ಸಹ ಪೂರ್ತಿಯಾಗಿ ನಡೆದಿಲ್ಲ. ಈಗಲೂ ಕೂಡ ಈ ಒಂದು ಪ್ರಾಜೆಕ್ಟ್‌ಗೆ 1971-72 ರಲ್ಲಿ ಹಿಂದಿನ ಸರ್ಕಾರದವರು 3 ಕೋಟಿ ರೂಪಾಯಿಗಳನ್ನು ಒದಗಿ ಸಿದ್ದರು. ಹೋದ ವರ್ಷ ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ಒದಗಿಸಿ ದರು. 30 ಲಕ್ಷ ರೂಪಾಯಿಗಳು ಬರೀ ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚಾಗುತ್ತಿದೆ ಒಂದು ಕೋಟಿ ಡ್ಯಾಮ್ ಪೋರ್ಷನ್ನಿಗೇ ಖರ್ಚಾಗಿದೆ. ಸಾಕಷ್ಟು ಹಣವನ್ನು ಲೆಫ್ಟ್ ಬ್ಯಾಂಕ್ ಕೆನಾಲ್ ಮತ್ತು ರೈಟ್ ಬ್ಯಾಂಕ್ ಕೆನಾಲ್‌ಗೆ ಒದಗಿಸದೇ ಇರುವುದ ರಿಂದ ದುಡ್ಡು ಅಲ್ಲೇ ಸ್ಟಾಕ್ ಆಗುತ್ತದೆ ಆದ್ದರಿಂದ 76ನೇ ಜೂನ್‌ನಲ್ಲಿ ನೀರ ಸ್ಟೋರ್ ಆಗುತ್ತದೆ. ಆಗ ಉಪಯೋಗವಾಗುತ್ತದೆ ಇದನ್ನು ಈಗ ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ ಈಗ ಯಾವ ಒಂದು ಈ ಪ್ರಾಜೆಕ್ಟ್ ಇದೆಯೋ ಅದರಲ್ಲಿಯೂ ಹಾರಂಗಿ ಪ್ರಾಜೆಕ್ಟ್ ಏನಿದೆಯೋ ಅದು ಈಗ ಬಹಳ ಕಡಿಮೆ ಖರ್ಚಿನಲ್ಲಿಯೇ ಆಗುತ್ತಿದೆ. ಈ ಕೆನಾಲ್‌ಗೆ 63 ಕಿಲೋ ಮೀಟರ್ ಕಾಲುವೆ ತೆಗೆದಿದ್ದಾರೆ. ಈಗ 76ನೇ ಇಸವಿಯಲ್ಲಿ ಇದಕ್ಕೆ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಲ್ಲಿ 30 ಲಕ್ಷ ರೂಪಾಯಿಗಳು ಖರ್ಚಾಗಿದೆ ಒಂದು ಕೋಟಿ 20 ಲಕ್ಷ ರೂಪಾಯಿಗಳು ಡ್ಯಾಮಿಗೆ ಖರ್ಚಾಗುತ್ತದೆ. ರಿಜರ್ ವಾಯರ್‌ಗೂ ಖರ್ಚಾಗುತ್ತದೆ. ಪುನಃ 30 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದಾರೆ. 1976ನೇ ಇಸವಿಯಲ್ಲಿ ಇದಕ್ಕೆ 50 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದರೆ ಮುಂದಿನ ವರ್ಷ 60 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದರು. 1976ನೇ ಇಸವಿಯಲ್ಲಿ ಒಂದು ಕೋಟಿ 4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಪಕ್ಷದಲ್ಲಿ 5 ಸಾವಿರ ಎಕರೆಯಲ್ಲಿ ಹೊಸ ಅಚ್ಚುಕಟ್ಟು ಆಗುತ್ತದೆ.

(ಶ್ರೀ ಹೆಚ್. ಬಿ. ಕೆಂಚೇಗೌಡ)

ಅದೇ ಚಾಕಟ್ಟಿನಲ್ಲಿ ಮೂರು ಸಾವಿರ ಎಕರೆಯಷ್ಟು ಸೆಕೆಂಡ್ ಕ್ರಾಪ್ ಬರುತ್ತದೆ. ಜೇಸಿಗೆಯಲ್ಲಿ ಅದಕ್ಕೆ 9 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಲೆಫ್ಟ್ ಬ್ಯಾಂಕ್ ಕೆನಾಲಿಗೆ 1976-77ರಲ್ಲಿ ಇನ್ನೂ 56 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಈಗ ಕೇವಲ 2 ಕೋಟಿ 8 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. 60 ಕಿಲೋಮೀಟರ್‌ನಲ್ಲಿ ಸಿ. ಡಿ ವರ್ಕ್‌ಗಳನ್ನೂ ಸಹ ತೆಗೆದುಕೊಳ್ಳಬೇಕಾಗುತ್ತದೆ. ಮಿಸಲೇನಿಯಸ್ ವರ್ಕ್ಸ್‌ನ್ನೂ ಸಹ ತೆಗೆದುಕೊಳ್ಳಬೇಕಾಗುತ್ತದೆ. ಅದರಿಂದಾಗಿ 10 ಸಾವಿರ ಎಕರೆಗಳಷ್ಟು ನೀರಾವರಿಯಾಗುತ್ತದೆ. ಹಳೆಯ ಕಾಲುವೆಗಳಿಗೆ 26 ಸಾವಿರ ರೂಪಾಯಿಗಳವರೆಗೆ ಖರ್ಚುಮಾಡಿದರೆ ಎಷ್ಟೋ ಪ್ರಯೋಜನವಾಗುತ್ತದೆ. ಈಗ ರೈಟ್ ಬ್ಯಾಂಕ್ ಕೆನಾಲ್‌ನಿಂದ ಒಂದು ಪ್ರಾಜೆಕ್ಟ್ ಮಾಡಿದರೆ ಸುಮಾರು 62 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಈ ರೀತಿ ನೀರಾವರಿ ಆಗಬೇಕಾದರೆ ಕೆಲವು ಕಡೆಗಳಲ್ಲಿ ಅಂದರೆ ರಾಮಸ್ವಾಮಿ ಹತ್ತಿರ ಒಂದು ಅಣೆಕಟ್ಟನ್ನು ಮಾಡದೇ ಹೋದರೆ 10 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಅದನ್ನು ಇವರು ಮಾಡುವುದಕ್ಕಾಗುವುದಿಲ್ಲ. ರಾಮಸ್ವಾಮಿ ಕಣಿವೆಯನ್ನು 1973ನೇ ಜೂನ್ 6ನೇ ತಾರೀಖಿನಲ್ಲಿಯೇ ಟೆಂಡರ್ ಕಾಲ್‌ಫಾರ್ ಮಾಡಿದ್ದಾರೆ. ಸ್ಕ್ರೀನಿಂಗ್ ಕಮಿಟಿಯವರೂ ಸಹ ಅದನ್ನು ಅಪ್ರೂವ್ ಮಾಡಿದ್ದಾರೆ. ಈಗ ಇದು ಆಗಬೇಕಾದರೆ ಕನಿಷ್ಠಪಕ್ಷ 25 ಲಕ್ಷ ರೂಪಾಯಿಗಳನ್ನು ಕೋಟೆಡ್ ಕೆಲಸಕ್ಕೆ ಕೊಡದೇ ಹೋದರೆ ಒಂದು ಕೆಲಸವೂ ಸಹ ಅಲ್ಲಿ ಷುರು ಆಗುವುದಿಲ್ಲ. ಏನು 62 ಸಾವಿರ ರೂಪಾಯಿಗಳನ್ನು ರೈಟ್ ಬ್ಯಾಂಕ್ ಕೆನಾಲ್‌ಗೆ ಖರ್ಚು ಮಾಡಬೇಕಾಗಿತ್ತೋ ಅದು ನಿಂತುಹೋಗುತ್ತದೆ. ಅದನ್ನು ಕಮಿಟಿಯವರು ಒಪ್ಪಿಗೆ ಕೊಟ್ಟಮೇಲೆ ಆ ಕೆಲಸಗಳನ್ನು ಷುರು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ರೈಟ್ ಬ್ಯಾಂಕ್ ಕೆನಾಲಿಗೆ ಮತ್ತು ಲೆಫ್ಟ್ ಬ್ಯಾಂಕ್ ಕೆನಾಲಿಗೆ ಕನಿಷ್ಠಪಕ್ಷ 75 ಲಕ್ಷ ರೂಪಾಯಿಗಳನ್ನಾದರೂ ಈ ಸಾರಿ ಒದಗಿಸಿಕೊಡಬೇಕು. ಹಾರಂಗಿ ಪ್ರಾಜೆಕ್ಟ್‌ಗೆ ಒಂದು ಕೋಟಿ 20 ಲಕ್ಷ ರೂಪಾಯಿಗಳನ್ನು ಒದಗಿಸಿದರೆ ಒಳ್ಳೆಯದು. ನಾನು ನಿರೀಕ್ಷಣೆ ಮಾಡಿದಂಥ ರೀತಿಯಲ್ಲಿ ಆಗಿಲ್ಲ. 1978-79ನೇ ಸಾಲಿಗೆ ಹಾರಂಗಿ ರಿಜರ್‌ವಾಯರ್ ಕಂಪ್ಲೀಟ್ ಆಗುತ್ತದೆಂದು ನಾನು ತಿಳಿದಿದ್ದೇನೆ. ಅದರಿಂದ 8 ಟಿ ಎಂ. ಸಿ. ಯಷ್ಟು ವಾಟರ್ ಬ್ರೀಚ್ ಆಗುತ್ತಿದೆ. ಕನಿಷ್ಠಪಕ್ಷ ಒಂದು ಕೋಟಿ 20 ಲಕ್ಷ ರೂಪಾಯಿಗಳನ್ನು ಒಂದೇ ವರ್ಗಕ್ಕೆ ಒದಗಿಸುವುದು ಸರಿಯಲ್ಲ.

ಇನ್ನು ಹೇಮಾವತಿ ಪ್ರಾಜೆಕ್ಟ್ ವಿಚಾರದಲ್ಲಿ ರೈಟ್ ಬ್ಯಾಂಕ್ ಕೆನಾಲ್, ಹೈಕೆನಾಲ್, ಇವುಗಳ ಬಗ್ಗೆ ಒಂದು ಎಸ್ಟಿಮೇಟ್ ಆಗಿದೆ ಅದು ಒಂದು 15 ಕೋಟಿ ರೂಪಾಯಿಗಳಷ್ಟು ಯೋಜನೆಯ ಪ್ರಾಜೆಕ್ಟ್. ಅದರಿಂದ 56 ಸಾವಿರ

ಎಕರೆಗಳಷ್ಟು ನೀರಾವರಿಯಾಗುತ್ತದೆ. ಈಗ ನೀವು 76ನೇ ಇಸವಿಯಲ್ಲಿ ಎಷ್ಟು ನೀರು ಸ್ಟೋರ್ ಆಗುತ್ತದೆ, ಅದರಲ್ಲಿ ಹೈ ಲೆವಲ್ ಕೆನಾಲಿಗೆ ಟೆಂಡರನ್ನು ಕಾಲ್ ಫಾರ್ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಅದನ್ನು ಆದಷ್ಟು ಜಾಗ್ರತೆಯಾಗಿ ಶುರು ಮಾಡಬೇಕು.

ಇನ್ನು ವಿದ್ಯುಚ್ಛಕ್ತಿಯ ವಿಚಾರ. ಮಂತ್ರಿಯವರು ವ್ಯವಸಾಯಗಾರರು. ಇವರು ಬಂದ ಮೇಲೆ ವ್ಯವಸಾಯಕ್ಕೇ ಹೆಚ್ಚಿಗೆ ಮಾನ್ಯತೆಯನ್ನು ಕೊಡುತ್ತಿದ್ದಾರೆ. ಅವರು ಮೊಟ್ಟ ಮೊದಲನೆಯದಾಗಿ ರೂರಲ್ ಎಲೆಕ್ಟ್ರಿಫಿಕೇಷನ್ನಿಗೆ ಹೆಚ್ಚಿಗೆ ಮಾನ್ಯತೆ ಕೊಡಬೇಕು ಏಕೆಂದರೆ ಎಲೆಕ್ಟ್ರಿಕ್ ಮೆಟೀರಿಯಲ್ಸ್ ಸಿಗುವುದೇ ಬಹಳ ಕಷ್ಟ. ಇದರಿಂದ ರೈತರಿಗೂ ಬಹಳ ಕಷ್ಟವಾಗಿದೆಯೆಂದು ಹೇಳುತ್ತೇನೆ. ಆದ್ದರಿಂದ. ಇಂತಹ ಸಂದರ್ಭಗಳಲ್ಲಿ ರೈತರಿಗೆ ಸರ್ಕಾರದವರು ಹೆಚ್ಚಿಗೆ ಸಹಾಯ ಮಾಡ ಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವು ದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

4-00 P.M.

† ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ) :—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಏನು ಈ ಸಭೆಯ ಮುಂದೆ ಸದನದ ಒಪ್ಪಿಗೆಗಾಗಿ ಬೇಡಿಕೆ ಗಳನ್ನು ಇಟ್ಟಿದ್ದಾರೆ ಅದನ್ನು ವಿರೋಧಿಸಿ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಕಾವೇರಿ ಜಲಾನಯನ ನಿರ್ಮಾಣವಾಗುತ್ತಾ ಇರತಕ್ಕಂಥ ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳ ಬಗ್ಗೆ ಹೇಮಾವತಿ ಯೋಜನೆ ಬಹಳ ದೊಡ್ಡದು ಅನ್ನತಕ್ಕಂಥಾ ವಿಚಾರ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ ಇನ್ನು ಹೇಮಾವತಿ ಯೋಜನೆ ಆಗಾಗ್ಗೆ ಪರಿಷ್ಕರಣಕ್ಕೆ ಒಳಪಟ್ಟು ಈಗ 160 ಕೋಟಿ ರೂಪಾಯಿ ವೆಚ್ಚವನ್ನು ಹೊಂದಿರತಕ್ಕಂಥ ಬೃಹತ್ ಯೋಜನೆಯಾಗಿ ಪರಿವರ್ತನೆಯಾಗಿದೆ. ಈ ಯೋಜ ನೆಗೆ ಕಳೆದ ಮೂರು ವರ್ಷಗಳಿಂದ ಸರ್ಕಾರದವರು ಒದಗಿಸಿರತಕ್ಕಂಥ ಹಣವನ್ನು ದೃಷ್ಟಿ ಇಟ್ಟುಕೊಂಡು ವಿಚಾರಣೆ ಮಾಡಿದರೆ ಇನ್ನು 50 ವರ್ಷಗಳಾದರೂ ಕೂಡ ಯೋಜನೆ ಪೂರ್ಣಗೊಳ್ಳುವ ವಿಚಾರದಲ್ಲಿ ಸ್ಪಷ್ಟವಾದ ನಿಲುವು ಸಿಕ್ಕುವು ದಿಲ್ಲ. ಇದಕ್ಕೆ ಕಳೆದವರ್ಷ ನಾಲ್ಕು ಕೋಟಿ ರೂಪಾಯಿ ಹಿಂದಿನ ವರ್ಷ ನಾಲ್ಕು ಕೋಟಿ ರೂಪಾಯಿ ಈ ವರ್ಷ 5 ಕೋಟಿ ರೂಪಾಯಿ ಈ ರೀತಿ ಪ್ರಮಾಣದಲ್ಲಿ

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಹಣವನ್ನು ಒದಗಿಸಿದರೆ ಇದರಲ್ಲಿ ಗಣನೀಯವಾದ ಹೆಚ್ಚಳ ಕಾಣುತ್ತಿಲ್ಲ. ಕನಿಷ್ಟ ಪಕ್ಷ ಒಂದು ವರ್ಷಕ್ಕೆ 10 ರಿಂದ 15 ಕೋಟಿ ರೂಪಾಯಿಯನ್ನಾದರೂ ಖರ್ಚು ಮಾಡುವುದಕ್ಕೆ ಮುಂದೆ ಬರುವುದಾದರೆ ಇನ್ನು 10-15 ವರ್ಷಗಳಲ್ಲಿ ಮುಗಿದು ಜನತೆಗೆ ಏನಾದರೂ ಪ್ರಯೋಜನವಾದೀತು ಇದು ಸರಕಾರದ ಗಮನಕ್ಕೆ ಬರದೆ ಇರತಕ್ಕಂಥಾದ್ದು ಬಹಳ ವಿಷಾದನೀಯ. ಈ ಯೋಜನೆಯಿಂದ ಅಚ್ಚುಕಟ್ಟು ಆಗಿ ಬಹಳ ಕಡಿಮೆ ಖರ್ಚಿನಲ್ಲಿ ಹೆಚ್ಚು ಪ್ರಯೋಜನ ಬರುವಂತ ಪರಿಸ್ಥಿತಿ ಇದೆ. ಸರ್ಕಾರದವರು ಸಂಗ್ರಹಿಸಿರತಕ್ಕಂಥ ಮಾಹಿತಿ ಪ್ರಕಾರ ಎರಡನೇ ಹಂತದಲ್ಲಿ ಪಡೆದಂಥ ಸಾಲದಿಂದ ಹಾಕತಕ್ಕಂಥ ಯೋಜನೆಯನ್ನು ಅಳವಡಿಸಲಾಗಿದೆ. ಮೊದಲನೆ ಹಂತದಲ್ಲಿ ಹಣ ಖರ್ಚುಮಾಡಿ ಜನತೆಗೆ ಪ್ರಯೋಜನ ಮಾಡಿ ಆದರೆ ಎರಡನೇ ಹಂತ ಏನು ಇದೆ ಅದರಲ್ಲಿ ಹೆಚ್ಚು ಖರ್ಚಿಲ್ಲದೆ ಅದರಿಂದ ದೊರಕುವಂತ ಲಾಭವನ್ನು ಹೋಲಿಕೆ ಮಾಡಿ ನೋಡಿದಾಗ ಎರಡನೇ ಹಂತ ಬಹಳ ಪ್ರಯೋಜನ ಬರುತ್ತದೆಂದು ವ್ಯಕ್ತವಾಗುತ್ತದೆ. ಅದಕ್ಕಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡತಕ್ಕಂಥಾದ್ದು ಯಾವ ಮೊದಲನೆ ಹಂತ ಇದೆ ಅದಕ್ಕಿಂಥ ಎರಡನೇ ಹಂತದಿಂದ ನೀರಾವರಿ ಹೆಚ್ಚು ಪ್ರಯೋಜನಕಾರಿಯಾಗಿ ಕಡಿಮೆ ಖರ್ಚಿನಲ್ಲಿ ಆಗುತ್ತದೆ ಆದ್ದರಿಂದ ಇದರಲ್ಲಿ ಮೊದಲನೆ ಹಂತ ಎರಡನೇ ಹಂತ ಎಂದು ಭೇದಭಾವವಿಲ್ಲದೆ ಎರಡನ್ನೂ ಒಂದೇ ಸಾರಿ ಮಾಡಿ ಮುಗಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಎಡದಂಡೆ ಎರಡನೇ ಅಚ್ಚುಕಟ್ಟು ಇದು ಬಹಳ ಮುಖ್ಯವಾದದ್ದು. ಅದರಲ್ಲಿ ನಾಗಮಂಗಲ; ಮಂಡ್ಯ ಡಿಸ್ಟ್ರಿಕ್ಟು ತುರುವೇಕೆರೆ ತುಮಕೂರು ಡಿಸ್ಟ್ರಿಕ್ಟು, ಕುಣಿಗಲ್ ಗುಬ್ಬಿ ತಿಪಟೂರು ಈ ಎಲ್ಲಾ ತಾಲ್ಲೂಕುಗಳು ಸೇರಿವೆ. ಈ ಎಲ್ಲಾ ತಾಲ್ಲೂಕುಗಳು ಆಗಾಗ್ಗೆ ಕ್ಷಾಮಕ್ಕೆ ತುತ್ತಾಗುತ್ತಿರುತ್ತವೆ. ಅದೂ ಅಲ್ಲದೆ ಮಳೆ ಬಹಳ ಕಡಿಮೆ ಕೇವಲ 21 ಇಂಚಿಗಿಂತಲೂ ಬಹಳ ಕಡಿಮೆ ಬರತಕ್ಕಂಥ ಪ್ರದೇಶಗಳು ನೀರಾವರಿಯಲ್ಲಿ ಬಹಳ ಹಿಂದೆ ಉಳಿದಿರತಕ್ಕಂಥ ಪ್ರದೇಶಗಳು. ಈ ಭಾಗಗಳಿಗೆ ಮೊದಲು ನೀರು ಕೊಡುವಂಥ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ಭಾಗಗಳಲ್ಲಿ ಬಹಳ ನೀರಾವರಿ ಪ್ರಗತಿಯಾಗಿಲ್ಲ. ಅದೇ ನೀರಾವರಿ ಪ್ರಗತಿಯಾಗಿರುವ ಪ್ರದೇಶಗಳಿಗೆ ಕೊಡಬಾರದೆಂಬ ಉದ್ದೇಶದಿಂದ ನಾನು ಹೇಳುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ಚೆನ್ನರಾಯಪಟ್ಟಣ ತಾಲ್ಲೂಕು, ಹೊಳೆನರಸೀಪುರ ಮುಂತಾದ ತಾಲ್ಲೂಕುಗಳು ಈಗಾಗಲೇ ನೀರಾವರಿ ಸೌಲಭ್ಯವನ್ನು ಹೊಂದಿರತಕ್ಕಂಥ ಪ್ರದೇಶಗಳಿವೆ ಅವುಗಳಿಗೆ ಕೊಡಬಾರದೆಂದು ಹೇಳುತ್ತಿಲ್ಲ. ಅವರಿಗೂ ಕೊಡಿ ಆದರೆ ಯಾವರೀತಿಯ ನೀರಾವರಿ ಸೌಲಭ್ಯವಿಲ್ಲದವರಿಗೆ ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಶ್ರೀ ಅಸ್ಪೂರೆಯವರಿಗೆ ಹೇಳಲು ಇಷ್ಟಪಡುತ್ತೇನೆ ದುರದೃಷ್ಟ ಏನು ಎಂದರೆ ಹೊಟ್ಟೆಗಿಲ್ಲದೆ ಇರುವವನು ಬಡುಕೊಳ್ಳುವಾಗ ಹೊಟ್ಟೆಗಿರುವವನು ಬಡಿದುಕೊಂಡ

ನೆಂದು ಹೇಳತಕ್ಕಾಂಥಾದ್ದು ಈಗ ಆ ರೀತಿಯಾಗಿದೆ. ಬಹಳ ತೊಂದರೆ ಉಂಟಾಗಿರತಕ್ಕಂಥವರಿಗೆ ಸಹಾನುಭೂತಿಯಿಂದ ಮತ್ತು ಮಾನವೀಯತೆಯಿಂದ ನೋಡಬೇಕೆಂದು ಮತ್ತೆ ಈ ವಿಚಾರವನ್ನು ಮನಸ್ಸಿಗೆ ತೆಗೆದುಕೊಳ್ಳಬೇಕೆಂದು ಎರಡನೇ ಹಂತವನ್ನು ಮೊದಲನೇ ಹಂತದ ಜೊತೆಯಲ್ಲಿ ಮಾಡಿ ಬಹಳ ತೊಂದರೆಗೆ ಈಡಾಗಿರುವವರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ಯಾವ ಬಿನ್ನಾಭಿಪ್ರಾಯವನ್ನು ಇಟ್ಟುಕೊಳ್ಳಬಾರದು ಎಲ್ಲವನ್ನೂ ಒಂದೇ ಹಂತದಲ್ಲಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಆರ್. ಇ. ಸಿ. ಸ್ಕೀಂ ಜಾರಿಯಲ್ಲಿ ಇದೆ. ಅನೇಕ ಹಳ್ಳಿಗಳಲ್ಲಿ ಕೇಂದ್ರ ಸರ್ಕಾರದವರು ಹಣ ಕೊಡತಕ್ಕಾಂಥಾದ್ದು. ಅದು ಅವರು ಕೊಟ್ಟಿದ್ದಾರೆ ಅದನ್ನು ಪಡೆದಿದ್ದಾಗೆ ಆದರೂ ಒಂದು ನಿರ್ದಿಷ್ಟವಾದ ಕಾಲದಲ್ಲಿ ಏನು ಒಂದು ಗುರಿ ಇಟ್ಟುಕೊಂಡು ರೂರಲ್ ಎಲೆಕ್ಟ್ರಿಫಿಕೇಶನ್ ಮಾಡುವುದರಲ್ಲಿ ಬಹಳ ಹಿಂದೆ ಬಿದ್ದಿದ್ದಾರೆಂದು ಆರೋಪಣೆ ಮಾಡಬೇಕಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಕೂಡ ಸುಮಾರು 56 ಲಕ್ಷ ರೂಪಾಯಿ ಯೋಜನೆ ಇದೆ. ಇದನ್ನು ಈಗಾಗಲೇ ತೆಗೆದುಕೊಂಡಿದ್ದಾರೆ ಅದರಲ್ಲಿ 37 ಹಳ್ಳಿಗಳಲ್ಲಿ ಎಲೆಕ್ಟ್ರಿಫಿಕೇಷನ್ ಆಗಬೇಕಾಗಿತ್ತು. ಕೇವಲ ನಾಲ್ಕು ಹಳ್ಳಿಗಳಿಗೆ ಆಗಿಲ್ಲವೆಂದು ಹೇಳಿದರೆ ಎಷ್ಟರಮಟ್ಟಿಗೆ ಇವರು ಇವರ ಕರ್ತವ್ಯದಲ್ಲಿ ಹಿಂದೆ ಬಿದ್ದಿದ್ದಾರೆಂದು ನೋಡಬೇಕಾಗುತ್ತದೆ. ಇನ್ನು ಡಿಮಾಂಡ್ ಚಾರ್ಜಸ್ ಬಗ್ಗೆ ಹೇಳುವುದಾದರೆ ವ್ಯವಸಾಯಗಾರರಿಗೆ ಅನುಕೂಲ ಮಾಡಿಕೊಡಬೇಕು ಅದಕ್ಕೆ ಬದಲಾಗಿ ಅವರಿಗೆ ಅನಾನುಕೂಲವಾಗಿದೆ. ದೇಶದಲ್ಲಿ ಆದರಲ್ಲೂ ವ್ಯವಸಾಯ ಕ್ಷೇತ್ರದಲ್ಲಿ ಅಂದೋಲನ ಆಗಬೇಕು ಮತ್ತು ಆಹಾರ ಹೆಚ್ಚು ಉತ್ಪಾದನೆ ಆಗಬೇಕೆಂದು ಒಂದು ಕಳಕಳಿ ವ್ಯಕ್ತಪಡಿಸುತ್ತಿದ್ದಾರೆ. ಅದಕ್ಕೆ ನಿರ್ದಿಷ್ಟವಾದ ಉತ್ತೇಜನ ಕೊಡದೇ ಹೋದರೆ ಬರೀ ಮಾತನ್ನು ಹೇಳಿದಂತಾಗುತ್ತದೆ. ಈ ಡಿಮಾಂಡ್ ಚಾರ್ಜಸ್ ಏನು ಇದೆ ಇದಕ್ಕೆ ತಲೆ ಬುಡ ಇಲ್ಲದ ಆಧಾರವಿಲ್ಲದ್ದಾಗಿದೆ. ಬಹಳ ಜನ ರೈತರಿಗೆ ತೊಂದರೆಯಾಗಿದೆ. ಅದೇ ಕೈಗಾರಿಕೆಗೆ ಬಹಳ ಕಡಿಮೆ ದರದಲ್ಲಿ ಸರಬರಾಜು ಮಾಡುತ್ತಿದ್ದಾರೆ. ಆದರೆ ವ್ಯವಸಾಯಕ್ಕೆ ದುಬಾರಿ ದರದಲ್ಲಿ ಸರಬರಾಜು ಮಾಡುತ್ತೇವೆಂದು ಹೇಳಿದರೆ ಹೇಗೆ ? ದೇಶದಲ್ಲಿ ಆಹಾರದ ಕೊರತೆ ಇರುವಾಗ ಅದಕ್ಕೆ ಪ್ರೋತ್ಸಾಹ ಕೊಡಬೇಕಾದ್ದು ಮುಖ್ಯ. ವಿದ್ಯುಚ್ಛಕ್ತಿ ದರವನ್ನು ವ್ಯವಸಾಯ ಕ್ಷೇತ್ರಕ್ಕೆ ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಪವರ್ ಕಾರ್ಪೊರೇಷನ್‌ನಲ್ಲಿ ಇಂಟರ್‌ವ್ಯೂ ನಡೆಯುತ್ತಿದೆಯೆಂದು ಕೇಳಿದ್ದೇನೆ. ಅದರಲ್ಲಿ ಅಪ್ಲಿಕೇಷನ್ ಹಾಕುವಾಗ ಕೆಲವು ಶರತ್ತುಗಳನ್ನು ಹಾಕಿರಲಿಲ್ಲ. ಆದರೆ ಇಂಟರ್‌ವ್ಯೂ ಹೋದಾಗ ನಿಮ್ನವರ್ಗವಲ್ಲದವರಿಗೆ 50 ಪರ್ಸೆಂಟ್ ಅಂಕಗಳು ಬರಬೇಕೆಂದು ಯಾವುದೋ ಹೊಸಪದ್ಧತಿಯನ್ನು ಅನುಸರಿಸುತ್ತಿದ್ದಾರೆಂದು ಕೇಳಿದ್ದೇನೆ ಎಕಾನಾಮಿಕಲ್ ಮತ್ತು ಫೈನಾನ್ಸಿಯಲ್ ಬ್ಯಾಕ್‌ವರ್ಡ್ ಸರ್ಟಿಫಿಕೇಟ್ ಲಗತ್ತಿಸಿ ಕೊಂಡಿದ್ದಾರೆ.

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಆದರೆ ಅವರಿಗೆ ಏನು ಶೇ. 30 ಭಾಗ ಅವರಿಗಾಗಿ ಕಾದಿರಿಸಬೇಕಾಗಿತ್ತೋ ಅದನ್ನು ಕಾದಿರಿಸಿಲ್ಲ. ಆದುದರಿಂದ ಏನಾಗಿದೆಂದರೆ ಆ ವರ್ಗದ ಜನಗಳಿಗೆ, ಯಾರು ಆರ್ಥಿಕ ಸಾಮಾಜಿಕವಾಗಿ ಹಿಂದುಳಿದಿದ್ದಾರೆ ಅವರಿಗೆ ಏನೊಂದು ವಿಶೇಷವಾದಂಥ ರಿಯಾಯಿತಿಯನ್ನು ಸರ್ಕಾರ ಕೊಡಬೇಕಾಗಿತ್ತೋ ಆ ರೀತಿ ಕೊಡುವ ವಿಚಾರ ದಲ್ಲಿ ಸರ್ಕಾರ ಈ ಒಂದು ಕಾರ್ಪೊರೇಷನ್ ಸರಿಯಾಗಿ ನಿರ್ವಹಿಸಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನೊಂದು ವಿಚಾರ ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಯಾರೋ ನಾಯಕರು ಅಂತೆ ಅವರು, ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂಥ ವ್ಯಕ್ತಿಯಲ್ಲವೆಂದು ಅನೇಕ ಸಂದರ್ಭದಲ್ಲಿ ಅನೇಕ ವ್ಯಕ್ತಿಗಳು ದೂರು ಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡಬೇಕಾಗಿದೆ ಏತಕ್ಕೆಂದರೆ ಅನೇಕ ಶಾಸಕರು ಅವರ ಹತ್ತಿರ ಹೋಗಿ ನ್ಯಾಯವಾದಂಥ ಬೇಡಿಕೆಗಳನ್ನು ಮಾಡಿ ಎಂದು ಹೇಳಿದರೂ ಸಹಿತ ದುರಹಂಕಾರ ದಿಂದ, ಉದ್ಧಟತನದಿಂದ ನಡೆದುಕೊಳ್ಳುತ್ತಿದ್ದಾರಂತೆ. I do not know more about him. I think his name is Sri R. V. Nayak, who is a born leader. I have not seen him. There was no occasion for me to meet him. I request the Government to verify this and see that he is brought to order.

With these words, thanking the Chair for having given me an opportunity to speak, I conclude.

†ಶ್ರೀ ಎಂ. ವಿ ರುದ್ರಪ್ಪ (ಹೊಸದುರ್ಗ):—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮಂತ್ರಿಗಳವರು ಇಲ್ಲಿ ಸದನದ ಮುಂದೆ ಮಂಡಿಸಿರತಕ್ಕಂಥ ಬೇಡಿಕೆ ಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆ ಬಹಳ ಕಡಿಮೆ ಬೀಳ ತಕ್ಕಂಥದ್ದು ಮಳೆ ಕಡಿಮೆ ಬೀಳತಕ್ಕಂಥ ಪ್ರದೇಶ ಆಗಿದ್ದು ಅದರಲ್ಲೂ ಕೂಡ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಜಿಲ್ಲೆಯಲ್ಲಿ ಸುಮಾರು 15-20 ಇಂಚು ಮಳೆ ಬೀಳತಕ್ಕಂಥ ಪ್ರದೇಶ. ಅಲ್ಲಿ ಯಾವ ನೀರಾವರಿಯ ಸೌಲಭ್ಯವೂ ಇಲ್ಲದಿರುವುದ ರಿಂದ ಬಹಳ ತೊಂದರೆಯಾಗಿದೆ. ಯಾವುದಾದರೂ ಒಂದು ಬೃಹತ್ ನೀರಾವರಿಯ ಯೋಜನೆಯ ಮೂಲಕ ಈ ತಾಲ್ಲೂಕಿಗೆ ನೀರನ್ನು ಒದಗಿಸಬೇಕೆಂದು ನಾವು ಎಷ್ಟೋ ಸಲ ಸರ್ಕಾರದ ಗಮನಕ್ಕೆ ತಂದಾಗ್ಯೂ ಸಹ ಸರ್ಕಾರ ಅದನ್ನು ಕಾರ್ಯ ಗತ ಮಾಡಿಲ್ಲ. ಆದುದರಿಂದ ಯಾವುದೇ ಒಂದು ರೀತಿಯಲ್ಲಿ ನೀರಾವರಿ ಯೋಜನೆಗೆ ಅನುಕೂಲತೆಯನ್ನು ಕಲ್ಪಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪಡಿಸಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಈ ಒಂದು ಜಿಲ್ಲೆಯಲ್ಲಿ ಈಗಾಗಲೇ ಮಾನ್ಯ

ಮುಖ್ಯ ಮಂತ್ರಿಗಳ ಗಮನಕ್ಕೆ ಹಿರಿಯೂರಿನಲ್ಲಿರತಕ್ಕಂಥ ವಾಣಿವಿಲಾಸ ಸಾಗರದಲ್ಲಿ ನೀರು ಇಲ್ಲದೆ ಬೆಳೆಗೆ ಬಹಳ ತೊಂದರೆಯಾಗಿದೆ ಕಳೆದ ವರ್ಷವೂ ಕೂಡ ಬಹಳ ತೊಂದರೆಯಾಗಿತ್ತು, ಆ ಒಂದು ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಅಲ್ಲಿಗೆ ಆಗಮಿಸಿ ಆ ಕಷ್ಟವನ್ನು ಕಣ್ಣಾರೆ ಕಂಡು ಏನಾದರೂ ಪ್ರಯತ್ನ ಮಾಡಿ ಸಹಾಯ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದರು. ಆದುದರಿಂದ ಆದಷ್ಟು ಅತಿಶೀಘ್ರವಾಗಿ ಆ ವಾಣಿ ವಿಲಾಸ ಸಾಗರಕ್ಕೆ ನೀರನ್ನು ತರತಕ್ಕಂಥ ಯೋಜನೆಯನ್ನು ಬೇಗ ಮಾಡಬೇಕೆಂದು ಕೇಳಿಕೊಂಡು ಅಲ್ಲಿಯ ರೈತರಿಗೆ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ವಿದ್ಯುಚ್ಛಕ್ತಿ ವಿಚಾರದಲ್ಲಿ ಹೇಳುವುದಾದರೆ, ಈಗಾಗಲೇ ಅನೇಕ ಸ್ನೇಹಿತರು ಈ ವಿಷಯದ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ನಮ್ಮ ಈ ಒಂದು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯ ಕೊರತೆ ಬಹಳ ಹೆಚ್ಚಾಗಿದೆ ಜೊತೆಗೆ ಈ ಒಂದು ವಿದ್ಯುಚ್ಛಕ್ತಿಯಲ್ಲಿ ಎಷ್ಟರಮಟ್ಟಿಗೆ ಹೊಸದುರ್ಗ ತಾಲ್ಲೂಕ್ ಎಷ್ಟು ಹಿಂದುಳಿದಿದೆ ಎನ್ನತಕ್ಕಂಥದ್ದನ್ನು ಅಂಕಿಅಂಶಗಳ ಮೂಲಕ ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಈ ವಿಲೇಜ್ ಎಲೆಕ್ಟ್ರಿಫಿಕೇಶನ್ ಬಗ್ಗೆ ಹೇಳುವುದಾದರೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ 139 ಹಳ್ಳಿಗಳಿಗೆ ಈಗಾಗಲೇ ಪೂರೈಸಿದ್ದಾರೆ, ಹೊಸದುರ್ಗ ತಾಲ್ಲೂಕಿನಲ್ಲಿ ಕೇವಲ 59 ಹಳ್ಳಿಗಳಿಗೆ, ಮಾತ್ರ ವಿದ್ಯುಚ್ಛಕ್ತಿ ದೊರಕಿದೆ. ಜಗಳೂರಿನಲ್ಲಿ 70 ಹಳ್ಳಿಗಳಿಗೆ ಮೊಳಕಾಲ್ಮೂರಿನಲ್ಲಿ 71 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿರತಕ್ಕಂಥ ಅಂಕಿಅಂಶಗಳನ್ನು ನೋಡಿದರೆ, ಹೊಸದುರ್ಗ ತಾಲ್ಲೂಕಿಗೆ ಬಹಳ ಕಡಿಮೆ 250 ಗ್ರಾಮಗಳಿರತಕ್ಕಂಥ ಈ ತಾಲ್ಲೂಕಿಗೆ ಕಳೆದ 25 ವರ್ಷಗಳಿಂದ ಕೇವಲ 59 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ದೊರಕಿಸಿ ಕೊಟ್ಟಿದ್ದೀರ ಎನ್ನತಕ್ಕಂಥ ವಿಷಯವನ್ನು ನೋಡಿದರೆ ಈ ಒಂದು ಹಳ್ಳಿ ಎಷ್ಟು ಹಿಂದುಳಿದಿದೆ ಎನ್ನತಕ್ಕಂಥ ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದರೆ ಮತ್ತೆ ಈ ಒಂದು ತಾಲ್ಲೂಕಿಗೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂದು ಸವಿನಯದಿಂದ ಸರ್ಕಾರದವರಲ್ಲಿ ಒತ್ತಾಯ ಪಡಿಸುತ್ತಿದ್ದೇನೆ. ಮತ್ತೆ ಈ ಪಂಪಸೆಟ್ಸ್ ಬಗ್ಗೆ ಇರತಕ್ಕಂಥ ಅಂಕಿಅಂಶಗಳನ್ನು ನೋಡಿದರೆ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ನೋಡುವುದಾದರೆ 3,500 ಪಂಪ್‌ಸೆಟ್ಸ್‌ಗಳಿವೆ. ಚಿತ್ರದುರ್ಗದಲ್ಲಿ 2172, ದಾವಣಗೆರೆಯಲ್ಲಿ 533, ಹರಿಹರದಲ್ಲಿ 316, ಹಿರಿಯೂರಿನಲ್ಲಿ 1,353. ಅದೇ ಹೊಸದುರ್ಗದಲ್ಲಿ ಕೇವಲ 219 ಪಂಪ್ ಸೆಟ್ಸ್‌ಗಳಿವೆ ಜಗಳೂರಿನಲ್ಲಿ 762 ಪಂಪ್‌ಸೆಟ್ಸ್‌ಗಳಿವೆ, ಮೊಳಕಾಲ್ಮೂರಿನಲ್ಲಿ 1455 ಈ ಎಲ್ಲಾ ಅಂಕಿಅಂಶಗಳ ಆಧಾರದ ಮೇಲೆ ನೋಡುವುದಾದರೆ ಹೊಸದುರ್ಗ ತಾಲ್ಲೂಕಿನಲ್ಲ ಕೇವಲ 219 ಪಂಪ್‌ಸೆಟ್ಸ್‌ಗಳಿವೆ, ಬಹಳ ಕಡಿಮೆ ಇದೆ, ಅಲ್ಲಿಗೆ ತಾವು ಹೆಚ್ಚು ಪಂಪ್‌ಸೆಟ್ಸ್‌ಗಳನ್ನು ಒದಗಿಸಿ, ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ

(ಶ್ರೀ ಎಂ. ವಿ. ರುದ್ರಪ್ಪ)

ಮಾಡುತ್ತಿದ್ದೇನೆ ಈ ಒಂದು ವಿದ್ಯುಚ್ಛಕ್ತಿ ಖಾತೆಯನ್ನು ನಮ್ಮ ಸ್ಟೇಟ್ ಸಚಿವ ರಾದ ಶ್ರೀ ಕಂಠಯ್ಯನವರು ವಹಿಸಿಕೊಂಡ ನಂತರ ಬಹಳ ಚಾಕಚಕ್ಯತೆಯಿಂದ, ದಕ್ಷತೆಯಿಂದ ಕೆಲಸ ಮಾಡಿ ಈ ಒಂದು ವಿದ್ಯುಚ್ಛಕ್ತಿಯನ್ನು ಹೆಚ್ಚು ಗ್ರಾಮಗಳಿಗೆ ವಿಸ್ತರಣೆ ಮಾಡುತ್ತಾರೆ, ಅದೂ ಅಲ್ಲದೆನೇ ಅವರು ರೈತರ ಮಕ್ಕಳು, ಅವರಿಗೂ ಸಹ ಸಾಕಷ್ಟು ಅನುಭವವಿದೆ ನಾವು ಸದಸ್ಯರು ಯಾರೇ ಹೋಗಿ ಅವರ ಹತ್ತಿರ ಈ ರೀತಿ ಕಷ್ಟವಿದೆಯೆಂದು ಹೇಳಿಕೊಂಡರೆ ತಕ್ಷಣವೇ ಅಲ್ಲಿಯೇ ಆರ್ಡರ್ ಮಾಡಿ ಕಳು ಹಿಸುತ್ತಾರೆ. ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳವರ ಗಮನಕ್ಕೆ ತರ ಲಿಕ್ಕೆ ಇಚ್ಛೆಪಡುತ್ತೇನೆ. ಹೊಸದುರ್ಗ ತಾಲ್ಲೂಕಿನಲ್ಲಿ ಒಂದು ಸ್ಟೆಪ್‌ಡೌನ್ ಸ್ಟೇಷನ್‌ನಿಂದ ಕರೆಂಟ್‌ನ್ನು ಸ್ಟಾರ್ಟ್ ಮಾಡಿ ಎಲ್ಲಾ ಕಡೆಗೂ ಕಳುಹಿಸತಕ್ಕಂಥ ವ್ಯವಸ್ಥೆ ಮಾಡುವ ಉದ್ದೇಶದಿಂದ ಸ್ಟೆಪ್‌ಡೌನ್ ಸ್ಟೇಷನ್ ಅಲ್ಲಿಗೆ ಮಂಜೂರು ಮಾಡಿದ್ದರೂ ಅದಕ್ಕೆ ಬೇಕಾಗುವ ಬಿಡಿ ಸಾಮಾನುಗಳು ಸಿಕ್ಕದೇ ಇರುವುದರಿಂದ ಅದು ಹಾಗೇಯೇ ನಿಂತು ಬಿಟ್ಟಿದೆ. ಅಲ್ಲಿ ಎಲೆಕ್ಟ್ರಿಸಿಟಿ ಸರಿಯಾಗಿ ಸಪ್ಲೈ ಆಗದೇ ಇರುವುದರಿಂದ ಅಲ್ಲಿ ವಾಟರ್ ಸಪ್ಲೈ ಕೂಡ 3 ವರ್ಷದಿಂದ ನಿಂತು ಹೋಗಿದೆ ಇದರಿಂದ ಕುಡಿಯುವ ನೀರಿಗೂ ಬಹಳ ತೊಂದರೆ ಇದೆ ಈ ಬಗ್ಗೆ ಮಾನ್ಯ ಮಂತ್ರಿ ಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಇದನ್ನು ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ ಎಲೆಕ್ಟ್ರಿಸಿಟಿಯನ್ನು ಸಪ್ಲೈ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇ ಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ, ಈ ರೂರಲ್ ಕಮ್ಯೂನೀಕೇಷನ್ ನಮ್ಮ ದೇಶದಲ್ಲಿ ಸುಮಾರು 26 ಸಾವಿರ ಹಳ್ಳಿಗಳಲ್ಲಿ ಸುಮಾರು 13 ಸಾವಿರ ಹಳ್ಳಿಗಳಲ್ಲಿ ಈಗಾಗಲೇ ವಿದ್ಯುಚ್ಛಕ್ತಿಯನ್ನು ತೊಡಗಿಸಿದ್ದಾರೆ. ಇನ್ನು ಕೇವಲ 50 ಪರ್ಸೆಂಟ್ ಇದೆ ಎನ್ನತಕ್ಕಂಥದ್ದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಇದು ಸರಿಯಾಗಿದೆಂದು ಹೇಳುವುದಿಲ್ಲ. ಇವತ್ತು ಇನ್ನೂ ಹೆಚ್ಚಿನ ರೀತಿಯಲ್ಲಿ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಇನ್ನು ಹಳ್ಳಿಗಳಿಗೆ ಆದಷ್ಟು ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಸಂಬಂದಪಟ್ಟ ಇಲಾಖೆಯ ಮಂತ್ರಿಗಳವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಿಂದಿನ ಸರ್ಕಾರದವರು ಅನೇಕ ಫ್ಯಾಕ್ಟರಿಗಳಿಗೆ ಉದಾಹರಣೆಗೆ ಹೇಳುವುದಾದರೆ ಬೆಳಗಾಂ ಅಲ್ಯೂಮಿನಿಯಂ ಫ್ಯಾಕ್ಟರಿಯವರಿಗೆ ಕೇವಲ 1.75 ಪೈಸೆಗೆ ಎಂದರೆ 2 ಪೈಸೆ ಕಡಿಮೆ ದರದಲ್ಲಿ ಕರೆಂಟನ್ನು ಸಪ್ಲೈ ಮಾಡಿದ್ದಾರೆ ಇದರಿಂದ ದೇಶಕ್ಕೆ ಕೋಟಿಗಟ್ಟಲೆ ಹಣ ಲುಕ್ಸಾನು ಆಗುತ್ತಿದೆ. ಇದನ್ನು ಹಿಂದಿನ ಸರ್ಕಾರದವರು ಎಲ್ಲರಿಗೂ ಕಡಿಮೆ ದರದಲ್ಲಿ ಕೊಟ್ಟಿದ್ದಾರೆ ಅವೆಲ್ಲಕ್ಕೂ ನಮ್ಮ ಸರ್ಕಾರದವರು ದರವನ್ನು ಹೆಚ್ಚು ಮಾಡಿ ನಮ್ಮ ಸರ್ಕಾರದ ಆದಾಯವನ್ನು ಹೆಚ್ಚಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವತ್ತು

ಹೆಚ್. ಎಂ. ಟಿ. ಫ್ಯಾಕ್ಟರಿ ಇರಲಿ ಮತ್ತೊಂದೇ ಇರಲಿ, ಉತ್ಪಾದನೆ ಆಗತಕ್ಕಂಥ ಫ್ಯಾಕ್ಟರಿಗಳಿಗೆಲ್ಲಾ ಹೆಚ್ಚಿನ ದರದಲ್ಲಿ ಕರೆಂಟ್‌ನ್ನು ಸಪ್ಲೈ ಮಾಡಿ ಎಂದು ಹೇಳಿ. ನಮ್ಮ ಹೊಸದುರ್ಗ ತಾಲ್ಲೂಕಿಗೆ ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ ಮೂಲಕ ತೆಗೆದುಕೊಂಡು ನಮ್ಮ ತಾಲ್ಲೂಕಿನ ಹಳ್ಳಿಗಳಿಗೆ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಒದಗಿಸಿರಿ ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಧರ್ಮಸಿಂಗ್ (ಜೇವರ್ಗಿ).—ಸನ್ಮಾನ್ಯ ಉಪಾಧ್ಯಕ್ಷರೆ, ಇವೊತ್ತಿನ ದಿವಸ ಇದರಲ್ಲಿ ದೊಡ್ಡ ನೀರಾವರಿ ಮತ್ತು ಮಾಧ್ಯಮ ನೀರಾವರಿ ಡಿಮ್ಯಾಂಡ್ ಮಂಡಿಸಿದ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಶ್ರೀಕಂಠಯ್ಯನವರು ಮಂಡಿಸಿದ ವಿದ್ಯುಚ್ಛಕ್ತಿ ಬಗ್ಗೆ ಮಂಡಿಸಿದ ಬೇಡಿಕೆಗಳಿಗೆ ನಾನು ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ನಾವು ಪದೇ ಪದೇ ಹೈದರಾಬಾದ್ ಕರ್ನಾಟಕ ಪ್ರದೇಶವು ಬಹಳ ಬರಗಾಲದ ಪ್ರದೇಶವಾಗಿದೆ ಎಂದು ಹೇಳುತ್ತಲೇ ಬಂದಿದ್ದೇವೆ. ಆದಕಾರಣ ಅಲ್ಲಿ ಹೆಚ್ಚುಹೆಚ್ಚಾಗಿ ನೀರಾವರಿ ಸೌಲಭ್ಯಗಳನ್ನು ಒದಗಿಸಿದರೆ ಅಲ್ಲಿನ ಜನರಿಗೆ ಮತ್ತು ಬೇಸಾಯ ಮಾಡತಕ್ಕ ಒಕ್ಕಲಿಗರಿಗೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಆದಕಾರಣ ನಮ್ಮ ಪ್ರದೇಶದಲ್ಲಿರತಕ್ಕ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸರಿಯಾದ ಪ್ರಾಕ್ಟಿಕಲ್ ದೃಷ್ಟಿಯಿಂದ ವಿಚಾರ ಮಾಡಿ ಅದಕ್ಕೆ ಬೇಕಾದಂಥ ದುಡ್ಡನ್ನು ಒದಗಿಸದೇ ಹೋದರೆ ಆ ಪ್ರಾಜೆಕ್ಟ್ ಆಗಲಾರದು ಎಂದು ನನಗನಿಸುತ್ತದೆ. ಆದಕಾರಣ ನಮ್ಮ ಜನರ ಮನಸ್ಸಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಆಗುತ್ತದೆಯೋ ಇಲ್ಲವೇ ಎನ್ನತಕ್ಕ ವ್ಯಥೆ ಮತ್ತು ಸಂಕಟ ಇವೊತ್ತಿನ ದಿವಸ ಬಂದಿದೆ. ಕೃಷ್ಣ ಮೇಲ್ದಂಡೆ ಯೋಜನೆಯನ್ನು ಎಲ್ಲಿಯವರೆಗೂ ನಾವು ತೆಗೆದುಕೊಂಡು ಅದನ್ನು ಪೂರ್ಣವಾಡತಕ್ಕ ಮನಸ್ಸು ಮಾಡುವುದಿಲ್ಲ ಅಲ್ಲಿಯವರೆಗೆ ಅಲ್ಲಿರತಕ್ಕ ಒಕ್ಕಲಿಗರ ಜೀವನ, ಬರಗಾಲ ಪ್ರದೇಶಕ್ಕೆ ಒಳಗಾಗಿರುವ ಜನರು ತಮ್ಮ ಜೀವನವನ್ನು ಸಾಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ಆದರೆ ಇವೊತ್ತಿನ ದಿವಸ ಏನಾಗಿದೆ ಎಂದರೆ ನಮ್ಮ ಸರ್ಕಾರದವರು ಬೇರೆ ಬೇರೆ ಪ್ರಾಜೆಕ್ಟ್‌ಗಳಿಗೆ ಹಣವನ್ನು ಖರ್ಚು ಮಾಡುತ್ತಿದ್ದಾರೆ, ಆದರೆ ಕೃಷ್ಣ ಮೇಲ್ದಂಡೆ ಯೋಜನೆಗೆ ಏತಕ್ಕೆ ಸರ್ಕಾರ ಹಣ ಕೊಡುತ್ತಾ ಇಲ್ಲ ಎನ್ನತಕ್ಕ ವಿಚಾರ ಹೈದರಾಬಾದ್ ಕರ್ನಾಟಕದ ಜನರ ಮನಸ್ಸಿನಲ್ಲಿ ಇದೆ. ಇವೊತ್ತಿನ ದಿವಸ ಸರ್ಕಾರದವರು ಕೃಷ್ಣ ಮೇಲ್ದಂಡೆ ಯೋಜನೆಗಾಗಿ ಒದಗಿಸಿರುವ ಹಣವನ್ನು ನೋಡುವುದಾದರೆ ಅದು 1 ಕೋಟಿ 95 ಲಕ್ಷ ರೂಪಾಯಿ ಇದೆ ಇಷ್ಟು ಹಣ ಆದರ ಮೈನ್‌ಟ್‌ನ್‌ನ್ಸ್‌ಗೆ ಸಾಕಾಗುವುದಿಲ್ಲ. ಅಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿ ವೆಚ್ಚಕ್ಕಾಗಿ ಸುಮಾರು ಒಂದು ಕೋಟಿ ರೂಪಾಯಿ ಬೇಕಾಗುತ್ತದೆ. ಆದಕಾರಣ

(ಶ್ರೀ ಧರ್ಮಸಿಂಗ್ ಜಾವರ್ಗಿ)

ತಾವು ಇಷ್ಟು ಹಣವನ್ನು ಕೃಷ್ಣ ಮೇಲ್ದಂಡೆ ಯೋಜನೆಗೆ ಒದಗಿಸಿದರೆ ಯಾವರೀತಿ ಕೆಲಸಮಾಡುವುದಕ್ಕೆ ಆಗುತ್ತದೆ ಎನ್ನುವುದನ್ನು ತಾವೇ ಯೋಚನೆ ಮಾಡಿ ತಾವು ಹೇಳುತ್ತೀರಿ, ಈ ಯೋಜನೆಯನ್ನು 1985ರಲ್ಲಿ ಮುಗಿಸುತ್ತೇವೆ ಎಂದು ಆದರೆ ಈ ರೀತಿಯಾಗಿ ಕೆಲಸ ಮಾಡುತ್ತಾ ಹೋದರೆ ಯಾವ ಇಸವಿಯಲ್ಲಿ ಈ ಕೃಷ್ಣ ಮೇಲ್ದಂಡೆ ಯೋಜನೆ ಮುಗಿಯುತ್ತದೆ, ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಈಗ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಾದ ಹೇಮಾವತಿ, ಕಾಳೀನದಿ ಯೋಜನೆ ಇವುಗಳಿಗೆಲ್ಲಾ ಹಣವನ್ನು ಕೊಡುತ್ತಾ ಇದ್ದೀರಿ, ಈ ಕೃಷ್ಣ ಮೇಲ್ದಂಡ ಯೋಜನೆಗೆ ಸಾಕಷ್ಟು ಹಣ ಕೊಡುತ್ತಾ ಇಲ್ಲ, ಈ ರೀತಿ ಮಾಡಿದರೆ ನಮ್ಮ ಜನರಿಗೆ ಯಾವ ರೀತಿಯಿಂದ ನ್ಯಾಯ ದೊರಕಿಸಿ ಕೊಡುತ್ತೀರಾ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ ನಮ್ಮ ಜನರ ಒಂದು ಕನಸು ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಏನು ಇದೆ ಅದನ್ನು ತಾವು ಯಾವಾಗ ನನಸು ಮಾಡುತ್ತೀರಿ ಎಂದು ಇದೆ. ಮೊನ್ನೆ ಬರಗಾಲ ಪರಿಸ್ಥಿತಿ ಬಂದಾಗ ಅಲ್ಲಿ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಮಾನ್ಯ ಮುಗ್ದಂ ಅವರು ಬಂದಿದ್ದರು. ಅಲ್ಲಿ ಬರಗಾಲ ಸಂದರ್ಭದಲ್ಲಿ 1 ಕೋಟಿ ರೂಪಾಯಿ ಖರ್ಚು ಮಾಡಿಸಿ ತೆಗೆದುಕೊಂಡಿದ್ದಂಥ ಚಾನಲ್ ಕೆಲಸಗಳು ಇವೊತ್ತು ಮುಚ್ಚಿ ಹೋಗಿವೆ. ಇಂತಹ ಪರಿಸ್ಥಿತಿಯಲ್ಲಿ ಈ ರೀತಿಯಾಗಿ ಕೆಲಸ ಮಾಡಿದರೆ ಯಾವರೀತಿ ಮುಗಿಸಬೇಕು ? ಈಗ ಅಮರ್ ಜಾ ಮತ್ತು ಮುಲ್ಲಾಮರಿ ಪ್ರಾಜೆಕ್ಟ್‌ಗಳನ್ನು ಮಾಡಿ ಅಲ್ಲಿನ ಜನರಿಗೆ ನೀರಾವರಿ ಸೌಕರ್ಯಗಳನ್ನು ಒದಗಿಸಿ ಕೊಟ್ಟರೆ ಅಲ್ಲಿ ಆಗಾಗ್ಗೆ ಬರತಕ್ಕ ಬರಗಾಲ ಮತ್ತು ಆದರಿಂದ ಉದ್ಭವಿಸತಕ್ಕ ಆರ್ಥಿಕ ತೊಂದರೆ ಮತ್ತು ಆಹಾರ ಸಮಸ್ಯೆ ಏನು ಇದೆ ಅದನ್ನು ಬಗೆಹರಿಸ ಬಹುದು ಎಂದು ಹೇಳುತ್ತೇನೆ. ಇಂತಹ ವಿಶೇಷ ಪರಿಸ್ಥಿತಿಯಲ್ಲಿ ಅಲ್ಲಿನ ಜನಗಳಿಗೆ ಇರುವ ಕಷ್ಟವನ್ನು ಬಗೆಹರಿಸಬೇಕಾದರೆ ಬೇರೆ ಹಂತದಲ್ಲಿ ಅಥವಾ ಬೇರೆ ರೂಪ ದಲ್ಲಿ ಅಲ್ಲಿರತಕ್ಕ ಒಕ್ಕಲಿಗರಿಗೆ ಸಹಾಯ ಮಾಡಬೇಕು ಎಂದು ಹೇಳುತ್ತೇನೆ ಎಲ್ಲಾ ಯೋಜನೆಗಳು ಕೇವಲ ಪೇಪರ್ ಮುಖೇನ ಕೊಡುತ್ತೇವೆ ಎಂದು ಹೇಳುತ್ತಾ ಹೋದರೆ ಯಾವುದೂ ಆಗವುದಿಲ್ಲ. ಆದುದರಿಂದ ನಮ್ಮ ಹೈದರಾ ಬಾದ್ ಕರ್ನಾಟಕದಲ್ಲಿ ಇರುವ ಒಂದು ದೊಡ್ಡ ಕೃಷ್ಣಾ ಮೇಲ್ದಂಡೆ ಯೋಜನೆ ಏನು ಇದೆ, ಇದಕ್ಕೆ ಸಾಕಷ್ಟು ರೊಕ್ಕ ಕೊಟ್ಟು ಮುಗಿಸದೇ ಹೋದರೆ ಅಲ್ಲಿನ ಜನ ರಿಗೆ ಬಹಳ ಅಸಂತೋಷವಾಗುತ್ತದೆ ಮತ್ತು ಅವರು ಬರಗಾಲ ಕಾಲದಲ್ಲಿ ಬಹಳ ಸಂಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಹೇಳುತ್ತೇನೆ. ಮೊದಲಿದ್ದ ಸರ್ಕಾರದವರು ಕೂಡ ಹೀಗೆ ಮಾಡಿ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳ ಲಿಲ್ಲ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳು ಆಗಿದ್ದಾಗ 12 ಕೋಟಿ ರೂಪಾಯಿ ಇದ್ದಂಥ ಹಣವನ್ನು ಬೇರೆ ಕಡೆಗಳಲ್ಲಿ ಖರ್ಚುಮಾಡಿದರು. ಆದುದ ರಿಂದ ಪರಿಸ್ಥಿತಿ ಹೀಗಿರುವಾಗ ತಾವು ಸಾಕಷ್ಟು ಹಣ ಖರ್ಚು ಮಾಡಿ ಕೃಷ್ಣ

ಮೇಲ್ದಂಡೆ ಯೋಜನೆಯನ್ನು ಮುಗಿಸಿದ್ದಾದರೆ, ಅಲ್ಲಿನ ಜನರಿಗೆ ಬಹಳ ಸಂತೋಷ ವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ ಈಗ ಕೃಷ್ಣ ಮೇಲ್ದಂಡೆ ಯೋಜನೆ ಪೂರ್ಣ ಮುಗಿಯುವುದು ಬಹಳ ಕಷ್ಟ ಇದೆ. ಆದುದರಿಂದ, ನಾರಾಯಣಪುರ ಡ್ಯಾಂ ಮತ್ತು ಹುಣಸಿ ಮುಖಾಂತರ ಕೆಲವು ಎಕರೆಗಳಿಗಾದರೂ ಅಲ್ಲಿನ ರೈತರಿಗೆ ಸಾಗುವಳಿ ಮಾಡಲಿಕ್ಕೆ ನೀರು ಕೊಡಬಹುದಾಗಿದೆ. ಈಗ ಅಲ್ಲಿಗೆ ವಿಶ್ವಬಾಂಕಿನವರು ಬಂದು ಹೋಗಿದ್ದಾರೆ. ಆದುದರಿಂದ, ಈ ಬಗ್ಗೆ ವಿಶ್ವಬ್ಯಾಂಕಿನ ವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಎನ್ನತಕ್ಕ ಮಾತನ್ನು ಗಮನದಲ್ಲಿಟ್ಟು ಕೊಂಡು, ಮತ್ತು ಆದಷ್ಟು ಕೇಂದ್ರ ಸರಕಾರದ ಮೇಲೆ ಒತ್ತಾಯ ಹೇರಿ ಈ ಒಂದು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಣ ಒದಗಿಸಲಿಕ್ಕೆ ಸರಕಾರದವರು ಪ್ರಯತ್ನ ಮಾಡಬೇಕೆಂದು ಈ ಮೂಲಕ ಹೇಳುತ್ತೇನೆ. ಈಗ ರಷಿಯಾ ದೇಶ ದೊಂದಿಗೆ ಎಕಾನಮಿ ಟ್ರೀಟ್ ಮಾಡಿಕೊಂಡಿದ್ದರೂ ಕೂಡ ಕೇಂದ್ರದ ಮೇಲೆ ಒತ್ತಾಯ ಹೇರಿ, ಇಂಥಾ ದೊಡ್ಡ ದೊಡ್ಡ ಯೋಜನೆಗಳು ಏನಿವೆ, ಅವುಗಳಿಂದ ಕರ್ನಾಟಕದ ಒಂದೇ ಭಾಗಕ್ಕೆ ಉಪಯೋಗವಾಗುವಂತೆ ಮಾಡದೆ, ಎಲ್ಲಾ ಭಾಗಕ್ಕೂ ನೀರು ಸರಬರಾಜು ಮಾಡಬೇಕಾಗಿದೆ. ಈಗ ನಮ್ಮ ಜನರಿಗೆ ಇರತಕ್ಕ ತೊಂದರೆಯನ್ನು ದೂರ ಮಾಡಬೇಕಾದರೆ, ಈ ಕೃಷ್ಣ ಮೇಲ್ದಂಡೆ ಯೋಜನೆ ಯನ್ನು ಸರಕಾರವು ತಕ್ಷಣವೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ; ಬೇಕಾದರೆ ಬೇರೆ ಯೋಜನೆಗಳನ್ನು ಸ್ಥಗಿತ ಮಾಡಿದರೂ ಚಿಂತೆ ಇಲ್ಲ ; ಇದನ್ನು ಪೂರ್ಣ ಗೊಳಿಸಬೇಕೆಂದು ಹೇಳುತ್ತೇನೆ.

ಇನ್ನು ಮತ್ತೊಂದು ಮಾತು ಹೇಳುವುದೇನೆಂದರೆ, 1973 ನೇ ಇಸವಿಯಲ್ಲಿ ನಾನು ಇಲ್ಲಿಗೆ ಬಂದಮೇಲೆ ವಿದ್ಯುಚ್ಛಕ್ತಿಯ ಬಗ್ಗೆ ಮಾತನಾಡಿದ್ದೆ. ಅದಾದನಂತರ, ಹೋದ ವರ್ಷ ಇದರ ಬಗ್ಗೆ ಮಾತನಾಡಲಿಲ್ಲ. ಇದನ್ನು ಇವತ್ತಿನ ದಿವಸ ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ನಮ್ಮ ಮಾನ್ಯ ಶ್ರೀಕಂಠಯ್ಯನವರು ವಿದ್ಯು ಚ್ಛಕ್ತಿಗೆ ಪ್ರತ್ಯೇಕ ರಾಜ್ಯ ಮಂತ್ರಿಗಳಾಗಿದ್ದಾರೆ ಆದಕಾರಣ, ಅವರು ಚೆನ್ನಾಗಿ ಡಿಸಿಷಿನ್ ತಗೆದುಕೊಂಡು ಕೆಲಸ ಮಾಡುತ್ತಾರೆ ಎಂಬ ನಂಬಿಕೆ ನನಗೆ ಇದೆ. ಆದುದರಿಂದ, 1973ರಲ್ಲಿ ನಾನು ಇಲ್ಲಿ ಏನು ಹೇಳಿದೆ, ಅದನ್ನೇ ಈಗ ಹೇಳಬೇ ಕಾಗಿದೆ. ನಮ್ಮ ತಾಲೂಕಿನಲ್ಲಿ ಕೇವಲ 11 ಪರ್ಸೆಂಟ್ ಮಾತ್ರ ಎಲೆಕ್ಟ್ರಿಫಿಕೇ ಷನ್ ಆಗಿದೆ. ನಮ್ಮ ತಾಲೂಕಿನಲ್ಲಿರುವ ಸುಮಾರು 158 ಹಳ್ಳಿಗಳಿಗೆ, ನಮಗೆ ಸ್ವಾತಂತ್ರ್ಯ ಬಂದು 27 ವರ್ಷಗಳಾದ ಮೇಲೆ ಸುಮಾರು 27 ಹಳ್ಳಿಗಳಿಗೆ ವಿದ್ಯು ಚ್ಛಕ್ತಿ ಸೌಲಭ್ಯವನ್ನು ಒದಗಿಸಲಾಗಿದೆ. ನಾನು ಇಲ್ಲಿಗೆ ಬಂದಂದಿನಿಂದಲೂ ನಮ್ಮ ತಾಲೂಕಿನ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಪ್ರಾರ್ಥನೆ ಮಾಡುತ್ತಾ ಬಂದಿದ್ದರೂ ಕೂಡ, ಇನ್ನೂ ಸಂಪೂರ್ಣವಾಗಿ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಇದರ ಬಗ್ಗೆ ಚೇರ್ಮನ್ ಅವರನ್ನು ಕೇಳಿಕೊಂಡಾಗ,

ಶ್ರೀ ಧರ್ಮಸಿಂಗ್ (ಜೇವರ್ಗಿ)

ಅವರ ಇದರಲ್ಲಿರತಕ್ಕ ವ್ಯವಹಾರಿಕ ಕಷ್ಟಗಳನ್ನು ಹೇಳಿಕೊಂಡರು. ಅಲ್ಯೂಮಿನಿಯಂ ಕಂಡಕ್ಟರ್ಸ್ ಇಲ್ಲ ಎಂದು ಹೇಳಿದರು. ಆದರೂ ಕೂಡ ತಾವು ಆದಷ್ಟು ಪ್ರಯತ್ನ ಪಟ್ಟು, ನಮ್ಮ ತಾಲೂಕಿನ ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಾಗಿದ್ದರೆ, ಕನಿಷ್ಟ ಪಕ್ಷ 50 ಪರ್ಸೆಂಟ್ ಗ್ರಾಮಗಳಿಗಾದರೂ ಕೂಡ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಬೇಕೆಂದು ಹೇಳುತ್ತೇನೆ. ನಮ್ಮಲ್ಲಿಗೆ ಈಗ 200 ಪಂಪಸೆಟ್ಟುಗಳನ್ನು ಕೊಟ್ಟಿದ್ದಾರೆ. ಆದರೆ ಕಂಡಕ್ಟರ್ಸ್ ವೈರ್ ಇಲ್ಲ; ಮೂರು ಟ್ರಾನ್ಸ್‌ಮಿಷನ್ ಲೈನ್ ಹಾಕಿದ್ದಾರೆ. ಆದರೆ ಕಂಬಗಳು ಬಿದ್ದು ಹೋಗುವ ಪರಿಸ್ಥಿತಿಗೆ ಬಂದಿವೆ. ಆದರೆ, ಈಗ ವೈರ್‌ನ ಅಭಾವ ಇದೆ ಎಂಬುದು ನಮಗೂ ಗೊತ್ತಿದೆ. ಆದುದರಿಂದ, ವೈರ್ ಬಂದ ತಕ್ಷಣವೇ ನಮ್ಮ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸೌಕರ್ಯವನ್ನು ಒದಗಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈಗ ನಮ್ಮ ತಾಲ್ಲೂಕಿನಲ್ಲಿ ಸೆಕ್ಷನ್ ಆಫೀಸ್ ಇಲ್ಲ. ಈಗ ನಾವು ಸೆಕ್ಷನ್ ಆಫೀಸಿಗೆ ಹೋಗಬೇಕಾದರೆ ಸುಮಾರು 80 ಕಿಲೋಮೀಟರು ಹೋಗಬೇಕಾಗುತ್ತದೆ. ಆದುದರಿಂದ, ನಮ್ಮ ತಾಲೂಕಿನಲ್ಲೇ ಒಂದು ಸೆಕ್ಷನ್ ಆಫೀಸ್ ಮಾಡಿದರೆ ನಮ್ಮ ಜನರಿಗೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಆದಕಾರಣ, ತಾವು ಇದರ ಬಗ್ಗೆ ಪರಿಶೀಲನೆ ಮಾಡುತ್ತೀರಿ ಎಂದು ನಂಬಿ ಮತ್ತು, ಇನ್ನೊಮ್ಮೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ ತಾವು ವಿಚಾರ ಮಾಡುತ್ತೀರಿ ಎಂಬ ಭರವಸೆಯನ್ನಿಟ್ಟುಕೊಂಡು, ಉಪಾಧ್ಯಕ್ಷರು ನನಗೆ ಸಮಯ ಕೊಟ್ಟಿದ್ದಕ್ಕಾಗಿ, ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

ಶ್ರೀ ಸಿ. ಬೈರೇಗೌಡ (ವೇಮಗಲ್) :—ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇನ್ನಿಬ್ಬರು ರಾಜ್ಯ ಮಂತ್ರಿಗಳು ತಮ್ಮ ಬೇಡಿಕೆಗಳಿಗೆ ಸಂಬಂಧಪಟ್ಟಂಥ ಬೇಡಿಕೆಗಳನ್ನು ಏನು ಇಟ್ಟಿದ್ದಾರೆ ಅದನ್ನು ನಾನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಅಧ್ಯಕ್ಷರೇ ಇವೊತ್ತಿನ ದಿವಸ ನಮ್ಮ ಮಂತ್ರಿಮಂಡಲದಲ್ಲಿ ಸ್ವಲ್ಪ ವಯಸ್ಸಾಗಿರತಕ್ಕಂಥಾವರು ಮತ್ತು ವಯಸ್ಸಿನಲ್ಲಿ ತರುಣರಾಗಿರತಕ್ಕಂಥಾವರು ಇದ್ದಾರೆ. ಇದರಲ್ಲಿ ಒಬ್ಬರಾದಂಥ ಶ್ರೀಮಾನ್ ಶ್ರೀಕಂಠಯ್ಯನವರು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಗಳಾಗಿದ್ದಾರೆ. ಅವರು ಬಹಳ ಉತ್ಸಾಹಿಶಾಲಿಗಳು. ಮತ್ತು ತರುಣರಾಗಿರುವುದರಿಂದ ಹೆಚ್ಚಿನ ಕೆಲಸವನ್ನು ಮಾಡಬೇಕೆನ್ನುವ ಆಸೆಯೂ ಇದೆ. ಆದರೆ ಇವೊತ್ತು ಪರಿಸ್ಥಿತಿ ಏನಾಗಿದೆ ಎಂದರೆ ಅವರು ಮಂತ್ರಿಗಳಾಗಿ ಬಂದಮೇಲೆ 1972 ನೇ ಇಸವಿಯಲ್ಲಿ ಸುಮಾರು 5 ಸಾವಿರ ಮಿಲಿಯನ್ಸ್ ಕಿಲೋ

ವಾಟ್ಸ್ ವಿದ್ಯುಚ್ಛಕ್ತಿ ಉತ್ಪಾದನೆ ಇದ್ದರೆ 1973ರಲ್ಲಿ 500 ಮಿಲಿಯನ್ ಕಿಲೋವಾಟ್ಸ್ ಅಷ್ಟು ಕಡಿಮೆಯಾಗಿದೆ. ಆದರೆ ಅವರು ಹೇಳಬಹುದು ಇವೊತ್ತಿನ ದಿವಸ ಮಳೆ ಸರಿಯಾಗಿ ಬಾರದೇ ಜಲಾಶಯದಲ್ಲಿ ನೀರು ಇಲ್ಲದೆ ಇರುವುದರಿಂದ ವಿದ್ಯುಚ್ಛಕ್ತಿ ಕಡಿಮೆಯಾಗುವುದಕ್ಕೆ ಕಾರಣ ಎಂದು. ಇದರೆ ಇವೊತಿ ನ ದಿವಸ ಕೇವಲ ಮಳೆಯನ್ನೇ ನಂಬಿ ನಡೆಸತಕ್ಕಂಥ ಕಾಲ ಮುಗಿದಿದೆ. ಈವೊತ್ತು ವಿಜ್ಞಾನಗಳು ಬಹಳ ಮುಂದುವರೆಯುತ್ತಾ ಇದೆ. ಆದುದರಿಂದ ಇಂದು ವಿಜ್ಞಾನದಲ್ಲಿರತಕ್ಕಂಥ ಸೌಲಭ್ಯಗಳನ್ನು ಒದಗಿಸಿ ವಿದ್ಯುಚ್ಛಕ್ತಿಯ ಕೊರತೆಯನ್ನು ಆದಷ್ಟು ಜಾಗ್ರತೆ ನಿವಾರಣೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಜನ ವಿದ್ಯುತ್ ನಂಬಿದೆ ಅಣು ವಿದ್ಯುತ್ ಮಾಡಬೇಕಾಗಿದೆ. ಕೋಲ್‌ನಿಂದ ಉತ್ಪಾದನೆ ಮಾಡತಕ್ಕಂಥ ಸಾಧನೆಗಳು ಇವೆ. ಆದರೆ ದುರಾದೃಷ್ಟವಶಾತ್ ಅದನ್ನು ಕಾರ್ಯರೂಪಕ್ಕೆ ತರದೆ, ಈ ಜಲನೀರನ್ನೇ ನಂಬಿ ಈ ವಿದ್ಯುತನ್ನು ನಂಬಿ ಕೂತಿದ್ದೇವೆ. ಅದರ ಬಗ್ಗೆ ಇಲ್ಲಿಯವರೆಗೂ ಪುಷ್ಟವಾದಂಥ ಪ್ರಯತ್ನ ಆಗಿಲ್ಲ. ಈ ಒಂದು ಕೆಲಸವನ್ನು ಮಾನ್ಯ ಸಚಿವರಾದ ಶ್ರೀಕಂಠಯ್ಯನವರು ಮಾಡಬೇಕು ಎಂದು ಹೇಳುತ್ತೇನೆ. ಅಣು ವಿದ್ಯುತ್ ಕೇಂದ್ರವನ್ನಾಗಲಿ ಅಥವಾ ಥರ್ಮಲ್ ವಿದ್ಯುತ್ ಕೇಂದ್ರವನ್ನಾಗಲಿ ನಮ್ಮ ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ಅತಿ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ವಿದ್ಯುತ್ತೀಕರಣದ ಬಗ್ಗೆ ಹೇಳಬೇಕಾದರೆ ಸುಮಾರು 27,071 ಗ್ರಾಮಗಳಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಆಗಬೇಕಾಗಿದೆ ಆದರಲ್ಲಿ ಸುಮಾರು 16593 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಅಂದರೆ ಶೇಕಡ 53 ಪರ್ಸೆಂಟ್ ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಅಧ್ಯಕ್ಷರೇ, ನಮ್ಮ ದೇಶಕ್ಕೆ ಸ್ವಾತಂತ್ರ ಬಂದು 27-28 ವರ್ಷಗಳಾದವು. ಆದರೆ ಹಳ್ಳಿಯ ಕೊರತೆ ಇನ್ನೂ ವರೆಗೂ ಆಗಿಲ್ಲ. ಅವರಿಗೆ ಈ ಒಂದು ಸಣ್ಣ ಬೆಳಕನ್ನು ಇನ್ನೂವರೆಗೂ ನೀಡಲಿಕ್ಕೆ ಆಗಿಲ್ಲ. ಈ ಒಂದು ಕೆಲಸದಲ್ಲಿ ಆ ಗ್ರಾಮಗಳವರಿಗೆ ವಿದ್ಯುಚ್ಛಕ್ತಿ ಕೊಡುವ ಕೆಲಸವನ್ನು ಬಹು ಶ್ರದ್ಧೆವಹಿಸಿ ಕೆಲಸಮಾಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಐ ಪಿ.ಸೆಟ್‌ಗಳ ಬಗ್ಗೆ ಹೇಳಬೇಕಾದರೆ ನಮ್ಮ ದೇಶದಲ್ಲಿ 1,68,587 ಐ.ಪಿ.ಸೆಟ್ಸ್ ಇವೆ. ಮುಖ್ಯವಾಗಿ ವ್ಯವಸಾಯಕ್ಕೆ ಬೇಕಾಗಿರತಕ್ಕಂಥ ನೀರು. ನಮ್ಮ ಕಡೆ ಆ ನೀರು ನದಿಯಲ್ಲಿ ಇಲ್ಲ. ನದಿಯಲ್ಲಿ ಮಳೆ ಬಂದರೆ ನೀರು ಇರುತ್ತದೆ ಇಲ್ಲದಿದ್ದರೆ ಇಲ್ಲ. ನಮ್ಮ ಜಿಲ್ಲೆಯ ಜನರು ಈ ನೀರಿನ ಆಶ್ರಯವನ್ನೇ ನಂಬಿಕೊಂಡಿರುತ್ತಾರೆ. ನಮ್ಮ ಕೋಲಾರ ಪ್ರಗತಿಯಾಗಿರತಕ್ಕಂಥಾದ್ದು ಚಿನ್ನಕ್ಕೆ ನಾವು ನಿಜವಾಗಿಯೂ ಚಿನ್ನವನ್ನು ಉತ್ಪಾದನೆ ಮಾಡುತ್ತೇವೆ. ಆದರೆ ಈವೊತ್ತು ನಮಗೆ ಏನಾಗಿದೆ ಎಂದರೆ ಶ್ರೀಮಾನ್ ಶ್ರೀಕಂಠಯ್ಯನವರು ಮಂತ್ರಿಗಳಾಗುವುದಕ್ಕೆ ಮೊದಲು ಕಂಬಿಗಳನ್ನು ಎಳೆದು ಕರೆಂಟ್ ಕೊಡುವುದಕ್ಕೆ ಬಿಟ್ಟಿದ್ದರು. ಈಗ ಆ ಕಂಬಿಗಳನ್ನು

(ಶ್ರೀ ಸಿ. ಬೈರೇಗೌಡ ವೇಮಗಲ್)

ಹಾಗೆಯೇ ನಿಲ್ಲಿಸಿದ್ದಾರೆ. 1--1½ ವರ್ಷವಾಗಿದೆ ಅನೇಕ ಕಡೆಗಳಲ್ಲಿ ಕಂಬಿಗಳನ್ನು ನಿಲ್ಲಿಸಿ ವಿದ್ಯುಚ್ಛಕ್ತಿ ಇನ್ನೂ ಕೊಟ್ಟಿಲ್ಲ. ನಾನು ಚೇರ್ಮನ್‌ರವರ ಕೂಡ ಪ್ರಸ್ತಾಪ ಮಾಡಿದೆ. ಅವರು ಏನಪ್ಪಾ ಕಂಬಿಗಳೇ ಇಲ್ಲವಲ್ಲ, ಕಂಡಕ್ಟರ್ಸ್ ಇಲ್ಲವಲ್ಲ ಎಂದು ಹೇಳುತ್ತಾರೆ. ಮತ್ತು ಈಗ ನಾನು ಹೇಳುತ್ತಾ ಇರುವುದು ಬಹಳ ಗಹನವಾದ ವಿಷಯ. ಅದೇನೆಂದರೆ ಬೆಳಗಾಂ ಅಲ್ಯೂಮಿನಿಯಂ ಫ್ಯಾಕ್ಟರಿ ಬಗ್ಗೆ ಮಾನ್ಯ ಚನ್ನಬಸಪ್ಪನವರೇ ಹೇಳುತ್ತಾರೆ ಇದರ ವ್ಯವಹಾರದಿಂದ ನಮಗೆ 1½ ಕೋಟಿ ರೂಪಾಯಿ ನಷ್ಟವಾಗುತ್ತಾ ಇದೆ ಎಂದು. ಅವರು ಇದೇ ಸದನದಲ್ಲಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಇದು ಉತ್ಪಾದನೆಯಾದರೂ ಕೂಡ, ಈ ಫ್ಯಾಕ್ಟರಿಗೆ ಕಡಿಮೆ ಬೆಲೆಯಲ್ಲಿ ನಾವು ವಿದ್ಯುಚ್ಛಕ್ತಿ ಕೊಟ್ಟರೂ ಕೂಡ ಇದರ ಉತ್ಪಾದನೆಯನ್ನು ಸೆಂಟ್ರಲ್ ಪೂಲ್‌ಗೆ ಕಳುಹಿಸುತ್ತಾರೆ. ಇದಕ್ಕೆ ಅಲ್ಯೂಮಿನಿಯಮ್ ಪ್ರೈಸ್‌ನ್ನು ಕೇಂದ್ರ ಸರ್ಕಾರದವರು ಕೊಡಬೇಕು ಎಂದು ನಾನು ಕೇಳಿದ್ದೇನೆ. ಇದರ ಉತ್ಪಾದನೆಯಾಗತಕ್ಕಂಥಾದ್ದು ನಮ್ಮ ರಾಜ್ಯದಲ್ಲಿ ಮೇಲಾಗಿ ಕಡಿಮೆ ಬೆಲೆಯಲ್ಲಿ ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಇದ್ದೇವೆ. ಪ್ರಪಂಚದಲ್ಲಿ, ಇತರ ದೇಶಗಳಲ್ಲಿ ಇಲ್ಲದೇ ಇರತಕ್ಕಂಥ ಬೆಲೆ ಅಂದರೆ ಒಂದು ಯೂನಿಟ್‌ಗೆ ಒಂದೂವರೆ ಪೈಸೆನಂತೆ ಈ ಬೆಳಗಾಂ ಅಲ್ಯೂಮಿನಿಯಂ ಫ್ಯಾಕ್ಟರಿಗೆ ವಿದ್ಯುಚ್ಛಕ್ತಿ ಕೊಡುತ್ತಾ ಇದ್ದೇವೆ. ಹೀಗಿದ್ದರೂ ಸಹ ನಮ್ಮಲ್ಲೇ ಇರತಕ್ಕಂಥ ಪಂಪ್‌ಸೆಟ್‌ಗೆ ವಿದ್ಯುಚ್ಛಕ್ತಿ ಕೊಡಿ ಎಂದರೆ ಕಂಬಿ ಇಲ್ಲ ಎಂದರೆ ಬಹಳ ಆಶ್ಚರ್ಯವಾಗುತ್ತದೆ. ಏತಕ್ಕೆಂದರೆ ತಾವು ಈ ಒಂದು ಕಡಿಮೆ ದರದಲ್ಲಿ ಬೆಳಗಾಂ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಏತಕ್ಕೆ ಕೊಡಬೇಕಾಗಿತ್ತು ? ಈ ಬೆಳಗಾಂ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಕಡಿಮೆ ದರದಲ್ಲಿ ಕೊಡುವುದು ಮಾತ್ರವಲ್ಲದೆ ಅದೇ ರೀತಿ ಮಂತ್ರಿಮಂಡಲದಲ್ಲಿ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಘೋರ್ಪಡೆಯವರದ್ದು ಒಂದು ಐರನ್ ಓರ್ ಸೊಂಡೂರಿನಲ್ಲಿದೆ. ಅದಕ್ಕೂ ಕಡಿಮೆ ದರದಲ್ಲಿ ಅಂದರೆ 1—1½ ಪೈಸೇಗೆ ಕೊಟ್ಟಿರಬೇಕು. ಆದರೆ ನನಗೆ ಖಚಿತವಾಗಿ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಅವರಿಗೆ ಇಷ್ಟುಕಡಿಮೆ ದರದಲ್ಲಿ ಕೊಡುತ್ತೀರಾ ? ಈವೊತ್ತು ಆಹಾರ ಬೆಳೆಯ ಬೇಕು ವಿದ್ಯುಚ್ಛಕ್ತಿ ಕೊಡಿ ಎಂದರೆ ಈ ವ್ಯವಸಾಯಕ್ಕೆ ಉಪಯೋಗಿಸುವ ನೀರಿನ ಕರೆಂಟ್‌ಗೆ ಒಂದು ಯೂನಿಟ್‌ಗೆ 15 ಪೈಸೇ ಛಾರ್ಜು ಮಾಡುತ್ತಿದ್ದೀರಿ. ಆದರೆ ಕೋಟ್ಯಾಂತರ ರೂಪಾಯಿ ಬಂಡವಾಳ ಹಾಕಿರತಕ್ಕಂಥಾವರಿಗೆ ಮತ್ತು ಹೆಚ್ಚಿನ ಉತ್ಪಾದನಾ ಶಕ್ತಿ ಇರುವವರಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಕೊಡುತ್ತಿದ್ದೀರಿ. ಇಂಥಾ ಒಂದು ಅಕೃತ್ಯಕ್ಕೆ ಯಾರು ಕಾರಣರು ಎನ್ನುವುದನ್ನು ತಿಳಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನೊಂದು ಶೋಚನೀಯವಾದ ವಿಚಾರ ಏನೆಂದರೆ ಈ ಐ. ಪಿ. ಸೆಟ್ಸ್‌ಗೆ ರಿವ್ಯೂಂಡ್ ಛಾರ್ಜಸ್ ಬೇರೆ ಹಾಕಿದ್ದೀರಿ. ಇದು ಅರ್ಥವೇ ಆಗುತ್ತಾ ಇಲ್ಲ.

ಮಾನ್ಯ ಚೆನ್ನಬಸಪ್ಪನವರು ಕಳೆದ ವರ್ಷ ಇದರ ಬಗ್ಗೆ ಬಹಳ ದೀರ್ಘವಾದ ವಿವರಣೆ ಕೊಟ್ಟರು. ಅದು ನನಗೆ ಇದುವರೆಗೂ ಅರ್ಥವಾಗಿಲ್ಲ. ನಮ್ಮ ದೇಶದ 1,68,587 ಜನ ರೈತರ ಮೇಲೆ ಈ ಡಿವ್ಯೆಂಡ್ ಛಾರ್ಜಸ್ ಬಿದ್ದಿದೆ. ಅವರ ಜೇಬಿಗೆ ಕತ್ತರಿ ಹಾಕುತ್ತಿದ್ದೀರಿ ಕತ್ತರಿ ಹಾಕುವ ಕೆಲಸವನ್ನು ಬಿಡಿರಿ ಎಂದು ಈ ಸದನದಲ್ಲಿ ಅನೇಕ ಸಲ ಹೇಳಿದ್ದೇನೆ. ಅದಕ್ಕೆ ಮಾನ್ಯ ಚನ್ನಬಸಪ್ಪನವರಿಂದ ಈ ಡಿವ್ಯೆಂಡ್ ಛಾರ್ಜಸ್‌ನ್ನು ತೆಗೆಯುತ್ತೇವೆ ಅನ್ನುವ ಆಶ್ವಾಸನೆ ಕೂಡಾ ಬಂದಿದೆ. ಅಲ್ಲದೇ ಈ ಬಗ್ಗೆ ರೈತರುಗಳೂ ಕೂಡ ಕಳೆದ 1--1½ ವರ್ಷದಿಂದಲೂ ಒತ್ತಾಯ ಮಾಡುತ್ತಾ ಬಂದಿದ್ದಾರೆ. ಆದರೂ ಕೂಡ ಇದುವರೆಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಈ ಡಿವ್ಯೆಂಡ್ ಛಾರ್ಜಸ್‌ನ್ನು ತಕ್ಷಣ ತೆಗೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು ಕಾಳೀನದಿ ಬಗ್ಗೆ ಹೇಳುವುದಾದರೆ ಇದನ್ನು ಅತಿ ಜಾಗ್ರತೆಯಾಗಿ ಮುಗಿಸಲೇ ಬೇಕು. ಏತಕ್ಕೆಂದರೆ ಇದು ನಮ್ಮ ರಾಜ್ಯದ ಜೀವನಾಡಿ ಪ್ರಶ್ನೆ. ನೀವು ಹಣವನ್ನು ಎಲ್ಲಿಂದಲಾದರೂ ತೆಗೆದುಕೊಂಡು ಇದರ ಕೆಲಸವನ್ನು ಬೇಗನೆ ಮುಗಿಸಬೇಕು ಎಂದು ಹೇಳುತ್ತೇನೆ.

ಇನ್ನು ಪವರ್ ಕಾರ್ಪೊರೇಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಇಲ್ಲಿ ನಾನು ಒಂದು ವಿಚಾರ ಕೇಳಿದ್ದು ಏನೆಂದರೆ ಇಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್‌ಯೂರು ಇದ್ದಾರೆ ಅವರಿಗೆ ಕಣ್ಣಿಗೆ ಕಾಣುತ್ತಾ ಇರುವುದು ಕೇವಲ ಒಂದೇ ಒಂದು ಜಾತಿ ಜನ. ಅಂಥಾ ಒಂದು ಕೆಲಸ ನಡೆಯುತ್ತಾ ಇದ್ದರೆ ಅದನ್ನು ನೋಡಿಕೊಂಡು ಸಹಿಸುವುದಕ್ಕೆ ಸಾಧ್ಯವಿಲ್ಲ. ಅವರ ಕಣ್ಣಿಗೆ ಕಾಣಿಸುತ್ತಾ ಇರುವುದು ಒಂದೇ ಒಂದು ವರ್ಗದ ಜನ. ನಮ್ಮ ಸ್ಟೇಟ್ ಸೆಕ್ಯೂಲರ್ ಸ್ಟೇಟ್ ಆಗಿರುವುದರಿಂದ ಇದರಲ್ಲಿ ಎಲ್ಲಾ ಜನರಿಗೂ ಪ್ರಾತಿನಿಧ್ಯ ಕೊಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಅನಮೋದಿಸುತ್ತ ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಕರ್ಣಾಟಕದಲ್ಲಿ ಜಲ ಸಂಪತ್ತು ವಿಪುಲವಾಗಿದೆ ಹಾಗೂ ಭೂಮಿಯ ಸಂಪತೂ ವಿಪುಲವಾಗಿದೆ ಜಲಸಂಪತ್ತನ್ನು ಉಪಯೋಗ ಮಾಡಿಕೊಂಡು ನಮ್ಮಲ್ಲಿರುವ ಫಲವತ್ತಾದ ಭೂಮಿಯನ್ನು ಉಪಯೋಗ ಮಾಡಿಕೊಂಡು ಹೆಚ್ಚು ಬೆಳೆ ಬೆಳೆಸಬಹುದು. ಕೆಲವಾರು ವರ್ಷಗಳ ಹಿಂದೆ ನೀರಿನ ಉಪಯೋಗ ಯಾವ ರೀತಿ ಇತ್ತು ಎಂದು ನೋಡಿದರೆ ನಮಗೆ ಇದರ ವಿಚಾರಗಳು ಚೆನ್ನಾಗಿ ಗೊತ್ತಾಗುತ್ತದೆ. 1956 ರಿಂದ ಈಚೆಗೆ ನಮ್ಮ ಸರಕಾರ ಪ್ರಗತಿಪರವಾದ ನೀತಿಯನ್ನು

(ಶ್ರೀ ಆರ್. ಎಸ್. ಪಾಟೀಲ್)

ಅನುಸರಿಸಿಕೊಂಡು ಬರುತ್ತಿದೆ. ಅದರಲ್ಲೂ ನಮಗೆ ಕಂಡುಬರುತ್ತಿರುವುದು ಮೇಜರು ಇರಿಗೇಷನ್ ಹಾಗೂ ಮೀಡಿಯಂ ಇರಿಗೇಷನ್ ಬಗ್ಗೆ ನಮ್ಮ ಸರಕಾರ ಎಷ್ಟು ಆಸ್ಥೆ ವಹಿಸಿ ಕೆಲಸ ಮಾಡುತ್ತಿದೆ ಎನ್ನುವುದನ್ನು ನಮ್ಮ ಮನಸ್ಸಿನಲ್ಲಿಡ ಬೇಕು. ನಮ್ಮ ಏರಿಯಾ ಡೆವಲಪ್‌ಮೆಂಟು ಪೊಟೆನ್ಷಿಯಲ್ 56 ರಿಂದ 72 ರವರೆಗೆ 13.7 ಲಕ್ಷ ಎಕರೆಗಳಷ್ಟು ಇತ್ತು. ಇದು 72 ರಿಂದ 75 ರವರೆಗೆ 16 ಲಕ್ಷ ಎಕರೆಗಳವರೆಗೆ ಬಂದಿದೆ. ಅದರಲ್ಲೂ ಕಳೆದ ಮೂರು ವರ್ಷಗಳಿಂದೀಚೆಗೆ ನಮ್ಮ ಸರಕಾರ ಎಷ್ಟು ಹೆಚ್ಚು ಸಾಧನೆ ಮಾಡಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇದೇ ರೀತಿ ಈ ಯೋಜನೆಗಳಿಗಾಗಿ ಹೂಡಿರುವ ಬಂಡವಾಳ ಎಷ್ಟು ಎಂದು ವಿಚಾರ ಮಾಡುವುದಾದರೆ 56 ರಿಂದ 72 ರವರೆಗೆ ಸುಮಾರು 168 ಕೋಟಿಯಷ್ಟು ಬರುತ್ತದೆ ಇದು 72 ರಿಂದ 75 ರವರೆಗೆ ನೋಡಿದರೆ 90 ಕೋಟಿಯವರೆಗೆ ಹೂಡಿರುವುದು ಗೊತ್ತಾಗುತ್ತದೆ 72 ರಿಂದ 73 ರೊಳಗೆ ಸುಮಾರು 170 ಕೋಟಿಯಷ್ಟು ಬಂಡವಾಳವನ್ನು ಹೂಡಲಾಗಿದೆ. ನೀರಾವರಿ ಕ್ಷೇತ್ರದಲ್ಲಿ ಎಷ್ಟು ಪ್ರಗತಿ ಸಾಧಿಸುತ್ತಿದ್ದೇವೆ ಇದರಿಂದ ಚೆನ್ನಾಗಿ ನಮಗೆ ಗೊತ್ತಾಗುತ್ತದೆ. ಆದರೆ ಇದರಿಂದ ಸಾಕಷ್ಟು ಪ್ರತಿಫಲ ಬರುತ್ತಿಲ್ಲ. ಇದಕ್ಕೆ ಕಾರಣವೇನು ಎಂದರೆ ಆಯಕಟ್ಟಿನ ಪ್ರದೇಶಗಳನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಲು ಆಗಲಿಲ್ಲ. ಹಾಗೂ ಏರಿಯಾ ಡೆವಲಪ್‌ಮೆಂಟನ್ನು ಸರಿಯಾಗಿ ಗಮನಕ್ಕೆ ತೆಗೆದುಕೊಂಡಿಲ್ಲ ಎನ್ನುವುದು ಗೊತ್ತಾಗುತ್ತದೆ. ಇದರಲ್ಲಿ ನಮಗೆ ಒಂದು ವಿಚಾರ ಏನು ತೋರುತ್ತದೆ ಎಂದರೆ ಪಬ್ಲಿಕ್ ವರ್ಕ್ಸ್ ಇಲಾಖೆಗೂ ಪಬ್ಲಿಕ್ ಹೆಲ್ತ್ ಇಂಜನೀಯರಿಂಗು ಇಲಾಖೆಯಲ್ಲಿ ಸರಿಯಾದ ಕೋ ಆರ್ಡಿನೇಷನ್ ಇಲ್ಲ ಎನ್ನುವುದು ಇದಕ್ಕೆ ಕಾರಣ. ಮತ್ತು ಇಲಾಖೆಯವರು ಸರಿಯಾದ ಆಸ್ಥೆ ವಹಿಸುತ್ತಿಲ್ಲ ಎನ್ನುವುದಕ್ಕೆ ಅಗ್ರಿಕಲ್‌ಚರ್ ಹೊಡಿಸಿರುವ ಒಂದು ವರದಿಯಿಂದ ನಮಗೆ ಇದು ಗೊತ್ತಾಗುತ್ತದೆ ಇದರಲ್ಲಿ ಅವರೇ ಹೇಳಿರುವಂತೆ: The Main problem is non-utilisation of irrigation potential created. ಏರಿಯಾ ಡೆವಲಪ್‌ಮೆಂಟ್ ಏನಾಗಿದೆ ಎಂದರೆ ಕೆಲವು ನೀರಾವರಿ ಯೋಜನೆಗಳು ಬೇಗನೆ ಆಗಬೇಕೆಂದು ಮಾಡಿದ್ದರೂ ಕಳೆದ 25 ವರ್ಷಗಳಿಂದ ನೋಡಿದರೆ ಕೆಲವು ಯೋಜನೆಗಳು ಇನ್ನೂ ಪೂರ್ತಿಯಾಗಲಿಲ್ಲ. ಕೆಲವು ಪ್ರಾಜೆಕ್ಟುಗಳ ಆಯುಷ್ಯ ಹೇಳಲು ಬರುವುದಿಲ್ಲ. ಆದರೆ ನಮ್ಮ ಮಲಪ್ರಭಾ ಯೋಜನೆ ಕೆಲಸಗಳು ಬಹಳ ಅಡೆತಡೆಗಳಿಂದ ಮುಗಿಸಿದ್ದರೂ ಕೂಡ ಸರಕಾರ ಇದನ್ನು ಮುಗಿಸಲು ಅವರು ಹಾಕಿಕೊಂಡಿದ್ದ ಷೆಡ್ಯೂಲು ಪ್ರಕಾರ ಕೆಲಸಗಳನ್ನು ಮಾಡಿರುವಂತೆ ಇದನ್ನು ಪೂರ್ಣವಾಗಿ ಮಾಡಿ ಮುಗಿದುದಕ್ಕಾಗಿ ಸರಕಾರಕ್ಕೆ ಹಾಗೂ ಇದರ ಇಂಜನೀಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ ಇದರ ಏರಿಯಾ ಪೊಟೆನ್ಷಿಯಲ್ ನೋಡಿದಾಗ ಬಹಳ ಅಲ್ಪವಾದ ಪ್ರಗತಿಯಾಗಿದೆ ಎನ್ನುವುದು ಗೊತ್ತಾಗುತ್ತದೆ.

ಇದಕ್ಕಾಗಿ ಸುಮಾರು 8.80 ಲಕ್ಷದಷ್ಟು ಹಣ ಒದಗಿಸಿದ್ದರೂ ಕೂಡ ಇದರ ಅಯು ಕಟ್ಟನ್ನು ಅಭಿವೃದ್ಧಿ ಮಾಡುವುದರ ಕಡೆಗೆ ಹೆಚ್ಚು ಆಸ್ಥೆ ವಹಿಸಿಲ್ಲ ಎನ್ನುವುದ ಗೊತ್ತಾಗುತ್ತದೆ. ಇದಕ್ಕೆ ಕಾರಣಗಳೇನು ಎನ್ನುವುದನ್ನು ನಾವು ವಿಚಾರ ಮಾಡಬೇಕು. ಭದ್ರಾ ಪ್ರಾಜೆಕ್ಟು ಕೆಳಗೆ ಯಾವ ರೀತಿ ಏರಿಯಾ ಡೆವಲಪ್ ಆಗಿದೆ ಮಲಪ್ರಭಾ ಕೆಳಗೆ ಯಾವ ರೀತಿ ಡೆವಲಪ್ ಆಗಿದೆ ಎನ್ನುವುದನ್ನು ನೋಡಿದರೆ ಸರಕಾರದ ಒಕ್ಕಲು ಖಾತೆಯವರಿಗೂ ಇಂಜಿನೀಯರಿಂಗ್ ಖಾತೆಯವರಿಗೂ ಒಂದು ರೀತಿಯ ಹೊಂದಾಣಿಕೆ ಇಲ್ಲ ಎನ್ನುವುನು ಇದರಿಂದ ಗೊತ್ತಾಗುತ್ತದೆ ಎಂದು ನನಗನಿಸುತ್ತದೆ. ಏರಿಯಾ ಡೆವಲಪ್‌ಮೆಂಟಿಗೆ ನಾವು ಹೆಚ್ಚಿನ ಮಹತ್ವ ಕೊಡಬೇಕು ಇದೇ ರೀತಿ ಕಾವೇರಿ ಬೇಸಿನ್‌ನಲ್ಲೂ ಕೂಡ 5038 ಲಕ್ಷ ಎಕರೆಗಳಷ್ಟು ಏರಿಯಾ ಪೊಟೆನ್‌ಷಿಯಲ್ ಇದ್ದರೂ ಕೂಡ ಇದರ ನೀರು ಇನ್ನೂ ಒಂದು ಸಾವಿರ ಎಕರೆ ಗಳಷ್ಟು ಮಾತ್ರ ಉಪಯೋಗವಾಗಿದೆ ಎಂದು ತಿಳಿದು ಬರುತ್ತದೆ. ಇವನ್ನು ನೋಡಿದರೆ ಎಷ್ಟು ದೊಡ್ಡ ಯೋಜನೆ ಮಾಡಿ ಇದರಿಂದ ಜನತೆಗೆ ಎಷ್ಟು ಉಪಯೋಗವಾಗುತ್ತಿದೆ ಮತ್ತು ಜನರಿಗೆ ಎಷ್ಟು ಸೌಕರ್ಯ ಸಿಗುತ್ತಿದೆ ಎನ್ನುವುದು ಇದರಿಂದ ಅರ್ಥವಾಗುತ್ತದೆ ಇದನ್ನು ಅಭಿವೃದ್ಧಿ ಮಾಡಬೇಕಾದರೆ ಇರುವ ಎಲ್ಲ ಭೂಮಿಯನ್ನೂ ಯೋಗ್ಯ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು. ಪ್ರಾಜೆಕ್ಟುಗಳನ್ನು ಮಾಡುವಾಗ ಸರಿಯಾಗಿ ಆಸ್ಥೆ ವಹಿಸಿ ಅದರ ಬಗ್ಗೆ ವಿಚಾರ ಮಾಡುವುದು ಅವಶ್ಯಕ. ನೀರಾವರಿ ಯೋಜನೆಗಳು ಸರಿಯಾಗಿ ಏಕೆ ಉಪಯೋಗ ವಾಗುತ್ತಿಲ್ಲ ಎನ್ನುವುದನ್ನು ನಾವು ಇಲ್ಲಿ ವಿಚಾರ ಮಾಡಬೇಕು. ಮಲಪ್ರಭಾದ ಯೋಜನೆಯಿಂದ ಸುಮಾರು ಒಂದು ಲಕ್ಷ ಎಕರೆಗೂ ಮೇಲ್ಪಟ್ಟು ಕೃಷಿಗೆ ಯೋಗ್ಯ ವಾಗುವಂತೆ ಮಾಡಬೇಕೆಂದು ಇದ್ದರೂ ಇದರಲ್ಲಿ ಉಪಯೋಗವಾಗಿರುವ ಭೂಮಿಯ ಪ್ರಮಾಣ ನೋಡಿದರೆ ಮೂರನೆ ಎರಡರಷ್ಟು ಏರಿಯಾ ಕೂಡ ಡೆವಲಪ್ ಆಗಿಲ್ಲ. ಮಲಪ್ರಭಾ ಯೋಜನೆಯ ಬಗ್ಗೆ ಇರುವ ಭೂಮಿಯನ್ನು ಕಾನ್‌ಸಾಲಿ ಡೇಷನ್ ಆಫ್ ಹೋಲ್ಡಿಂಗ್ಸ್ ಮಾಡಿಲ್ಲ. ಎಲ್ಲ ದೊಡ್ಡ ದೊಡ್ಡ ಹೋಲ್ಡಿಂಗ್ಸ್‌ಗಳೇ ಇಲ್ಲಿರುವುದು. ಇದಕ್ಕಾಗಿ ರೈತರಿಗೆ ಇಲ್ಲಿರುವ ಭೂಮಿಯನ್ನು ಡೆವಲಪ್ ಮಾಡ ಬೇಕಾದರೆ ಅಗ್ರಿಕಲಚರು ರೀಫೈನಾನ್ಸಿಂಗ್ ಕಾರ್ಪೊರೇಷನ್ ಮೂಲಕ ಸಹಾಯ ಒದಗಿಸಿಕೊಟ್ಟು ಇಲ್ಲಿರುವ ಏರಿಯಾವನ್ನು ಡೆವಲಪ್ ಮಾಡುವುದು ಅಗತ್ಯವಾಗಿರು ತ್ತದೆ. ಇಲ್ಲಿ ನಾವು ಮಾಡಿರುವ ಪ್ರಾಜೆಕ್ಟುಗಳ ಸಾಧನೆ ನೋಡಿದರೆ ಅದು ಬಹು ಅತ್ಯಲ್ಪ ಎಂದು ಹೇಳಬಹುದು. ಇದರ ಬಗ್ಗೆ ಸರಕಾರ ಹೆಚ್ಚು ಶ್ರದ್ಧೆ ವಹಿಸಿ ನಿಗದಿಯಾದ ಕಾಲದಲ್ಲಿ ಹಣ ಒದಗಿಸಿ ಇಲ್ಲಿರುವ ಪ್ರದೇಶಗಳನ್ನು ಅಭಿವೃದ್ಧಿ ಮಾಡ ಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಸರಕಾರ ಇದರ ಕಡೆಗೆ ಸಾಕಷ್ಟು ಗಮನ ಹರಿಸಿಲ್ಲ ಎಂದು ಹೇಳಬೇಕಾಗಿದೆ. ಇದಕ್ಕೆ ಹಣದ ತೊಂದರೆ ಇರಬಹುದು ಇದಕ್ಕಾಗಿ ವರ್ಲ್ಡ್ ಬ್ಯಾಂಕು ಮೂಲಕವಾದರೂ ಸಹಾಯ ಪಡೆದು ಅವನ್ನು ಆದಷ್ಟು ಅಲ್ಪ ಕಾಲದಲ್ಲೇ ಮುಗಿಯುವಂತೆ ತಕ್ಕ ಕಾರ್ಯಕ್ರಮಗಳನ್ನು ರೂಪಿಸಿ ಕೊಳ್ಳಬೇಕು. ಹಣದ ಅಭಾವ ಇದೆ ಎಂದು ನಿಧಾನ ಮಾಡುವುದು ಸರಿಯಲ್ಲ,

(ಶ್ರೀ ಆರ್. ಎಸ್. ಪಾಟೀಲ್)

ಯೂರ ಮೂಲಕವಾದರೂ ಸಹಾಯ ಪಡೆಯಬಹುದು. ಇದಕ್ಕಾಗಿ ವರ್ಲ್ಡ್ ಬ್ಯಾಂಕು ಮೂಲಕ ಸಹಾಯ ಪಡೆಯಲು ಪ್ರಯತ್ನ ಮಾಡಿ ಇದರ ಕೆಲಸಗಳನ್ನು ಮುಗಿಸಬೇಕು. ಇದನ್ನು ಮಾಡುತ್ತಾರೆಂದು ನಮಗೆ ನಂಬಿಕೆ ಇದೆ. ಇದಕ್ಕಾಗಿ ನಮ್ಮ ಧನ್ಯವಾದಗಳನ್ನು ಸರಕಾರಕ್ಕೆ ಅರ್ಪಿಸಬೇಕಾಗಿದೆ. ಏರಿಯಾ ಡೆವಲಪ್‌ಮೆಂಟು ಬಹು ಮಹತ್ವವುಳ್ಳ ಕೆಲಸಗಳು. ಇದರ ಕಡೆಗೆ ಸರಕಾರ ಹೆಚ್ಚು ಗಮನ ಹರಿಸಬೇಕು. ಲ್ಯಾಂಡು ಡೆವಲಪ್‌ಮೆಂಟ್ ಬ್ಯಾಂಕು ಮೂಲಕ ಸಹಾಯವನ್ನು 1975-76ರಲ್ಲಿ ಪಡೆದು ಮಲಪ್ರಭಾದ ಯೋಜನೆ ಕೆಳಗಡೆ ಬರುವ ಎಲ್ಲ ಪ್ರದೇಶಗಳನ್ನೂ ಅಭಿವೃದ್ಧಿ ಮಾಡಬೇಕು. ಇಲ್ಲವೇ ಬೇರೆ ಯಾವ ರೀತಿಯಿಂದಲಾದರೂ ಸಹಾಯ ಪಡೆದು ಅದಷ್ಟು ಕಡಿಮೆ ಅವಧಿಯಲ್ಲಿ ಇವುಗಳನ್ನು ಅಭಿವೃದ್ಧಿ ಮಾಡಬೇಕು. ಯೋಜನೆ ಮಾಡುವಾಗ ಎಷ್ಟು ಅಸ್ಥೆ ಇರುತ್ತದೋ ಅದನ್ನು ಮಾಡಿ ಮುಗಿಸಿದ ಮೇಲೆ ಇದರ ಮೂಲಕ ಯಾವ ರೀತಿ ಏರಿಯಾ ಡೆವಲಪ್ ಮಾಡಬೇಕು ಎನ್ನುವುದರ ಕಡೆಗೂ ಹೆಚ್ಚು ಗಮನ ಹರಿಸಬೇಕಾದ್ದು ಅತ್ಯಗತ್ಯ. ಇದಕ್ಕಾಗಿ ಮಲಪ್ರಭಾ ಯೋಜನೆ ಕೆಳಗಡೆ ಇದನ್ನು ಯಾವ ರೀತಿ ಅಳವಡಿಸಬೇಕು ಎನ್ನುವುದನ್ನು ಸರಕಾರ ವಿಚಾರ ಮಾಡಬೇಕು. ಇನ್ನು ಎಂ. ಬಿ. ಎಸ್. ಪ್ಲಾನು ಕೆಳಗೆ ಸುಮಾರು ಒಂದು ಲಕ್ಷ ಎಕರೆ ಅಬಿವೃದ್ಧಿ ಮಾಡುತ್ತೇವೆಂದು ಹೇಳಿದರೂ ಇನ್ನೂ ನೂರು ಎಕರೆ ಕೂಡ ಅಬಿವೃದ್ಧಿ ಯಾಗಲಿಲ್ಲ ಇದರ ಪ್ಲಾನು ಹಾಗೂ ಅಂದಾಜುಗಳು ಸರಿಯಾಗಿ ಮಾಡಿ ಇದರಲ್ಲಿ ಬರುವ ಏರಿಯಾ ಪೊಟೆನ್‌ಷಿಯಲ್‌ನ್ನು ಸರಿಯಾಗಿ ಡೆವಲಪ್ ಮಾಡಬೇಕು. ಇದರಿಂದ ಬರುವ ನೀರನ್ನು ಜನತೆಗೆ ಸದುಪಯೋಗ ಮಾಡುವಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮಲಪ್ರಭಾ ಯೋಜನೆಯ ಬಲ ದಂಡೆಯು ನನ್ನ ಕ್ಷೇತ್ರದ ಬಳಿ ಬರುತ್ತದೆ. ಇದಕ್ಕಾಗಿ ನಮ್ಮ ಜನ ಸ್ವಲ್ಪ ತ್ಯಾಗ ಮಾಡಿದರೂ ಕೂಡ ಅವರಿಗೆ ಸಾಕಷ್ಟು ಅನುಕೂಲಗಳು ಇನ್ನೂ ಸಿಗಲಿಲ್ಲ.

ಕೊಳಚೆ ನೀರು ಸೀವೇಜ್ ವಾಟರ್ ಆ ಒಂದು ಊರಿನ ಪ್ರದೇಶಕ್ಕೆ ಹೋಗುತ್ತದೆ. ಆ ವೇಸ್ಟ್ ವೇರಿಗೆ ಸಿಮೆಂಟ್ ಲೈನಿಂಗ್ ಮಾಡದಿದ್ದರೆ 10 ಸಾವಿರ ಜನಗಳಿಗೆ ಪುನರ್‌ವಸತಿ ಮಾಡತಕ್ಕಂಥಾ ಪ್ರಸಂಗ ಬಂದೀತು ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ. ಅಲ್ಲಿ ಸುಮಾರು 10 ಸಾವಿರ ಎಕರೆಗೆ ನೀರಾವರಿ ಆಗತಕ್ಕಂಥಾ ನೀರು ಪೋಲಾಗುತ್ತಿದೆ. ಆದ್ದರಿಂದ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಫೀಲ್ಡ್ ಚಾನಲ್‌ಗಳ ಗೇಟುಗಳನ್ನು ಬಂದ್ ಮಾಡಿದ್ದರೂ ಕೂಡ ಅದರಲ್ಲಿ ನೀರು ಸೋರಿ ಹೋಗುತ್ತದೆ. ಕೊಳಚೆ ವೇರ್‌ನಲ್ಲಿ ನೀರು ಸೋರಿ ಹೋಗುತ್ತದೆ. ಆದ್ದರಿಂದ ವೇಸ್ಟ್ ವೇರ್‌ನಲ್ಲಿ ಸಿಮೆಂಟ್ ಲೈನಿಂಗ್ ಮಾಡುವುದಾದರೆ 150-200 ಎಕರೆ ನೀರಾವರಿ ಆಗುವುದು 200-300 ಎಕರೆಗೆ ನೀರಾವರಿಯಾಗುತ್ತದೆ.

ಆ ಮೇಲೆ ಮಲಪ್ರಭಾ ಎಡದಂಡೆ ಕಾಲುವೆ ಕಟ್ಟೆಹೊಳೆವರೆಗೂ ಬಂದಿದೆ. ಇದನ್ನು ಮುಂದುವರಿಸಿದರೆ ಸೌಂದತ್ತಿ, ರಾಮದುರ್ಗ ಮತ್ತು ಹಿರೇಹಳ್ಳ ಈ ಪ್ರದೇಶಗಳಿಗೆ ನೀರಾವರಿ ಸೌಕರ್ಯ ದೊರೆಯುತ್ತದೆ. ಎಡದಂಡೆಯ ಟನಲ್ ವರ್ಕ್ ಅನ್ನು ತೆಗೆದುಕೊಳ್ಳುವುದಕ್ಕೆ ಟೆಂಡರ್ ಕಾಲ್‌ಫಾರ್ ಮಾಡಿ ಅದಕ್ಕೆ ಆ ಕೆಲಸವನ್ನು ಮಾಡುವುದಕ್ಕೆ ಕಂಟ್ರಾಕ್ಟರು ಬಂದಿರುತ್ತಾರೆ ಎಂದು ಗೊತ್ತಾಗಿದೆ. ಬೇಗ ಆ ಕೆಲಸವನ್ನು ತೆಗೆದುಕೊಂಡರೆ ಸುಲಭವಾಗಿ ಸುಮಾರು 37 ಸಾವಿರ ಎಕರೆ ನೀರಾವರಿ ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ಆಗುತ್ತದೆ. ನಮ್ಮ ಭಾಗ ದಲ್ಲಿ ಪ್ರತಿವರ್ಷ ಕ್ಷಾಮಕ್ಕೆ ತುತ್ತಾಗತಕ್ಕ ಪ್ರದೇಶದಲ್ಲಿ ಹಸಿರು ಕ್ರಾಂತಿಯನ್ನು ನಾವು ನೋಡುವಂತೆ ಆಗುತ್ತದೆ. ಇದೇ ಸಮಯದಲ್ಲಿ ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ಈ ಕಾರ್ಯ ಪೂರ್ತಿ ಆದಮೇಲೆ ಏರಿಯಾ ಡೆವಲಪ್ ಮೆಂಟ್ ಪ್ರೋಗ್ರಾಂ ಹಾಕಿಕೊಳ್ಳಬೇಕು. ಅಲ್ಲಿನ ರೈತರಿಗೆ ನೀರಿನ ಸೌಲಭ್ಯ ವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ಎ. ಆರ್. ಸಿ. ಪ್ರೋಗ್ರಾಮ್ ಮುಖಾಂತರ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮುಖಾಂತರ ರೈತರಿಗೆ ಕೆಲವೊಂದು ಸಾಲಗಳು ಸಿಕ್ಕುವಂತೆ ಮಾಡಬೇಕು. ಮಲ ಪ್ರಭಾ ಎಡದಂಡೆಯ ನಾಲೆಯ ಎಲ್ಲಾ ಯೋಜನೆಗಳನ್ನೂ ಎಲ್ಲಾ ಕಾರ್ಯಕ್ರಮ ಗಳನ್ನೂ ಸರ್ಕಾರದವರು ತೆಗೆದುಕೊಳ್ಳುವುದಾದರೆ ಆ ಪ್ರದೇಶದಲ್ಲಿ ಬರಗಾಲ ದೂರವಾಗಿ ಈಗ ಇರುವ ಜನ ಮತ್ತು ಮುಂದಿನ ಜನಾಂಗ ಈ ಸರ್ಕಾರವನ್ನು ಮನಸಾರೆ ನೆನೆಸುತ್ತದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಇದನ್ನು ಮುಂದೆ ಹಾಕುವುದರಿಂದ ನಮ್ಮ ಭವಿಷ್ಯವೂ ಮುಂದೆ ಹೋಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಈ ಒಂದು ಯೋಜನೆಯನ್ನು ತೆಗೆದುಕೊಂಡು ಅದನ್ನು ಕಾರ್ಯ ಗತ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

ಈ ಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ಈಗ ಏನು ಹಣವನ್ನು ಒದಗಿಸಿದ್ದಾರೆ ಅದು ಸಾಲದು. ಇದಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು. ಈಗ ಮಲಪ್ರಭಾ ಪ್ರಾಜೆಕ್ಟ್ ಅನ್ನು ಕಟ್ಟುವುದಕ್ಕೆ ಹೇಗೆ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ್ದಾರೆ ಅದೇ ರೀತಿ ಈ ಮಲಪ್ರಭಾ ಅಚ್ಚುಕಟ್ಟಿನಲ್ಲಿ ಬರತಕ್ಕ ಎಲ್ಲಾ ಜಮೀನುಗಳನ್ನೂ ಅಭಿವೃದ್ಧಿಪಡಿಸುವ ಸಲುವಾಗಿ ಹೆಚ್ಚಿನ ದುಡ್ಡನ್ನು ಒದಗಿಸಬೇಕು. ಪ್ರಾಜೆಕ್ಟನ್ನು ಕಟ್ಟುವಾಗ ಎಷ್ಟು ಆಸ್ಥೆಯನ್ನು ತೋರಿಸಿದರೋ ಅದೇ ಆಸ್ಥೆಯನ್ನು ಈಗ ಆ ಅಚ್ಚುಕಟ್ಟಿನ ಕೆಳಗಡೆ ಬರತಕ್ಕ ಜಮೀನನ್ನು ಅಭಿ ವೃದ್ಧಿಪಡಿಸುವ ಬಗ್ಗೆ ತೋರಿಸಿ ನೀರಾವರಿ ಸೌಲಭ್ಯವನ್ನು ಒದಗಿಸಿ ಕೊಡಬೇಕು. ಅಲ್ಲದೆ ಹೋದರೆ ಇದಕ್ಕಾಗಿ ಆ ಪ್ರದೇಶದ ಜನ ಉಪವಾಸ ಸೆಮಿನಾರ್‌ಗಳು ಇವು ಗಳನ್ನು ಮಾಡುವಂತಹ ಪ್ರಸಂಗ ಬಂದೀತು ಎನ್ನುವ ಎಚ್ಚರಿಕೆಯ ಮಾತನ್ನು ಹೇಳಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ರೈತರಿಗೆ ಒದಗಿಸು ವುದಕ್ಕೆ ವ್ಯವಸ್ಥೆ ಮಾಡಬೇಕು. ಅಲ್ಲಿ ಜನರ ಆಶೆಯನ್ನು ಪೂರೈಸಬೇಕು.

(ಶ್ರೀ ಆರ್. ಎಸ್. ಪಾಟೀಲ್)

ಆದರಿಂದ ಆ ಪ್ರದೇಶದ ಜನಗಳಿಗೆ ಲಾಭ ಆಗುವಂತೆ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ 2 ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಕಳೆದ ಅಧಿವೇಶನದಲ್ಲಿ ಕೃಷ್ಣಾ ಜಲವಿವಾದ ಸಂಬಂಧದಲ್ಲಿ ಈ ಸದನ ಅವಿರೋಧವಾಗಿ ಒಂದು ನಿರ್ಣಯವನ್ನು ಮಾಡಿದೆ ಅದಕ್ಕೆ ಈ ಸದನದ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳು ಒಂದು ನಿರ್ಣಯವನ್ನು ಮಂಡನೆ ಮಾಡಿ ಅದಕ್ಕೆ ಸರ್ವಾನು ಮತದ ಬೆಂಬಲವನ್ನು ಗಳಿಸಿದರು. ಆದೇನೆಂದರೆ ಕೃಷ್ಣಾ ಟ್ರಿಬ್ಯುನಲ್‌ನಲ್ಲಿ ನಮ್ಮ ಪರವಾಗಿ ವಾದ ಮಾಡುವುದಕ್ಕೆ ಹೋಗಿದ್ದಂತಹವರು ಮಾಡಿದಂತಹ ಒಂದು ಕೆಲಸಕ್ಕೆ ಮತ್ತು ಅವರು ತಾಳಿದಂತಹ ನಿಲುವು ಸರಿಯಾದದ್ದು ಎಂದು ಅವರಿಗೆ ಶಹಭಾಸ್‌ಗಿರಿಯನ್ನು ಕೊಟ್ಟಿದ್ದಾರೆ. ಈ ಮಧ್ಯೆ ಈ ಸದನದ ಒಂದು ನಿರ್ಧಾರ ವನ್ನು ಮತ್ತು ನಿರ್ಣಯವನ್ನು ಒಂದು ದೃಷ್ಟಿಯಿಂದ ಸಂಪೂರ್ಣವಾಗಿ ಅದಕ್ಕೆ ಮಾನ್ಯತೆ ಕೊಡದೆ ಪುನಃ ನಮ್ಮ ಪರವಾಗಿ ಟ್ರಿಬ್ಯುನಲ್‌ನಲ್ಲಿ ವಾದ ಮಾಡುವುದಕ್ಕೆ ಒಬ್ಬ ವಕೀಲರನ್ನು ನೇಮಿಸಿದ್ದಾರೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ ಆ ರೀತಿ ಮಾಡಿ ಈ ಸದನದ ಹಕ್ಕು ಬಾಧ್ಯತೆಗೆ ಈ ಸರ್ಕಾರ ಚ್ಯುತಿ ತಂದಿದ್ದಾರೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಕಾವೇರಿಯ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗದೆ ನಾನು ನೇರವಾಗಿ ನಮ್ಮ ವಿಭಾಗಕ್ಕೆ ಹೋಗುತ್ತೇನೆ. ನಾನು ಶರಾವತಿ ಕರ್ಮಕಾಂಡಕ್ಕೆ ಹೋಗುವುದಿಲ್ಲ. ಶರಾವತಿಯು ಹುಟ್ಟ ತಕ್ಕಂಥಾ ಊರಿನಿಂದ ಬರುತ್ತಾ ಇರತಕ್ಕ ನಾನು ಈ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಈಗ ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ಕರೆಂಟ್ ಕಟ್ ಮಾಡಿದ್ದಾರೆ. ಇದಕ್ಕೆ ಕಾರಣ ಎಲ್ಲೆಲ್ಲಿಯೂ ನೀರಿಲ್ಲ. ಮಳೆ ಆಗಿಲ್ಲ ಎಂದು ಸಬೂಬು ಹೇಳುತ್ತಾರೆ. ನಮ್ಮ ಮಲೆನಾಡಿನ ಸದಸ್ಯರಿಗೆ ಗೊತ್ತಿರುವ ಹಾಗೆ ಈ ಸಾರಿ ಮಲೆನಾಡಿನಲ್ಲಿ ಮಳೆ ಏನೂ ಕಡಿಮೆ ಆಗಿಲ್ಲ. ಅಲ್ಲಲ್ಲೇ ನೀರು ಕೂಡ ಬಂದಿದೆ ದಕ್ಷಿಣಕನ್ನಡ ಜಿಲ್ಲೆ, ಶಿವಮೊಗ್ಗ, ಮತ್ತು ಚಿಕ್ಕಮಗಳೂರು ಜಿಲ್ಲೆ ಕಾರ ವಾರ ಜಿಲ್ಲೆಗಳಲ್ಲಿ ಬೇಕಾದಷ್ಟು ನೀರಿನ ಹಾವಳಿ ಕೂಡ ಆಗಿದೆ. ಬಹಳ ಜನ ನಿರ್ವಸತಿಗರೂ ಕೂಡ ಆಗಿದ್ದಾರೆ. ಆದರೂ ಕೂಡ ಶರಾವತಿಯಲ್ಲಿ ನೀರು ಇಲ್ಲ, ಕರೆಂಟ್ ಇಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ ಇದರಲ್ಲಿ ತಲಕಳಲೆ ಡ್ಯಾಮ್ ಏನಿದೆ ಅದು ಒಡೆದು ಹೋಗಿ ನೀರು ಸೋರಿ ಹೋಗುತ್ತದೆ, ಅದು ಡ್ಯಾಮೇಜಾಗಿದೆ, ಎಂದು ಗೊತ್ತಾದ ಮೇಲೆ ಕೇಂದ್ರ ಸರ್ಕಾರದಿಂದ ತಜ್ಞರು

ಬಂದು ಇದನ್ನೆಲ್ಲಾ ವಿಚಾರ ಮಾಡಿ ನೋಡಿ ಅದರ ಬಗ್ಗೆ ರಿಪೋರ್ಟ್ ಕೊಟ್ಟಿರ ಬಹುದು ಎಂದು ಕಾಣುತ್ತದೆ. ಈ ಆಣೆಕಟ್ಟನ್ನು ಕಟ್ಟುವಾಗ ನಡೆದಂತಹ ಲೋಪದೋಷಗಳಿಂದ ಅದರಲ್ಲಿ ನೀರು ಸೋರಿ ಹೋಗುತ್ತಿದೆ ಅದನ್ನು ದುರಸ್ತು ಮಾಡಿಸಿದರೆ ನಮಗೆ ಬೇಕಾದಷ್ಟು ನೀರು ಸಿಕ್ಕುತ್ತದೆ. ಮತ್ತು ಕರೆಂಟ್ ಅನ್ನು ಉತ್ಪಾದನೆ ಮಾಡುವುದಕ್ಕೆ ಕೂಡ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಈ ತಲಕಳಲೆ ಡ್ಯಾಮಿನಲ್ಲಿ ಸೋರಿ ಹೋಗುತ್ತಿರುವ ನೀರನ್ನು ತಡೆಗಟ್ಟುವುದಕ್ಕೆ ವಿಶೇಷವಾದ ತಜ್ಞರನ್ನು ನೇಮಿಸಿ ಅದಕ್ಕೆ ಬೇಕಾದಂತಹ ದುರಸ್ತಿ ವಗೈರೆ ಮಾಡಿಸಿ ನೀರನ್ನು ತಡೆಗಟ್ಟುವುದಾದರೆ ಈಗ ಕೈಗಾರಿಕೆಗಳಿಗೆ ಸರ್ಕಾರದವರು 30-35 ಪರ್ಸೆಂಟ್ ಕರೆಂಟ್ ಅನ್ನು ಏನು ಕಟ್ ಮಾಡುತ್ತಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಂಡು 100 ಕ್ಕೆ 100 ರಷ್ಟು ಕರೆಂಟ್ ಅನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇವೊತ್ತು ತಮಗೆ ಗೊತ್ತಿದೆ ಇಡೀ ರಾಜ್ಯದಲ್ಲೇ ಹಾಸನದ ಪ್ರಕರಣ ಗುಲ್ಲೆದ್ದಿದೆ. ಹೇಮಾವತಿ, ಕಬಿನಿ ಮತ್ತು ಹಾರಂಗಿ ಯೋಜನೆಗಳ ಸಂಬಂಧದಲ್ಲಿ ಬೇಕಾದಷ್ಟು ದುರುಪಯೋಗವಾಗಿದೆ ಎಂದು ಈ ಬಗ್ಗೆ ಚರ್ಚೆಯಾಗಿದೆ. 70-80 ಜನ ಇಂಜನಿಯರನ್ನು ಕೂಡ ಈ ಸಂಬಂಧದಲ್ಲಿ ಸಸ್ಪೆಂಡ್ ಮಾಡಿದ್ದಾರೆ ಇದರಲ್ಲಿ ನನಗೆ ತಿಳಿದಿರತಕ್ಕ ಒಂದು ಅಂಶವನ್ನು ಹೇಳುತ್ತೇನೆ. ಇಂಥಾ ಕೆಲಸಗಳನ್ನು ಮಾಡುವಾಗ ಭ್ರಷ್ಟಾಚಾರ ಎನ್ನುವುದು ಇವೊತ್ತು ನಿನ್ನೆಯದಲ್ಲ. ಹಿಂದಿನಿಂದಲೂ ಇದೆ ಶರಾವತಿ, ಕೆ. ಆರ್. ಎಸ್. ಹಾರಂಗಿ, ಹೇಮಾವತಿ ಈ ಆಣೆಕಟ್ಟುಗಳ ಸಂಬಂಧದಲ್ಲಿಯೂ ಭ್ರಷ್ಟಾಚಾರ ನಡೆದುಕೊಂಡು ಬಂದಿದೆ. ಭ್ರಷ್ಟಾಚಾರವನ್ನು ಮಾಡುವಂತಹ ಕೆಲಸವನ್ನು ಯಾರು ಮಾಡಿದ್ದಾರೆ ಅಂಥವರನ್ನು ಸಸ್ಪೆಂಡ್ ಕೂಡ ಮಾಡಿದ್ದಾರೆ. ಅಲ್ಲಿ ತಪ್ಪಿತಸ್ಥರೂ ಇದ್ದಾರೆ. ಲಂಚ ಹೊಡೆಯುವವರೂ ಸಹ ಇದ್ದಾರೆ. ಅವರ ಮೇಲೆ ಗುರುತರವಾದ ಆಪಾದನೆಗಳು ಇದ್ದರೆ ಬೇಕಾದಷ್ಟು ಶಿಕ್ಷೆ ಕೊಡಿ. ಆದರೆ ಪ್ರೊಸೀಜರಾಗಿ ನಡೆಸಿಕೊಂಡು ಬಂದಿರತಕ್ಕ ರೀತಿಯಲ್ಲಿ ವ್ಯತ್ಯಾಸವಾಗಿ ಕೆಲಸ ಮಾಡಿದ್ದರೆ ಅದು ತಪ್ಪು. ಅಲ್ಲಿ ಅವರನ್ನು ಸಸ್‌ಪೆಂಡ್ ಮಾಡಿದ್ದೀರಿ. ಅವರನ್ನು ಸಸ್‌ಪೆಂಡ್ ಮಾಡಿ 6 ತಿಂಗಳುಗಳಾದುವು. ಆದರೆ ಅವರಿಗೆ ಪೆನ್ಷನ್ ಕೊಡುತ್ತೀರಿ. ಅವರಿಂದ ಕೆಲಸ ತೆಗೆದುಕೊಳ್ಳುತ್ತಾ ಇಲ್ಲ. ಸಂಬಳ ಕೊಡುವುದು ತಪ್ಪಲ್ಲ. ಅದರ ಬಗ್ಗೆ ಏನು ತೀರ್ಮಾನವಾಗಿದೆಯೋ ಗೊತ್ತಿಲ್ಲ. ಅಲ್ಲಿ 60-70 ಕುಟುಂಬಗಳು ಏನಿವೆಯೋ ಅವರಲ್ಲಿ ಯಾರು ತಪ್ಪಿತಸ್ಥರು, ಯಾರು ನಿರಪರಾಧಿಗಳೋ ಅವರ ಬಗ್ಗೆ ವರದಿಯನ್ನು ತರಿಸಿಕೊಂಡು ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಆ ಒಂದು ವ್ಯವಸ್ಥೆ ಮಾಡಿದ್ದೀರಾ? ಒಂದುವೇಳೆ ಅವರು ಗುರುತರವಾದ ತಪ್ಪನ್ನು ಮಾಡಿದ್ದು ರುಜುವಾತು ಆದರೆ ಅಂತಹವರಿಗೆ ಕರುಣೆ ತೋರಿಸಿ ಎಂಬುದಾಗಿ ನಾನು ಹೇಳುವುದಿಲ್ಲ. ಅನಾವಶ್ಯಕವಾಗಿ ಯಾರೋ ಒಬ್ಬರು ಏನೋ ಹೇಳಿದರು, ಮಾನ್ಯ ಶ್ರೀ ಬೈರೇಗೌಡರನ್ನು ಕಂಡರೆ ಆಗುವುದಿಲ್ಲವೆಂದು

(ಶ್ರೀ ಕೋಣಂದೂರು ಲಿಂಗಪ್ಪ)

ಅವರ ಮೇಲೆ ಏನಾದರೂ ಆರೋಪಣೆ ಹೊರಿಸುವುದು ಸರಿಯೇ ಎಂದು ನಾನು ಪ್ರಶ್ನೆಮಾಡುತ್ತೇನೆ.

5-00 P. M.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :—ಅಲ್ಲಿ ಆಫೀಸರ್ಸ್ ನಿಮ್ಮ ಪಾರ್ಟಿಯವರೂ ಸಹ ಇದ್ದಾರೆ

ಶ್ರೀ ಕೋಣಂದೂರು ಲಿಂಗಪ್ಪ :—ಇಲ್ಲ. ಎಲ್ಲರೂ ನಿಮಗೆ ಬೇಕಾದವರೇ. ಯಾವತ್ತೂ ಏನೋ ವಿಷಯವನ್ನು ತೆಗೆದುಕೊಂಡು ಇನ್ನೇನೋ ಮಾತನಾಡುವುದಕ್ಕೆ ಹೋಗಬಾರದು. ಸಣ್ಣಸಣ್ಣ ನೌಕರರು ತಪ್ಪು ಮಾಡಿದರೆ ಅವನ್ನು ಹಿಡಿಯುವುದನ್ನು ಇವರು ಚೆನ್ನಾಗಿ ಕಲಿತಿದ್ದಾರೆ. ಹುಲಿಯನ್ನು ಹಿಡಿಯಲಿಲ್ಲ. ಬರೀ ಇಲಿಯನ್ನು ಹಿಡಿಯುತ್ತಾರೆ. ಅಂತಹ ಇಲಿಯನ್ನು ಹಿಡಿದು ಬೇಲಿ ಹಾಕಿ ಷಿಕಾರಿ ಮಾಡುತ್ತಾರೆಯೇ ಹೊರತು ಇನ್ನೇನೂ ಇಲ್ಲ. ತಮಟೆ ಹೊಡೆದು ಇವರ ಹತ್ತಿರ ದೊಡ್ಡ ದೊಡ್ಡವರ ವಿಷಯಗಳನ್ನು ಇವರ ಮುಂದೆ ತಂದುಕೊಟ್ಟರೆ ಅವನ್ನು ಬಿಟ್ಟು ಬಿಡುತ್ತಾರೆ. ಅಂದರೆ ಹುಲಿಯನ್ನು ಬಿಡುತ್ತಾರೆ, ಇಲಿಯನ್ನು ಹಿಡಿಯುತ್ತಾರೆಂಬಂತೆ ಆಯಿತು. ಆದ್ದರಿಂದ ಯಾರ್ಯಾರು ಸಸ್ಪಂಡ್ ಆಗಿರುವ ಇಂಜನಿಯರ್ಸ್ ಹಾಗೂ ನೌಕರರು ಇದ್ದಾರೆಯೋ ಅವರ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಈ ತಿಂಗಳ ಕೊನೆಯೊಳಗೆ ಒಂದು ನಿರ್ಧಾರಕ್ಕೆ ಬರಬೇಕು. ಅವರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡಬೇಕು. ಏಕೆಂದರೆ ಅವರು ದೋಷಮುಕ್ತರಾಗಿದ್ದಾರೆ. ಆದ್ದರಿಂದ ತತ್‌ಕ್ಷಣ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಪದೇಪದೇ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯವಾಗಿ ಮಾನ್ಯ ಶ್ರೀ ಚಂದ್ರಶೇಖರ್ ಅವರು ಮಾತನಾಡುತ್ತಿದ್ದರು ಆದರೆ ಅವರು ವರಾಹಿ ಮತ್ತು ಜೋಗ್ ಪ್ರಾಜೆಕ್ಟ್ಸ್ ಬಗ್ಗೆ ಪ್ರಸ್ತಾಪಮಾಡಿದರೋ ಇಲ್ಲವೋ ಗೊತ್ತಿಲ್ಲ. ಆ ಬಗ್ಗೆ ಸರ್ಕಾರದ ಖಚಿತವಾದ ನಿಲುವು ಏನೆಂಬುದನ್ನು ಹೇಳಬೇಕು. ನಮ್ಮ ಪರಿಸ್ಥಿತಿ ಈಗ ಏನಾಗಿದೆಯೆಂದರೆ, ಸುಮಾರು ಮೂರು ವರ್ಷಗಳಿಂದಲೂ ಇವರು ಅಧಿಕಾರಕ್ಕೆ ಬಂದಮೇಲೆ ಕೇವಲ ಒಂದುಸಾರಿ ಮಾತ್ರ ಮಾನ್ಯ ಶ್ರೀ ಚನ್ನಬಸಪ್ಪನವರು ನಮ್ಮ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದಾರೆ. ಅವರು ಬಂದಕೂಡಲೇ ಏನು ಹೇಳಿದರೆಂದರೆ, ವರಾಹಿ ಇನ್ನೇನೂ ಆಗಿಹೋಗುತ್ತದೆ, ಎಲ್ಲಾ ಯೋಜನೆಗಳನ್ನು ಕೈಗೊಳ್ಳುತ್ತೇವೆಂದು ಹೇಳಿ ಹೊರಟು ಬಂದರು. ಅದೆಲ್ಲವೂ ಮಾಯಾ ಬಜಾರ್ ಆಯಿತು. ಪಿ. ಡಬ್ಲ್ಯು. ಡಿ. ಅಧಿಕಾರಿಗಳು ಸಾಕಷ್ಟು ಅಭಿವೃದ್ಧಿ ಕೆಲಸಕಾರ್ಯಗಳ

ಕಡೆಗೆ ಗಮನಕೊಡುತ್ತಾ ಇಲ್ಲ. ಅವರನ್ನು ಕೇಳಿದರೆ ಮುಳುಗಡೆಯೊದ ಜಮೀನುಗಳ ಬಗ್ಗೆ ಸೂಕ್ತಕ್ರಮವನ್ನು ತೆಗೆದುಕೊಂಡು ಮುಳುಗಡೆಯಾದಂತಹ ವರಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಇದುವರೆಗೂ ಏನೂ ಆಗಲಿಲ್ಲ. ಮಾತೆತ್ತಿದರೆ ಇನ್ನೇನೂ ಕಾಳಿ ಪ್ರಾಜೆಕ್ಟ್ ಆಗುತ್ತದೆಂದು ಹೇಳು ತ್ತಾರೆ. ಆದು ಯಾವ ಕಾಲಕ್ಕೆ ಆಗುತ್ತದೋ ಗೊತ್ತಿಲ್ಲ ಆದಷ್ಟು ಬೇಗ ಅದನ್ನು ಮಾಡಬೇಕು. ಆವತ್ತಿನಿಂದ ಇವತ್ತಿನವರೆಗೂ ಆ ಪ್ರಾಂತದಲ್ಲಿ ಒಂದು ಅಸ್ಪತ್ರೆಯೂ ಆಗಿಲ್ಲ. ಒಂದು ಮೋರಿಯೂ ಆಗಿಲ್ಲ. ಯಾವ ಕಡೆಯಲ್ಲಿಯೂ ಔಷಧಿ ಸಿಗುತ್ತಿಲ್ಲ. ಮೊದಲಿದ್ದ ಪರಿಸ್ಥಿತಿಯನ್ನೇ ನಾವು ಅಲ್ಲಿ ಅನುಭವಿಸು ತ್ತಿದ್ದೇವೆ. ಈ ರೀತಿಯಾಗಿ ಅಲ್ಲಿನ ಜನರನ್ನು ತ್ರಿಶಂಕುಸ್ವರ್ಗದಲ್ಲಿಡುವುದಕ್ಕೆ ಬದಲಾಗಿ ಅವರಿಗೆ ಹೆಚ್ಚಿನ ಸಹಾಯವನ್ನು ಮಾಡಿ ಮುಖ್ಯವಾದಂಥ ಯೋಜನೆ ಗಳನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ನಿಲುವು ಏನೆಂಬುದನ್ನು ನಮಗೆ ತಿಳಿಸಬೇಕು. ಅಲ್ಲಿ ಮುಳುಗಡೆಯಾಗಿರುವ ಜನಗಳು ಏನಿದ್ದಾರೆ ಅವರಿಗೆ ಸಹಾಯ ಮಾಡಿ ಅಲ್ಲಿನ ರಸ್ತೆಗಳನ್ನು ಸರಿಮಾಡಿ. ಕಾಳಿ ಯೋಜನೆಯೇ ಆಗಲೀ ಅಥವಾ ಯಾವುದೇ ಬೇರೆ ಯೋಜನೆಗಳೇ ಆಗಲೀ ತಾವು ತೆಗೆದುಕೊಳ್ಳುವುದಾದರೆ, ಅವುಗಳ ಬಗ್ಗೆ ತಮ್ಮ ನಿಲುವನ್ನು ಇಲ್ಲಿ ಸ್ಪಷ್ಟಪಡಿಸಬೇಕು.

ಇನ್ನು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನವರ ಕರೆಂಟ್ ವಿಷಯ. ಈಗ ಒಂದು ವಿಷಯವನ್ನು ನಾನು ಮೆಚ್ಚಬೇಕಾಗಿದೆ. ಮಾನ್ಯ ಶ್ರೀ ಶ್ರೀಕಂಠಯ್ಯ ನವರು ಇನ್ನೂ ಯುವಕರು. ಅವರು ಬಹಳ ಚೆನ್ನಾಗಿ ಕಾಣುತ್ತಾರೆ. ಅವರ ಬಗ್ಗೆ ಹೇಳುವುದಕ್ಕೆ ನನ್ನಲ್ಲಿ ಏನೂ ಇಲ್ಲ. ಅವರಲ್ಲಿ ಶಕ್ತಿ ಇರಬಹುದು. ಅದನ್ನು ಅವರು ಚೆನ್ನಾಗಿ ಕೆಲಸಮಾಡಿ ತೋರಿಸಬೇಕು. ಅವರು ಮಂತ್ರಿಗಳಾಗಿ ಹೊಸ ದಾಗಿ ಬಂದಿದ್ದರೂ ಅವರ ಬಗ್ಗೆ ಹೇಳುವುದಕ್ಕೆ ನನಗೇನೂ ಸಿಕ್ಕಿಲ್ಲ. ಆ ರೀತಿ ಸಿಕ್ಕುವಹಾಗೆ ಅವರು ಮಾಡಿಕೊಳ್ಳದಿದ್ದರೆ ಸಾಕು. ನಿಮ್ಮಲ್ಲಿಯೂ ಕಸುಬುದಾರರು ಇದ್ದಾರೆ ಅವರ ಬಗ್ಗೆ ನಾನು ಈಗ ಏನೂ ಹೇಳುವುದಿಲ್ಲ. ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ನಿಮ್ಮ ಕರೆಂಟ್ ಮಂತ್ರಿಗಳಿಗೆ ಹಾಗೂ ದೊಡ್ಡ ನೀರಾವರಿ ಮಂತ್ರಿಗಳಿಗೆ ನಾನು ಹೇಳಬೇಕಾಗಿದೆ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎನ್ನುವ ರೀತಿ ಮಾಡಬೇಡಿ. ಶರಾವತಿ ನದಿ ಹುಟ್ಟತಕ್ಕ ತಾಲ್ಲೂಕು ನಮ್ಮದು. ಆದು ಹರಿಯುವುದು ಹೊಸನಗರದ ಮೂಲಕ. ಅಲ್ಲಿನ 680 ಹಳ್ಳಿಗಳಲ್ಲಿ 230 ಹಳ್ಳಿಗಳಿಗೆ ಮಾತ್ರ ಕರೆಂಟ್ ಇದೆ. ಆದರೆ ತೀರ್ಥಹಳ್ಳಿಯ ಒಂದು ತಾಲ್ಲೂಕಿನಲ್ಲಿಯೂ ಇನ್ನೂ ದೀಪ ಕಂಡಿಲ್ಲ. ಅಲ್ಲಿನವರಿಗೆ ದೀಪ ಎಲ್ಲಿದೆ ಎಂಬುದೇ ಗೊತ್ತಿಲ್ಲ. 26 ಸಾವಿರ ಹಳ್ಳಿಗಳಿಗೆ ಕರೆಂಟ್ ಕೊಟ್ಟಿದ್ದೇವೆಂದು ಬರೀ ಪುಸ್ತಕದೊಳಗೇನೇ ಇವಕ ಬೆಳಕನ್ನು ತೋರಿಸಿ ದ್ದಾರೆ. ಕರೆಂಟ್ ಬಲ್ಬ್ ಹಾಕಿರುವುದೂ ಸಹ ಕೇವಲ ಪುಸ್ತಕದೊಳಗೇನೇ. ಎಲ್ಲೆಲ್ಲಿ ಯಾವ್ಯಾವ ತಾಲ್ಲೂಕುಗಳಲ್ಲಿ ನನ್ನ ಕ್ಷೇತ್ರದಲ್ಲಿ ದೀಪಗಳನ್ನು ಕೊಟ್ಟಿ

(ಶ್ರೀ ಕೋಣಂದೂರು ಲಿಂಗಪ್ಪ)

ದ್ದಾರೆಂಬ ಬಗ್ಗೆ ನನಗೆ ಸ್ವಲ್ಪ ಲೆಕ್ಕ ಕೊಡಲಿ. ನನ್ನ ಕ್ಷೇತ್ರದೊಳಗೆ ಶೇಕಡ 65ರಷ್ಟು ಹಳ್ಳಿಗಳಿಗೆ ಕರೆಂಟ್ ಇಲ್ಲ. ಮುಳುಗಡೆಯಾಗುವ ಜನರು ನಾವು. ಶರಾವತಿ ದಂಡೆಯು ಹತ್ತಿರ ಇರುವವರು. ಭದ್ರಾ, ಕಾಳಿ ನದಿಗಳು ಅಲ್ಲಿ ಹರಿಯುವುದರಿಂದ ಎಲ್ಲಾ ಕಡೆಗೂ ಮುಳುಗಡೆಯಾಗುತ್ತದೆ. ನಾವು ಒಂದು ಕಡೆಯಿಂದ ಮುಳುಗಡೆಯಾಗುತ್ತಾ ಇರುವುದು ಇವರು ತೊಳೆಯುತ್ತಾ ಹೋಗು ವುದು. ಆದರೆ ಮಲೆನಾಡಿನ ಜನರು ಮೃದುವಾದಂಥ ಜನರು. ನಾವು ಮಾತ್ರ ಸ್ವಲ್ಪ ಒರಟು. ಇನ್ನು ಮುಂದೆ ನಾವೂ ಕೂಡ ಗೋವಿನ ಕಥೆಯಲ್ಲಿ ಹೇಳಿದ ಹಾಗೆ ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ ಎಂಬಂತೆ ಇರುವುದರಿಂದ ನಮಗೆ ಇಷ್ಟು ಅನ್ಯಾಯ ವಾಗುತ್ತಿದೆ. ಈಗ ಅದಕ್ಕೆ ವಿರುದ್ಧವಾಗಿ ನಾವೂ ಕೂಡ ಮುಂದೆ ಕೆಲಸ ಮಾಡಬೇಕಾಗಿದೆ. ಯಾರು ಈ ನಾಡಿಗೆ ಬೆಳಕನ್ನು ಕೊಡುತ್ತಾರೋ ಗೊತ್ತಿಲ್ಲವೆಂದು ಅಲ್ಲಿನ ಜನ ಹೇಳುತ್ತಾರೆ ಅದ್ದರಿಂದ ಇದರ ಬಗ್ಗೆ ಸರ್ಕಾರದವರು ಕೂಡಲೇ ಒಂದು ನಿರ್ಧಾರವನ್ನು ತೆಗೆದುಕೊಂಡು ನನ್ನ ಕ್ಷೇತ್ರದ ಎಲ್ಲಾ ತಾಲ್ಲೂಕುಗಳಿಗೂ ಕೂಡಲೇ ಕರೆಂಟ್ ಕೊಡಲು ಹಾಗೂ ಆ ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ವಿಶೇಷವಾದಂಥ ಆಸ್ಥೆಯನ್ನು ವಹಿಸಬೇಕು.

ಕಡೆಯದಾಗಿ ಒಂದು ಮಾತು. ಮಾನ್ಯ ಶ್ರೀ ಶೀರ್ನಾಳ ಚಂದ್ರಶೇಖರ್ ಅವರು ಮಾತನಾಡುವಾಗ ನಮ್ಮ ಆರೋಪದ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ನಮ್ಮ ನಾಯಕರಾದಂಥ ಮಾನ್ಯ ಶ್ರೀ ದೇವೇಗೌಡರು ಹಾಗೂ ಮಾನ್ಯ ಶ್ರೀ ಬಂಗಾರಪ್ಪನವರು ಕೆಲವು ಆರೋಪಗಳನ್ನು ಮಾಡಿದರು ಆದರ ಬಗ್ಗೆ ಅವರ ಅಭಿಪ್ರಾಯವನ್ನೂ ಸಹ ಹೇಳಿದರು. ಅವರು ಸಮರ್ಥರು ಇದ್ದಾರೆ. ಇದರಲ್ಲಿ ಒಂದು ಗಾದೆ ಇದೆ. ಕುದುರೆಗಿಂತ ಕುದುರೆ ಲದ್ದಿ ಬಿರುಸು ಎಂಬುದಾಗಿ. ಏಕೆಂದರೆ ಯಾರಮೇಲೆ ಆರೋಪ ಮಾಡುತ್ತಾರೋ ಅವರು ಏನೂ ಹೇಳು ವುದಿಲ್ಲ. ಆದರೆ ಅವರ ಹಿಂದುಗಡೆ ಯಾರು ಇರುತ್ತಾರೋ ಅವರದೇ ಒಂದು ಬಿರುಸು. ಹಾಗೆ ಇದರ ಅರ್ಥ ಆಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳ ಚಂದ್ರಶೇಖರ್ :—ಮಾನ್ಯ ಸದಸ್ಯರು ಮಾತ ನಾಡುತ್ತಾ ಕುದುರೆಗಿಂತ ಕುದುರೆ ಲದ್ದಿ ಬಿರುಸು ಎಂಬುದಾಗಿ ಹೇಳಿದರು. ಇದು ಒಬ್ಬ ಕೊಲೀಗಿಗೆ, ಅವರ ಜೊತೆಯ ಸದಸ್ಯರಿಗೆ ಹೇಳುವಂತಹ ಹೋಲಿಕೆ ಯಲ್ಲ. ಎಲ್ಲರೂ ಲದ್ದಿಗಳೇ, ಕುದುರೆ ಸವಾರರು ಯಾರೂ ಅಲ್ಲ. ಅವರು ಲದ್ದಿ ಎಂಬುದಾಗಿ ಉಪಯೋಗಿಸಿರುವ ಪದವನ್ನು ಪ್ರೊಸೀಡಿಂಗ್ಸ್‌ನಿಂದ ಎಕ್ಸ್‌ಪಂಜ್ ಮಾಡಬೇಕು. It is an insinuation. I cannot tolerate it. In this House every member is equal and honourable. I request you to expunge it.

MR. DEPUTY SPEAKER :—I would request Mr. Konandur Lingappa to be more courtuous and use sobre language.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :—ಇದು ಎಕ್ಸ್‌ಪಂಜ್ ಆಗಬೇಕೆಂಬುದಾಗಿ ತಾವು ಆರ್ಡರ್ ಮಾಡದೇ ಇದ್ದರೆ ಹೇಗೆ ?

ಉಪಾಧ್ಯಕ್ಷರು :—ಅದು ಗಾದೆ ಮಾತು....

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ :—ಒಂದು ವೇಳೆ ಮೂಗಿಗಿಂತ ಮೂಗುತಿ ಭಾರ ಎಂದು ಹೇಳಿದ್ದರೆ ಅದನ್ನು ಟಾಲರೇಟ್ ಮಾಡಬಹುದು. Mr. Lingappa is very intelligent. He knows how to insult others.

MR. DEPUTY SPEAKER.—There have been such 'Gademathu' uttered by so many hon. Members previously also. I have given my ruling twice. There is neither any imputation nor any insinuation. I have already told Mr. Lingappa to use very sobre and curtuous language.

ಶ್ರೀ ಕೋಣಂದೂರು ಲಿಂಗಪ್ಪ :—ನಾವು ಏನು ಅರೋಪಗಳನ್ನು ಮಾಡುತ್ತೇವೆ ಅವು ಆಧಾರ ರಹಿತವಾದವುಗಳಲ್ಲ ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರು ಹಾಗೆ ಕಾಳಿಯೋಜನೆ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕು. ಅದು ಏನೆಂದರೆ ಕಳೆದ ಅಧಿವೇಶನದಲ್ಲಿ ಈ ಯೋಜನೆಯಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರುಗಳ ಪರಿಸ್ಥಿತಿ ಅವೊತ್ತು ಯಾವ ಪರಿಸ್ಥಿತಿ ಇತ್ತೋ ಅದು ಇನ್ನು ಬದಲಾವಣೆಯಾಗಿಲ್ಲ. ಈ ಸದನದಲ್ಲಿ ನಾವು ಹೇಳುವುದು ಅವರು ಕೇಳುವುದು ಹೋಗುವುದು ಹಾಗಿದೆ. ಇದಕ್ಕೆ ಏನು ಮಾಡಬೇಕಾಗುತ್ತದೆ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ. ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಬಗ್ಗೆ ಅಲ್ಲಿಯ ಅಧಿಕಾರಿಗಳು ಮನುಷ್ಯರಂತೆ ಲೇಬರ್ ಆಕ್ಟಿನ ಪ್ರಕಾರ ನಡೆಸಿಕೊಳ್ಳಬೇಕೆಂದು ಅದಕ್ಕೆ ಸರಿಯಾದ ಒಂದು ನಿರ್ಭಂದವನ್ನು ಹಾಕಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ನಂಜೇಗೌಡ (ಗಂಡಸಿ):— ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಇರತಕ್ಕಂಥ ಡಿಮಾಂಡಿಗೆ ಒಪ್ಪಿಗೆಯನ್ನು ಕೊಡುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ನಮ್ಮ ಹಾಸನ ಜಿಲ್ಲೆಯಲ್ಲಿ ಸರಕಾರದವರು ಭಾರಿ ನೀರಾವರಿ ಅಡಿಯಲ್ಲಿ ಹೇಮಾವತಿ ಯೋಜನೆಯನ್ನು ಕಾರ್ಯ-

(ಶ್ರೀ ಎಂ. ನಂಜೇಗೌಡ)

ಗತ ಮಾಡುವುದು ಬಹಳ ಸಂತೋಷದ ವಿಚಾರ. ಸರ್ಕಾರಕ್ಕೆ ಹೀಗೆ ಇರತಕ್ಕಂಥ ಆರ್ಥಿಕ ಮುಗ್ಗಟ್ಟಿನ ದೃಷ್ಟಿಯಿಂದ ಎಷ್ಟು ಕಾಲದಲ್ಲಿ ಇದನ್ನು ಮುಗಿಸಬೇಕಾಗಿತ್ತೋ ಅಷ್ಟು ಕಾಲದಲ್ಲಿ ಮುಗಿಸುವುದಕ್ಕೆ ಸ್ವಲ್ಪ ತೊಂದರೆಯಾಗಿದೆ ಎಂದು ಜನತೆಗೂ ಗೊತ್ತಾಗಿದೆ. ಸರಕಾರದವರು ತಮ್ಮ ಶಕ್ತಿ ಮೀರಿ ಅತಿ ಜಾಗ್ರತೆಯಾಗಿ ಮುಗಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆಂದು ತಮ್ಮ ಮುಖೇನ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬರೀ ಯೋಜನೆ ಹೊಂದಿರುವ ಸನ್ನಿವೇಶದಲ್ಲಿ ದೇಶದಲ್ಲಿ ಇರತಕ್ಕಂಥ ಅನ್ನದ ಸಂಕಟವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸಣ್ಣ ಸಣ್ಣ ಯೋಜನೆಗಳನ್ನು ಕಾರ್ಯಗತ ಮಾಡುವುದು ವಿವೇಕದ ವಿಷಯವೆಂದು ನಾನಾದರೂ ಹೇಳುತ್ತಾ ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಹರಿಹೊಳೆ ಯೋಜನೆ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಧನ ಸಹಾಯವು ದೊರಕಿದೆ. ಸರಕಾರದವರು ಈ ಸಣ್ಣ ಯೋಜನೆಗಳನ್ನು ನಿರ್ದಿಷ್ಟವಾಗಿ ತೆಗೆದುಕೊಂಡು ಅವನ್ನು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. ಇನ್ನು ಯಗಚಿ ಯೋಜನೆ ಬಗ್ಗೆ ಸರ್ಕಾರದವರು ಅಣೆಕಟ್ಟು ನೀರನ್ನು ಹಿರಿಯೂರಿನ ವೇದಾವತಿ ಅಂದರೆ ವಾಣೀವಿಲಾಸ ಸಾಗರಕ್ಕೆ ತೆಗೆದುಕೊಂಡು ಹೋಗುವ ಅಂದಾಜು ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಇದರಿಂದ ಅಲ್ಲಿನ ಜನರಿಗೆ ಆದ್ಯತೆ ಕೊಡದೆ ವಂಚಿಸಿದ ಹಾಗೆ ಆಗುತ್ತದೆ. ಯಾವುದೋ ಒಂದು ಪ್ರದೇಶಕ್ಕೆ ಅದನ್ನು ತೆಗೆದುಕೊಂಡು ಹೋಗಿ ಕಾರ್ಯಗತ ಮಾಡುವುದು ಸರಿಯಲ್ಲ ಇದು ನನ್ನ ಕ್ಷೇತ್ರದ ಅರಸಿಕೆರೆ ಮತ್ತು ನಮ್ಮ ಹಾಸನ ಜನರು ವಂಚಿತರಾಗುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆದ್ದರಿಂದ ದಯಮಾಡಿ ಇದನ್ನು ಚಿತ್ರದುರ್ಗ ಜಿಲ್ಲೆಗೆ ತೆಗೆದುಕೊಂಡು ಹೋಗುವುದಾದರೆ ಬಹಳ ಜನರ ವಿರೋಧವನ್ನು ಕಟ್ಟಿಕೊಂಡಂತೆ ಆಗುತ್ತದೆ. ದಯಮಾಡಿ ಈ ಯೋಜನೆಯನ್ನು ಕೈಬಿಡಬೇಕೆಂದು ಹೇಳುತ್ತೇನೆ. ಸ್ಥಳೀಯವಾಗಿ ಉಪಯೋಗವಾಗುವಂತೆ ಮಾಡಬೇಕು ಆ ರೀತಿ ಇದನ್ನು ಅಳವಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಇನ್ನು ವಿದ್ಯುತ್ ಖಾತೆಯ ಮಂತ್ರಿಗಳನ್ನು ಮಾನ್ಯ ಸಭೆಯ ಸದಸ್ಯರೆಲ್ಲರೂ ಅವರು ಮಾಡಿರುವ ಕಾರ್ಯಕ್ಕಾಗಿ ಬಹಳ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಅದರ ಪರಿಣಾಮವಾಗಿ ನನಗೂ ಸಂತೋಷವಾಗಿದೆ. ನಮ್ಮ ಜಿಲ್ಲೆಯನ್ನು ಮಾತ್ರ ಸ್ವಲ್ಪ ಕಡೆಗಣಿಸಿದ್ದಾರೆಂದು ನನ್ನ ಭಾವನೆ. ಮನೆಗೆ ಮಾರಿ ಪರರಿಗೆ ಉಪಕಾರಿ ಎನ್ನುವ ಗಾದೆ ಜ್ಞಾಪಕಕ್ಕೆ ಬರುತ್ತದೆ ನಮ್ಮ ಅರಸೀಕೆರೆ ಮತ್ತು ಗಂಡಸಿ ಹೋಬಳಿ ಹಿಂದುಳಿದ ಪ್ರದೇಶ. ಅಲ್ಲಿಗೆ ಅನುಕೂಲವಾಗುವಂತೆ ಅರಸೀಕೆರೆ ಸಬ್ ಲೈನ್‌ಗೆ ಕಂಬಗಳನ್ನು ನೆಟ್ಟಿದ್ದಾರೆ. ಅಲ್ಲಿಯು ಕಾರ್ಯ ಪೂರ್ಣವಾಗಿಲ್ಲ. ಆ ಭಾಗದ ಜನರಿಗೆ ಅನಾನುಕೂಲವಾಗಿದೆ ತಕ್ಷಣ ಆ ಕೆಲಸವನ್ನು ಮಾಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸ್ವಾಮಿ ಮತ್ತೊಂದು ನೀರಾವರಿಗೆ ಭಾವಿಗಳಿಗೆ ಆದ್ಯತೆ

ಕೊಡಬೇಕು. ಯೂರು ಯೂರು ಎಲ್ಲೆಲ್ಲಿ ಕೇಳುತ್ತಾರೆ ಅವರಿಗೆ ವಿದ್ಯುತನ್ನು ಕೊಡಬೇಕೆಂದು ಹೇಳುತ್ತೇನೆ ಅಲ್ಲಿಗೆ ಫೀಸಿಬಿಲಿಟಿ ಇದೆಯೋ ಇಲ್ಲವೋ ಅದನ್ನು ಗಮನಿಸದೆ ತಕ್ಷಣ ಕೊಡಬೇಕೆಂದು ಹೇಳುತ್ತೇನೆ. ಅದರಿಂದ ಅನ್ನದ ಸಂಕಟದ ಪರಿಸ್ಥಿತಿ ಬಹಳ ಕಷ್ಟವಾಗಿರುವುದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಸರಕಾರದ ನೀತಿ ಏನು ಇದೆ ಅದು ಸಮಾಜವಾದ ಅದನ್ನು ಅನುಸರಿಸಿಕೊಂಡು ಬರಬೇಕು. ಸರ್ಕಾರದಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ವ್ಯವಸಾಯಕ್ಕೆ ಮತ್ತು ಮನೆ ಬಳಕೆಗೆ ಚಾರ್ಜ್ ಮಾಡತಕ್ಕಂಥಾದ್ದು 32-50 ಪೈಸೆ. ಅದೇ ಕೈಗಾರಿಕೆಗಳಿಗೆ 2 ಪೈಸೆಯಿಂದ 6 ಪೈಸೆ ಕೊಡತಕ್ಕಂಥ ನೀತಿ ಏನು ಇದೆ ಅದು ಸರಿಯಲ್ಲ ಏನಾದರೂ ದೇಶದಲ್ಲ ಉತ್ಪತ್ತಿ ಆಗತಕ್ಕಂಥ ಒಂದು ವಿದ್ಯುಚ್ಛಕ್ತಿಯು 5ನೇ ಒಂದು ಭಾಗ ಬೆಳಗಾಂ ಅಲ್ಯೂಮಿನಿಯುಂ ಫ್ಯಾಕ್ಟರಿಗೆ ಸರಕಾರದವರು ಕೊಟ್ಟರೆ ಸರ್ಕಾರಕ್ಕೆ ಎಷ್ಟು ಲುಕಾನು ಆಗುತ್ತದೆ ಎಂದರೆ 2 ಕೋಟಿ ರೂಪಾಯಿಂದ 5 ಕೋಟಿ ರೂಪಾಯಿಯು ವರೆಗೆ ನಷ್ಟವಾಗುತ್ತದೆ ಎಂದು ನಾನಾದರೂ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏತಕ್ಕೆ ಸರ್ಕಾರ ನಷ್ಟಕ್ಕೆ ಒಳಗಾಗಬೇಕು. ಕೇವಲ ಒಂದು ಕಂಪೆನಿ ಅವರು ಸಂಪಾದನೆ ಮಾಡಿಕೊಳ್ಳುವುದು ಸರ್ಕಾರ ನಷ್ಟ ಹೊಂದುವುದು ಯಾವ ನ್ಯಾಯ ಈ ವಿಚಾರದಲ್ಲಿ ಈ ಸಭೆಯಲ್ಲಿ ವಿಪುಲವಾದ ಚರ್ಚೆ ನಡೆಯತಕ್ಕಂಥಾದ್ದು ಎಲ್ಲರಿಗೂ ಗೊತ್ತಿದೆ ಇದು ರಾಷ್ಟ್ರಕ್ಕೆ ಅನ್ಯಾಯ ಮಾಡಿದಂತೆ ಜೊತೆಗೆ ರಾಷ್ಟ್ರದ ಜನತೆಗ ಸಾಮಾನ್ಯವಾಗಿ ಅನ್ಯಾಯ ಮಾಡಿದಂತಾಗುತ್ತದೆ. ಸರ್ಕಾರ ಇದರ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕೆಂದು ಹೇಳುತ್ತೇನೆ. ಇನ್ನು ನನ್ನ ಕ್ಷೇತ್ರದ ಹೋಬಳಿ ಅಂಚಿನಲ್ಲಿ ಅನೇಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ. ದುದ್ದ ಹೋಬಳಿ ಅನೇಕ ಗ್ರಾಮಗಳಿಗೆ ತೊಂದರೆ ಇರತಕ್ಕಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದು ಇದರ ಬಗ್ಗೆ ವಿದ್ಯುಚ್ಛಕ್ತಿ ಮಂತ್ರಿಗಳು ಗಮನಕೊಡಬೇಕೆಂದು ಇವತ್ತಿನ ದಿವಸ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಎ. ಶರಣಪ್ಪ (ದೇವದುರ್ಗ): ಸನ್ಮಾನ್ಯ ಸಭಾಧ್ಯಕ್ಷರೇ, ಈ ಬೇಡಿಕೆಗಳ ವಿಷಯ ನಾನು ಕೆಲವೊಂದು ಸಲಹೆ ಸೂಚನೆಗಳನ್ನು ಇಡುವುದಕ್ಕೆ ಮುಂಚಿತವಾಗಿ, ಪ್ರಥಮವಾಗಿ ನಾನು ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ಏತಕ್ಕೆಂದರೆ (ವಿದ್ಯುಚ್ಛಕ್ತಿ) ಶಕ್ತಿ ಮತ್ತು ನೀರು ಇವುಗಳನ್ನು ವಿಭಜನೆ ಮಾಡಿ ಅವರವರಿಗೊಂದು ಪೋರ್ಟ್‌ಫೋಲಿಯೋವನ್ನು ಯುವಕರಿಗೆ ಈ ಎರಡು ಇಲಾಖೆಗಳನ್ನು ಸರಿಯಾಗಿ, ಜವಾಬ್ದಾರಿಯಿಂದ ನೋಡಿಕೊಳ್ಳುವುದಕ್ಕೆ ಮೊದಲನೆಯದಾಗಿ ಪ್ರಯತ್ನ ಮಾಡಿದ್ದಾರೆ. ಶ್ರೀಮಾನ್ ಶುಭಾಸ್ ಅಸ್ನೂಠಿ ಮತ್ತು ಶ್ರೀ ಶ್ರೀಕಂಠಯ್ಯನವರು ಈ ಒಂದು ದಿಶೆಯಲ್ಲಿ ಶ್ರದ್ಧೆಯಿಂದ ಮತ್ತು

(ಶ್ರೀ ಎ. ಶರಣಪ್ಪ)

ಒಳ್ಳೆಯ ಅಭಿರುಚಿಯಿಂದ ವಿದ್ಯುಚ್ಛಕ್ತಿ ಮತ್ತು ನೀರಾವರಿ ಬಗ್ಗೆ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕುಂದುಕೊರತೆಗಳನ್ನು ನಿವಾರಣೆ ಮಾಡುವುದರಲ್ಲಿ ತಮ್ಮ ಸೇವೆಯನ್ನು ಸಲ್ಲಿಸಬೇಕು. ಈ ಬೇಡಿಕೆಗಳನ್ನು ಯಾವ ಪಕ್ಷವೇ ಆಗಲೀ ನಿರಾಕರಿಸುವಂಥ ಬೇಡಿಕೆಗಳು ಅಲ್ಲ ಏತಕ್ಕೆಂದರೆ ವಿದ್ಯುಚ್ಛಕ್ತಿ ಬೇಕು ಮತ್ತು ನೀರು ಸಹ ಬಹಳ ಮುಖ್ಯವಾಗಿ ಬೇಕು. ಅಂದರೆ ಈ ಬೃಹತ್ ನೀರಾವರಿ ಯೋಜನೆಗಳಿಂದ ನಮ್ಮ ಆಹಾರ ಮತ್ತು ಆರ್ಥಿಕ ಬೆಳವಣಿಗೆಯ ಪ್ರಗತಿಗೆ ಸಹಾಯವನ್ನು ಉಂಟು ಮಾಡತಕ್ಕಂಥ ಯೋಜನೆಗಳು. ಈ ಒಂದು ವಿಷಯದಲ್ಲಿ ನಾನು ಮೊದಲನೆಯದಾಗಿ ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕಾದರೆ, ಇದು ಅಷ್ಟು ಪ್ರಗತಿಪರದಲ್ಲಿ ಇಲ್ಲದಿದ್ದರೂ ಕೂಡ ಸಾಮಾನ್ಯವಾಗಿ ಹಳ್ಳಿಯ ಮಟ್ಟದಲ್ಲಿ ತೃಪ್ತಿಕರವಾಗಿಲ್ಲವೆಂದು ಹೇಳಬಹುದು. ಈ ವರ್ಷ ಏನೋ ಒಂದು ದುರಾದೃಷ್ಟವಶಾತ್ ನಮ್ಮ ದೇವದುರ್ಗ ತಾಲ್ಲೂಕಿಗೆ ಒಂದು ಸಬ್ ಟ್ರಾನ್ಸ್‌ಮಿಷನ್ ವೈರ್‌ಗೆ ಮಂಜೂರು ಮಾಡಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅದು ಪೂರ್ತಿ ಕೆಲಸವಾಗದೇ ಇರುವುದರಿಂದ ನಮ್ಮಲ್ಲಿ 45–50 ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯ ಸರಬರಾಜು ಇಲ್ಲದೆ ಹಾಗೆಯೇ ಬಿದ್ದಿದೆ. 3–4 ವರ್ಷಗಳಿಂದ ನಮ್ಮಲಿಗೆ ಕರೆಂಟನ್ನು ಸರಿಯಾಗಿ ಸಪ್ಲೈ ಮಾಡಿಲ್ಲ, ಕೇಳಿದರೆ ಲೈನ್ ಹಾಕಿಲ್ಲ, ಪೋಲ್ಸ್ ಇಲ್ಲ, ಮೆಟೀರಿಯಲ್ಸ್ ಇಲ್ಲವೆಂದು ಹೇಳುತ್ತಾರೆ. ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇವೆ ತಾವು ಈ ಒಂದು ತೊಂದರೆಯನ್ನು ನಿವಾರಣೆ ಮಾಡಲೇಬೇಕು. ಇನ್ನೊಂದು ವಿಷಯವೇನೆಂದರೆ, ಇದಕ್ಕೆ ಮೊದಲು ಮಾನ್ಯ ಚನ್ನಬಸಪ್ಪನವರು ಈ ಸದನದಲ್ಲಿ ಹೇಳಿದರು ಒಕ್ಕಲಿಗರು 5 ಎಕರೆ, 3 ಎಕರೆ ಇರತಕ್ಕಂಥವರು 5 ಹೆಚ್. ಪಿ. 3 ಹೆಚ್. ಪಿ. ಮೋಟಾರನ್ನು ಇಟ್ಟುಕೊಂಡಿರತಕ್ಕಂಥವರಿಗೆ 10 ರೂಪಾಯಿಗಳು ಡಿಮ್ಯಾಂಡ್ ಚಾರ್ಜ್ ಎಂದು ಕರೆಂಟ್ ಬಿಲ್‌ನಲ್ಲಿಯೇ ಸೇರಿಸಿ ಕೊಡುತ್ತಿದ್ದಾರೆ, ಅದನ್ನು ಆದಷ್ಟು ಮಟ್ಟಿಗೆ ತೆಗೆದು ಹಾಕುತ್ತೇವೆಂದು ಹೇಳಿ ಇಲ್ಲಿಗೆ ಸುಮಾರು 6 ತಿಂಗಳ ಮೇಲಾಯಿತು. ಆದರೂ ಕೂಡ ಪರಿಣಾಮ ಏನೂ ಆಗಲಿಲ್ಲ. ಆ ಕಾರಣದಿಂದ ಈಗ ಈ ಪೋರ್ಟ್‌ಫೋಲಿಯೋದಲ್ಲಿರತಕ್ಕಂಥ ಮಾನ್ಯ ಶ್ರೀಕಂಠಯ್ಯನವರು ಸಾಮಾನ್ಯ ಬಡ ಜನತೆಯ ಮೇಲೆ ಹಾಕುತ್ತಿರತಕ್ಕಂಥ ಈ ಡಿಮ್ಯಾಂಡ್ ಚಾರ್ಜ್ 10 ರೂಪಾಯಿಗಳನ್ನು ತೆಗೆದು ಹಾಕುವುದಕ್ಕೆ ತ್ವರಿತವಾಗಿ ಒಂದು ಆಜ್ಞೆಯನ್ನು ಹೊರಡಿಸಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ 1962ರಿಂದ ಈ ವಿಷಯದ ಬಗ್ಗೆ ಹೇಳುತ್ತಲೇ ಇದ್ದೇವೆ ಈಗ 1975ನೇ ಇಸ್ವಿಯೂ ಮುಗಿಯುತ್ತದೆ. 1977ನೇ ಇಸ್ವಿ ಬರುತ್ತದೆ ಆದರೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಬಗ್ಗೆ, ಕೃಷ್ಣಾ ಮೇಲ್ದಂಡೆ

ಯೋಜನೆಯ ಬಗ್ಗೆ ಅನೇಕ ಸಾರ್ತಿ ಈ ಮನೆಯಲ್ಲಿ ಮಾನ್ಯ ಸದಸ್ಯರನೇಕರು ಕೂಗನ್ನು ಎಬ್ಬಿಸಿ, ಆ ಕೂಗನ್ನು ಕೇಂದ್ರ ಸರ್ಕಾರದವರೆಗೂ ಮುಟ್ಟಿಸಿದ್ದಾರೆ. ಆದರೆ ಈ ಒಂದು ರಿಪೋರ್ಟನ್ನು ನೋಡುವಾಗ 1974-75ರಲ್ಲಿ ಈ ಬಾಬಿಗೆ ಕೇವಲ 195 ಲಕ್ಷಗಳನ್ನು ಇಟ್ಟಿರುವುದನ್ನು ನೋಡಿದರೆ ಇದು ಬಹಳ ಸಣ್ಣ ಪ್ರಮಾಣದ ಅಂಶ. ಇದು ಅಲ್ಲಿಯ ಎಸ್ಟಾಬ್ಲಿಶ್‌ಮೆಂಟ್ ಚಾರ್ಜ್‌ಗೆ ಕೂಡ ಸಾಲದು. ಇಂಥ ಒಂದು ಮಹಾ ಯೋಜನೆ ಆದರೆ ಸುಮಾರು 8-10 ಲಕ್ಷ ಎಕರೆಗೆ ನೀರಾವರಿ ಆಗುತ್ತದೆ. ಅಂಥ ಒಂದು ಮಹಾ ಯೋಜನೆ ಅದರಲ್ಲೂ ಕೂಡ ಉತ್ತರ ಕರ್ನಾಟಕದಲ್ಲಿ ಬಿಜಾಪುರ, ಗುಲ್ಬರ್ಗ ಮತ್ತು ರಾಯಚೂರು ಈ 3 ಜಿಲ್ಲೆಗಳಿಗೆ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಈ ಒಂದು ನೀರಿನ ಉಪಯೋಗ ವಾಗುತ್ತದೆ. ಈ ಒಂದು ಯೋಜನೆಯಾದರೆ ಅಲ್ಲಿಯ ಬಡತನ ನಿವಾರಣೆಯಾಗು ತ್ತದೆ. ಇಂಥ ಮಹಾ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದವರೆಗೂ ಕೂಗನ್ನು ಮುಟ್ಟಿಸಿದರೂ ಕೂಡ 5ನೇ ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ಅದನ್ನು ಸೇರಿಸಿಲ್ಲವೆಂದು ಹೇಳಿದರೆ ನಮ್ಮ ಮನಸ್ಸಿಗೆ ಬಹಳ ನೋವುಂಟಾಗುತ್ತದೆ. ಇದನ್ನು ಮುಂದಿನ 6ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವ ಹಾಗಾ ದರೂ ನೋಡಬೇಕಾಗುತ್ತದೆ. ಈ ಕೃಷ್ಣಾ ಮೇಲ್ದಂಡೆ ಯೋಜನೆ ಹೇಗಿದೆಂದರೆ ಮದುರೆಯಲ್ಲಿ ಶ್ರೀಕೃಷ್ಣ ಜನ್ಮ ಎತ್ತಿದ ಸ್ಥಳವೆಂದು ಒಂದು ಗುರ್ತು ಮಾಡಿ ತೋರಿ ಸುತ್ತಿದ್ದಾರೆ. ಅಲ್ಲಿ ನಾವು ನೋಡಿದರೆ ಬಾಳು ಬಿದ್ದಿದೆ. ಆ ರೀತಿ ಈ ಕೃಷ್ಣಾ ಪ್ರಾಜೆಕ್ಟ್ ಕೂಡ ಆಗಬಾರದು. ಆದಷ್ಟು ನಾವು ಇರುವುದರೊಳಗಾಗಿ, ಈ ಜನ್ಮದಲ್ಲಿ ಪ್ರಾಣ ಹೋಗುವುದರೊಳಗಾಗಿ ಆ ಒಂದು ರೈತರ ಒಂದು ದುಃಖ ವೇನಿದೆ, ಕೂಗು ಏನಿದೆ ಅದನ್ನು ಆದಷ್ಟು ನಿವಾರಣೆ ಮಾಡತಕ್ಕಂಥ ದ್ದನ್ನು ಶಕ್ತಿ ಮೀರಿ ಮಾಡಿ, ಅದಕ್ಕೆ ಆದಷ್ಟು ಮಟ್ಟಿನ ಹಣವನ್ನು ಒದಗಿಸಿ ಆ ಒಂದು ಯೋಜನೆಯನ್ನು ಸಂಪೂರ್ಣವಾಗಿ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ. ಈಗ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಎಂದರೆ ಬೀದರ್, ರಾಯಚೂರು ಮತ್ತು ಗುಲ್ಬರ್ಗ, ಬಿಜಾಪುರ ಇವೆಲ್ಲಾ ಬರುತ್ತದೆ. ಬಿದರೆಯಲ್ಲಿ ಕಾರಂಜಿ ಭೀಮಾ ನದಿ, ಮುಂತಾದುವುಗಳು ಬರುತ್ತದೆ. ಭೀಮ ಮತ್ತು ಕೃಷ್ಣಾ ಇವು ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಿಗೆ ಸಂಬಂಧಪಟ್ಟಿದು. ಯಾವ ಒಂದು ನೀರಾವರಿ ಕಾರ್ಯಗಳು ಕೂಡ ಪೂರ್ಣವಾಗಿಲ್ಲ. ಇದರಿಂದ ಆ ಭಾಗದ ಜನರಿಗೆ ಆಗಿರತಕ್ಕಂಥ ಕಷ್ಟ ಏನು ಎಂಬುದು ತಮಗೆಲ್ಲಾ ಗೊತ್ತಿದೆ. 1972-73ರಲ್ಲೂ ಕೂಡ ಬರಗಾಲ ಬಂತು. ಅನೇಕಾನೇಕ ಜನರು ಈ ಬರಗಾಲದ ದವಡೆಗೆ ಈಡಾಗಿ ಎಷ್ಟೋ ನಷ್ಟ ವನ್ನು ಅನುಭವಿಸಿದರು. ಅದಕ್ಕೆ ಸರ್ಕಾರದವರು ಕೋಟ್ಯಾಂತರ ರೂಪಾಯಿ ಗಳನ್ನು ಖರ್ಚು ಮಾಡಿದರೂ ಕೂಡ ಸಫಲವಾಗಲಿಲ್ಲ. ಅದಕ್ಕೆ ಮಾನ್ಯ ಸದಸ್ಯರು ಗಳು ಸಹ ಈ ವಿಷಯದ ಬಗ್ಗೆ ಹೇಳಿದರು, ಇವತ್ತಿನ ದಿವಸ ನಾನು ಕಳಕಳಿಯಿಂದ

(ಶ್ರೀ ಎ. ಶರಣಪ್ಪ)

ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ನಿಜವಾಗಿಯೂ ಈ ಒಂದು ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿಯ ಜನರ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ. ಅಲ್ಲಿ ಅಭಿವೃದ್ಧಿಯಾಗಬೇಕಾದರೆ, ಈ ಒಂದು ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ತೀವ್ರಗತಿಯಿಂದ ಮುಗಿಸುವುದಕ್ಕೆ ಯೋಚನೆ ಮಾಡಬೇಕು. ಈ ಒಂದು ಪ್ರಾಜೆಕ್ಟನ್ನು ಮುಗಿಸಲು ಅಲ್ಲಿಯ ಎಲ್ಲಾ ರೈತರು, ಎಲ್ಲಾ ಭಾಗದ ಜನರೂ ಸಹ ಬೆಂಬಲ ಕೊಡುವುದಕ್ಕೆ ತಯಾರಾಗಿದ್ದಾರೆಂದು ಈ ಸಭೆಯಲ್ಲಿ ಹೇಳುತ್ತಿದ್ದೇನೆ. ಈಗ ಮಲಪ್ರಭಾ ಆದಷ್ಟು ಮಟ್ಟಿಗೆ ಸಂಪೂರ್ಣವಾಗುತ್ತಿದೆ. ಆದರೆ ಅಲ್ಲಿ ಚಾನಲ್ಸ್ ಸಂಪೂರ್ಣವಾಗಿಲ್ಲ. ಅಲ್ಲಿ ನೀರು ಎಲ್ಲಾ ತುಂಬಿದೆ. ಆದರೆ ನೀರನ್ನು ಹರಿಸುವುದಕ್ಕೆ ಚಾನಲ್ಸ್ ಆಗಿಲ್ಲವೆಂದರೆ ಪ್ರಾಜೆಕ್ಟನ್ನು ಕಟ್ಟಿದರೆ ಏನು ಪ್ರಯೋಜನ ಬಂತು ? ಇದೇ ರೀತಿ ತುಂಗಭದ್ರಾ ಪ್ರಾಜೆಕ್ಟ್‌ನಲ್ಲಿಯೂ ಆಗಿತ್ತು. ಈ ರೀತಿ ಪ್ರಾಜೆಕ್ಟನ್ನು ಒಮ್ಮೆ ಕಟ್ಟುವುದು, ಚಾನಲ್ಸನ್ನು ಕಟ್ಟುವುದಕ್ಕೆ ಮತ್ತೊಮ್ಮೆ ಪ್ರಯತ್ನ ಮಾಡುವುದು ಅಷ್ಟೊಂದು ಸರಿಯಾಗಿ ಕಾಣುವುದಿಲ್ಲ. ಇವತ್ತು ಒಂದು ಪ್ರಾಜೆಕ್ಟನ್ನು ಅಲ್ಲಿ ಪ್ರಾರಂಭ ಮಾಡಬೇಕಾದರೆ ಚಾನಲ್ಸ್ ಮತ್ತು ಪ್ರಾಜೆಕ್ಟ್ ಅಲ್ಲಿ ಡೆವಲಪ್‌ಮೆಂಟ್ ಕಾರ್ಯಗಳು ಎಲ್ಲಾ ಸಮರ್ಪಕವಾದ ರೀತಿಯಲ್ಲಿಯೇ ಮಾಡಬೇಕು. ಆಗ ಅಲ್ಲಿಯ ಜನರಿಗೆ ಅದರಿಂದ ಲಾಭದಾಯಕವಾಗಬಹುದೆಂದು ನನ್ನ ಅಭಿಪ್ರಾಯ. ಈ ವಿಚಾರಗಳನ್ನು ನಾವು ಅನೇಕ ಸಲ ಈ ಕೃಷ್ಣಾ ಮೇಲ್ದಂಡೆ ಬಗ್ಗೆ ಬಂದಾಗ ಅನೇಕ ಸದಸ್ಯರುಗಳು ಹೇಳಿದ್ದಾರೆ. ಈ ಒಂದು ಸೂಚನೆಯನ್ನು ವ್ಯಕ್ತಪಡಿಸಿದ್ದಾರೆ. ಪದೇ ಪದೇ ನಾವು ಈ ರೀತಿ ಹೇಳುವುದರಲ್ಲಿ ಅರ್ಥವಿಲ್ಲ. ಈಗ ಈ ವರ್ಷದ ಬಡ್ಜೆಟ್‌ನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ತಾವು ಇಟ್ಟಿರತಕ್ಕಂಥ ಬಹಳ ಸ್ವಲ್ಪ ಇದೆ ಇದರಿಂದ ಅದು ಕಾರ್ಯಗತವಾಗುವಂತೆ ಇದರಲ್ಲಿ ಕಾಣುವುದಿಲ್ಲ. ತಾವು ಆದಷ್ಟು ಮಟ್ಟಿಗೆ ಯಾವುದಾದರೂ ಕಡೆಯಿಂದ ಹಣ ಒದಗಿಸಿ ಇದನ್ನು ಪೂರೈಸಬೇಕು. ಒಂದು ಕಾಲದಲ್ಲಿ 120 ಕೋಟಿ ರೂಪಾಯಿ ಪ್ರಾಜೆಕ್ಟ್ ಇತ್ತು. ತದನಂತರ ರಿವೈಸ್ಡ್ ಆಗಿ 350 ಕೋಟಿ ರೂಪಾಯಿಗಳಿಗೆ ಬಂತು. ಇನ್ನೂ ಕೆಲವು ವರ್ಷ ಬಿಟ್ಟರೆ 500 ಕೋಟಿ ರೂ. ಗಳು ಆಗಬಹುದು. ಇನ್ನು 10 ವರ್ಷ ಬಿಟ್ಟರೆ 1000 ಕೋಟಿ ರೂ. ಗಳ ಪ್ರಾಜೆಕ್ಟ್ ಇದು ಆಗಬಹುದು. ಇಂಥ ಪರಿಸ್ಥಿತಿ ಇರುವಾಗ ನಾವು ಪ್ರಾಜೆಕ್ಟ್‌ಗಳನ್ನು ಪೂರ್ಣ ಮಾಡುವುದಾದರೂ ಹೇಗೆ ? ಇವೆಲ್ಲವನ್ನೂ ವಿಚಾರ ಮಾಡಿಕೊಂಡು ಆ ಭಾಗದ ಜನರ ಒಂದು ಹಿತಕ್ಕಾಗಿ ಶಕ್ತಿ ಮತ್ತು ಆಹಾರದ ಅಭಿವೃದ್ಧಿ ಇವುಗಳ ಬಗ್ಗೆ ತಾವು ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಕೆಲಸ ಮಾಡಬೇಕೆಂದು ಹೇಳಿ ಈ ಬೇಡಿಕೆಗಳ ಬಗ್ಗೆ ಒಂದೆರಡು ಮಾತುಗಳನ್ನಾಡುವುದಕ್ಕೆ ಒಂದೆರಡು ನಿಮಿಷಗಳ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5-30 P.M.

‡ SRI SUBHASH ASTHURE :—(Minister for Major and Medium Irrigation).--Sir, while speaking on this Budget for Area Development and Major and Medium Irrigation, the Hon. Leader of the Opposition has raised certain points. First of all he said the amount provided in the ensuing financial year is not sufficient and if you go on at this rate, it is not known whether this project will be completed as anticipated by our Hon. Chief Minister and we may need not Rs. 5 or 6 hundred crores but it may even go up to Rs. thousand crores. And, in this respect, he emphasised that we should ask for more and more funds for this. As a principle, all that he has said may be apprectiated. If you compare the amount spent in these last three years *i.e.*, from 1972 to 1975, the figures themselves will speak about the genuine efforts made by the Government. Sir, in shore I will submit through you, to this Hon. House that thh amount spent in the last three years, as compared wits the amount which is spent since the last 15 years, is more than 50 per cent of that and in some cases, it it equivalent. Likewise, the potential created in the last three years, if it is compared with that of the last 15 years, that also is considerably much more.

Sir, the Hon. Leader of the Opposition said that compared with the cost escalation, the amount is not so much. I would like to say that it is not the case. Even if you see from that angle, it is more than 50 per cent and in some case, it is more than that. Before, 1956, before the reorganisation, the Karnataka State then Mysore State- had 7.4 lakh hectares of land under irrigation and from 1956 to 1972, it increased by only 7.10 lakh hectares. But, in the last three years., *i.e.*, from 1972 to 75 about three lakh hectares potential has been created and so much of land has been brought under irrigation. Likewise, as far as the amount spent is concerned, from 1972 to 1977, it is anticipated that five lakh hectares of land will be irrigated. The figures themselves speak about the emphasis put by the Government regarding the irrigation which is so much essential

(SRI SUBHASH ASTHURE)

in a country, which is purely agricultural. At this juncture, I would like to say that if we had put the same emphasis, since the last 10-15 years you could have achieved more and to-day, you would have been in a better position as far as irrigation is concerned and food production is concerned and all the suffering we had about two or three years ago due to drought would not have come.

As far as money spent is concerned, it is likewise; on major irrigation from 1956-to 1972 the amount spent is only Rs. 168 crores. But, Sir, in the last three years *i.e.*, from 1972-75, the amount spent is Rs. [illegible]0 crores and from 1972-75 the anticipated outlay will be about Rs. 1[illegible]0 crores. Rs. 170 crores is spent during this period, a compared with Rs. 168 crores which is spent in the last 15 years. So the amount spent is more than that spent during the last 15 years. These figures themselves speak about the efforts made by the Government as far as irrigation is concerned. I do hope that the Hon. Leader of the Opposition will not deny it and is more than satisfied also.

Further, while discussing this, I think somebody has said that the beneficiaries of this project will be a few people. I also feel that in a country like India, unless more and more land is brought under irrigation and more potential is created, most of our country's developments will be halted and we will never become self-sufficient and most of the industries which are agro-based, may not come up.

As far as Central assistance is concerned and about clearance to certain projects, the Hon. Leader of the Opposition said that even without Central clearance also, we should go ahead with the projects. The Hon Leader of the Opposition may be knowing that a number of projects that are now coming up are like that also. The main point is that our State is passing through a serious financial

difficulty and it is very difficult to go on with all the projects without sufficient Central assistance. Even then, we are spending so much. At least you must say a word of complement for that. And, we expect this from the Hon. Leader of the Opposition. Since the Hon Leader of the Opposition himself is an agriculturist, he might be knowing about these matters.

SRI H. D. DEVE GOWDA :—The Hon. Minister wants the compliments from the Opposition so soon!

SRI SUBHAS ASTURE :—We have done something. The Opposition Members will have to compliment.

About the releasing of 5 T. M. C. Ft. of water to Tamil Nadu, I have told earlier that by releasing this water to the Tamil Nadu it has in no way affected the irrigation or power production in our State. Whatever is given, it is given only in order to produce more and as a good neighbour, it was given. I would like to say that in no way it has affected the interest of the State. I would also like to say that with a view to safeguard the interests of the State, only 5 T.M:C ft. of water has been given to Tamil Nadu and this has not caused any loss to our State.

As regards Krishna Tribunal, we are making our best efforts to see that we get something more from Krishna Tribunal and the Hon. Chief Minister will give further details.

As regards Cauveri, I would like to say that the Hon. Chief Minister will give further details.

In the case of medium projects in drought prone areas time and again much has been said on the floor of this House I would like to say one thing to-day that in the last 16 years, there were only two medium projects taken in the three Districts of Hyderabad Karnataka

(SRI SUBASH ASTURE)

area and no major project was taken except Upper Krishna which is not yet completed. So far as Chandram Palle project is concerned, how it was taken up, why it was taken up is known to one and all and earlier, only one small tank work in the Gulbarga District apart from the two projects, was taken up. I would like to mention in this August House that in the last three years, we have taken up a number of medium projects in that area and one major project *i. e.*, Karanja in the District of Bidar.

(*Madam Speaker in the Chair*)

One important suggestion was given about the phased programme in the construction of projects *i. e.*, taking up of head work and canal work simultaneously. It may be noted here that this has already been adopted in almost all projects.

ಶ್ರೀ ಆರ್. ಎಸ್. ಪಾಟೀಲ್ :—ಮಲಪ್ರಭಾ ಬಲದಂಡೆ ನಾಲೆಯಲ್ಲಿ 13ನೇ ಮೈಲಿ ಹತ್ತಿರ ಕುಪ್ಪಿಹಳ್ಳಿ ಹತ್ತಿರ ಆಗುವ ನಾಲೆ ಕೆಲಸ ಅಲ್ಲಿಗೆ ಬಂದು ನಿಂತುಬಿಟ್ಟಿದೆ.

ಶ್ರೀ ಸುಭಾಷ್ ಅಸ್ತೂರೆ :—ಅದನ್ನೂ ಕೂಡ ಈ ಸಲ ಮಾಡಿಸುತ್ತೇವೆ.

The Hon. Member, Sri Shreenalli Chandrasekhar, and Sri M Nanje Gowda, while speaking on the subject have made very valuable suggestions. They spoke on Cauvery and Harangi projects. This year sufficient grants are being provided for Cauvery Basin project also with a view to store more and more water as early as possible. Almost all the projects in the Cauvery Basin are given priority and we are proceeding to achieve that goal.

The Hon. Member, Sri Krishnappa has made a very valuable suggestion regarding taking of Hemavathi water to Tumkur and Nagamangala. I would like to

mention that these matters are sympathetically considered in view of the drought conditions in those areas by the Government.

SRI H.D. DEVE GOWDA :—It seems the Governor has promised. It has appeared in the Press.

SRI SUBHAS ASTURE : The Hon. Member, Sri Rudrappa has pointed out some difficulties being experienced by the people of Chitradurga District on account of not taking proper action in respect of Vanivilas and Badhra River projects. The Hon. Member, Sri Dharmasingh has emphasised about the need to complete the Upper Krishna Project early. I would like to say at this stage that even though nobody can deny that Upper Krishna is one of the big projects in the country itself, and most economical project also, any amount spent there will not be yielding immediate results. Therefore, inview of this, more emphasis is laid on the projects which are going to yield immediate results. It is because of this, only very small amount is provided, but. I would like to say on behalf of the Government that this project will get priority at proper time when other projects are completed.

As far as World Bank assistance for Upper Krishna Project is concerned, we are making our genuine efforts and we are hopeful that we will get the World Bank assistance. Uneless some foreign assistance is forthcoming for this Project, because it is a giant project, it is not easy to complete this project with our meagre resources. We have to spend more money on a number of medium and major projects which gives immediate results.

ಶ್ರೀ ಜೆ. ಎಲ್. ಕಬಾಡಿ.—ಅಲಮಟ್ಟಿ ಪ್ರಾಜೆಕ್ಟ್ ಫಸ್ಟ್ ಸ್ಟೇಜ್‌ಗೆ ತಂದಿದ್ದಾರೆ. ಮುಂದಿನ ಸ್ಟೇಜನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಸುಭಾಷ್ ಅಸೂಟ್ರೆ.—ಅದು ಮಾನ್ಯ ಸದಸ್ಯರು ಹೇಳಿದಂತೆ ಇಲ್ಲ. ನೋಡಿಕೊಂಡು ಕೆಲಸ ಮಾಡುತ್ತಿದ್ದೇವೆ. ನೀರು ನಿಲ್ಲುವುದಕ್ಕೆ ಮುಂಚೆ ಫೌಂಡೇಷನ್ ಕೆಲಸ ಆಗುತ್ತದೆ.

The Hon. Member, Sri R. S. Patil has raised a unique subject which was not touched by other Hon. Members. In my short experience, I have seen in many places, especially in the Northern Karnataka areas, even though potential is created the actual irrigation has not taken place due to non-development of achacut area. In the Northern Districts of Karnataka, because of certain obvious reasons, the area development work has not been done. In this regard, the agriculture Department has been asked to provide for demonstration farms in the project areas like Chandram Palle even though the land is given through the Land Development Bank. I would like to say that in the drought prone areas, for some other reasons, the areas, had not been developed. It is a very good suggestion about the area development. He has stated that the amount provided for the area development is also not sufficient. It will be taken note of.

Then, Hon. Member Sri Konandur Lingappa has raised certain points about the Krishna Tribunal for which our Hon. Chief Minister will reply. About the suspension of engineers, I am surprised to hear all such things from Mr. Konandur Lingappa. On the one side we ask for efficiency honesty and sincerety and strict action against any omission or commission etc., When action is taken, they say that action is not properly taken etc , Under these circumstances, we cannot understand how to proceed with these things. It is very difficult to meet both ends at a time. Even if any action is not taken, these people say that action is not taken, purposely etc. and the real culprit is not punished.

ಶ್ರೀ ಕೋಣಂದೂರು ಲಿಂಗಪ್ಪ:—ಕ್ರಮ ತೆಗೆದುಕೊಂಡಿರುವುದನ್ನು ತಡೆಯುವುದಕ್ಕೆ ಯಾರೂ ಹೇಳುತ್ತಿಲ್ಲ. ಇದನ್ನು ಇತ್ಯರ್ಥ ಮಾಡಲು ಆರು ವರ್ಷ

ಗಳಿಂದಲೂ ಆಗಲಿಲ್ಲ. ಇದರಲ್ಲಿ ಪ್ರೊಸೀಜರು ಇರುವುದು ತಪ್ಪು ಎಂದು ಹೇಳಲಿಲ್ಲ. ಇದರಲ್ಲಿ ಭ್ರಷ್ಟಾಚಾರ ಮಾಡಿದವರನ್ನು ಪಟ್ಟಿಗೆ ಸೇರಿಸಿ. ಇದರಲ್ಲಿ ಕೆ. ಆರ್. ಎಸ್. ಯೋಜನೆಯಲ್ಲಿ ಹಾಗೂ ಇನ್ನಿತರ ಯೋಜನೆಗಳಲ್ಲಿ ಸೇರಿರುವವರೂ ಇದ್ದಾರೆ. ಇದರಲ್ಲಿ ಯಾರದು ಭ್ರಷ್ಟಾಚಾರ ಇಲ್ಲವೋ ಅಂತಹವರ ಬಗೆಗೆ ಇಲ್ಲಿ ನಾವು ಹೇಳಿರುವುದು.

SRI SUBHASH ASTURE :—So, I am very glad that your job is only to make speeches and we are here to deliver the goods.

Then, Mr. M. Nanje Gowda has expressed concern over the delay in the completion of Hemavathi Project and water from Vottehalla to Yagachi. So for as Hemavathi is concerned, the work is in progress and we expect early completion of the project.

Hon. Member Sri Sharanappa expressed concern over the delay in Upper Krishna Project and people of drought prone area are suffering, For the sake of drought affected area people, number of medium and major projects have been taken up in that area. I cannot say that the amount provided in the ensuing budget is quite sufficient for those works. Quite handsome grants are given to the medium projects in drought prone areas of Hyderabad Karnataka region.

Regarding the project-wise details which are now in progress both major irrigation and minor irrigation projects, I would like to say something about them. Number of major projects like Ghataprabha and Malaprabha are in progress. So far as Malaprabha is concerned, the head-works are almost completed and canal works are also in progress and they are expected completion very shortly. In the case of Ghataprabha, the head-works are in progress and the channel works are also in progress and in view of their immediate benefit much emphasis is given for these two projects. We expect immediate results from these major projects.

SRI A. A. DESAI :—What about Hipparagi barrage ; when it will be taken up ?

SRI SUBHAS ASTURE : It will also be taken up

With regard to the projects in Cauvery basin, the head-works of Kabini project are completed and we have impounded water also. The completion of head-works of Harangi, Hemavathi and some other medium projects have already been taken up. In addition to this, this time we have taken up some new projects also. Inspite of our financial difficulties of the State, quite a good amount is provided for these medium projects also in the Cauvery basin. With these few words, I conclude my speech.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ವಿದ್ಯುಚ್ಛಕ್ತಿ ಶಾಖೆಯ ರಾಜ್ಯ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಬೇಡಿಕೆಗಳ ಬಗ್ಗೆ ಸಭೆಯ ಒಪ್ಪಿಗೆಗಾಗಿ ಮಂಡನೆ ಮಾಡುತ್ತಿರುವ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ನಮ್ಮ ಮಿತ್ರರಾದ ಹಲವಾರು ಸದಸ್ಯರುಗಳು ಅನೇಕ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹಾಗೂ ನಾವು ಯಾವ ತರಹ ಕೆಲಸಗಳನ್ನು ಈ ಖಾತೆಯಲ್ಲಿ ಮಾಡಬೇಕೆನ್ನುವ ಬಗ್ಗೆ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನ ಹಾಗೂ ನನ್ನ ಮಿತ್ರರಾದ ಶ್ರೀ ಸುಭಾಷ್ ಅಸ್ತೂರೆಯವರ ಬಗ್ಗೆ ಕೆಲವು ಒಳ್ಳೆಯ ಮಾತುಗಳನ್ನು ನನ್ನ ಮಾನ್ಯ ಮಿತ್ರರುಗಳು ಆಡಿರುವುದಕ್ಕಾಗಿ ನಾನು ಮೊದಲು ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸನ್ಮಾನ್ಯ ದೇವೇಗೌಡರವರು ಮಾತನಾಡುತ್ತಾ ಕಾಳೀ ನದಿಯೋಜನೆ ಬಗ್ಗೆ ಮತ್ತು ಸರಕಾರ ಕೈಗೊಳ್ಳಬೇಕಾಗಿರುವ ಇತರ ಯೋಜನೆಗಳ ಬಗ್ಗೆ ಒಂದು ರೀತಿಯಾದ ಅನುಮಾನವನ್ನು ಇಲ್ಲಿ ವ್ಯಕ್ತಪಡಿಸಿದರು. ಬಹು ಮುಖ್ಯವಾದ ಕಾಳೀ ಯೋಜನೆಗೆ ಇನ್ನೂ ಹಣವನ್ನು ತರಲಾಗಲಿಲ್ಲ ಮತ್ತು ಯಾವ ರೀತಿಯಾದ ಹಣದ ಸೌಲಭ್ಯ ಇದಕ್ಕೆ ದೊರಕಿಸಬೇಕಾದುದು ಅತಿ ಮುಖ್ಯ ಮತ್ತು ಕೇಂದ್ರದಿಂದ ಸಹಾಯ ಕೂಡ ಇನ್ನೂ ರಾಜ್ಯ ಸರಕಾರಕ್ಕೆ ನಿಗದಿಯಾಗಿಲ್ಲ. ಈ ಬಗ್ಗೆ ವರಾಹಿ ಯೋಜನೆ ಪರಿಸ್ಥಿತಿ ಇದ್ದಲ್ಲಿಯೇ ಇದೆ. ಹಾಗೂ ಕಾವೇರಿ ನದಿ ನೀರಿನ ಯೋಜನೆ ಬಗ್ಗೆ ಏನೂ ಆಗಿಲ್ಲ ಎನ್ನುವ ಅನುಮಾನ ಮಾನ್ಯ ಶ್ರೀ ದೇವೇಗೌಡರು ಇಟ್ಟುಕೊಳ್ಳಬೇಕಾಗಿಲ್ಲ ಎಂದು ಹೇಳಲು ಇಚ್ಛೆಪಡುತ್ತೇನೆ. ಎಲ್ಲಾ ಯೋಜನೆಗಳೂ ನಿಗದಿಯಾದ ವೇಳೆಯಲ್ಲೇ ಆಗಿ ತಡವಾಗದೆ ಆ ಕೆಲಸಗಳು ಕಾರ್ಯಗತವಾಗುತ್ತದೆ. ಇದರ ಬಗ್ಗೆ ಯಾವ ಅನುಮಾನವನ್ನೂ ಇಟ್ಟುಕೊಳ್ಳಬೇಕಾಗಿಲ್ಲ.

6-00 P. M.

ಈಗಾಗಲೇ ಸರ್ಕಾರದವರು 40 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಕೆಲಸಕಾರ್ಯಗಳನ್ನು ತ್ವರಿತವಾಗಿ ನಡೆಸುತ್ತಿದ್ದಾರೆ. ಹಣದ ಅಭಾವದಿಂದ ಯಾವ ಕೆಲಸವನ್ನೂ ಈ ಒಂದು ಕಾಳಿ ಯೋಜನೆಯಲ್ಲಿ ಸ್ಥಗಿತ ಮಾಡಿಲ್ಲ. 1980ರ ಒಳಗೆ ನಾವು ಈ ಒಂದು ಕಾರ್ಯವನ್ನು ಪೂರ್ತಿಗೊಳಿಸುವುದಕ್ಕೆ ಈ ಸರ್ಕಾರ ಖಂಡಿತಾ ಸಿದ್ಧವಾಗಿದೆ. ಮತ್ತು 1977 ರಲ್ಲಿ ಮೊದಲನೆ ಹಂತದ ಕೆಲಸವನ್ನು ಪ್ರಾರಂಭ ಮಾಡಿ ಈ ಒಂದು ವಿದ್ಯುಚ್ಛಕ್ತಿಯ ಕಾರ್ಯಾಗಾರ ಕೆಲಸ ಮಾಡುವುದಕ್ಕೆ ಸಿದ್ಧವಾಗುತ್ತದೆಯೇ ಎಂಬುದರ ಬಗ್ಗೆ ಶ್ರೀಮಾನ್ ದೇವೇಗೌಡರು ಅನುಮಾನ ಇಟ್ಟುಕೊಳ್ಳಬೇಕಾಗಿಲ್ಲ.

ಈ ಯೋಜನೆಯು ಬಹುಮುಖ್ಯವಾದ ಚಕ್ರ ಡೈವರ್‌ಷನ್ ಯೋಜನೆಯ ಬಗ್ಗೆ ಇರಾನ್ ಸರ್ಕಾರದವರು ನಮಗೆ ಹಣವನ್ನು ಒದಗಿಸುವುದಕ್ಕೆ ಮುಂದೆ ಬಂದಿದ್ದಾರೆ. ಈ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೂಡ ಆಗಿದೆ. 50 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಈ ಚಕ್ರ ಡೈವರ್‌ಷನ್ ಸ್ಕೀಮಿಗೆ ಕೊಟ್ಟು ಪ್ರಿಲಿಮಿನರಿ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದೇವೆ. ಇದು ಸಹಾಯ ಆದರೆ ಲಿಂಗನಮಕ್ಕಿ ಜಲಾಶಯದ ನೀರಿನ ಕೊರತೆ ನಿವಾರಣೆಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಲಿಂಗನಮಕ್ಕಿ ಪವರ್‌ಹೌಸಿನ ಮೊದಲನೆಯ ಯೂನಿಟ್ ಕೆಲಸ ಡಿಸೆಂಬರ್ 1976 ಕ್ಕೆ ಪೂರೈಸುತ್ತದೆ. ಎರಡನೇ ಯೂನಿಟ್‌ನ ಕೆಲಸ 1977 ನೇ ಜೂನ್ ತಿಂಗಳಲ್ಲಿ ಪೂರೈಸುತ್ತದೆ. 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆ ಕೆಲಸವನ್ನು ಪೂರ್ತಿ ಮಾಡುವುದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಮಿತ್ರರು ಅನುಮಾನ ಪಡಬೇಕಾಗಿಲ್ಲ. ಶ್ರೀಮಾನ್ ದೇವೇಗೌಡರು ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ಒಳ್ಳೆಯ ಮಾತುಗಳನ್ನು ಆಡಿದರು. ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರು ಮತ್ತು ಇತರ ಅಧಿಕಾರ ವರ್ಗ ಚೆನ್ನಾಗಿ ಕೆಲಸ ಮಾಡುತ್ತಿದೆ. ಡಿಪಾಸಿಟ್ ಸ್ಕೀಮು ಈವೊತ್ತಿನ ದಿವಸ ರಾಜ್ಯದಲ್ಲಿಜಾರಿಗೆ ತಂದಿದೆ. ಇದರಲ್ಲಿ ನಾವು ನಿರೀಕ್ಷಣೆ ಮಾಡಿದ್ದೇವೆ. ಅಷ್ಟು ಈ ಸ್ಕೀಮಿನಲ್ಲಿ ಬಾರದಿದ್ದರೂ ಸಹ 50 ಲಕ್ಷ ರೂಪಾಯಿಗಳನ್ನು ಡಿಪಾಜಿಟ್ ಮೂಲಕ ಸಂಗ್ರಹಣೆಯಾಗಬೇಕು. ಶ್ರೀಮಾನ್ ದೇವೇಗೌಡರು ಮಾತನಾಡುತ್ತಾ ಗ್ರಾಮಾಂತರ ಪ್ರದೇಶದಲ್ಲಿ ಬಹುಮುಖ್ಯವಾಗಿ ನೀರಾವರಿ ಪಂಪುಸೆಟ್ಟಿಗೆ ಪ್ರಥಮ ಆದ್ಯತೆ ಕೊಡಬೇಕೆಂದು ಶ್ರೀಮಾನ್ ದೇವೇಗೌಡರು ಸಲಹೆ ಮಾಡಿದರು. ಅದು ಉತ್ತಮ ಸಲಹೆ. ನಾನಾದರೂ ಕೂಡ ಪ್ರಾಮುಖ್ಯವಾಗಿ ಎಲ್ಲಾ ನೀರಾವರಿ ಪಂಪುಸೆಟ್ಟುಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಪ್ರಥಮ ಆದ್ಯತೆ ಕೊಟ್ಟು ಈಗಾಗಲೇ ನಾವು ಕಾರ್ಯೋನ್ಮುಖರಾಗಿದ್ದೇವೆಂದು ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಇತರ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಆರ್. ಇ. ಎಸ್. ಸ್ಕೀಮಿನ ಬಗ್ಗೆ ತಮಗೆ ಗೊತ್ತಿದೆ. ಈವೊತ್ತಿನ ದಿವಸ ವಿದ್ಯುಚ್ಛಕ್ತಿ ಸಾಮಾನಿನ ಅಭಾವ ಬಹುಮುಖ್ಯವಾಗಿ ಅಲ್ಯೂ

(ಶ್ರೀ ಹೆಚ್. ಸಿ. ಶ್ರೀಕಂಠಯ್ಯ)

ಮಿನಿಯಂ ಕಂಡಕ್ಟರ್ ಅಭಾವ ನಮ್ಮ ರಾಜ್ಯದಲ್ಲೇ ಅಲ್ಲ, ಅಡೀ ರಾಷ್ಟ್ರದಲ್ಲೇ ಅಭಾವ ಇರತಕ್ಕ ಸಂದರ್ಭದಲ್ಲಿ ಆದಷ್ಟೂ ಅಲ್ಯೂಮಿನಿಯಂ ಕಂಡಕ್ಟರನ್ನು ನಾವು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲರೂ ಸೇರಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ನಮಗೆ ಬರಬೇಕಾದಂತಹ ಕೋಟಾಕ್ಕಿಂತಲೂ ಹೆಚ್ಚಿನ ಕೋಟಾವನ್ನು ಪಡೆಯುವುದಕ್ಕೆ ನಾವು ತಯಾರಾಗಿದ್ದೇವೆ ಕೇಂದ್ರ ಸರ್ಕಾರದ ಅನುಮತಿ ಮತ್ತು ಭರವಸೆ ನಮಗೆ ದೊರತಿದೆ. ಆದಷ್ಟು ಜಾಗ್ರತೆ ಈ ಒಂದು ಕೊರತೆಯನ್ನು ನಾವು ನಿವಾರಣೆ ಮಾಡುವುದಕ್ಕೆ ಸರಕಾರ ಖಂಡಿತವಾಗಿಯೂ ಕೆಲಸ ಮಾಡುವುದರಲ್ಲಿ ಹಿಂಜರಿಯುವುದಿಲ್ಲ.

ಹರಿಯಾನದ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ನಾನೂ ಕೂಡ ಹರಿಯಾನಕ್ಕೆ ಹೋಗಿದ್ದೆ. ಅಲ್ಲಿ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಅಲ್ಲಿ ನಾನು ಕೆಲವು ಕಡೆ ಹೋದಾಗ ಅಲ್ಲಿಯೂ ಕೂಡ ಪೂರ್ಣವಾಗಿ ಕೆಲಸ ಆಗಿಲ್ಲ ಎಂಬುದು ಕಂಡು ಬಂತು. ಹರಿಯಾನ ಸ್ಟೇಟನ್ನು ಕರ್ನಾಟಕಕ್ಕೆ ಹೋಲಿಕೆ ಮಾಡಿದರೆ ಅದು ಯಾವ ರೀತಿ ಹೋಲಿಕೆಯಾಗುತ್ತದೆಯೋ ನನಗೆ ಅರ್ಥವಾಗುವುದಿಲ್ಲ. ಹರಿಯಾನ ರಾಜ್ಯ ಎಷ್ಟು ಸಣ್ಣ ರಾಜ್ಯ ಕರ್ನಾಟಕ ರಾಜ್ಯ ಎಷ್ಟು ದೊಡ್ಡ ರಾಜ್ಯ ಎಂಬುದನ್ನು ನೋಡಬೇಕು. ಸ್ಟೇಟ್ ರೀಆರ್ಗನೈಜೇಷನ್ ಆಗುವುದಕ್ಕೆ ಮುಂಚೆ ನಮ್ಮ ರಾಜ್ಯದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದು ಪರ್‌ಸೆಂಟೇಜ್ ಎಷ್ಟು ಇತ್ತು ಎಂಬುದನ್ನು ನೋಡುವುದಾದರೆ ರಾಜ್ಯಗಳ ಪುನರ್ ವಿಂಗಡಣೆಯಾದಾಗ ನಮ್ಮ ರಾಜ್ಯಕ್ಕೆ ಹೊಸದಾಗಿ ಸೇರಿದಂತಹ ಕೆಲವು ಹಿಂದುಳಿದ ಜಿಲ್ಲೆಗಳು ವಿದುಚ್ಛಕ್ತಿಯನ್ನು ಕಂಡಿರಲೇ ಇಲ್ಲ. ನೋಡಿರಲೂ ಇಲ್ಲ. ಕೇಳಿರಲೂ ಇಲ್ಲ. ಇಂಥಾ ಸ್ಥಳಗಳು ನಮ್ಮ ರಾಜ್ಯಕ್ಕೆ ಬಂದಾಗ ನಾವೂ ಸಹ ಒಂದು ಸಮಾನವಾದ ರೀತಿಯಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಸುಮಾರು 26 ಸಾವಿರ ಹಳ್ಳಿಗಳಲ್ಲಿ ಬಹು ಮುಖ್ಯವಾಗಿ 13 ಸಾವಿರ ಹಳ್ಳಿಗಳಿಗೆ ಎಂದರೆ 50 ಪರ್ಸೆಂಟ್ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ. ನಮಗೆ ಸಮಾನವಾಗಿ ಇಂಟಿಗ್ರೇಟೆಡ್ ಪ್ರದೇಶಗಳು ಬರುವ ಹಾಗೆ ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿರುವುದರಿಂದ ನಾವು ಪೂರ್ಣವಾಗಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ತಮಗೂ ಗೊತ್ತಿದೆ. ಕೆಲವು ಹಳ್ಳಿಗಳಲ್ಲಿ 10 ಪರ್ಸೆಂಟ್ ಎಲೆಕ್ಟ್ರಿಫಿಕೇಷನ್ ಆಗಿತ್ತು, ಕೆಲವು ಕಡೆ 5 ಪರ್ಸೆಂಟ್ ಆಗಿತ್ತು. ಕೆಲವು ಕಡೆ ಏನೂ ಆಗಿರಲಿಲ್ಲ. ಅದನ್ನೂ ಸಹ ನಾವು 50 ಪರ್ಸೆಂಟ್ ಸ್ಟೇಜಿಗೆ ತರಬೇಕಾದರೆ ಅವರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಬೇಕಾದರೆ ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಎಲ್ಲಾ ಕಡೆ ಒಂದೇ ರೀತಿ ವ್ಯವಸ್ಥೆ ಮಾಡದಿದ್ದರೆ ಕಷ್ಟವಾಗುತ್ತದೆ. ಈ ದಿಶೆಯಲ್ಲಿ ಸರ್ಕಾರ

ದವರು ಕೆಲಸ ಮಾಡಿ 50 ಪರ್ಸೆಂಟ್ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಒಂದು ಯೋಜನೆಯಲ್ಲಿ ಈ ವರ್ಷ ಒಂದು ಸಾವಿರ ಹಳ್ಳಿಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಒದಗಿಸುವ ಪ್ರೋಗ್ರಾಮ್ ಇದ್ದರೂ ಸಹ ನಾವು ಒಂದು ಸಾವಿರದ 350 ಹಳ್ಳಿಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ. ಸಾಮಾನಿನ ಅಭಾವ ಇನ್ನಿತರ ಅಭಾವ ಇದ್ದರೂ ಸಹ ನಮ್ಮ ಟಾರ್ಗೆಟ್ ಮೇಲೆ ನಾವು ಕೆಲಸ ಮಾಡಿದ್ದೇವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲವನ್ನು ಕೊಡುವ ಸಂದರ್ಭದಲ್ಲಿ ಐ. ಪಿ ಸೆಟ್ಟಿಗೆ ಪ್ರಥಮ ಆಧ್ಯತೆಯನ್ನು ಕೊಡುತ್ತಿದ್ದೇವೆ. ವಿದ್ಯುಚ್ಛಕ್ತಿ ಮಂಡಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಆದ್ಯತೆಯನ್ನು ಕೊಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದನ್ನು ನಿಲ್ಲಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಮತ್ತು ನೀರಾವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬೇಕು ಎಂದು ಈಗಾಗಲೇ ತೀರ್ಮಾನವನ್ನು ಕೈಗೊಂಡಿದ್ದಾರೆ ಈ ರೀತಿ ಈ ದಿಶೆಯಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಶ್ರೀಮಾನ್ ದೇವೇಗೌಡರು ಮಾತನಾಡುತ್ತಾ ಶ್ರೀಮಾನ್ ಸುಬ್ರಹ್ಮಣ್ಯ ಅವರ ವಿಷಯವನ್ನು ಹೇಳಿದರು, ಶ್ರೀಮಾನ್ ಸಿ. ಸುಬ್ರಹ್ಮಣ್ಯಂ ಅವರಿಗೆ ನಮ್ಮ ವಂದನೆಯನ್ನು ಅರ್ಪಿಸುವುದು ನಮ್ಮ ಕರ್ತವ್ಯ. ವರಾಹಿ, ಬೇಡ್ತಿ ಮತ್ತು ಇತರ ಯೋಜನೆಗಳಿಗೆ ವಿಶ್ವ ಬ್ಯಾಂಕಿನಿಂದ ಹಣವನ್ನು ಒದಗಿಸುವ ಬಗ್ಗೆ ಪ್ರಯತ್ನ ಮಾಡಿ ನಮಗೆ ಅವರು ಸಹಾನುಭೂತಿ ತೋರಿಸಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಸಲ್ಲಿಸಬೇಕು. ಇವೊತ್ತು ನಮಗ ಈ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ನೆರವು ಸಿಕ್ಕುವುದರಲ್ಲಿ ಯಾವ ಅನುಮಾನ ಸಹ ಇಲ್ಲ. ಆದ್ದರಿಂದ ಇದರ ಬಗ್ಗೆ ಸಹಾಯ ಮಾಡಿದಂತಹ ಶ್ರೀಮಾನ್ ಸಿ. ಸುಬ್ರಹ್ಮಣ್ಯ ಅವರಿಗೆ ಈ ಸಂದರ್ಭದಲ್ಲಿ ನಾನು ನಮ್ಮ ವಂದನೆಯನ್ನು ಸಲ್ಲಿಸುತ್ತೇನೆ.

ಶ್ರೀಮಾನ್ ದೇವೇಗೌಡರು ಸಾಮಾನ್ಯವಾಗಿ ಥರ್ಮಲ್ ಯೂನಿಟ್ ಬಗ್ಗೆ ಮಾತನಾಡಿದರು. ಈಗ ವಿದುಚ್ಛಕ್ತಿ ಮಂಡಲಿಯು ಕೋಲ್ ಬೇಸಿಸ್ ಥರ್ಮಲ್ ಯೂನಿಟಿನ ಒಂದು ಪ್ರಾಜೆಕ್ಟ್ ಅನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದಕ್ಕೆ ಬೇಕಾದಂತಹ ಸ್ಥಳಾವಕಾಶವನ್ನು ಒದಗಿಸುವ ವಿಷಯದಲ್ಲಿ ಅಧ್ಯಕ್ಷರು ಮತ್ತು ಮುಖ್ಯ ಇಂಜಿನಿಯರುಗಳು ವಿಚಾರ ಮಾಡಿ ಅದಕ್ಕೆ ಬೇಕಾದಂತಹ ಸ್ಥಳವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದಷ್ಟು ಜಾಗ್ರತೆ ಈ ಒಂದು ಥರ್ಮಲ್ ಯೂನಿಟ್ ಆಗತಕ್ಕಂಥಾದ್ದರಲ್ಲಿ ಯಾವ ಅನುಮಾನವೂ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಶ್ರೀ ಹೆಚ್. ಸಿ. ಶ್ರೀಕಂಠಯ್ಯ)

ಮಾನ್ಯ ಶ್ರೀ ದೇವೇಗೌಡರು ಕಾಳಿ ಪ್ರಾಜೆಕ್ಟ್ ಟೆಂಡರಿನ ಬಗ್ಗೆ ಮಾತ ನಾಡಿದರು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನನಗಾದರೂ ಒಂದು ಸಂದೇಹ ಏನೆಂದರೆ, ಸೂಪಾ ಡ್ಯಾಂ ಕೆಲಸ ಕೊಟ್ಟಿರ ತಕ್ಕಂಥಾದ್ದು ಹಿಂದೂಸ್ಥಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ ಕಂಪೆನಿಯವರಿಗೆ. ಅದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಯಾರು 15-20 ಲಕ್ಷ ರೂಪಾಯಿ ಗಳನ್ನು ಕೊಡುತ್ತಾರೆ, ಯಾರ್ಯಾರಿಗೆ ಇದರ ಬಗ್ಗೆ ಕಾಗದಗಳನ್ನು ಕೊಟ್ಟರು ಎಂಬ ಬಗ್ಗೆ ಉತ್ತಮವಾದ ಸಲಹೆಗಳನ್ನು ಕೊಡುತ್ತಾರೆಂದು ನಾನು ತಿಳಿದಿದ್ದೆ. ಮಧ್ಯೆ ಮಧ್ಯೆ ಇದರ ಬಗ್ಗೆ ದುಡ್ಡು ಕೊಟ್ಟಿರುವ ಬಗ್ಗೆ ಸಂಕ್ಷಿಪ್ತವಾದ ಊಹಾ ಪೋಹಗಳನ್ನು ಕೊಟ್ಟು ಇಲ್ಲಸಲ್ಲದ ವಾದವಿವಾದಗಳನ್ನು ಷುರುಮಾಡಿದ್ದಾರೆ. ಈ ಸಂದರ್ಭದಲ್ಲಿ ನನ್ನ ಒಂದು ಸವಿನಯ ಪ್ರಾರ್ಥನೆ. ಅವರು ವ್ಯವಸಾಯ ಗಾರರೂ ಹೌದು, ಟೆಕ್ನಿಕಲ್ ಮ್ಯಾನ್ ಹೌದು, ಅದರಲ್ಲಿಯೇ ನಿರತರಾಗಿದ್ದಾರೆ, ಬಹಳ ಚೆನ್ನಾಗಿ ಕಲಿತ್ತಿದ್ದಾರೆ. ಬಹಳ ಚೆನ್ನಾಗಿ ತಯಾರಾಗಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡುವುದಕ್ಕೆ ನಾನು ಪ್ರಾರ್ಥನೆ ಮಾಡಿರುವುದರಿಂದ ಸನ್ಮಾನ್ಯ ಶ್ರೀ ದೇವೇಗೌಡರಿಗೆ ಯಾವ ಅನುಮಾನವೂ ಸಹ ಬೇಕಾಗಿಲ್ಲ. ಪವರ್ ಕಾರ್ಪೊರೇಷನ್‌ಗಳಿಂದ ಆಗಬಹುದಾದ ಯೋಜನೆಗಳು ಏನಿವೆಯೋ ಅವುಗಳಲ್ಲಿ ಸಾಕಾದಷ್ಟು ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಎಲ್ಲಾ ತರಹ ವ್ಯವಸ್ಥೆಯನ್ನೂ ಮಾಡುತ್ತೇವೆಂದು ನಾನು ಭರವಸೆಯನ್ನು ಕೊಡುತ್ತೇನೆ. ಇನ್ನು ನಮ್ಮ ಸ್ನೇಹಿತರಾದಂಥ ಮಾನ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್ ಅವರು ಲಿಂಗನಮಕ್ಕಿ ಯೋಜನೆಯ ವಿಚಾರವಾಗಿ ಮಾತನಾಡಿದರು. ಈಗಾಗಲೇ ಅದಕ್ಕಾಗಿ ಒಂದು ತಾಂತ್ರಿಕ ಸಮಿತಿಯನ್ನು ಮಾಡಿ ಅದರ ವರದಿಯನ್ನು ನಾವು ಕಾಯುತ್ತಿದ್ದೇವೆ. ಅದರ ಬಗ್ಗೆ ರಿಪೋರ್ಟ್ ಬಂದ ಕೂಡಲೇ ಅದಕ್ಕೆ ಬೇಕಾ ದಂಥ ರಿಪೇರಿ ಕೆಲಸಗಳನ್ನು ಆದಷ್ಟು ಜಾಗ್ರತೆಯಾಗಿ ಮಾಡುವುದಕ್ಕೆ ನಾವು ಸಿದ್ಧ ರಿದ್ದೇವೆ. ಇನ್ನು ಮಾನ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್ ಅವರು ಇದ್ದಕ್ಕಿದ್ದ ಹಾಗೆ ಕರೆಂಟ್ ಹೋಗುತ್ತದೆ, ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲವೆಂದು ವಾದ ಮಾಡಿದರು. ಸಾಮಾನ್ಯವಾಗಿ ಇದು ಎಲ್ಲೆಲ್ಲಿಯೂ ಕೇವಲ ಶೇಕಡ 5 ಅಥವಾ 10ರಷ್ಟು ಇದ್ದೇ ಇರುತ್ತದೆ. ವೋಲ್ಟೇಜಿನಿಂದ ಹಾಗೂ ಟ್ಯೂಬ್ ಮುಂತಾದುವುಗಳಿಂದ ಆ ರೀತಿ ಆಗುವುದು ಸಂಭವ. ಈ ವಿಚಾರದಲ್ಲಿ ವಿದ್ಯು ಚ್ಛಕ್ತಿ ಮಂಡಲಿಯವರು ಆದಷ್ಟು ಜಾಗ್ರತೆಯಾಗಿ ಕೂಲಂಕುಷವಾಗಿ ಯೋಚನೆ ಮಾಡಿ ಅದನ್ನು ಇಂಪ್ರೂವ್ ಮಾಡುತ್ತಾರೆಂದು ನಾನು ಈ ಸಂದರ್ಭದಲ್ಲಿ ಹೇಳುವು ದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಶ್ರೀ ಕೆಂಚೇಗೌಡರು ನನ್ನನ್ನು ತುಂಬಾ ಅಭಿನಂದಿಸಿದರು. ಇವತ್ತು ನನ್ನನ್ನು ಅಭಿನಂದಿಸುತ್ತಾರೆ, ನಾಳೆ ಯಾವತ್ತು ಅವರೇ ನನ್ನನ್ನು ಬೈಯ್ಯುತ್ತಾರೋ ಗೊತ್ತಿಲ್ಲ. ನಾನು ವ್ಯವಸಾಯಗಾರ, ವ್ಯವಸಾಯಗಾರರ ಮಕ್ಕಳಾಗಿರುವುದರಿಂದ ನಾನು ಚೆನ್ನಾಗಿ ಕೆಲಸ ಮಾಡಲಿ ಎಂಬುದಾಗಿ ಹೇಳಿದರು. ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ

ಅವರು ಏನು ಸಲಹೆಯನ್ನು ಕೊಟ್ಟಿದ್ದಾರೆಂದರೆ ಬಹು ಮುಖ್ಯವಾಗಿ ನೀರಾವರಿ ಪಂಪ್ಸೆಟ್‌ಗಳನ್ನು ಅದಷ್ಟು ಜಾಗ್ರತೆಯಾಗಿ ಎಲ್ಲ ಕಡೆಗಳಲ್ಲಿಯೂ ಒದಗಿಸಿ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಹೇಳಿದ್ದಾರೆ. ಮಾನ್ಯ ಶ್ರೀ ಎಚ್. ಟಿ. ಕೃಷ್ಣಪ್ಪನವರು ಆರ್ ಸಿ. ಸಿ. ಎಂ. ಬಗ್ಗೆ ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಸ್ಕೀಮಿಗೆ ಸಾಕಷ್ಟು ಕೆಲಸವಾಗುತ್ತಾ ಇಲ್ಲವೆಂದು ಹೇಳಿದರು. ಕೇಂದ್ರ ಸರ್ಕಾರದವರು ಇದಕ್ಕಾಗಿ ಹಣವನ್ನು ಕೊಟ್ಟರೂ ಕೂಡ ಕೆಲಸ ಜಾಗ್ರತೆಯಾಗಿ ಆಗಿಲ್ಲ. ಯಾರು ಹಣ ಕೊಟ್ಟರೂ ಸಾಮಾನ್ಯವಾಗಿ ಆಗಬೇಕಾದ ಕೆಲಸಗಳೇ ಈಗ ಸ್ಥಗಿತವಾಗಿವೆ ಆ ಹಣ ಕೇಂದ್ರ ಸರಕಾರದ್ದು, ಇರಬಹುದು ಅಥವಾ ಕರ್ನಾಟಕ ಸರ್ಕಾರದ್ದು ಇರಬಹುದು ಆದಕ್ಕೆ ಬೇಕಾದ ಮೆಟೀರಿಯಲ್ಸ್ ಅಭಾವದಿಂದ ಆ ಕೆಲಸಗಳು ನಿಧಾನವಾಗಿವೆ. ಈ ಒಂದು ಅಭಾವ ತಪ್ಪಿದ ಕೂಡಲೇ ಅದರ ಬಗ್ಗೆ ಯಾವರೀತಿಯಲ್ಲಿ ಸ್ಕೀಮುಗಳನ್ನು ಹಾಕಬೇಕೆಂದು ಈಗಾಗಲೇ ಹಣವನ್ನು ಕೊಟ್ಟಿದ್ದಾರೆ. ಅದು ಈಗ ವಿದ್ಯುಚ್ಛಕ್ತಿಮಂಡಲಿಗೆ ಬಂದಿದೆ. ಹಣ ಲ್ಯಾಪ್ಸ್ ಆಗುವ ಪರಿಸ್ಥಿತಿ ಬರುವುದಿಲ್ಲ. ಮಾರ್ಚ್ ಅಂತ್ಯದಲ್ಲಿಯೇ ಇದೆಲ್ಲವೂ ತೀರ್ಮಾನ ವಾಗುತ್ತದೆಂದು ಹೇಳಿದೆ. ಅದರಲ್ಲಿ ಹಣ ಲ್ಯಾಪ್ಸ್ ಆಗುವ ಪ್ರಶ್ನೆಯಿಲ್ಲ. ಅಭಾವ ತಪ್ಪಿದ ತಕ್ಷಣ ಆದಷ್ಟು ಜಾಗ್ರತೆಯಾಗಿ ಈ ಕೆಲಸವನ್ನು ಪೂರೈಸು ತ್ತೇವೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಮತ್ತೆ ಪವರ್ ಕಾರ್ಪೊರೇಷನ್ನಿನಲ್ಲಿ ನೇಮಕಾತಿಗಳ ಬಗ್ಗೆ ಮಾತನಾಡಿದರು ಇಂಟರ್‌ವ್ಯೂಸ್ ಸರಿಯಾಗಿ ಕರೆದಿಲ್ಲ ಮತ್ತು ಯಾವ ಒಂದು ಆಧಾರದ ಮೇಲೆ ಕರೆದಿಲ್ಲವೆಂದು ಹೇಳಿದರು. ಅದರ ಬಗ್ಗೆ ಮಾನ್ಯ ಸದಸ್ಯರು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆಂದು ಹೇಳಿದರು. ಅದ್ದರಿಂದ ಈ ವಿಚಾರ ದಲ್ಲಿ ಆಗ ಹೇಳುತ್ತೇನೆ. ಅಲ್ಲಿನ ಅಧಿಕಾರಿಗಳ ಬಗ್ಗೆ, ಮ್ಯಾನೇಜಿಂಗ್ ಡೈರೆಕ್ಟರ್ ಬಗ್ಗೆ ಮಾತನಾಡುತ್ತಾ ಅವರು ಸರ್ವಾಧಿಕಾರಿಗಳು ಎಂಬುದಾಗಿ ಮಾತನಾಡಿದರು. ನನಗೆ ತಿಳಿದಿರುವ ಹಾಗೆ ಅಲ್ಲಿರತಕ್ಕ ಆ ಅಧಿಕಾರಿ ಪ್ರಾಮಾಣಿಕರಾದಂಥ ಅಧಿ ಕಾರಿ ಬಹಳ ಉತ್ತಮ ಕೆಲಸಗಾರರೆಂದು ಅವರ ಕೆಲಸ ಕಾರ್ಯಗಳಲ್ಲಿ ತೋರಿಸಿ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದು ಸತ್ಯಕ್ಕೆ ದೂರವಾದಂಥ ಪ್ರಶ್ನೆ ಅಲ್ಲಿನ ಅಧಿಕಾರಿಗಳು ಸರ್ವಾಧಿಕಾರಿಗಳು ಎಂದು ಹೇಳುವಾಗ ಯಾವ ಸಂದರ್ಭಕ್ಕೆ ಅವರು ಆ ರೀತಿ ಹೇಳಿದರೋ ನನಗಂತೂ ಅರ್ಥವಾಗುತ್ತಾ ಇಲ್ಲ. ಅಂತಹ ವಿಶೇಷ ಸಂದರ್ಭಗಳು ಇದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ, ಆ ಅಧಿಕಾರಿಗಳಲ್ಲಿ ಸಮಾಲೋಚನೆ ಮಾಡಿ ಅವರಿಗೆ ತಕ್ಕ ಪರಿಹಾರವನ್ನು ಕೊಡಿಸು ವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಮತ್ತೆ ಹೊಸದುರ್ಗ ಕ್ಷೇತ್ರದ ಮಾನ್ಯ ಶ್ರೀ ರುದ್ರಪ್ಪನವರು ಮಾತನಾಡುತ್ತಾ ಅವರ ಒಂದು ಕ್ಷೇತ್ರದಲ್ಲಿ ವಿದ್ಯುತ್ತೀಕರಣದ ಇತರೇ ಕೆಲಸ ಕಾರ್ಯಗಳು ಬಹಳ ಕಡಿಮೆ ಆಗಿವೆಯೆಂದು ಹೇಳಿದರು. ಅದು

(ಶ್ರೀ ಹೆಚ್. ಸಿ. ಶ್ರೀಕಂಠಯ್ಯ)

ವಾಸ್ತವವಾದ ಮಾತು. ಆ ಜಿಲ್ಲೆಯ ಲೆಕ್ಕವನ್ನು ತೆಗೆದುಕೊಂಡಾಗ್ಗೆ ಸೇಕಡ 62ರಷ್ಟು ಚಿತ್ರದುರ್ಗದಲ್ಲಿ ಆಗಿದೆ. ಸ್ಟೇಟ್ ಅವರೇಜ್ ಸೇಕಡ 60ರಷ್ಟು ಇದ್ದರೆ, ರೂರಲ್ ಪಾಪುಲೇಷನ್ ಬೆನಿಫಿಟ್ ಆಗಿರುವುದು ಸೇಕಡ 77ರಷ್ಟು. ಅದರ ಹೊಸದುರ್ಗ ತಾಲ್ಲೂಕಿನಲ್ಲಿ ಏಕೆ ಆ ರೀತಿ ಆಯಿತೋ ಗೊತ್ತಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಪರ್ಸೆಂಟೇಜ್ ಕಡಿಮೆ ಇದೆ. 66 ಕಿಲೋವಾಟ್ ಲೈನ್ ಹೊಸದುರ್ಗದಲ್ಲಿ ಇನ್ನೂ ಆಗುತ್ತಿದೆ. ಅದು ಸ್ವಲ್ಪ ನಿಧಾನವಾಗಿದೆ. ಆ ಲೈನಿಗೆ ಬೇಕಾದ ಎಂ ಎಸ್ ಆ್ಯಂಗಲ್ಸ್ ಮತ್ತು ಇತರೇ ಉಪಕರಣಗಳನ್ನು ನಾವು ಕಲ್ಕತ್ತಾದಿಂದ ತರಿಸಬೇಕಾಗಿದೆ. ಅವು ಬಂದ ಕೂಡಲೇ ಅಲ್ಲಿನ ಕೆಲಸಕಾರ್ಯಗಳನ್ನು ಪೂರೈಸುತ್ತೇವೆ. ಇನ್ನು ನೀರಾವರಿ ಪಂಪುಸೆಟ್ಟುಗಳ ಬಗ್ಗೆ ಹೆಚ್ಚಿಗೆ ಹಣವನ್ನು ನಾವು ಖರ್ಚುಮಾಡ ಬೇಕಾಗಿದೆ. ಈಗಾಗಲೇ ಸಾವಿರ ಪಂಪುಸೆಟ್ಟುಗಳನ್ನು ಬೇರೆ ತಾಲ್ಲೂಕುಗಳ ಮಟ್ಟಿಗೆ ತರಿಸುವುದಕ್ಕೆ ಪ್ರಯತ್ನಪಡುತ್ತಿದ್ದೇವೆಂದು ನಾನು ಈ ಸಂದರ್ಭದಲ್ಲಿ ಅವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ವಿ. ರುದ್ರಪ್ಪ :—ಒಂದು ಲಕ್ಷ ರೂಪಾಯಿಗಳಷ್ಟು ರಾಮೆಟೀರಿಯಲ್ಸ್ ಇಲ್ಲದೆ ಸಣ್ಣಪುಟ್ಟ ಸ್ಕೀಮುಗಳು ನಿಂತುಹೋಗಿವೆ ಇದರಿಂದ ಬೋರ್ಡಿಗೆ ಹೆಚ್ಚಿಗೆ ನಷ್ಟ ಉಂಟಾಗಿದೆ. 30-31 ಲಕ್ಷ ರೂಪಾಯಿಗಳ ಖರ್ಚು ಅದಕ್ಕೆ ಬೀಳುತ್ತದೆ. ಕೇವಲ ಒಂದು ಲಕ್ಷ ರೂಪಾಯಿಗಳ ಮೆಟೀರಿಯಲ್ಸ್‌ಗಾಗಿ ಆ ಕೆಲಸವನ್ನು ನಿಲ್ಲಿಸುವುದು ಸರಿಯಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :—ಕೇವಲ ಆರು ತಿಂಗಳುಗಳೊಳಗೆ ಆದಷ್ಟು ಜಾಗ್ರತೆಯಾಗಿ ಆ ಲೈನನ್ನು ಮಾಡಿಕೊಡುವುದಕ್ಕೆ ಖಂಡಿತವಾಗಿ ಪ್ರಯತ್ನ ಮಾಡುತ್ತೇನೆ. ಅದರ ಬಗ್ಗೆ ಮಾನ್ಯ ಸದಸ್ಯರು ಅನುಮಾನಪಡಬೇಕಾಗಿಲ್ಲ.

ಇನ್ನು ಮಾನ್ಯ ಶ್ರೀ ಧರ್ಮಸಿಂಗ್ ಅವರು ಜೇವರ್ಗಿ ಕ್ಷೇತ್ರದ ಸದಸ್ಯರು ನನ್ನ ಪರವಾಗಿ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿದರು. ಸೇಕಡ 11 ರಷ್ಟು ಮಾತ್ರ ವಿದ್ಯುಚ್ಛಕ್ತಿ ಸರಬರಾಜು ಅಲ್ಲಿ ಇದೆಯೆಂದು ಹೇಳಿದರು ಗುಲ್ಬರ್ಗಾ ತಾಲ್ಲೂಕಿನ ಅವರೇಜ್ ಸೇಕಡ 50ರಷ್ಟು ಇದೆ. ಮಾನ್ಯ ಸದಸ್ಯರ ಜಿಲ್ಲೆಯ ಅವರೇಜ್ ಸೇಕಡ 51 ರಷ್ಟು ಇದೆ. ಅಂದಮೇಲೆ ಸ್ಟೇಟ್ ಅವರೇಜ್‌ಗಿಂತ ಒಂದು ಪರ್ಸೆಂಟ್ ಜಾಸ್ತಿಯೇ ಇದೆ. ತಮ್ಮ ಜಿಲ್ಲೆಯಲ್ಲಿ ಸ್ಟೇಟ್ ರೀ ಆರ್ಗನೈಜೇಷನ್‌ಗೆ ಮುಂಚೆ ಎಷ್ಟು ಪರ್ಸೆಂಟ್ ಇತ್ತು, ಈಗ ಎಷ್ಟು ಪರ್ಸೆಂಟಿಗೆ ಬಂದಿದೆ

ಎಂಬುದನ್ನು ನೋಡಬೇಕಾಗಿದೆ. ನಿಮ್ಮ ತಾಲ್ಲೂಕಿನಲ್ಲಿ ಶೇಕಡ 11 ರಷ್ಟು ಇದೆ ಯೆಂದು ಹೇಳಿದ್ದೀರಿ. ಅದನ್ನು ವಿಚಾರಮಾಡುತ್ತೇನೆ. ನಿಮ್ಮ ತಾಲ್ಲೂಕಿಗೆ ಅನೇಕ ಸ್ಕೀಮ್‌ಗಳನ್ನು ಕೊಡಿಸಬೇಕೆಂದು ಕೇಳಿದ್ದೀರಿ. ಆ ರೀತಿ ಕೊಡಬೇಕಾದರೆ ಬಹುಮುಖ್ಯವಾಗಿ ಕೇಂದ್ರಸರ್ಕಾರದ ಕಾರ್ಪೊರೇಷನ್ನಿನವರು ಸರಿಯಾಗಿ ಸರ್ವೆ ಮಾಡಿ ಆ ಕೆಲಸಗಳನ್ನು ಮಾಡುವುದಕ್ಕೆ ತಕ್ಕ ಸಹಾಯವನ್ನು ಮಾಡಬೇಕು. ಅಗ್ರಿ ಕಲ್‌ಚರಲ್ ಆಗಿರುವವರನ್ನು ಇದರ ಬಗ್ಗೆ ಚೆನ್ನಾಗಿ ವಿಚಾರಮಾಡಬೇಕು.

ಅಗ್ರಿಕಲ್ಚರಲ್ ಓರಿಯೆಂಟೆಡ್ ಆಗಿದ್ದರೆ ಮಾತ್ರ ಈ ಸ್ಕೀಮನ್ನು ತೆಗೆದು ಕೊಳ್ಳುತ್ತಾರೆ. ಇದರಲ್ಲಿ 43 ಸ್ಕೀಮ್‌ಗಳಲ್ಲಿ 37 ಸ್ಕೀಮ್‌ಗಳನ್ನು ಮಂಜೂರು ಮಾಡಿದ್ದೇವೆ. 44 ತಾಲ್ಲೂಕುಗಳಲ್ಲಿ ಬೆನಿಫಿಟ್ ಆಗಿದೆ. ತರೀಕೆರೆ, ಹೆಗ್ಗಡದೇವನ ಕೋಟೆಗೆ ಮಂಜೂರಾತಿ ಬಂದು ಇನ್ನು ಕೆಲವು ತಾಲ್ಲೂಕುಗಳಲ್ಲಿ ಸರ್ವೆ ಮಾಡು ತ್ತಿದ್ದಾರೆ. ನಾನು ಡೆಲ್ಲಿಗೆ ಹೋಗಿದ್ದಾಗ ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರನ್ನು ಬೇಟಿ ಮಾಡಿ ವಿಚಾರ ವಿನಿಮಯ ಮಾಡಿದ ಮೇಲೆ ಅವರಿಗೆ ಸ್ಕೀಮ್‌ಗಳನ್ನು ಮಂಜೂರು ಮಾಡಬೇಕೆಂದು ಪ್ರಾರ್ಥನೆ ಮಾಡಿದ ಮೇಲೆ ನಮ್ಮ ರಾಜ್ಯಕ್ಕೆ ಎಲ್ಲಾ ಸ್ಕೀಮ್‌ಗಳನ್ನು ಕೊಡುವುದಕ್ಕೆ ಭರವಸೆ ಕೊಟ್ಟಿದ್ದಾರೆ. ಇವುಗಳನ್ನು ಸರ್ವೆ ಮಾಡಿಸಿ ಆದಷ್ಟು ಜಾಗ್ರತೆ ಮಾಡಿಸುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಬೈರೇಗೌಡರು ಮೊದಲು ಬಹಳ ಒಳ್ಳೆಯ ಮಾತುಗಳನ್ನು ಆಡಿದರು ಆ ಮೇಲೆ ಡಿಮಾಂಡ್ ಚಾರ್ಜಸ್ ಬಗ್ಗೆ ಒತ್ತಿಒತ್ತಿ ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳಾಗಲಿ ನಮ್ಮ ರಾಜ್ಯದ ಮಂತ್ರಿಮಂಡಲವೇ ಆಗಲಿ ರೈತರ ಹಿತರಕ್ಷಣೆ ಮಾಡುವುದರಲ್ಲಿ ನಾವು ಯಾರಿಗಿಂತಲೂ ಜಾಸ್ತಿ ಇಲ್ಲದಿದ್ದರೂ ಕಡಿಮೆಯಂತು ಇಲ್ಲ ವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಪ್ರಶ್ನೆ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಇದು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ. ಇದೇ ಶಾಸನ ಸಭೆಯಲ್ಲಿ ಮಾನ್ಯ ಚನ್ನಬಸಪ್ಪ ನವರು ವಾಗ್ದಾನ ಮಾಡಿದ್ದಾರೆ. ಮುಖ್ಯಮಂತ್ರಿಗಳು ಹೇಳಿದ್ದಾರೆ ನಾನು ಹೇಳು ತ್ತಿದ್ದೇನೆ. ಆದರೆ ಇವತ್ತಿನದಿವಸ ಪರಿಸ್ಥಿತಿಯನ್ನು ನೋಡಿ ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ ನಮ್ಮ ವಿದ್ಯುಚ್ಛಕ್ತಿ ಮಂಡಲಿ ಅಪಾರವಾದಂತ ನಷ್ಟ ವನ್ನು ಅನುಭವಿಸುತ್ತದೆ ಆದ್ದರಿಂದ ಸುಮಾರು ಡಿಮಾಂಡ್ ಚಾರ್ಜ್ ಎಲ್ಲಾ ತರದ ಎಲ್ಲಾ ಇನ್‌ಸ್ಟಾಲೇಷನ್ ಮೇಲೆಯೂ ಹಾಕಿದ್ದಾರೆ ಆದರಿಂದ 32 ಕೋಟಿ ರೂಪಾಯಿ ಟ್ಯಾರೀಫ್ ಕಮಿಟಿ ರಿಪೋರ್ಟ್ ಪ್ರಕಾರ ಹಾಕಿದ್ದಾರೆಂದು ತಿಳಿದು ಬಂದಿದೆ. ಎಲ್ಲಾದರಿಂದ 22 ಕೋಟಿ ರೂಪಾಯಿ ಬರುತ್ತದೆ. ಇನ್ನು 13 ಕೋಟಿ ರೂಪಾಯಿ ಲುಕ್ಸಾನು ಆಗುತ್ತಿದೆ. ಆದ್ದರಿಂದ ಇದೆಲ್ಲವನ್ನೂ ಪರಿಶೀಲನೆ ಮಾಡಿ ಇದರ ಬಗ್ಗೆ ಏನು ತೀರ್ಮಾನ ಮಾಡಬೇಕೋ. ಮಾಡುವುದಕ್ಕೆ ನಾವು ತಯಾರಿ ದ್ದೇವೆ. ಇದರ ಬಗ್ಗೆ ತಾವು ಏನು ಅನುಮಾನ ಮಾಡಬೇಕಾಗಿಲ್ಲ. ಪ್ರತಿಯೊಬ್ಬ ಸದಸ್ಯರು ಹೇಳಿರುವುದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

(ಶ್ರೀ ಹೆಚ್. ಸಿ. ಶ್ರೀಕಂಠಯ್ಯ)

ಸದ್ಯದ ಪರಿಸ್ಥಿತಿ ನಮ್ಮ ಕರ್ನಾಟಕದ ವಿದ್ಯುತ್‌ಚ್ಛಕ್ತಿ ಮಂಡಲಿಗೆ 8 ಕೋಟಿ ರೂಪಾಯಿ ಕಡಿಮೆಯಾಗುತ್ತದೆ. 5 ಸಾವಿರ ಪಂಪುಸೆಟ್ಟುಗಳಿಗೆ ಲ್ಯಾಂಡ್ ಡೆವಲಪ್‌ಮೆಂಟಿನಿಂದ ವಿದ್ಯುಚ್ಛಕ್ತಿಯನ್ನು ಕೊಡಬೇಕು. ಐ. ಪಿ. ಸೆಟ್ಟು ಸರಬರಾಜು ಮಾಡಿರುವುದರಿಂದ....

ಶ್ರೀ ಸಿ. ಬೈರೇಗೌಡ :—ತಮ್ಮ ಮಾತನ್ನು ಕೇಳುತ್ತಾ ಇದ್ದೇನೆ. ತಮಗೆ ಒಂದು ಪ್ರಶ್ನೆ ಕೇಳುತ್ತೇನೆ. ಬೆಳಗಾಂನಲ್ಲಿ, ಸಂಡೂರಿನಲ್ಲಿ ಅರ್ಧ ಪೈಸೆಗೆ ವಿದ್ಯುತ್ ಚಕ್ತಿಯನ್ನು ಕೊಡುತ್ತಿದ್ದೀರಿ? ಇದೇ ತಾವು ರೈತರನ್ನು ಉದ್ಧಾರ ಮಾಡುವುದು ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ:—ರೈತರ ಉದ್ಧಾರ ಮಾಡುವ ವಿಚಾರದಲ್ಲಿ ನಮಗೆ ಗೊತ್ತಿದೆ ನಿಮಗೂ ಗೊತ್ತಿದೆ. ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ :—ಹಾಗಾದರೆ ಅವರಿಗೂ ಹೆಚ್ಚಿಸಿ? ರೈತರ ಬಗ್ಗೆ ಮಲತಾಯಿ ಧೋರಣೆ ಏಕೆ?

ಶ್ರೀ ಎಚ್. ಸಿ. ಶ್ರೀಕಂಠಯ್ಯ :—ಮಾನ್ಯ ಬೈರೇಗೌಡರು ಹೇಳಿದರು ದೊಡ್ಡ ದೊಡ್ಡ ಕೈಗಾರಿಕೆಗಳಿಗೂ ಜಾಸ್ತಿ ಮಾಡಬೇಕೆಂದು ಅವರಿಗೆ ಬಹಳ ಕಡಿಮೆ ದರದಲ್ಲಿ ಕೊಟ್ಟಿದ್ದಾರೆಂದು ಹೇಳಿದರು. ಆದರೆ ಒಂದು ವಿಷಯವನ್ನು ಅವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅದು ಏನೆಂದರೆ ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟು ಬಹಳ ವರ್ಷಗಳಾಯಿತು. ಈಗ ಅದರ ಜೊತೆಯಲ್ಲಿ ನೆಗೋಷಿಯೇಟ್ ಮಾಡುತ್ತಿದ್ದೇನೆ. ಉದಾಹರಣೆಗೆ ಇಂಡಿಯನ್ ಅಲ್ಯೂಮಿನಿಯಮ್ ಫ್ಯಾಕ್ಟರಿಗೆ 1.90 ಪರ್ ಯೂನಿಟ್ ಇದ್ದದ್ದನ್ನು ಅದನ್ನು 4.8 ಪರ್ ಯೂನಿಟ್ ಮಾಡಿದೆ. ಎಂ ಐ. ಎಸ್. ಎಲ್. ಗೆ ಈ ನಾಲ್ಕು ನಯಾ ಪೈಸೆ ಇದ್ದದ್ದನ್ನು 5 ನಯಾ ಪೈಸೆಗೆ ಮಾಡಿದ್ದೇವೆ. ಮಂಗಳೂರು ಪರ್ಟಿಲೈಷರ್‌ಗೆ 5.5 ಮಾಡಿದ್ದೇವೆ. ಮತ್ತು ಕಾಸ್ಟಿಕ್ ಸೋಡ ಫ್ಯಾಕ್ಟರಿಯ ಜೊತೆಯಲ್ಲಿ ನೆಗೋಷಿಯೇಟ್ ಮಾಡಿ ನಾವು ಅದನ್ನು ಜಾಸ್ತಿ ಮಾಡಬೇಕು ಎಂದು ಹೇಳಿದ್ದೇವೆ. ಇನ್ನು ಸಂಡೂರು ಮ್ಯಾಂಗನೀಸ್ ಇನ್ನೂ ಅನೇಕ ಕೈಗಾರಿಕೆ ಮಂಡಲಿಗಳಿಗೆ ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ:—ಅವರು ನಿಮ್ಮ ನೋಟೀಸ್‌ಗೆ ಜವಾಬ ಕೊಟ್ಟಿಲ್ಲ?

ಶ್ರೀ ಎಚ್. ಸಿ. ಶ್ರೀಕಂಠಯ್ಯ :— ಅವರ ಬಗ್ಗೆ ತಮಗೆ ಅನುಮಾನಬೇಕಾಗಿಲ್ಲ. ಎಲ್ಲಾ ದೊಡ್ಡ ದೊಡ್ಡ ಕೈಗಾರಿಕೆಗಳಿಗೂ ಜಾಸ್ತಿ ಮಾಡೇ ಮಾಡುತ್ತೇವೆ. ಅದರಲ್ಲೂ ಸಹ ರೈತನಿಗೆ ತೊಂದರೆ ಕೊಡಬೇಕು ಹೆಚ್ಚಿನ ಹೊರೆಯನ್ನು ಹೊರಿಸಬೇಕೆಂದು ಸರ್ಕಾರಕ್ಕೆ ಖಂಡಿತವಾಗಿಯೂ ಇಲ್ಲ. ಸರ್ಕಾರ ಯಾವಾಗಲೂ ರೈತರ ಪರವಾಗಿ ಇದೆಯೆಂದು ಹೇಳುತ್ತೇನೆ. ಈ ವಿದ್ಯುಚ್ಛಕ್ತಿಯ ಖಾತೆಯ ಬೇಡಿಕೆಯನ್ನು ಸರ್ವಾನುಮತದಿಂದ ಅಂಗೀಕಾರ ಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಈ ಖಾತೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ರಾಜ್ಯ ಮಂತ್ರಿಗಳು ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಬಗ್ಗೆ ವಿವರವಾದಂತಹ ಉತ್ತರ ಕೊಟ್ಟಿದ್ದಾರೆ. ಸಾಧಾರಣವಾಗಿ ಕೆಲವು ವಿಷಯಗಳನ್ನು ಸಭೆಯಮುಂದೆ ಮಾನ್ಯ ದೇವೇಗೌಡರು ಕೇಳಿರತಕ್ಕಂಥ ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡಬೇಕೆಂದು ಇಚ್ಛೆಪಡುತ್ತೇನೆ. ಒಂದು ಸಂತೋಷದ ವಿಚಾರ ಏನು ಎಂದರೆ ಚರ್ಚೆಯಲ್ಲಿ ಭಾಗವಹಿಸಿದಂತಹ ಮಾನ್ಯ ಸದಸ್ಯರು ಕೂಡ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಒತ್ತಿ ಹೇಳಿದ್ದಾರೆ ಜೊತೆಗೆ ಅದನ್ನು ಬಿಟ್ಟು ಸ್ಥಳೀಯವಾಗಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಅದರ ಪ್ರಾಮುಖ್ಯತೆಯನ್ನು ಹೇಳಿದ್ದಾರೆಂದು ನನ್ನ ಭಾವನೆ. ಮಾನ್ಯ ದೇವೇಗೌಡರು ಬಹಳ ಸ್ಪಷ್ಟವಾಗಿ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಬಹಳ ಪ್ರಾಮುಖ್ಯತೆಯನ್ನು ಕೊಡಬೇಕೆಂದು ಆ ನೀತಿಯನ್ನು ಬಹಳ ಒತ್ತಿ ಹೇಳಿದ್ದಾರೆ. ನಾವು ಅಧಿಕಾರಕ್ಕೆ ಬಂದಮೇಲೆ ನಾನು ಮೊದಲನೇ ಬಾರಿ ರಾಜ್ಯದಲ್ಲಿ ಏನು ಮಾಡಬೇಕೆಂದು ಹೇಳಿದ್ದೆನೋ ಅದೇ ವಿದ್ಯುಚ್ಛಕ್ತಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡತಕ್ಕಂಥ ದೃಷ್ಟಿ ಅದು ನಮಗೆ ಇದೆಯೆಂದು ಹೇಳಿದ್ದೇನೆ. ಪಂಚವಾರ್ಷಿಕ ಯೋಜನೆ ನಿರೂಪಣೆ ಮಾಡುವಾಗಲೂ ಕೂಡ ಹೇಳಿದ್ದೇನೆ. ಕೇಂದ್ರದಲ್ಲಿ 5ನೇ ಪಂಚವಾರ್ಷಿಕ ಯೋಜನೆಯ ಕರಡು ಬರತಕ್ಕ ಸಂದರ್ಭದಲ್ಲಿ ಈ ಎರಡು ವಿಷಯಗಳ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಅವರೂ ಕೂಡ ಒಪ್ಪಿದ್ದಾರೆ. ನಾವು ಆಹಾರದಲ್ಲಿ ಸ್ವ ಪರಿಪೂರ್ಣತೆಯನ್ನು ಹೊಂದಬೇಕಾದರೆ ಇತರರಿಗೆ ಬೆಳೆದುಕೊಡುವಂತಹ ಶಕ್ತಿ ನಮಗೆ ಬರಬೇಕು, ಇದರ ಜೊತೆಗೆ ಧಾನ್ಯಗಳು ಎಂದರೆ ಪ್ರೋಟೀನ್ ಡೈಯೆಟ್ ಎಂದರೆ ಎಣ್ಣೆ ಬೀಜಗಳು ಇವುಗಳೂ ಕೂಡ ದೇಶದಲ್ಲಿ ಕೊರತೆಯಿದೆ.

6-30 P.M.

ಎಣ್ಣೆ ಬೀಜಗಳ ಕೊರತೆ ನಮ್ಮ ದೇಶದಲ್ಲಿ ಇದೆ, ನಮ್ಮ ಕರ್ನಾಟಕದಲ್ಲಿಯೂ ಇದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎಣ್ಣೆ ಬೀಜಗಳನ್ನು ಬೆಳೆಯು

(ಶ್ರೀ ಡಿ. ದೇವರಾಜ ಅರಸ್)

ವುದಕ್ಕೆ ಹೆಚ್ಚು ಅವಕಾಶವಿದೆ. ಅದೇ ರೀತಿ ಹತ್ತಿ ಬೆಳೆಯುವುದಕ್ಕೆ ಅವಕಾಶವಿದೆ, ಕಬ್ಬು ಬೆಳೆಯುವುದಕ್ಕೆ, ಕಮರ್ಷಿಯಲ್ ಕ್ರಾಪ್ಸ್‌ನ್ನು ಬೆಳೆಯುವುದಕ್ಕೆ ಅವಕಾಶ ವಿದೆ. ಈ ಎಣ್ಣೆಬೀಜ, ದ್ವಿದಳ ಧಾನ್ಯಗಳು, ಆಹಾರಧವಸಗಳು, ಬೆಳೆಯತಕ್ಕಂಥ ದ್ದಕ್ಕೆ ನೀರಾವರಿ ಬಹಳ ಪ್ರಾಮುಖ್ಯವಾದಂಥದ್ದು. ಇದು ಒಂದೇ ಕಷ್ಟ. ಇತ್ತೀ ಚೆಗೆ ತಾವು ಹೇಳಿದರಿ ಅಲೋಕೇಷನ್ ಆಫ್ ಫಂಡ್ಸ್ ಸಾಲುವುದಿಲ್ಲವೆಂದು, ಆದರೂ ತಾವು ಈ ವರ್ಷದ ಬಡ್ಜೆಟ್‌ನ್ನು ನೋಡುವುದಾದರೆ ಅದರಲ್ಲಿ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ನೀರಾವರಿಗೋಸ್ಕರ 86 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕೆಂದು ಮಾಡಿದ್ದೇವೆ. ಪ್ಲಾನ್‌ನಲ್ಲಿ ಕೊಟ್ಟಿರತಕ್ಕಂಥದ್ದೇ ಒಟ್ಟು 157 ಕೋಟಿ ರೂ. ಗಳು ಇದನ್ನು ಎರಡು ಬಾಬುಗಳಿಗಾಗಿ ಇಷ್ಟು ಹಣವನ್ನು ಖರ್ಚು ಮಾಡಬೇಕೆಂದಿದ್ದೇವೆ. ಇನ್ನು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ತೆಗೆದುಕೊಂಡರೆ ಅದು ಬಹುಶಃ ಸ್ವಲ್ಪ ಕಡಿಮೆ ಅಂತ ಹೇಳಿದರೂ ಸಹ 93 ಕೋಟಿ ರೂಪಾಯಿಗಳು ಆಗುತ್ತದೆ. ನನಗೂ ಆಶೆ ಇದೆ ಇನ್ನೂ 20–30 ಕೋಟಿ ಖರ್ಚು ಮಾಡಬೇಕೆಂದಿದೆ. ಆದರೆ ಹಣವನ್ನು ಎಲ್ಲಿಂದ ತರುವುದು. ಒಟ್ಟು ನಮಗಿರ ತಕ್ಕಂಥ 230 ಕೋಟಿ ರೂ ಗಳಲ್ಲಿ ಸೋಸಿಯಲ್ ಸರ್ವಿಸಸ್‌ಗೆ, ಅಗ್ರಿಕಲ್ಚರಲ್‌ಗೆ, ಹೆಲ್ತ್‌ಗೆ, ಎಜುಕೇಷನ್‌ಗೆ ಖರ್ಚು ಮಾಡಬೇಕಾಗಿರುವುದರಿಂದ ಇವುಗಳನ್ನೆಲ್ಲಾ ನಿಲ್ಲಿಸಿಬಿಡುವುದಕ್ಕೆ ಆಗುತ್ತದೆಯೇ ? ಇನ್ನು ವ್ಯವಸಾಯ ಮತ್ತು ನೀರಾವರಿ ಮತ್ತು ವಿದ್ಯುಚ್ಛಕ್ತಿ ವಿಚಾರಕ್ಕೆ ಬಂದರೆ ತಾವು ಇದಕ್ಕೆ ಹೆಚ್ಚಾಗಿ ಹಣವನ್ನು ಖರ್ಚು ಮಾಡಬೇಕೆಂದು ಹೇಳುತ್ತೀರಿ ಒಂದೊಂದು ಡಿಮ್ಯಾಂಡ್‌ಗಳ ಬಗ್ಗೆ ಮಾತನಾಡುವಾಗ್ಲೂ ಸಹ ತಾವು ಇದೇ ರೀತಿ ಹೇಳುತ್ತೀರಿ. ಈ ಸದನದಲ್ಲಿ ಆಗಿರುವುದನ್ನು ತಾವು ಜ್ಞಾಪಿಸಿಕೊಳ್ಳಿ, ಹಳ್ಳಿಗಳಿಗೆ ರಸ್ತೆಗಳನ್ನು ಒದಗಿಸಿಕೊಡು ವುದಕ್ಕೆ ಕಷ್ಟವಾಯಿತು, ಇಂದಿಗೂ ಕೂಡ ತಾವು ಅನೇಕರು ಬೇಜಾರುಪಟ್ಟು ಕೊಂಡು ಮಾತನಾಡಿದ್ದೀರಿ. ಇದಕ್ಕೂ ಸಹ ಸರ್ಕಾರದವರು ಹೆಚ್ಚಿಗೆ ಹಣವನ್ನು ಒದಗಿಸಬೇಕಾಗಿತ್ತು ಎಂದು ಹೇಳಿದ್ದಿರಿ. ಪ್ರತಿಯೊಂದು ಡಿಮ್ಯಾಂಡ್‌ಗಳ ಬಗ್ಗೆಯೂ ಮಾತನಾಡುವಾಗ ಹೀಗೆ ಹೇಳುವುದು ಸಹಜ. ಇಲ್ಲಿಯೇ ನೀವು ಸ್ವಲ್ಪ ಮುಗ್ಗರಿಸಿರತಕ್ಕಂಥದ್ದು. ನಾವು ಎಲ್ಲಾ ಸೇರಿ ಇದರ ಬಗ್ಗೆ ಸಲಹೆಗಳನ್ನು, ಟೀಕೆಗಳನ್ನು ಹೇಳುವಾಗ, ಇವತ್ತು ಒಂದು ಶಕ್ತಿಯುತವಾದ ತೀರ್ಮಾನವನ್ನು "—" a bold decision" ಎಂದು ಹೇಳುತ್ತಾರಲ್ಲ ಹಾಗೆ, ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದೇನಂದರೆ, ಯಾವ ಒಂದು ವಿಚಾರಕ್ಕೆ ಮೊದಲ ಸ್ಥಾನ ವನ್ನು, ಪ್ರಾಮುಖ್ಯತೆಯನ್ನು ಕೊಡಬೇಕೋ ಆ ಒಂದು ಪ್ರಾಮುಖ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕು. ಆದರೆ ಹಿಂದಿನವರು ಆ ರೀತಿ ಮಾಡಲಿಲ್ಲ. ನಮ್ಮಲ್ಲಿ ಲಿಮಿಟೆಡ್ ಹಣವಿರಬೇಕಾದರೆ ಯಾವ ಒಂದು ಪ್ರಾಮುಖ್ಯವಾದಂಥ ವಿಷಯವಿದೆ ಆ ಬಾಬಿಗೆ ಮೊದಲು ಜಾಣ್ಮೆಯಿಂದ ಹಣವನ್ನು ಖರ್ಚು ಮಾಡ

ಬೇಕಾಗುತ್ತದೆ. ಈಗ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿ ಎಂದು ಹೇಳುತ್ತೀರಿ. ಇನ್ನು ಮನೆಗಳನ್ನು ಕಟ್ಟುವ ವಿಷಯಕ್ಕೆ ಬಂದರೆ ಅದಕ್ಕೂ ಹೆಚ್ಚು ಹಣವನ್ನು ಖರ್ಚು ಮಾಡಿ ಬಡವರಿಗೆ ಹೆಚ್ಚು ಮನೆಗಳನ್ನು ಕಟ್ಟಿಸಿಕೊಡಿ ಎಂದು ಹೇಳುತ್ತೀರಿ. ಅದೇ ರೀತಿ ರಸ್ತೆಯ ವಿಷಯ ಬಂದಾಗ, ವಿದ್ಯುಚ್ಛಕ್ತಿಯ ವಿಷಯ, ಹೀಗೆ ಯಾವುದೇ ವಿಷಯ ಚರ್ಚೆಗೆ ಬಂದಾಗ, ಎಲ್ಲಾದಕ್ಕೂ ಹೆಚ್ಚಿಗೆ ಹಣವನ್ನು ಖರ್ಚು ಮಾಡಿ ಎಂದು ಹೇಳಿದರೆ ಎಲ್ಲಾ ಕೆಲಸಗಳನ್ನೂ ಒಟ್ಟಿಗೆ ಮಾಡಿ ಪೂರೈಸಲು ಆಗುವುದಿಲ್ಲ. ಪ್ಲಾನ್ ಎನ್ನತಕ್ಕಂಥದರ ಹಿನ್ನೆಲೆಯಲ್ಲಿ ಪ್ರಿಯಾರಿಟಿಯನ್ನು ಫಿಕ್ಸ್ ಮಾಡತಕ್ಕಂಥದ್ದು ಮುಖ್ಯ. ಆದರೆ ಆ ರೀತಿ ಮಾಡದೇ ಯಾವುದೋ ಒಂದು ರೀತಿಯಲ್ಲಿ ಕೆಲಸಕಾರ್ಯಗಳು ನಡೆದುಕೊಂಡು ಬಂದಿವೆ. ಇದು ಬರೀ ಕರ್ನಾಟಕ ರಾಜ್ಯದ ವಿಚಾರವೆಂದು ಹೇಳುತ್ತಾ ಇಲ್ಲ. ನಮ್ಮ ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟಂಥ ವಿಚಾರ ಇದು ಆಗಿದೆ. ಇವತ್ತು ಹಿಂದಿನ 4 ಪಂಚವಾರ್ಷಿಕ ಯೋಜನೆಗಳಲ್ಲಿ ವ್ಯವಸಾಯಕ್ಕೇ ಆಗಲೀ, ವಿದ್ಯುಚ್ಛಕ್ತಿಗೇ ಆಗಲೀ ಅಥವಾ ಉತ್ಪಾದನೆಗೇ ಆಗಲೀ ಕೊಡಬೇಕಾದಂಥ ಪ್ರಾಮುಖ್ಯತೆಯನ್ನು ಸರಿಯಾಗಿ ಪ್ಲಾನ್ಸ್ ಪ್ರಕಾರ ಕೊಟ್ಟಿದ್ದರೆ ಭಾರತ ದೇಶದಲ್ಲಿ ಬಹಳ ಮಟ್ಟಿಗೆ ನಾವು ಈಗ ಏನು ಕೊರತೆಯನ್ನು ಅನುಭವಿಸುತ್ತಿದ್ದೇವೆ ಈ ಆಹಾರದ ಕೊರತೆಯನ್ನು ಅನುಭವಿಸುತ್ತಿದ್ದೇವೆ ಇದು ಖಂಡಿತವಾಗಿಯೂ ಇರುತ್ತಿರಲಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಆದರೆ ದುರಾದೃಷ್ಟವಶಾತ್ ಈ ಪ್ಲಾನ್‌ಗಳನ್ನು ಮಾಡತಕ್ಕಂಥ ಜನರೆಲ್ಲಾ ಈ ಅಧಿಕಾರಿಗಳೇ. ಒಂದು ಸಲ ಸ್ವಲ್ಪ ಹೆಚ್ಚಾಗಿ ಗೋಧಿ ಬೆಳೆ ಆದಾಗ 1972ನೇ ಇಸ್ವಿ ಜೂನ್ ತಿಂಗಳಿನಲ್ಲಿ ಎಂದು ಕಾಣಿಸುತ್ತದೆ ಆಗ ಅಧಿಕಾರಿಗಳು 9 ಮಿಲಿಯನ್ ಟನ್ ಫುಡ್‌ಗ್ರೇನ್ಸ್ ಕೇಂದ್ರ ಸರ್ಕಾರದ ಗೊಡೌನ್‌ಗಳಲ್ಲಿ ಸಿದ್ಧವಾಗಿದೆ, ಅದು ದೊರೆಯುತ್ತದೆಂದು ಹೇಳಿದರು, ಆಗ ಏನಾಯಿತು ಎಂಬುದು ತಮಗೆಲ್ಲಾ ಗೊತ್ತಿದೆ. ಆ ಗೋಧಿಯನ್ನು ತಿನ್ನುವ ಅಭ್ಯಾಸವನ್ನು ಎಲ್ಲರಿಗೂ ಮಾಡಿಸಿದ್ದು ಆಯಿತು. ಅದೇ 1972ನೇ ಕೊನೆ ಬರುವುದರೊಳಗಾಗಿ ಆಹಾರಧಾನ್ಯವಿಲ್ಲದೆ ಪರದಾಡತಕ್ಕಂಥ ಪರಿಸ್ಥಿತಿ ಬಂತು. ಆಗ ಎಲ್ಲಾ ಕಡೆಯೂ ಕ್ಷಾಮದ ಪರಿಸ್ಥಿತಿ ತಲೆದೋರಿತು, ಗೋಡೌನ್‌ಗಳಲ್ಲಿದ್ದಂಥ, ಕಣಜದಲ್ಲಿದ್ದಂಥ ಧಾನ್ಯವೆಲ್ಲಾ ಖರ್ಚಾಗಿ ಹೋಯಿತು. ಒಂದು ಭಾಗದಲ್ಲಿ ಕ್ಷಾಮ ಬಂದರೆ ಮತ್ತೊಂದು ಭಾಗದವರು ತಮ್ಮಲ್ಲಿದ್ದುದ್ದನ್ನು ಕೊಡಲೇಬೇಕಾಗುತ್ತದೆ, ಆ ರೀತಿ ನಮ್ಮಿಂದಲೂ ಸ್ವಲ್ಪ ಭಾಗ ಆಹಾರವನ್ನು ಕೊಟ್ಟಿದ್ದೇವೆ. ಇನ್ನು ನಮ್ಮ ದೇಶದಲ್ಲಿ ಸ್ವಲ್ಪ ಸಕ್ಕರೆಯ ಉತ್ಪನ್ನ ಜಾಸ್ತಿಯಾದರೆ ಎಲ್ಲಾ ಉತ್ಪಾದಕರೂ ಸೇರಿಕೊಂಡು ನಮ್ಮಲ್ಲಿ ಸಕ್ಕರೆಯ ಉತ್ಪಾದನೆ ಜಾಸ್ತಿಯಾಯಿತೆಂದು ಹೇಳುತ್ತಾರೆ, ಕಡಿಮೆಯಾದರೆ ನಮ್ಮಲ್ಲಿರತಕ್ಕಂಥ ಕಾರ್ಖಾನೆಗಳೆಲ್ಲಾ ನಿಂತುಹೋಗಿ ಬಿಡುತ್ತವೆ ಹೀಗೆ ಒಂದು ತರಹದಲ್ಲಿ ಕೂಗಾಡಿ ಬೊಬ್ಬೆ ಎಬ್ಬಿಸುತ್ತಾರೆ. ಇನ್ನು ಆಹಾರಧಾನ್ಯಗಳ ಉತ್ಪಾದನೆ ಜಾಸ್ತಿಯಾಗಿ ಬೆಳೆಗಳು

(ಶ್ರೀ ಡಿ. ದೇವರಾಜ್ ಅರಸ್)

ಕೆಳಕ್ಕೆ ಇಳಿದರೆ, ಬೆಲೆಗಳು ಕೆಳಕ್ಕೆ ಇಳಿದು ಹೋಯಿತು ಯಾರೂ ಕೇಳುವವರೇ ಇಲ್ಲ ಹಾಗೆಂದು ಮಾತನಾಡುತ್ತಾರೆ. ಮತ್ತೆ ಈ ಅಧಿಕಾರಿಗಳು ಮಳೆ ಬೆಳೆ ಚೆನ್ನಾಗಿ ಬಂದಾಗ, ಹೈಯಸ್ಟ್ ಲೆವಲ್‌ನಲ್ಲಿದ್ದಾಗ ಹೋಗಿ ನೋಡಿಕೊಂಡು ಬಂದು ರಿಪೋರ್ಟನ್ನು ಕೊಟ್ಟುಬಿಡುತ್ತಾರೆ. ಇದರ ಪರಿಣಾಮ ಏನಾಗಿದೆ ಎಂದರೆ ಇವತ್ತಿನ ದಿವಸ ನಮ್ಮ ದೇಶದಲ್ಲಿ ಆಹಾರ ಕೊರತೆಯಾಗುವುದಕ್ಕೆ ಕಾರಣವಾಗಿದೆ.

ಮತ್ತೊಂದು ವಿಷಯ ವಿದ್ಯುಚ್ಛಕ್ತಿಯ ಅಭಾವ ದಕ್ಷಿಣ ಇಂಡಿಯಾದಲ್ಲಿ ಇನ್ನೂ ಮುಂದೆ ಬಹಳ ಕಷ್ಟವಾಗಿರುತ್ತದೆ. ನಮ್ಮ ಕರ್ನಾಟಕದಲ್ಲಿ ಈಗಾಗಲೇ ಸ್ವಲ್ಪ ಅಭಾವವಿದೆ. ಇನ್ನು ಮುಂದೆಯೂ ಬರುವುದಿದೆ. ಕೇಂದ್ರ ಸರ್ಕಾರದವರು ದಕ್ಷಿಣ ಇಂಡಿಯಾದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಗೆ ನಾವು ಕೇವಲ ಪ್ಲಾನ್‌ನಲ್ಲಿರುವಷ್ಟೇ ದುಡ್ಡನ್ನು ಕೊಡುತ್ತೇವೆಂದು ಕೇಂದ್ರದವರು ಹೇಳುತ್ತಿದ್ದಾರೆ. ಈಗ ನಾವು ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಲು ವರ್ಲ್ಡ್ ಬ್ಯಾಂಕಿನವರಿಂದ ಸಾಲ ತರುವುದೇ ಆಗಲೀ; ಇನ್ನು ಯಾವುದೇ ವಿಧದಲ್ಲಿಯಾಗಲೀ, ಅದಕ್ಕೆ ಪೆಟ್ರೋಲಿಯಂ ಡಾಲರ್ ಯರೇನಿಯಂ ಡಾಲರ್ಸ್ ಎಂದು ಏನೇನೋ ಹೇಳುತ್ತಾರೆ. ಪೆಟ್ರೋಲಿಯಂಡಾಲರ್ ಎಂದರೆ ಅದರಿಂದ ಬರತಕ್ಕಂಥ ಹಣವಲ್ಲ ಒಂದೊಂದಕ್ಕೂ ಒಂದು ರೀತಿಯಲ್ಲಿ ಟೆಕ್ನಿಕಲ್ ಹೆಸರುಗಳನ್ನು ಕೊಡುತ್ತಿದ್ದಾರೆ. ಈ ಡಾಲರ್ಸ್ ಹಣವನ್ನು ತೆಗೆದುಕೊಂಡು ಬರಬೇಕು ಎನ್ನುವುದನ್ನು ನಾನು ಕೇಂದ್ರದಲ್ಲಿ ನಾಲ್ಕಾರು ಸಾರಿ ಹೇಳಿದ್ದೇನೆ. ಇನ್ನೂ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದು ಇನ್ನೂ ಆಗುತ್ತಾ ಇಲ್ಲ. ನಮ್ಮ ಪಕ್ಕದ ಜನ ಏನು ಹೇಳುತ್ತಾರೆ ಎನ್ನುವುದನ್ನು ಬಹಿರಂಗಪಡಿಸಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ತಾವು ನಾನು ಹೇಳುವುದನ್ನೆಲ್ಲಾ ಒಪ್ಪುತ್ತೀರಿ. ತಾವು ಸಾಲ ತರುವುದಾದರೆ ಯಾರಿಂದ ತರಬೇಕು? ಅಮೇರಿಕಾದವರಿಂದಲೇ? ಯೂರೋಪಿನವರಿಂದಲೇ? ಅಥವಾ ರಷ್ಯಾದವರಿಂದ ಸಾಲವನ್ನು ತರಬೇಕೇ? ಹೀಗೆ ಒಂದು ವಿಚಾರ ಬಂದಾಗ....

ಶ್ರೀ ಹೆಚ್. ಡಿ. ದೇವೇಗೌಡ :—ಸಾಲವನ್ನು ಯಾವ ರೀತಿ ಕೊಟ್ಟರೂ, ಯಾವ ರೀತಿಯಿಂದಲಾದರೂ ತೆಗೆದುಕೊಂಡು ಬನ್ನಿ.

ಶ್ರೀ ಡಿ. ದೇವರಾಜ್ ಅರಸ್ :— ಅದು ಅಷ್ಟು ಸುಲಭವಲ್ಲ. ಈ ವಿಷಯದ ಬಗ್ಗೆ ಪತ್ರಿಕೆಯಲ್ಲಿ ನಮ್ಮ ಅಕ್ಕಪಕ್ಕದವರು ಕೊಟ್ಟಿರತಕ್ಕಂಥ ಹೇಳಿಕೆಗಳನ್ನು ತಾವು ಓದಿರಬಹುದು. ನಾವು ನೀವು ರೈತರ ಪ್ರತಿನಿಧಿಗಳು. ನಿಜವಾಗಿಯೂ ರೈತರ ಪ್ರತಿನಿಧಿಗಳೇ ನಾವು ಅಲ್ಲವೆಂದು ನೀವು ಹೇಳಲಾರಿರಿ, ನೀವು ಅಲ್ಲವೆಂದು ನಾವು ಸಹ ಹೇಳುವುದಿಲ್ಲ. ಹೀಗಿದ್ದ ಮೇಲೆ ತಮಗೆಲ್ಲಾ ಕಷ್ಟ ಏನು

ಎಂಬುದು ಗೊತ್ತೇ ಇದೆ. ಈ ಮಡಿ ಹೆಂಗಸರು ಮಾತನಾಡಿದ ಹಾಗೆ ನಮ್ಮ ಅಕ್ಕಪಕ್ಕದವರು ಮಾತನಾಡುತ್ತಿದ್ದಾರೆ ಈ ಮಡಿ ಹೆಂಗಸರು ಅದು ಮುಟ್ಟಬೇಡ, ಇದು ಮುಟ್ಟಬೇಡ, ಅಲ್ಲಿಗೆ ಹೋಗಬೇಡ, ಇಲ್ಲಿಗೆ ಹೋಗಬೇಡ, ದೂರ ಇರು ಮಡಿ ಹಾಗೆ, ಹೀಗೆ ಅಂತ ಮಡಿ ಹೆಂಗಸರು ಹೇಗೆ ಮಾಡುತ್ತಾರೆ ಎಂಬುದು ತಮಗೆಲ್ಲಾ ಗೊತ್ತೇ ಇದೆ. ನಾವು ಯಾವ ರಾಜ್ಯದಿಂದ ಸಾಲ ತಂದರೆ ಏನು ಸೋಶಿಯಲಿಸ್ಟಿಕ್ ಕಂಟ್ರೀಸ್‌ನವರು ಎಲ್ಲಾ ರಾಜ್ಯಗಳಿಂದಲೂ ತೆಗೆದುಕೊಳ್ಳುತ್ತಿದ್ದಾರೆ. ರಷ್ಯಾದಲ್ಲಿ ಇಟಾಲಿಯನ್ಸ್ ಮೋಟಾರ್ ಕಾರುಗಳ ಮೇಲೆ ಹಾಕುತ್ತಿದ್ದಾರೆ. ನಾವು ಏನಾದರೂ ಆ ರೀತಿ ತಂದರೆ, ಕ್ಯಾಪಿಟಲಿಸ್ಟಿಕ್ ಕಂಟ್ರಿ ಅದರಿಂದ ಸಾಲ ತಂದು ಬಿಟ್ಟರು ಎಂದು ಮಾತನಾಡುತ್ತಾರೆ. ನಾವು ಅಭಿವೃದ್ಧಿ ಕಾರ್ಯಗಳಿಗೆ ಸಾಲವನ್ನು ಎಲ್ಲಿಂದ ತಂದರೇನು? ಮತ್ತೆ ಇನ್ನೊಂದು ರೀತಿಯಲ್ಲಿ ಮಾತನಾಡುತ್ತಾರೆ. ಅದು ಏನೆಂದರೆ, ಹೊರಗಡೆಯಿಂದ ಸಾಲ ತರವಂಥದನ್ನೆಲ್ಲಾ ಎಲ್ಲರಿಗೂ ಹಂಚಿಬಿಡಿ ಎಂದು ಹೇಳುತ್ತಾರೆ. ಡಿ ಎ.ಗೆ ಒಂದಿಷ್ಟು, ಸಂಬಳಕ್ಕೆ ಇತಿಷ್ಟು ಕೊಟ್ಟು ಬಿಡಿ ಎಂದು ಹೇಳುತ್ತಾರೆ. ನಾವು ಯಾವುದೇ ಒಂದು ಸ್ಕೀಂ ಗೆ ಹಣವನ್ನು ಹಾಕಿದರೆ ಅದು ಬರೀ ಎಸ್ಟ್ಯಾಬ್ಲಿಶ್‌ಮೆಂಟ್ ಚಾರ್ಜ್‌ಸ್‌ಗೆ, ಸ್ಯಾಲರಿಗೇ ಹೋಗಿ ಬಿಡುತ್ತದೆ. ಇನ್ನು ಬಾಕಿ 20-25 ಪರ್ಸೆಂಟ್ ಮಾತ್ರ ಆ ಸ್ಕೀಂ ಗಳಿಗೆ ಖರ್ಚಾಗುತ್ತದೆ. ಈ ಹಣ ಇದಕ್ಕೆಲ್ಲಾ ಖರ್ಚು ಮಾಡಬೇಕಾಗಿರುವುದು ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ನಾವು ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಕೆಲಸ ಕಾರ್ಯಗಳಿಗಾಗಿ ಹಣ ಖರ್ಚು ಮಾಡಬೇಕಾಗಿದೆ. ಕರ್ನಾಟಕಕ್ಕೆ ವರ್ಷೇ ವರ್ಷೇ 55—50 ಕೋಟಿ ರೂಪಾಯಿ ಸಾಲ ಕೊಟ್ಟರೆ, ನಾನು ತೆಗೆದು ಕೊಳ್ಳುವುದಕ್ಕೆ ತಯಾರಾಗಿದ್ದೇನೆ ನಾನು ಈ ಮಾತನ್ನು ಯಾವ ಧೈರ್ಯದಿಂದ ಹೇಳುತ್ತಿದ್ದೇನೆ ಎಂದರೆ, ನಾವು ಈ ಹಣವನ್ನು ನಮ್ಮಲ್ಲಿರತಕ್ಕ ನೀರಾವರಿ ಕಾರ್‍ಯಕ್ರಮಗಳಿಗಾಗಲೀ, ಮತ್ತು ವಿದ್ಯುಚ್ಛಕ್ತಿ ಅಥವಾ ಜಲಾಶಯ ನಿರ್ಮಾಣಗಳಿಗಾಗಲೀ ವಿನಿಯೋಗಿಸಿದ್ದೇ ಆದರೆ, ಕಾಳಿ ನದಿ ಒಂದರಿಂದಲೇ ನಮಗೆ ನೇರವಾಗಿ ಸುಮಾರು 25 ಕೋಟಿ ರೂಪಾಯಿ ಪ್ರತೀ ವರ್ಷ ಸಂಪಾದನೆ ಬರುತ್ತದೆ. ಪರೋಕ್ಷವಾಗಿ ಎನರ್ಜಿ ಮಾರಾಟ ಮಾಡುವುದರಿಂದಲೇ ಇಷ್ಟು ಹಣ ನಮಗೆ ಬರುತ್ತದೆ. ಆದುದರಿಂದ, ಇದರ ಮೇಲೆ ನಾವು 200--250 ಕೋಟಿ ರೂಪಾಯಿಗಳ ಸಾಲ ಮಾಡಲಿಕ್ಕೂ ಕೂಡ ನಮಗೆ ಅಪಧೈರ್ಯ ಬರುವುದಿಲ್ಲ ; ನಾವು ಧೈರ್ಯವನ್ನು ತೋರಿಸುತ್ತಾ ಇದ್ದೇವೆ. ಹೀಗೆ ನಮ್ಮ ಮನೋಭಾವನೆ ಬದಲಾವಣೆ ಆಗದೇ ಹೋದರೆ, ನಮ್ಮ ಕರ್ನಾಟಕ ರಾಜ್ಯದಲ್ಲೇ ಅಲ್ಲ, ಇಡೀ ನಮ್ಮ ಭಾರತ ದೇಶದಲ್ಲಿ ಇರತಕ್ಕ ದೊಡ್ಡ ದೊಡ್ಡ ಯೋಜನೆಗಳನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಹೊರ ದೇಶಗಳಿಂದ ಕೈ ಒಡ್ಡಿಕೊಂಡು ಸಾಲ ತರುತ್ತೇವೆ, ಮತ್ತೊಂದು ತರುತ್ತೇವೆ ಎಂದರೆ ಹೇಗೆ ಆಗುತ್ತದೆ? ಇವತ್ತಿನ ದಿವಸ ನಮ್ಮ ದೇಶದಲ್ಲಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ, ವ್ಯವಸಾಯವೂ ಕೂಡ ಅಭಿವೃದ್ಧಿ ಆಗಬೇಕಾಗಿದೆ. ನಾನು ಹಿಂದೆ ಒಂದು

ಸಂದರ್ಭದಲ್ಲಿ ಹೇಳಿದ ಹಾಗೆ ಒಂದೊಂದು ಎಕರೆ ನೀರಾವರಿ ಜಮೀನು ಜಾಸ್ತಿ ಆದರೂ ಕೂಡ, ಪ್ರತಿಯೊಂದು ಎಕರೆಯಲ್ಲಿ 3—4 ಜನ ಉದ್ಯೋಗ ಮಾಡು ವುದಕ್ಕೆ ವ್ಯವಸ್ಥೆಯಾಗುತ್ತದೆ. ಅದೇ ರೀತಿಯಲ್ಲಿ, ನಾವು ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡಿದರೆ, ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಕೈಗಾರಿಕೆಗಳನ್ನು ನಡೆಸ ಬಹುದು. ; ಹೆಚ್ಚು ಹೆಚ್ಚು ಪಂಪ್‌ಸೆಟ್ಟುಗಳನ್ನು ಹಾಕಬಹುದು. ಈ ರೀತಿ ಮಾಡಿದರೆ, ಇವತ್ತಿನ ದಿವಸ ನಮ್ಮ ದೇಶದಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲಿಕ್ಕೆ ನಿಜವಾಗಿಯೂ ಸಹಾಯವಾಗುತ್ತದೆ. ಇವತ್ತಿನ ದಿವಸ ನಾವು ಕೈಗಾರಿಕೆ ಮತ್ತು ವ್ಯವಸಾಯ—ಈ ಎರಡನ್ನು ಬಿಟ್ಟು, ಇನ್ನು ಯಾವುದರಿಂದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುತ್ತದೆ ? ಉಪಾಧ್ಯಾಯರನ್ನು ಹೆಚ್ಚು ಮಾಡುತ್ತಾ ಹೋದರೆ, ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆಯೇ ? ಈ ಒಂದು ದೃಷ್ಟಿಯಿಂದ, ತಾವು ಕೂಡ ಈ ಯೋಜನೆಗಳಿಗೆ ಹೆಚ್ಚು ಹಣ ಒದಗಿಸ ಬೇಕೆಂದು ಎಲ್ಲರೂ ಒಪ್ಪಿದ್ದೀರಿ. ಸಾಕಷ್ಟು ಹಣ ಒದಗಿಸುತ್ತಿಲ್ಲ ಎಂದು ಹೇಳುತ್ತಾ ಇದ್ದೀರಿ. ಆದರೆ, ಇದರಲ್ಲಿ ನಮ್ಮ ಪ್ರಯತ್ನ ಏನು ಎಂಬುದನ್ನು ತಾವು ಎಲ್ಲಗೂ ದಯಮಾಡಿ ತಿಳಿಯಬೇಕು. ಇದರಲ್ಲಿ ನಾವು ಶಕ್ತಿ ಮೀರಿ ಪ್ರಯತ್ನ ಮಾಡುತ್ತಾ ಇದ್ದೇವೆ. ಇಷ್ಟು ಧೈರ್ಯ ಮಾಡಿ 155 ಕೋಟಿ ರೂಪಾಯಿಗಳ ಪೈಕಿ ಆ್ಯನುಯಲ್ ಪ್ಲಾನಿಂಗ್‌ನಲ್ಲಿ 87 ಕೋಟಿ ರೂಪಾಯಿವರೆಗೆ ವಿದ್ಯುಚ್ಛಕ್ತಿ ಮತ್ತು ನೀರಾವರಿ ಈ ಎರಡಕ್ಕೆ ಕೈಹಾಕಿ, ಇಷ್ಟೊಂದು ಹಣವನ್ನು ಒದಗಿಸಲಿಕ್ಕೆ ನಾವು ಪ್ರಯತ್ನ ಪಟ್ಟಿದ್ದೇವೆ. ಸಾಲ ತರತಕ್ಕದರಲ್ಲಿ ಕೇಂದ್ರ ಸರಕಾರದವರು ಏನು ಮಾಡುತ್ತಾ ಇದ್ದಾರೆ ಎಂದು ತಾವು ಕೇಳಿದಿರಿ. ಕೇಂದ್ರ ಸರಕಾರದಿಂದ ಏನೂ ಸಹಾಯವಾಗುವುದಿಲ್ಲ ಎನ್ನತಕ್ಕ ಒಂದು ತಿಳುವಳಿಕೆ ಇನ್ನೂ ನನಗೆ ಬಂದಿಲ್ಲ. ಇದರ ಬಗ್ಗೆ ನಾನು ಡಿಸ್‌ಅಪಾಯಿಂಟ್ ಆಗಿಲ್ಲ. ನಾನು ಇದರ ಬಗ್ಗೆ ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಗಳೊಡನೆ ಪ್ರಸ್ತಾಪ ಮಾಡಿದ್ದೇನೆ. ಅವರು ವಿಶ್ವ ಬ್ಯಾಂಕಿನವರೊಡನೆ ಪ್ರಸ್ತಾಪ ಮಾಡಿದ್ದಾರೆ. ವಿಶ್ವಬ್ಯಾಂಕಿನ ಟೀಮಿನವರು ಇಲ್ಲಿ ಬಂದು ನೋಡಿ ಹೋಗಿದ್ದಾರೆ; ಪುನಃ ಬರುವವರು ಇದ್ದಾರೆ ನಮ್ಮ ನೀರಾವರಿ ಯೋಜನೆಗಳ ಬಗ್ಗೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಕೊಡಿ ಎಂದು ಕೇಳಿದ್ದಾರೆ. ಅದರೆ, ಇದರಲ್ಲಿ ನಮಗೂ ಅವರಿಗೂ ಇರುವ ಸ್ವಲ್ಪ ವ್ಯತ್ಯಾಸ ಏನು ಎಂದರೆ, ನಮಗೆ ಏನು ಸಾಲ ಕೊಟ್ಟರೂ, ಅದನ್ನು ಪ್ಲಾನ್ಡ್ ಪ್ರೋಗ್ರಾಂ ಒಳಗೇ ಕೊಡುತ್ತೇವೆ ಎಂದು ಅವರು ಹೇಳುತ್ತಾರೆ; ಆದರೆ, ನಾವು ಹಾಗೆ ಕೊಟ್ಟರೆ ಪ್ರಯೋಜನ ಏನು, ಔಟ್‌ಸೈಡ್ ದಿ ಪ್ಲಾನ್ ನಮಗೆ ಸಾಲ ಕೊಡಿ ಎಂದು ಕೇಳುತ್ತಾ ಇದ್ದೇವೆ.

ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಉದಾಸೀನ ತಾಳಿದ್ದೀರಿ ಎಂದು ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಇದರಲ್ಲಿ ಉತ್ತರ–ದಕ್ಷಿಣ ಎಂದು ಪುನಃ ಹೇಳುವುದು ಬೇಡ. ಉತ್ತರ ಕರ್ನಾಟಕದಿಂದ ಬಂದ ಮಾನ್ಯ-

ಸದಸ್ಯರು, ಮತ್ತು ಕೃಷ್ಣಾ ಯೋಜನೆ ಬಗ್ಗೆ ಹೆಚ್ಚು ಕಾತುರ ಇರುವವರು, ಈ ವರ್ಷ ಇದಕ್ಕೆ ಎರಡು ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದೀರಿ; ಆ ಯೋಜನೆ ಬಗ್ಗೆ ಉದಾಸೀನ ಮಾಡಿದ್ದೀರಿ ಮತ್ತು ಕಾವೇರಿ ಜಲಾಶಯಕ್ಕೆ ಹೆಚ್ಚು ಹಣ ಕೊಟ್ಟಿದ್ದೀರಿ ಎಂದು ಹೇಳಿದರು. ಸ್ವಲ್ಪ ಕಣ್ಣು ತೆರೆದು ನೋಡಿ. ನಾವು ಹನ್ನೊಂದು ಕೋಟಿ ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ :—ದೇಶವು ಪ್ರಗತಿಯಾಗುವುದು ಅಗತ್ಯವಾಗಿರುವುದರಿಂದ, ನ್ಯಾಷನಲ್ ಲೋನ್ ಎಂದು ಎತ್ತುವುದಕ್ಕೆ ಏನಾದರೂ ಆಗುತ್ತದೆಯೇ ?

ಶ್ರೀ ಡಿ ದೇವರಾಜ್ ಅರಸ್ :—ನಮಗೆ ಅವಕಾಶ ಸಿಕ್ಕಿದರೆ ಇದರ ಬಗ್ಗೆ ಮಾಡಬಹುದು. ಆದರೆ, ಅದಕ್ಕೂ ಕೂಡ ಕೇಂದ್ರ ಸರಕಾರದ ಅಪ್ಪಣೆ ಬೇಕಾಗಿದೆ.

ಈಗ ಕೆಲವು ಯೋಜನೆಗಳಿಗೆ ಹಣ ಒದಗಿಸುತ್ತಿಲ್ಲ ಎಂದು ಭಾವಿಸುವುದು ಬೇಡ. ಕಾವೇರಿ ವ್ಯಾಲಿಗೆ ಕೊಟ್ಟಿದ್ದೀರಿ, ಆದರೆ ಇಲ್ಲಿ ಕೊಟ್ಟಿಲ್ಲ ಎಂದು ಹೇಳುವುದು ಸರಿಯಾದ ಮಾತಲ್ಲ. ಇನ್ನು ಮೇಲಾದರೂ, ಈ ಸದನದಲ್ಲಿ ಬೇಧ ಭಾವ ಇಟ್ಟುಕೊಂಡು ಮಾತನಾಡುವುದು ಸರಿಯಲ್ಲ; ಸೂಕ್ತವಲ್ಲ ಎಂದು ಮಾನ್ಯ ಸದಸ್ಯರಲ್ಲಿ ಹೇಳುತ್ತೇನೆ. ನಮಗೆ ಕೃಷ್ಣಾ ಯೋಜನೆಯ ಕೆಲಸವು ಎಷ್ಟು ಮುಖ್ಯವಾದುದೋ, ಅಷ್ಟೇ ಕಾವೇರಿ ಯೋಜನೆಯೂ ಕೂಡ ನಮಗೆ ಮುಖ್ಯವಾದುದಾಗಿದೆ. ಮಾನ್ಯ ದೇವೇಗೌಡರು ಮಾತನಾಡುತ್ತಾ, ಸಾಧ್ಯವಾದಷ್ಟು ಈ ಜಲಾಶಯಗಳಲ್ಲಿ ನೀರನ್ನು ಬೇಗ ಬೇಗ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದರು. ನಾವು ಏತಕ್ಕೆ ನೀರು ನಿಲ್ಲಿಸಬೇಕಾಗಿದೆ ಎಂದರೆ, ಅದಕ್ಕೆ ಬೇರೆ ಬೇರೆ ಕಾರಣಗಳು ಇವೆ ಇದರ ಬಗ್ಗೆ ವ್ಯಾಖ್ಯಾನ ಮಾಡಬೇಕಾದ ಅಗತ್ಯವಿಲ್ಲ. 1976ನೇ ಸಾಲಿನಲ್ಲಿ ಹೇಮಾವತಿ ನೀರನ್ನು ನಿಲ್ಲಿಸಬೇಕಾದರೆ, ಸುಮಾರು ಐದೂವರೆ ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ ಎಂದು ಹೇಳಿದರು. ಹೀಗೆ ಒಂದು ಕಡೆ ನೀರು ನಿಲ್ಲಿಸಬೇಕು ಎಂದು ಹೇಳಿ, ಇನ್ನೊಂದು ಕಡೆ ಜಾಸ್ತಿ ಖರ್ಚು ಮಾಡಬೇಡಿ ಎಂದು ಹೇಳಿದರೆ ಹೇಗೆ? ಹೇಮಾವತಿಯೇನು, ಮಾನ್ಯ ದೇವೇಗೌಡರ ಕ್ಷೇತ್ರವಲ್ಲ, ಅಥವಾ ಮಾನ್ಯ ಶ್ರೀಕಂಠಯ್ಯನವರ ಕ್ಷೇತ್ರವಲ್ಲ. ಇವತ್ತಿನ ದಿವಸ ನಾವು ಹಾರಂಗಿ ಜಲಾಶಯದಲ್ಲಿ ನೀರನ್ನು ನಿಲ್ಲಿಸಬೇಕಾಗಿದೆ. ಆದುದರಿಂದ ಇಷ್ಟೊಂದು ದುಡ್ಡು ಖರ್ಚು ಮಾಡಿದರೂ ನಾವು ನೀರನ್ನು ನಿಲ್ಲಿಸುವುದಕ್ಕೆ ಸಾಧ್ಯ ಎಂಬುದನ್ನು ತಿಳಿದು, ನೀರು ನಿಲ್ಲಿಸಲಿಕ್ಕೆ ಹೊರಟಿದ್ದೇವೆ. ಮತ್ತು, ಕಾಳಿ ನದಿ ಯೋಜನೆಗೆ ಹಣ ಒದಗಿಸಲಿಕ್ಕೆ ನಾವು ಸತತ ಪ್ರಯತ್ನ ನಡೆಸುತ್ತಾ ಇದ್ದೇವೆ. ಈಗ ನನ್ನಲ್ಲಿ ಒಂದು ಆಶಾಭಾವನೆ ಏನಿದೆ ಎಂದರೆ, 25 ಕೋಟಿ

(ಶ್ರೀ ಡಿ. ದೇವರಾಜ ಅರಸ್)

ರೂಪಾಯಿ ಮೇಲೆ ಸುಮಾರು 39 ಕೋಟಿ ರೂಪಾಯಿ ವರೆಗೆ 1975–76ನೇ ಸಾಲಿಗೆ ಖರ್ಚು ಮಾಡಬೇಕೆಂದು ಇದ್ದೇವೆ. ಆದರೆ; ನಮ್ಮ ಬಡ್ಜೆಟ್‌ನಲ್ಲಿ ಇದಕ್ಕಾಗಿ 25 ಕೋಟಿ ರೂಪಾಯಿ ಇಟ್ಟಿದ್ದೇವೆ. ಆದರೆ, ನಮಗೆ ಇನ್ನೂ 13-14 ಕೋಟಿ ರೂಪಾಯಿ ಬೇಕಾಗುತ್ತದೆ. ಈ 13-14 ಕೋಟಿ ರೂಪಾಯಿ ಗಳನ್ನು ಪಡೆದುಕೊಳ್ಳುವುದರ ಬಗ್ಗೆ, ನಾವು ಪ್ಲಾನಿಂಗ್ ಕಮಿಷನ್ ಮತ್ತು ಕೇಂದ್ರ ಸರಕಾರದ ಮುಂದೆ ನೀವು ಎಲ್ಲಾದರೂ ನಮಗೆ ಸಾಲ ಕೊಡಲೇ ಬೇಕು, ಇಲ್ಲದಿದ್ದರೆ, ನಾವು ಬ್ಯಾಂಕುಗಳಲ್ಲಿ ಸಾಲ ಎತ್ತುವುದಕ್ಕೆ ನಮಗೆ ಅನುಮತಿ ಕೊಡಿ ಎಂದು ಕೇಳಿದ್ದೇವೆ. ಈ ಎರಡರಲ್ಲಿ ಒಂದನ್ನಾದರೂ ಮಾಡಲೇಬೇಕು ಎಂದು ಒತ್ತಾಯ ಮಾಡುತ್ತಾ ಇದ್ದೇವೆ. ಇದು ಕೇಂದ್ರ ಸರಕಾರದ ಗಮನ ದಲ್ಲಿದೆ ಎಂಬುದು ನನ್ನ ತಿಳುವಳಿಕೆ ಇದರಲ್ಲಿ ಒಂದಲ್ಲ ಒಂದು ನಮ್ಮ ಸಹಾಯಕ್ಕೆ ಬರಲೇಬೇಕು: ಬರುತ್ತದೆ ಎಂದು ನನಗೆ ನಂಬಿಕೆ ಇದೆ.

ಹೇಮಾವತಿ ಬಲದಂಡೆ ನಾಲೆ ವಿಚಾರವಾಗಿ ಮಾನ್ಯ ದೇವೇಗೌಡ ಅವರು ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಸ್ವಲ್ಪ ಹೆಚ್ಚು ಹಣ ಖರ್ಚು ಮಾಡಿ, ಸದ್ಯದಲ್ಲಿ ಅಲ್ಲಿ ಎಷ್ಟು ಮಟ್ಟಿಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಇದೆ ಎಂದು ಕಂಡುಬಂದರೆ, ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆ. ತಾವೂ ಒಂದು ಸಾರಿ ಆ ಕಡೆ ಬಂದಾಗ, ತಮ್ಮೆಲ್ಲರನ್ನೂ ಕರೆಸಿ ಮಾತನಾಡುತ್ತೇನೆ. ಅಲ್ಪಸ್ವಲ್ಪ ಹಣದಿಂದ ತಕ್ಷಣ ಫಲ ಬರುವುದಾದರೆ I will try my level best to see that much of work is taken up, and if it is not possible let us think of getting water to the area which is already under command.

ಕೃಷ್ಣಾ ಟ್ರಿಬ್ಯುನಲ್ ಬಗ್ಗೆ ತಾವು ಒಂದು ಮಾತು ಹೇಳಿದಿರಿ.

ಶ್ರೀ ಹೆಚ್. ಬಿ. ಕೆಂಚೇಗೌಡ:—ಕಳೆದ ವರ್ಷ 1973ರಲ್ಲಿ ಟೆಂಡರ್ ಬಂದಿದ್ದು, ಅದು ಇದುವರೆಗೂ ಅಕ್ಸೆಪ್ಟ್ ಆಗಿಲ್ಲ ಇವರಿಂದಾಗಿ, ಕೃಷ್ಣಾ ಬಲ ದಂಡೆಯಲ್ಲಿ ಕೆಲಸ ಮಾಡುವುದಕ್ಕೆ ಆಗಿಲ್ಲ.

ಶ್ರೀ ಡಿ. ದೇವರಾಜ ಅರಸ್:— ಈಗ ನಾಲೆಗಳನ್ನು ತೆಗೆಯುವುದಕ್ಕೆ ದುಡ್ಡು ಇಲ್ಲ. ಇನ್ನು ಕೃಷ್ಣಾ ಟ್ರಿಬ್ಯುನಲ್ ವಿಚಾರವಾಗಿ, ಸಂಪೂರ್ಣವಾಗಿ ಸರಕಾರದ ನಿಲುವು, ಅಭಿಪ್ರಾಯಗಳಿಗೆ ತಾವೆಲ್ಲಾ ಒಮ್ಮತದಿಂದ ಒಪ್ಪಿದ್ದೀರಿ. ಈ ಸದನದಲ್ಲಿ ಮಾನ್ಯ ಸದಸ್ಯರಿಗೆ ನಾನು ಅರಿಕೆ ಮಾಡುವುದೇನೆಂದರೆ, ತಾವು

ಕೊಟ್ಟಂಥ ಬೆಂಬಲವನ್ನು ನಾನು ದುರುಪಯೋಗ ಮಾಡಿದ್ದೇನೆ ಎಂದು ತಾವು ತಿಳಿಯಬಾರದು; ಅಥವಾ ಪ್ರಿವಿಲೇಜ್ ಆಗುತ್ತದೆ ಎಂದು ಮಾನ್ಯ ಸ್ನೇಹಿತರೊಬ್ಬರು ಹೇಳಿದ ಹಾಗೆ ಇತ್ತು. ಇದು ಯಾವ ಪ್ರಿವಿಲೇಜ್ ? ತಮ್ಮ ಬೆಂಬಲವನ್ನು ನಾನು ದೇಶದ ಹಿತಕ್ಕೆ ವಿರುದ್ಧವಾಗಿ ಉಪಯೋಗ ಮಾಡಿದ್ದೇನೆಯೇ? ಅದರ ಬಗ್ಗೆ ತಮಗೆ ಏನಾದರೂ ಅನುಮಾನ ಬಂದಿದ್ದರೆ, ಅದನ್ನು ದಯಮಾಡಿ ದೂರು ಮಾಡಿ. ಇಷ್ಟಾದರೂ ತಾವು ಒಪ್ಪುತ್ತೀರಿ ಎಂದು ನನಗೆ ಅನ್ನಿಸುತ್ತದೆ. ಇದರ ವಿಷಯದಲ್ಲಿ ದೇಶದ ಹಿತ ಕಾಪಾಡುವುದಕ್ಕೆ ತಮಗೆ ಎಷ್ಟು ಕುತೂಹಲ ಇದೆ, ಅಷ್ಟೇ ನನಗೂ ಇದೆ. ನನಗೇನೂ ಇದರ ಬಗ್ಗೆ ಕಡಿಮೆ ಕುತೂಹಲ ಇಲ್ಲ. ಕೃಷ್ಣಾ ಟ್ರಿಬ್ಯುನಲ್ ಮುಂದೆ ಈ ಸಂದರ್ಭದಲ್ಲಿ ಹೋಗತಕ್ಕದ್ದು ಸೂಕ್ತ ಎಂದು ಗಮನದಲ್ಲಿಟ್ಟುಕೊಂಡು ವ್ಯವಹರಿಸಿದ್ದೇವೆ. ಈಗಾಗಲೇ ಟ್ರಿಬ್ಯುನಲ್ ಕೆಲಸ ಮಾಡುತ್ತಾ ಇದೆ.

ತಮಗೂ ಗೊತ್ತಿದೆ, ಕೃಷ್ಣ ಟ್ರಿಬ್ಯೂನಲ್ ಈಗಾಗಲೇ ಕೆಲಸ ಮಾಡುತ್ತಿದೆ. ನಮ್ಮ ಪರವಾಗಿ ಅಲ್ಲಿ ಲಾಯರ್ಸ್ ನಮ್ಮ ವಾದವನ್ನು ಇಡುತ್ತಿದ್ದಾರೆ. ಇನ್ನೊಂದು ಸಂತೋಷದ ಸಮಾಚಾರ ಏನೆಂದರೆ ಸಹಾನುಭೂತಿಯಿಂದ ಟ್ರಿಬ್ಯೂನಲ್ ನಮ್ಮ ವಾದವನ್ನು ಕೇಳುತ್ತಾ ಇದ್ದಾರೆ; ಲಾಲಿಸಿ ಕೇಳುತ್ತಿದ್ದಾರೆ ಎನ್ನುವ ವರ್ತಮಾನ ಬಂದಿದೆ. ಇದಕ್ಕಿಂತ ಹೆಚ್ಚು ಇನ್ನೇನೂ ಹೇಳವುದು ಸೂಕ್ತವಲ್ಲ ಮತ್ತು ನ್ಯಾಯವು ಅಲ್ಲ, ಇನ್ನೂ ತಾವು ಒಪ್ಪುತ್ತೀರಿ. ಆದುದರಿಂದ ಸರ್ಕಾರ ತಿಳಿಯದೇ ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವ ಅಭಿಪ್ರಾಯ ತಮ್ಮಲ್ಲಿ ಇದ್ದರೆ ಅದನ್ನು ದಯಮಾಡಿ ದೂರ ಮಾಡಬೇಕು, ಅದು ಸರಿಯಲ್ಲ ಅನ್ನುವುದನ್ನು ಅಷ್ಟು ಮಾತ್ರ ಹೇಳುತ್ತೇನೆ.

ಅಧ್ಯಕ್ಷರೇ, ಇನ್ನು ನಮ್ಮ ಹಾಸನದ ವಾಟೆಹೊಳೆ ಪ್ರಾಜೆಕ್ಟ್ ಬಗ್ಗೆ ಶ್ರೀ ರುದ್ರಪ್ಪನವರು ಹೇಳಿದರು, ಅದನ್ನು ಈ ಸಾರಿ ತೆಗೆದಕೊಳ್ಳುತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಈ ಸಲದ ಬಡ್ಜೆಟ್ಟಿನಲ್ಲಿ ಅದನ್ನು ಸೇರಿಸಿದ್ದೇವೆ ಮತ್ತು ಇನ್ನು ಆರ್ಕಾವತಿ ಪ್ರಾಜೆಕ್ಟನ್ನೂ ಕೂಡ ನಾನು ತೆಗೆದುಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ಅಪ್ರೂವಲ್ ಆಗಬೇಕಾಗಿದೆ. ಇನ್ನು ಬಳ್ಳಾರಿ ಹತ್ತಿರ ರಾಯನದುರ್ಗ ಪ್ರಾಜೆಕ್ಟನ್ನೂ ಕೂಡ ಈ ಸಾರಿ ತೆಗೆದುಕೊಳ್ಳಬೇಕೆಂದಿದ್ದೇವೆ. ಅದಕ್ಕೆ ಇನ್ನೂ ಅಪ್ರೂವಲ್ ಬಂದಿಲ್ಲ. ಇನ್ನು ಯಗಚಿ ಬಗ್ಗೆ ಹೇಳುವುದಾದರೆ ಅದು ಟೆಕ್ನಿಕಲ್ ಕಾಂಟ್ರವರ್ಸಿ ಇರುವುದರಿಂದ ಅದನ್ನು ಸೇರಿಸಿಲ್ಲ. ಇನ್ನು ಶ್ರೀಮಾನ್ ಕೃಷ್ಣಪ್ಪನವರು, ಕಂಚಪ್ಪಗೌಡರು ಈ ಹೇಮಾವತಿಗೆ 10 ಕೋಟಿ ರೂಪಾಯಿ ಪ್ರೊವೈಡ್ ಮಾಡಿ ಎಂದು ಹೇಳಿದ್ದಾರೆ. ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾಗ ಹಾಸನಕ್ಕೆ ನೀರು ಕೊಡಬೇಕು ಇಲ್ಲದಿದ್ದರೆ ಬಿಡುವುದಿಲ್ಲ ಎಂದು ಹೇಳಿದರು.

(ಶ್ರೀ ಡಿ. ದೇವರಾಜ ಅರಸ್)

ಯಾರೇ ಆಗಲಿ ಹಾಸನದವರೇ ಆಗಲಿ, ಮಂಡ್ಯದವರೇ ಆಗಲಿ ಅದಕ್ಕಾಗಿ ಒಬ್ಬರಿಗೊಬ್ಬರಿಗೆ ಜಗಳವಾಡುವುದು ಬೇಡ ನಾಗಮಂಗಲಕ್ಕೂ ನೀರು ಸಿಕ್ಕುತ್ತದೆ. ಮಂಡ್ಯಕ್ಕೂ ನೀರು ಸಿಕ್ಕುತ್ತದೆ, ತುವಕೂರಿಗೂ ನೀರು ಸಿಕ್ಕುತ್ತದೆ. ಆದರೆ ಅದನ್ನು ಉಪಯೋಗ ಮಾಡುವ ವಿಧಾನ ಬೇಕು ; ಮತ್ತು ಹಣ ಬೇಕು. ಅದಕ್ಕೆ ನನ್ನ ಅಭಿಪ್ರಾಯ ಹೇಳುವುದಾದರೆ ಅದಕ್ಕಾಗಿ ಒಬ್ಬರಿಗೊಬ್ಬರು ಅನುಮಾನ ಪಟ್ಟುಕೊಳ್ಳುವುದು ಬೇಡ. ನಾನು ಮೊದಲೇ ಹೇಳಿದ ಹಾಗೆ ನಾವು ಇನ್ನೂ 19ನೇ ಶತಮಾನದಲ್ಲಿರುವಂತೆ ಇರುವುದು ಬೇಡ, 20ನೇ ಶತಮಾನದಲ್ಲಿ ನೀರಿನ ಉಪಯೋಗ ಯಾವರೀತಿ ಮಾಡಬೇಕು ಎನ್ನುವುದರ ಕಡೆ ಬೇಕಾದಷ್ಟು ಮುಂದುವರೆದಿದೆ. ಇದಕ್ಕಾಗಿ ಟೆಕ್ನಾಲಜಿ ಮತ್ತು ವಿಜ್ಞಾನಶಾಸ್ತ್ರ ಬಹಳ ಮುಂದುವರೆದಿದೆ. ಹಿಂದಿನ ಕಾಲದಲ್ಲಿ ಒಂದು ಬಾವಿಯಿಂದ 4 ಎಕರೆಗೆ ಮಾತ್ರ ನೀರಾವರಿಯಾಗುತ್ತಿತ್ತು. ಈವೊತ್ತು ಸ್ಪ್ರಿಂಕ್ಲರ್ ಇರ್ರಿಗೇಷನ್‌ನಿಂದ ಮಿನಿಮಮ್ 12 ಎಕರೆ ನೀರಾವರಿ ಮಾಡಬಹುದು. ಮೊದಲು 4 ಎಕರೆಗೆ ನೀರನ್ನು ಎಷ್ಟು ಉಪಯೋಗಿಸುತ್ತಿದ್ದೇವೋ ಅಷ್ಟೇ ನೀರಿನಲ್ಲಿ ಇಂದು 12 ಎಕರೆ ನೀರಾವರಿಯಾಗುತ್ತದೆ. ಈಗಿನ ಕಾಲದಲ್ಲಿ ಇಷ್ಟೊಂದು ಡೆವಲಪ್‌ಮೆಂಟ್ ಇರುವಾಗ ಹಳೇ ಕಾಲದಲ್ಲೇ ನಡೆದಂಥ ಓಬೀರಾಯನ ಕಾಲದಲ್ಲಿ ನಡೆದಂಥ ಮಾತನ್ನು ತೆಗೆದುಕೊಂಡು ಮಾತನಾಡಿದರೆ ಈಗ ಏನು ಪ್ರಯೋಜನ? ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ವ್ಯವಸಾಯ ತಜ್ಞರು ಏನು ಹೇಳುತ್ತಾರೆ ಅದನ್ನು ನೋಡಿ. ವ್ಯವಸಾಯದಲ್ಲಿ ಕುತೂಹಲ ಇರುವವರು ಅವರ ಹತ್ತಿರ ಹೋಗಿ ಮಾತನಾಡಿದರೆ ಗೊತ್ತಾಗುತ್ತದೆ. ಈಗ ಏನಾಗಿದೆ ಎಂದರೆ ಗದ್ದೆಗೆ ಉಪಯೋಗಿಸುವ ನೀರಿನಲ್ಲಿ ಕನಿಷ್ಟ ಪಕ್ಷ 2/3 ಭಾಗದಷ್ಟು ನೀರು ವಿನಾಕಾರಣ ಹೊರಗಡೆ ಹೋಗುತ್ತಿದೆ: ಭತ್ತ ಬೆಳೆಯುವುದಕ್ಕೆ ಆ ನೀರು ಅಗತ್ಯ ಇಲ್ಲ ಎಂದು ವ್ಯವಸಾಯ ವಿಜ್ಞಾನಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆ ಹೊರಗಡೆ ಹೋಗುವ ನೀರಿನಲ್ಲಿ ನೂರಾರು ಎಕರೆಯಷ್ಟು ಬೆಳೆಯಬಹುದು ಎಂದು ಹೇಳಿದ್ದಾರೆ. ಆ ಒಂದು ತಿಳುವಳಿಕೆ ಬಂದರೆ ಈ ಹೇಮಾವತಿ ನೀರನ್ನು ಎಷ್ಟು ದೂರ ತೆಗೆದುಕೊಂಡು ಹೋಗಬಹುದೋ ಅಷ್ಟು ದೂರ ತೆಗೆದುಕೊಂಡು ಹೋಗುತ್ತೇವೆ. ಆದರೆ ಈ ಇರ್ರಿಗೇಷನ್ ಪ್ರಾಬ್ಲೆಮ್ಸ್‌ಗೆ ಕೆಲವು ತೊಂದರೆಗಳು ಇವೆ. ಸುಮ್ಮನೆ ಹಾಗೆಯೇ ಕೂತಿದ್ದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಒಂದು ಕಾಲದಲ್ಲಿ ಭತ್ತ ಬೆಳೆದರೆ ದುಡ್ಡು ಬರುತ್ತದೆ ಎಂದು ಹೇಳುತ್ತಿದ್ದರು, ಆಮೇಲೆ ಹತ್ತಿ ಬೆಳೆದರೆ ದುಡ್ಡು ಬರುತ್ತದೆ ಎಂದು ಹೇಳುತ್ತಿದ್ದರು, ಈಗ ಕಬ್ಬು ಬೆಳೆದರೆ ದುಡ್ಡು ಬರುತ್ತದೆ ಎಂದು ಹೇಳುತ್ತಾರೆ. ಮತ್ತು ಹಿಂದೆ ಹುರುಳಿ ಯಾವುದಕ್ಕೂ ಪ್ರಯೋಜನ ಇಲ್ಲ ಎಂದು ಹುರುಳಿಯನ್ನು ಬೆಳೆಯುತ್ತಿರಲಿಲ್ಲ, ಈಗ ಹುರುಳಿ ಬೆಳೆಯೇ ಭತ್ತಕ್ಕಿಂತ ಜಾಸ್ತಿಯಾಗಿದೆ. ಯಾವುದೋ ಕಾಲದ ಚಿಂತೆ ಇಟ್ಟುಕೊಂಡು ಸಂಶಯ

ಏಡುವುದು ಬೇಡ. ಈವಾಗ ಯಾವ ಸೆವಿಕ್ರಾಪ್ಸ್ ಬೆಳೆದರೂ ಕೂಡ ದುಡ್ಡು ಬರುತ್ತದೆ, ಆದುದರಿಂದ ಹಿಂದಿನ ಮಾತು ಬೇಡ.

ಇನ್ನು ಏರಿಯಾ ಡೆವಲಪ್‌ಮೆಂಟ್ ವಿಚಾರದಲ್ಲಿ ಆರ್. ಎಸ್. ಪಾಟೀಲರು ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ಏರಿಯಾ ಡೆವಲಪ್‌ಮೆಂಟ್‌ಗೋಸ್ಕರ ವಾಗಿ ಮಲಪ್ರಭಾ, ಘಟಪ್ರಭಾ ಮತ್ತು ಹೇಮಾವತಿ ಮತ್ತು ಕಾವೇರಿ ಜಲಾಶಯನ, ಈ ಮೂರು ಕಡೆಯೂ ಮುಖ್ಯ ಅಧಿಕಾರಿಗಳನ್ನು ಇಟ್ಟು ಕಮ್ಯಾಂಡೆಡ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ಗಳನ್ನು ಮಾಡಿದ್ದೇವೆ. ಎಲ್ಲಾ ರಾಜ್ಯಗಳಿಗಿಂತಲೂ ನಾವೇ ಈ ಬೋರ್ಡನ್ನು ಪ್ರಥಮತಃ ಮಾಡಿರುವುದು : ಇನ್ನು ಯಾರೂ ಮಾಡಿಲ್ಲ. ಇದನ್ನು ಕೇಂದ್ರ ಸರ್ಕಾರದವರೂ ಮೆಚ್ಚಿದ್ದಾರೆ ಮತ್ತು ವರ್ಲ್ಡ್ ಬ್ಯಾಂಕ್‌ನವರೂ ಮೆಚ್ಚಿದ್ದಾರೆ. ಈ 3–4 ಪ್ರಾಜೆಕ್ಟ್‌ಗಳಿಗೂ ರಿಪೋರ್ಟ್ ತಯಾರು ಮಾಡಿ ಎಂದು ಹೇಳಿದ್ದೇವೆ. ರಿಪೋರ್ಟ್ ತಯಾರಾಗುತ್ತಾ ಇದೆ. ಕೇಂದ್ರ ಸರ್ಕಾರದ ಮೂಲಕ ವರ್ಲ್ಡ್ ಬ್ಯಾಂಕ್‌ಗೆ ಈ ರಿಪೋರ್ಟನ್ನು ಕಳುಹಿಸುತ್ತೇವೆ. ಅವರಿಂದ ಆದಷ್ಟು ಧನ ಸಹಾಯವನ್ನು ನಿರೀಕ್ಷಿಸುತ್ತೇವೆ. ಇನ್ನು ಈ ಬೇಡಿಕೆ ಬಗ್ಗೆ ಅನೇಕ ವಿಷಯಗಳನ್ನು ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಹೆಚ್ಚು ಹೇಳುವುದು ಅಗತ್ಯವಿಲ್ಲ.

ಇನ್ನು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಒಂದು ಮಾತು ಹೇಳಿದರು ಅಧಿಕಾರಿಗಳನ್ನೆಲ್ಲಾ ಸಸ್ಪೆಂಡ್ ಮಾಡುತ್ತಿದ್ದಾರೆ ಅವರನ್ನು ಇಲಿ ಹಿಡಿಯುವಹಾಗೆ ಹಿಡಿಯುತ್ತಿದ್ದಾರೆ ಎಂದು. ಅವರು ದೃಷ್ಟಿಯಲ್ಲಿ ಇಂಜನೀಯರ್ಸ್ ಅವರೆಲ್ಲಾ ಇಲಿಗಳೇ. ಯಾರನ್ನು ಹಿಡಿಯಬೇಕೋ ಅವರನ್ನು ಹಿಡಿಯಿರಿ ಎಂದು ಹೇಳಿದರೆ ಅದು ಅಷ್ಟು ಸುಲಭವಲ್ಲ. ಅವರು ಅರ್ಥಮಾಡಿಕೊಳ್ಳಬೇಕು. ವಿಜಿಲೆನ್ಸ್ ಕಮೀಷನ್‌ನವರು ಯಾರು ತಪ್ಪಿತಸ್ಥರು ಎಂದು ಹೇಳುತ್ತಾರೋ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೇ ಹೊರತು ಬೇರೆಯವರ ಮೇಲೆ ಏತಕ್ಕೆ ಕಾರ್ಯಕ್ರಮ ಕೈಗೊಳ್ಳಬೇಕು ? ಹಿಂದೆಯೇ ಈ ಬಗ್ಗೆ ಹೇಳಿದ್ದೇನೆ. ಅವರು ಇನ್ನೊಂದು ಮಾತು ಹೇಳಿದರು ಸುಪರ್‌ವಿಷನ್ ಮಾಡುವವರು ತಪ್ಪಿಸಿಕೊಳ್ಳುತ್ತಾರೆ ಎಂದು ಅದನ್ನು ನಾನೂ ಒಪ್ಪುತ್ತೇನೆ. ಅದಕ್ಕೆ ಒಂದು ಮಾರ್ಗ ಕಂಡುಹಿಡಿಯಬೇಕು. ಇದಕ್ಕೆ ಜವಾಬ್ದಾರಿಯಾದವರು ಮೇಲ್ವಿಚಾರಣೆ ಮಾಡುವವರು. ಆ ಅಧಿಕಾರಿಯು ಈ ಜವಾಬ್ದಾರಿಯನ್ನು ಹೊರಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ — ತಾವೇ ಈ ಮನೆಯಲ್ಲಿ ಹಲವಾರು ಸಾರಿ ಹೇಳಿದ್ದೀರಿ. ಸಸ್ಪೆಂಡ್ ಮಾಡಬೇಕಾದರೆ ಅವನ ಮೇಲೆ ಇನ್‌ಕ್ವೈರಿ ನಡೆಯುವಾಗ ಅವನು ಆ ಎನ್‌ಕ್ವೈರಿಯನ್ನು ಸ್ಪಾಯಿಲ್ ಮಾಡುತ್ತಾನೆ ಅಂತಹವನನ್ನು

(ಶ್ರೀ ಹೆಚ್. ಡಿ. ದೇವೇಗೌಡ)

ಸಸ್ಪೆಂಡ್ ಮಾಡುತ್ತೇವೆ ಎಲ್ಲಾ ಸಂದರ್ಭದಲ್ಲೂ ಸಸ್ಪೆಂಡ್ ಮಾಡಬೇಕಾದ್ದೇನೂ ಇಲ್ಲ. ಸರ್ಕಾರಕ್ಕೆ ಇದರ ಬಗ್ಗೆ ಡಿಸ್ಕ್ರಿಷನ್ ಇದೆ ಎಂದು ತಾವು ಹೇಳಿದ್ದೀರಿ. ತಮ್ಮಲ್ಲಿ ನಾನು ಒಂದು ಸೂಚನೆ ಮಾಡಲಿಕ್ಕೆ ಇಷ್ಟಪಡುತ್ತೇನೆ. ಈಗ ಹಾಸನದಲ್ಲಿ 42 ಜನರನ್ನು ಸಸ್ಪೆಂಡ್ ಮಾಡಿದ್ದೀರಿ.

7 ‌0 P. M.

ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದರ ಬಗ್ಗೆ ಎನ್‌ಕ್ವಯರಿ ಮಾಡಿದ್ದೂ ಆಯಿತು. ಎಲ್ಲರನ್ನೂ ದಿಕ್ಕಾಪಾಲಾಗಿ ವರ್ಗ ಮಾಡಿದ್ದೂ ಆಯಿತು. ಅವರು ಈಗ ಬೇರೆ ಬೇರೆ ಕಡೆ ಇದ್ದಾರೆ. ಹಿಂದೆ 15 ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದಾಗ ಎನ್‌ಕ್ವಯರಿ ನಡೆಯುವುದಕ್ಕೆ ಮುಂಚೆಯೇ ಅವರನ್ನು ರೀಇನ್‌ಸ್ಟೇಟ್ ಮಾಡಿದರು ಏಕೆ? It was justified by the Hon. Minister in the House itself. ಅದ್ದರಿಂದ ನನ್ನ ಸೂಚನೆ ಏನೆಂದರೆ, ಈ ಅಧಿಕಾರಿಗಳನ್ನು ತಾವು ಏನು ಸಸ್ಪೆಂಡ್ ಮಾಡಿದ್ದೀರಿ. ಅವರನ್ನು ರೀಇನ್‌ಸ್ಟೇಟ್ ಮಾಡಬಾರದೇಕೆ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್:—ಸಸ್ಪೆನ್‌ಷನ್ ಪನಿಷ್‌ಮೆಂಟ್ ಹೌದು, ಪನಿಷ್‌ಮೆಂಟ್ ಅಲ್ಲ, I am not trying to enunciate any new theory Even Courts of Law have enunciated suspension is sometimes punishment and sometimes, it is not. Apart from other things, discretionary power is also expected to be with the Government. Now you suggested: Why should these people be kept for so long? I will consider the suggestion you have given.

ಕೊನೆಯದಾಗಿ ಶ್ರೀಮಾನ್ ದೇವೇಗೌಡರು ಒಂದು ಆಪಾದನೆಯನ್ನು ಮಾಡಿದ್ದಾರೆ. ಪವರ್ ಕಾರ್ಪೋರೇಷನ್ ಚೇರ್ಮನರ ಬಗ್ಗೆ ಮಾನ್ಯ ರೆಡ್ಡಿಯವರು ಇಂಥ ಕಾಗದ ಬರೆದರು, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಏಕೆ ಇದು ಹೀಗೆ, ವಿವರಣೆ ಕೊಡಿ ಎಂದು ಹೇಳಿದರು ಮೈಸೂರು ಪವರ್ ಕಾರ್ಪೋರೇಷನ್ ಎನ್ನತಕ್ಕದ್ದು ಒಂದು ಪಬ್ಲಿಕ್ ಲಿಮಿಟೆಡ್ ಕಂಪನಿ. ಅಲ್ಲಿರತಕ್ಕ ಹಣ ನೂರಕ್ಕೆ ನೂರು ಭಾಗ ಸರ್ಕಾರದ್ದು ಹೌದು. ಆದರೆ ಅದು ಲಾ ಪ್ರಕಾರ ರಿಜಿಸ್ಟರ್ ಆಗಿರತಕ್ಕ ಕಂಪೆನಿ. ಅಂದಮೇಲೆ ಅಲ್ಲಿ ಏನಾಯಿತು, ಅದರ ಫಂಕ್ಷನ್ಸ್ ಹೇಗೆ, ಅದರ ರೂಲ್ಸ್ ಏನು.......

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಜಾಣ್ಮೆಯಿಂದ ಉತ್ತರ ಕೊಡು ತ್ತೀರಿ ಎಂದು ನಮಗೆ ಗೊತ್ತು. ಶ್ರೀಮಾನ್ ರೆಡ್ಡಿಯವರು 15 ಲಕ್ಷ ರೂ.ಗಳನ್ನು ಮಾನ್ಯ ಚನ್ನಬಸಪ್ಪನವರು ಪಡೆದಿದ್ದಾರೆ ಎಂದು ಹೇಳಿ 2-10-1974ರಂದು ತಮಗೆ ಅರ್ಜಿ ಬರೆದಿದ್ದಾರೆ. ಅದು ಬೋರ್ಡು ಮೀಟಿಂಗ್‌ನಲ್ಲಿ ಚರ್ಚೆಯಾಗಿದೆ.

ಶ್ರೀ ಡಿ. ದೇವರಾಜ್ ಅರಸ್ :—ಅವರು ಪತ್ರ ಬರೆದಿದ್ದು ನಿಜ, ಚೇರ್ಮನ್ನರು ದುಡ್ಡು ತೆಗೆದುಕೊಂಡಿದಾರೆಂದಲ್ಲ. ಅವರ ನೆಂಟರು ಯಾರೋ ಎನ್ನುವ ಅನುಮಾನ ಏನೋ ಇವೆ, ವಿಚಾರ ಮಾಡಿ ಎಂದು ಬರೆದಿದ್ದಾರೆ. ಇದನ್ನು ಬೋರ್ಡಿನಲ್ಲಿಟ್ಟು ತೀರ್ಮಾನ ಮಾಡಿದ್ದಾರೆ. ಸಾರಾಂಶ ಮಾತ್ರ ತಮ್ಮ ಮುಂದೆ ಹೇಳಿದ್ದೇನೆ. 'Chairman's relatives', not the Chairman. That is all the essential point.

ಶ್ರೀ ಹೆಚ್. ಡಿ. ದೇವೇಗೌಡ :—ಅವರು ಚೇರ್ಮನ್ನರ ಮೇಲೆ ಆಪಾದನೆ ಮಾಡಿರುವಾಗ ನಾವು ಈಗ ನಿರ್ಣಯ ಮಾಡಬೇಕಾಗಿದೆ.

SRI D. DEVARAJ URS :—'It is also reliably learnt that the Hindusthan Construction Company's representative has negotiated with the Chairman's relatives'. 'Chairman's relatives', not the Chairman.

ಶ್ರೀ ಹೆಚ್. ಡಿ. ದೇವೇಗೌಡ :—ಚೇರ್ಮನ್‌ರ ರಿಲೇಟೀವ್‌ಗೆ 15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಬರೆದಿದ್ದಾರೆ. ನಾವು ಆ ಪತ್ರವನ್ನು ಪೂರ್ತಾ ಓದಿದರೆ ಒಳ್ಳೆಯದು. ಅದೇ ನನಗೆ ಬಂದಿರುವ ಧರ್ಮ ಸಂಕಟ. ಮುಂದಿನ ಪ್ಯಾರಾವನ್ನು ದಯವಿಟ್ಟು ಓದಿ. ಇತ್ತೀಚೆಗೆ ಮುಖ್ಯ ಮಂತ್ರಿಗಳು ತಾಳ್ಮೆ ಕಳೆದುಕೊಳ್ಳುವುದಿಲ್ಲ, ಜಾಣ್ಮೆಯಿಂದ ಉತ್ತರ ಕೊಡುತ್ತಾರೆ.

ಶ್ರೀ ಡಿ ದೇವರಾಜ್ ಅರಸ್ :—"A deal has been struck wherein Hindusthan Construction Company would pay Rs. 15 lakhs for being favoured with this contract work" ಎಂದು ಹೇಳಿದ್ದಾರೆ. ಅದರಲ್ಲಿ ಇವರಿಗೇ ದುಡ್ಡು ಕೊಟ್ಟಿದ್ದಾರೆ ಎನ್ನುವುದು ಇಲ್ಲ. ಅದರಲ್ಲಿ ಯಾವ ಒಂದು ಆಧಾರವೂ ಇಲ್ಲ. ಮೊದಲನೆಯದಾಗಿ, ಮೂರು ಜನ ಕಂಟ್ರ್ಯಾಕ್ಟರ್ಸ್ ಇದ್ದರು. ಇದು ಬಹಳ ಕಾಂಪ್ಲಿಕೇಟೆಡ್ ಕಾಂಟ್ರ್ಯಾಕ್ಟ್, ಒಂದು ರೇಟನ್ನು ಕೊಡುತ್ತಾರೆ, ಇನ್ನೊಂದು ರೇಟನ್ನು

(ಶ್ರೀ ಡಿ. ದೇವರಾಜ ಅರಸ್)

ಕೊಡುವುದಿಲ್ಲ, ಅದಕ್ಕೆ ಏನೋ ಹೇಳುತ್ತಾರೆ. There are certain items which they won't quote. Technical men Engineers-not all sometimes agree on certain point. Each man according to this thinking says : That is loading factor. ಲೋಡಿಂಗ್ ಫ್ಯಾಕ್ಟರ್ಸ್, ಕೆಲವು ಕೆಲಸಗಳಿಗೆ ಅವರಿಗೆ ಎಷ್ಟು ಫಾರಿನ್ ಎಕ್ಸ್‌ಚೇಂಜ್ ಬೇಕು ಎನ್ನುವುದನ್ನು ಟೆಂಡರ್‌ನಲ್ಲಿ ಬರೆಯಲಿಕ್ಕಾಗುವುದಿಲ್ಲ. ಅವರು ಕೇಳಿರುವ ಆಧಾರದ ಮೇಲೆ ಇದೆಲ್ಲವನ್ನು ಲೆಕ್ಕ ಹಾಕಬೇಕು. ~ದು ಎಷ್ಟು ಆಗಬಹುದು ಎಂದರೆ ಒಬ್ಬರು ಒಂದು ರೀತಿ ಹೇಳಿದರೆ some other man says : That is the rate you should calculate. ಇಂಥ ಅನೇಕ ವಿಷಯಗಳನ್ನು ಟೆಂಡರ್‌ನಲ್ಲಿ ಇಲ್ಲದೆ ಇರತಕ್ಕ ವಿಷಯವನ್ನು ಕೋಟ್ ಮಾಡಿರುವುದಿಲ್ಲ. ಕೋಟ್ ಮಾಡಿದರೆ, ಎಷ್ಟು ರೀತಿಯಲ್ಲಿ ನಾವು ಹೇಳುತ್ತೇವೆಯೋ ಅದೆಲ್ಲವನ್ನು ಕ್ಯಾಲ್ಯುಕ್ಯುಲೇಟ್ ಮಾಡಿ ಅದರ ಪ್ರಕಾರ ಮಾಡ ಬೇಕಾಗುತ್ತದೆ. ಇದನ್ನು ಟೆಕ್ನಿಕಲ್ ಮೆನ್ ಕಳಿತುಮಾಡಬೇಕಾಗುತ್ತದೆ ಅವರು ಇದನ್ನು ಕ್ಯಾಲ್ಯುಕ್ಯುಲೇಟ್ ಮಾಡಿ ಟೆಂಡರ್ ಹಾಕಿ, ಇಷ್ಟು ಲೋಡ್ ಎಂದು ಹೇಳಿ, ಲೋಡಿಂಗ್ ಫ್ಯಾಕ್ಟರ್ಸ್‌ಗೆ ಬರುವಾಗ ಪ್ರತಿ ಯೊಂದು ಟೆಂಡರ್‌ನಲ್ಲಿಯೂ ಎಷ್ಟೆಷ್ಟು ಲೋಡ್ ಮಾಡಬೇಕು ಎಂದು ಹೇಳು ವವರು ಟೆಕ್ನಿಕಲ್ ಮ್ಯಾನ್. Honest difference of views amongst techn'cal men will come in which event all these things will have to be processed. ಯಾವುದಾದರೂ ಒಂದು ಹಂತದಲ್ಲಿ ಹೆಚ್ಚು ಆಯಿತು ಎಂದರೆ ಅದನ್ನು ನಂಬಿಬಿಟ್ಟು ಅವರಿಗೆ ಇವರಿಗೆ ಕೊಟ್ಟು ಬಿಡುತ್ತೇವೆಂದು ಹೇಳಿದ್ದು ಸರಿಯಲ್ಲ. He pre-supposes that it is going to be given.

SRI H. D. DEVEGOWDA :—Drawing this inference I am not going to say. It is contrary to any principles. Suppose if I draw certain conclusions based on my own ideas, that is a different matter. The things is Rs. 15 lakhs was taken by his relatives on behalf of the Chairman Mr. H. M. Channabasappa. That is the main charge. That is the charge which has to be enquired and the concerned punished. If Mr. H. M. Channabasappa has taken or his relatives on his behalf have taken, then, he must be penalised; otherwise, Mr. Reddy must be panalised.

SRI D. DEVARAJ URS :—I understand. You did speak to the fact. But what has happened ? The person who is said to have given Rs. 15 lakhs is never the man to whom contract is given.

ಶ್ರೀ ಹೆಚ್. ಡಿ. ದೇವೇಗೌಡ :—ಇದು ಬಹಳ ಗಹನವಾದ ಅಪಾದನೆ, 15 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದು ಹೇಳುವುದು ಮತ್ತು ಅವರು ಬರವಣಿಗೆಯಲ್ಲಿ ಕೊಟ್ಟಿದ್ದಾರ. ಬೀದಿಯಲ್ಲಿ ಹೋಗತಕ್ಕವರು ಮಾಡಿರತಕ್ಕ ಅಪಾದನೆಯಿದಲ್ಲ. ಇದರ ಬಗ್ಗೆ ನಾವು ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ. ನಾಳೆಯ ದಿವಸ ಮುಖ್ಯ ಮಂತ್ರಿಗಳು ಏನೋ ತೆಗೆದು ಕೊಂಡಿದ್ದಾರೆ ಎಂದು ಬರೆಯುತ್ತಾರೆ. ಆದ್ದರಿಂದ ಇದನ್ನು ಹಗುರವಾಗಿ ನೋಡುವುದಕ್ಕಾಗುವುದಿಲ್ಲ. Can we take it so lightly ? The Chairman must be penalised or the other gentleman must be penalised You must take the decision.

SRI D. DEVARAJ URS :—I would have taken it very seriously but for the fact that the allegations that so and so might have paid the amount is never the man to whom the contract was awarded. Then, what is the point in saying that ?

This is merely on conjuctions and hearsaya. It is so patent.

ಶ್ರೀ ಹೆಚ್. ಡಿ. ದೇವೇಗೌಡ :—ಸಾಮಾನ್ಯವಾದ ಮನುಷ್ಯನಲ್ಲ. ಜವಾಬ್ದಾರಿ ಮನುಷ್ಯನ ಮೇಲೆ ಗಹನವಾದ, ತೀವ್ರವಾದ ಅಪಾದನೆ ಮಾಡಿದಾಗ ಅವನಿಗೆ ಉಗ್ರವಾದ ಶಿಕ್ಷೆ ಕೊಡಬೇಕು ಇನ್ನೂ ಏನಾದರೂ ಹೇಳಿದರೆ ಕ್ಯಾರಕ್ಟರ್ ಅಸ್ಸಾಸಿನೇಷನ್ ಆಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್ :—ನನಗೆ ಕಠಿಣ ಭಾಷೆ ಉಪಯೋಗಿಸುವುದಕ್ಕೆ ಇಚ್ಛೆ ಇಲ್ಲ. ಒಳ್ಳೆ ಮಾತಿನಲ್ಲಿ ಹೇಳುವುದಾದರೆ, ಅಪಾದನೆ ಮಾಡುವಾಗ ಎಲ್ಲಾ ವಿಷಯಗಳ ಬಗ್ಗೆ ಪೂರ್ಣವಾಗಿ ತಿಳುವಳಿಕೆ ಹೊಂದಿ, ಚೆನ್ನಾಗಿ ಪರೀಕ್ಷೆ ಮಾಡಿ ಹೇಳತಕ್ಕಂಥಾದ್ದು ಸರಿಯಾದ ಮಾರ್ಗ ಎನ್ನುವುದಕ್ಕೆ ಇಂಥಾದ್ದು ಎಲ್ಲಾ ನಮಗೆ ದಾರಿ ತೋರಿಸಿ ಕೊಟ್ಟ ಹಾಗೆ ಆಗುತ್ತದೆ. ನನ್ನ ದೃಷ್ಟಿಯಲ್ಲಿ When the whole thing is in a process. In a way left to myself even if I come to know from someone else as

(ಶ್ರೀ ಡಿ. ದೇವರಾಜ ಅರಸ್)

hearsay that should not be made a charge. ಇದರಿಂದ ಇನ್ನು ಯಾರಿಗೂ ಕಾಂಟ್ರ್ಯಾಕ್ಟ್ ಕೊಡಬಾರದು. ಹಾಗೆ ಮಾಡಿಬಿಟ್ಟು, ಒಂದು ವೇಳೆ ಅವರಿಗೆ ಕೊಡುವುದಕ್ಕೆ ಲಾಯಕ್ಕು ಇದ್ದರೂ ಹೆದರಿಕೆಯಿಂದ ಕೊಡಬಾರದ ಎಂದು ಹೇಳಿದ ಹಾಗೆ ಆಗುತ್ತದೆ.

SRI H. D. DEVEGOWDA :—I am only confining myself to the charge made by a responsible person.

SRI D. DEVARAJ URS :—Discretion is not used in favour of a higher tender it is used in favour of the lowest tender. I do not want to treat it very seriously because there is no basis on the face of it. ಮತ್ತೆ ಡೈರೆಕ್ಟರ್ ಗಳಲ್ಲಿ ಯಾರು ಏನು ಹೇಳಿದರು ಎನ್ನುವ ವಿಚಾರ ಹೇಳುವುದಾದರೆ, Anybody working as contractors in a company have a right to express their opinion. The simple fact that so and so expresses his opinion for or against a particular proposition should not be a factor for us to say that he must be penalised. It will be a very wrong proposition. I hope Hon. Members will appreciate that point. I will leave it at that.

SRI C. BYREGOWDA :—He represents the Government.

SRI D. DEVARAJ URS :—A technical man must be free and independent to give his opinion whether a Minister likes it or not. In the ultimate analysis the Minister and the concerned Board has the right to take its own decision. You should not stop a technical man from expressing his views. There are many many issues on which two technical persons will never agree sometimes. That does not mean that one man whose opinion you like is the proper man and the man whose opinion you do not like is the wrong man. You cannot say that. ಮತ್ತೆ ಇದೇ ಸಂದರ್ಭದಲ್ಲಿ ಎರಡು ವಿಷಯಗಳನ್ನು ಪ್ರಸ್ತಾಪಮಾಡಬೇಕಾಗಿದೆ. ದೇವೇಗೌಡರು ಹಿಂದೆ ಒಂದು ಸಾರಿ ಕೆಲವು ಚಾರ್ಜಸ್ ಸಭೆಯ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಎಲ್ಲವನ್ನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ, ಮುಖ್ಯವಾಗಿ

ಒಂದೆರಡು ವಿಷಯ ಮಾತ್ರ ಸೂಕ್ಷ್ಮವಾಗಿ ಪ್ರಸ್ತಾಪಮಾಡಿ, ಅದನ್ನು ಅಲ್ಲಿಗೆ ಬಿಡುತ್ತೇನೆ. ಮುಖ್ಯವಾಗಿ ಹೇಮಾವತಿ ಜಲಾಶಯ. ಹೇಮಾವತಿ ಜಲಾಶಯ ದಲ್ಲಿ ನಾವು ಬಂದು ಹೆಚ್ಚು ಹಣವನ್ನು ಯಾರೋ ಒಬ್ಬ ಕಂಟ್ರಾಕ್ಟರಿಗೆ ದಾಕ್ಷಿಣ್ಯ ತೋರಿಸುವುದಕ್ಕೆ ಖರ್ಚು ಮಾಡಿದ್ದೇವೆ ಎಂದು ಅನ್ನುವುದು. ಅದು ಚಾರ್ಜ್ ಅನ್ನುವುದಾದರೆ ಈಗ ದಾಕ್ಷಿಣ್ಯ ತೋರಿಸಿಲ್ಲ ಎನ್ನುವುದಕ್ಕೆ ಸಾಕ್ಷಿ ಸಾಹಿತ್ಯ ನಾನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕಾದುದು ಧರ್ಮ. ಅದಕ್ಕೂ ಮೀರಿ ನಿಮ್ಮ ಮನಸ್ಸಿಗೆ ಅನುಮಾನ ಇದ್ದರೆ ಆದಷ್ಟು ಪ್ರಯತ್ನ ಮಾಡಿ ನಿಮ್ಮ ಅನುಮಾನವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ದೇವೇಗೌಡರಿಗೆ ಟೆಕ್ನಿಕಲ್ ಮ್ಯಾಟರ್ಸ್ ಸ್ವಲ್ಪ ಅನುಭವ ಇದೆ ಎಂದು ನಾನು ಒಪ್ಪುತ್ತೇನೆ. ಅದ ರಲ್ಲಿಯೂ ಇಂಜಿನಿಯರಿಂಗ್‌ಗೆ ಸಂಬಂಧಪಟ್ಟ ಹಾಗೆ ಸ್ವಲ್ಪ ಹೆಚ್ಚಿನ ಅನುಭವ ಇದೆ ಎಂದು ತಿಳಿದುಕೊಂಡಿದ್ದೇನೆ. ಮತ್ತೆ ಈಗಾಗಲೇ ಒಂದು ಸಂದರ್ಭದಲ್ಲಿ ಅವರ ಪಿ ಎ. ಸಿ. ರಿಪೋರ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ ವಿಚಾರ ಎಂದಿನಿಂದ ಹೇಮಾವತಿ ಜಲಾಶಯ ಪ್ರಾರಂಭವಾಯಿತು ಎನ್ನುವುದರ ಬಗ್ಗೆ ಸ್ವಲ್ಪ ವಿಷಯ ಪ್ರಸ್ತಾಪ ಮಾಡಿ ಈ ಜಲಾಶಯದ ಬಗ್ಗೆ ವಿಷಯ ಏನು ಎನ್ನುವುದನ್ನು ಹೇಳಿದ್ದಾರೆ. ಆಡಿಟರ್ ಜನರಲ್ ಆಫ್ ಇಂಡಿಯಾ ಅವರ 1972-73ನೇ ಇಸವಿಯ ರಿಪೋರ್ಟಿ ನಲ್ಲಿ ಕೆಲವು ಪ್ಯಾರಾಗಳು ಇವೆ, ಆ ಪ್ಯಾರಾಗಳಲ್ಲಿ ಇರುವುದನ್ನು ಬಹುಶಃ ಹೇಳಿ ದ್ದಾರೆಂದು ನನ್ನ ಭಾವನೆ....

ಶ್ರೀ ಹೆಚ್. ಡಿ ದೇವೇಗೌಡ:—ಆ ಪ್ಯಾರಾ ಕಡೆ ಇನ್ನೂ ಕೈ ಹಾಕಿಲ್ಲ. ಹಾಕುವುದರಲ್ಲಿ ಇದ್ದೇನೆ.

ಶ್ರೀ ಡಿ. ದೇವರಾಜ ಅರಸ್ :—ನೀವು ಹಾಕದೇ ಹೋದರೆ, ನಾನು ನಿಮ್ಮ ಮುಂದೆ ಇಟ್ಟುಬಿಡುತ್ತೇನೆ. 1972-73ನೇ ರಿಪೋರ್ಟ್ ನಿಮ್ಮ ಕೈಗೆ ತಲುಪಿದೆ.

SRI H. D. DEVE GOWDA .—P. A. C. must get the report from the Department.

SRI D. DEVARAJ URS:—Hon. Members of the House have received report of the 1972-73 of the Auditor General wherein these things have been discussed. ಮೇಜರ್ ಇರಿಗೇಷನ್ ಪ್ರಾಜೆಕ್ಟ್, ಹೇಮಾವತಿ ಪ್ರಾಜೆಕ್ಟ್ ಎಂದು ಹೇಳಿ 42ನೇ ಪುಟ ಮತ್ತು 9ನೇ ಪುಟದಲ್ಲಿ ಇದೆ. ಅರ್ಥರನ್ ಡ್ಯಾಂ ಆನ್ ದಿ ರೈಟ್ ಬ್ಯಾಂಕ್, ಮೇಸನ್ರಿ ಡ್ಯಾಂ, ಸುರ್ಕಿ ಮಾರ್ಟರ್, ಇದರ ಎತ್ತರ ಮತ್ತೆ ನಾವು ಕಟ್ಟಿರ ತಕ್ಕಂಥಾದ್ದು, ತಾವು ಪ್ರಶ್ನೆಗಳನ್ನು ಕೇಳಿ ಕೂಡ ತಿಳಿದುಕೊಂಡಿದ್ದೀರಿ, ಇದು

(SRI D. DEVARAJ URS)

ಎಲ್ಲಾ ಗೊತ್ತು, ಸರ್ಕಾರದ ಮೇಲೆ ಏನು ನೀವು ಧಾಕ್ಷಿಣ್ಯ ತೋರಿಸಿ ಅವರಿಗೆ ಕೊಟ್ಟಿದ್ದೀರಿ ಎಂದು ಅಕ್ಷೇಪಣೆ ಮಾಡಿದ್ದೀರಿ ಅದರ ಒಗ್ಗೆ ತಾವು ಸ್ವಲ್ಪ ಸಾವಧಾನ ವಾಗಿ, ಯಾವ ಒಂದು ಮಾನಸಿಕವಾದ ರಾಗದ್ವೇಶಗಳು ಇಲ್ಲದೇ ಒಂದು ಅಬ್ಜೆಕ್ಟೀವ್ ಆಗಿ ನೋಡುವುದಾದರೆ, ನಾನು ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ತಮ್ಮ ಮುಂದೆ ಇಡುತ್ತೇನೆ. ಈ ಪ್ರಾಜೆಕ್ಟ್ 1968ನೇ ಇಸವಿಯಲ್ಲಿ ಪ್ರಾರಂಭವಾಯಿತು. 1968ನೇ ಇಸವಿಯಲ್ಲಿ ಪ್ರಾರಂಭವಾದಂತಹ ಪ್ರಾಜೆಕ್ಟ್ ಯಾವರೀತಿ ಆಯಿತು ಎನ್ನುವುದು ಮುಖ್ಯ ವಿಚಾರ. ಹೇಗೆ ಪಾರಂಭವಾಯಿತು ಎಂದರೆ ಲೋಯಸ್ಟ್ ಟೆಂಡರ್ ಡಿಸೈಡ್ ಮಾಡಿದರು. ಟೆಂಡರ್‌ನಲ್ಲಿ ಏನು ಇತ್ತು ಸುರ್ಕಿ ಮಾರ್ಟರ್ ಸ್ಪಿಲ್‌ವೇ ಪೋರ್ಷನ್ ಒಂದು ಭಾಗ, ನಾನ್‌ಸ್ಪಿಲ್‌ವೇ ಪೋರ್ಷನ್ ಮತ್ತೊಂದು ಭಾಗ. ಅರ್ಥರನ್ ಡ್ಯಾಂ ಬೇರೆ ಒಂದು ಭಾಗ, ಅದಕ್ಕೆ ರ್‍ಯಾಂಪೆರಾಂಡ್ ಮತ್ತೊಂದು ಭಾಗ ಇದು ಮುಖ್ಯ ವಿಚಾರ. ಒಂದು ಮೆಸನ್ರಿ ಡ್ಯಾಂ ಕಟ್ಟುವಾಗ ಸ್ಪಿಲ್‌ವೇ ಎಂದರೆ, ಹೆಚ್ಚು ನೀರು ಬಂದಾಗ ಅದರ ಮೇಲೆ ಹರಿದ್ದು ಬರತಕ್ಕದ್ದು ಇದಕ್ಕೆ ಸ್ಪಿಲ್‌ವೇ ಎಂದು. ನೀರು ಹರಿಯದೇ ಇರತಕ್ಕ ಭಾಗ ನಾನ್ ಸ್ಪಿಲ್‌ವೇ ಎಂದು. ಮಧ್ಯೆ ಒಂದು ಡ್ಯಾಂನಲ್ಲಿ ನೀರು ಹರಿಯುವುದು ಭಾಗ ಇದ್ದರೆ ಎರಡು ವಿಂಗಗಳು ನಾನ್ ಸ್ಪಿಲ್‌ವೇ ಇರುತ್ತದೆ. ಹೇಮಾವತಿ ಮೆಸನ್ರಿ ಡ್ಯಾಂ ಆದಮೇಲೆ ಅರ್ಥರನ್ ಡ್ಯಾಂ ಎರಡು ಕಡೆ ಕಟ್ಟಲಾಗಿದೆ, ರ್‍ಯಾಪರಾಂಡ್ ಎರಡು ವಿಂಗಗಳಲ್ಲೂ ಮಣ್ಣು ಕಲ್ಲಿನಿಂದ ಕಟ್ಟಿಕೊಂಡು ಬರುತ್ತಾರೆ. ಇದೇ ರೀತಿ ಲೆಫ್ಟ್ ಬ್ಯಾಂಕ್ ರೈಟ್ ಬ್ಯಾಂಕ್ ಸ್ಲೂಯಸ್ ಇರುತ್ತದೆ. ಇಸವಿಯಲ್ಲಿ ಈ ಕೆಲಸ ಪ್ರಾರಂಭವಾಯಿತು. ಇಲ್ಲಿ ಟೆಂಡರ್ ಅಗ್ರಿಮೆಂಟ್ ಪ್ರಕಾರ ಏನು ವಿಚಾರವಿತ್ತು ಎಂಬುದು ಮುಖ್ಯವಾದ ಅಂಶ. ನಾನ್-ಸ್ಪಿಲ್-ವೇ ವರ್ಕ್‌ನ್ನು ಸುರ್ಕಿ ಮಾರ್ಟರ್‌ನಲ್ಲಿ ಕಟ್ಟಬೇಕು ಮತ್ತು ಸ್ಪೀಲ್-ವೇ ವರ್ಕ್‌ನ್ನು ಸಿಮೆಂಟ್ ಮಾರ್ಟರ್‌ನಲ್ಲಿ ಕಟ್ಟಬೇಕೆಂದು ಅಗ್ರಿಮೆಂಟ್ ಆಗಿತ್ತು. ಆದರೆ ಕೋಯ್ನಾ ಡ್ಯಾಂ ಅರ್ತ್ ಕ್ವೇಕ್‌ನಿಂದ ಷೇಕ್ ಆದ ಕಾರಣ, ಇಲ್ಲಿಯೂ ಆ ರೀತಿ ಆಗಬಾರದೆಂದು ಉದ್ದೇಶದಿಂದ ಕೆಲವು ಭಾಗವನ್ನು ಸುರ್ಕಿ ಮಾರ್ಟರ್‌ಗೆ ಬದಲು ಸಿಮೆಂಟ್ ಮಾರ್ಟರ್‌ನಿಂದ ಕಟ್ಟಿರುವುದು ಒಳ್ಳೆಯದೆಂಬ ಟೆಕ್ನಿಕಲ್ ಪೀಪಲ್ ಒಂದು ತೀರ್ಮಾನ ತೆಗೆದುಕೊಂಡರು. ಮುಂಜಾಗ್ರತೆಯಾಗಿ ಈ ಕ್ರಮ ಕೈಕೊಂಡರು ಯಾವ ಭಾಗದಲ್ಲಿ ಈ ರೀತಿ ಬದಲಾವಣೆ ಮಾಡಿದರು ಎಂದರೆ, ಸೀ-ಲೆವಲ್‌ನಿಂದ 2810 ಅಡಿ ಪ್ರಮಾಣದವರೆಗೆ ಅಂದರೆ ಹೊಳೆಯುತಳಭಾಗದಿಂದ 50 ಪ್ರಮಾಣದವರೆಗೆ ಸಿಮೆಂಟ್ ಮಾರ್ಟರ್ ಮಾಡಬೇಕೆಂದು, ಇದರಿಂದ ಪ್ರೆಜರ್ ತಡೆಯುತ್ತದೆಂಬ ಕಾರಣದಿಂದ ಸುರ್ಕಿ ಮಾರ್ಟರ್‌ನಿಂದ ಸಿಮೆಂಟ್ ಮಾರ್ಟರ್‌ಗೆ ಬದಲಾವಣೆ ಮಾಡಿದರು. ಅದರಂತೆ ಕಂಟ್ರಾಕ್ಟರ್ ಕಟ್ಟಿಕೊಂಡು ಹೋದರು. ಈ ಭಾಗವನ್ನು ಸಿಮೆಂಟ್ ಮಾರ್ಟರ್‌ನಿಂದ ಕಟ್ಟಿ ಮುಗಿಸಿದ ಮೇಲೆ ಉಳಿದ ನಾನ್-ಸ್ಪಿಲ್-ವೇವರ್ಕ್‌ನ್ನು ಸುರ್ಕಿ ಮಾರ್ಟರ್‌ನಿಂದ ಕಟ್ಟಬೇಕಾಗಿತ್ತು. ಆದರೆ

ಆ ರೀತಿ ಮಾಡದೆ ಸಿಮೆಂಟ್ ಮಾರ್ಟರ್‌ನಿಂದಲೇ ಕಟ್ಟುತ್ತಾ ಬಂದರು. ಇದಕ್ಕೆ ಮೊದಲು ಸ್ಥಳೀಯ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಆ ಕಂಟ್ರಾಕ್ಟರಿಗೆ ಸಿಮೆಂಟ್ ಮಾರ್ಟರ್ ಕೆಲಸ ಮುಗಿದ ನಂತರ ಸುರ್ಕಿ ಮಾರ್ಟರ್ ಕೆಲಸ ಪ್ರಾರಂಭ ಮಾಡಬೇಕಾಗುತ್ತದೆ; ಅದಕ್ಕಾಗಿ ಮಿಲ್ಸನ್ನು ಹಾಕಿ, ಮತ್ತು ಲೈಮ್ ಸಿಗತಕ್ಕಂಥ ಜಾಗದಿಂದ ಅದನ್ನು ಕಲೆಕ್ಟ್ ಮಾಡಿಕೊಂಡು ತೆಗೆದುಕೊಂಡು ಬನ್ನಿ ಎಂದು ಕಾಗದ ಬರೆದು ತಿಳಿಸಿದರು. ಈ ರೀತಿ ಅನೇಕ ಸಲ ಕಾಗದ ಬರೆದು ತಿಳಿಸಿದರೂ ಸಹ ಅವರು ಆದಕ್ಕೆ ಗಮನ ಕೊಡದೆ ಸಿಮೆಂಟ್ ಮಾರ್ಟರ್‌ನಿಂದಲೇ ಕಟ್ಟಿಕೊಂಡು ಹೋದರು. ಈ ವಿಚಾರ ಟೆಕ್ನಿಕಲ್ ಸಬ್-ಕಮಿಟಿ ಮುಂದೆಯಾಗಲೀ, ಎ. ಐ. ಪಿ. ಸಿ. ಮುಂದೆಯಾಗಲಿ ಬರಲಿಲ್ಲ; ಈ ವರ್ಕ್ ಆರ್ಡರ್ ಕೊಟ್ಟಿದ್ದು 1963ನೇ ಇಸವಿ ಆಗಸ್ಟ್ ತಿಂಗಳಲ್ಲಿ ಎಂದು ಕಾಣುತ್ತದೆ ಇದರ ನಂತರ ಟೆಕ್ನಿಕಲ್ ಸಬ್-ಕಮಿಟಿ ಅವರು ತಾ|| 29-7-1969 ರಲ್ಲಿ, ತಾ|| 8-9-1969ರಲ್ಲಿ ತಾ|| 8-12-1969ರಲ್ಲಿ ಮೀಟಿಂಗ್ ಮಾಡಿದ್ದಾರೆ. ಅದೇ ರೀತಿ ಎಂ. ಐ. ಪಿ. ಸಿ. ಅವರು ತಾ|| 13-5-1968ರಲ್ಲಿ, ತಾ|| 14-1-1969ರಲ್ಲಿ ತಾ|| 14-4-1969ರಲ್ಲಿ ಮತ್ತು ತಾ|| 1-12-1969ರಲ್ಲಿ ಮೀಟಿಂಗ್ ಸೇರಿದ್ದಾರೆ. ಆದರೆ ಈ ಎರಡು ಕಮಿಟಿಯವರೂ ಸಹ ಆ ವಿಚಾರವನ್ನು ಪ್ರಸ್ತಾಪ ಮಾಡಲೇ ಇಲ್ಲ; ಈ ರೀತಿ ಸಿಮೆಂಟ್ ಮಾರ್ಟರ್‌ನಲ್ಲಿ ಕಟ್ಟಿಕೊಂಡು ಹೋದರೆ ಕನ್‌ಕರೆನ್ಸ್ ಸಿಗುವುದಿಲ್ಲವೆಂದು ಸಂಬಂದಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಕಾಗದ ಬರೆದು ಸಂಬಂಧಪಟ್ಟ ಕಂಟ್ರಾಕ್ಟರ್‌ಗೆ ತಿಳಿದರು. ಮತ್ತು ಈ ಹಿಂದೆ ತಂದ ಜಾಗದಿಂದ ಲೈಮ್ ಕಲೆಕ್ಟ್ ಮಾಡಿಕೊಂಡು ಬಂದು ಸುರ್ಕಿ ಮಾರ್ಟರ್‌ನಿಂದಲೇ ಕಟ್ಟಬೇಕೆಂದು ತಿಳಿಸಿದರು. ಲೈಮ್ ಕಲೆಕ್ಟ್ ಮಾಡಿ ತರತಕ್ಕಂಥ ಜಾಗ ಪ್ರಾಜೆಕ್ಟ್‌ಗೆ ದೂರವಿದ್ದರೆ ಲೀಡ್ ಕೊಡೋಣವೆಂದು ತಿಳಿಸಿದರೂ ಸಹ ಅವರು ಅದಕ್ಕೆ ಗಮನ ಕೊಡದೆ ಸಿಮೆಂಟ್ ಮಾರ್ಟರ್‌ನಿಂದಲೇ ಕಟ್ಟಿಕೊಂಡು ಹೋದರು. ಈ ವಿಚಾರ ಟೆಕ್ನಿಕಲ್ ಸಬ್-ಕಮಿಟಿ ಮುಂದೆಯಾಗಲೀ, ಮೇಜರ್ ಇರಿಗೇಷನ್ ಬೋರ್ಡ್ ಮುಂದೆಯಾಗಲೀ ಎರಡು ವರ್ಷವಾದರೂ ಬರಲಿಲ್ಲ; ಮತ್ತು ಅವರು ಈ ವಿಚಾರವನ್ನು ಚರ್ಚೆ ಮಾಡಲೇ ಇಲ್ಲ; ಈ ಮಧ್ಯೆ ಕಂಟ್ರಾಕ್ಟರ್ ಕಟ್ಟಿದ ಭಾಗಕ್ಕೆ ಪೇಮೆಂಟ್ ಮಾಡಬೇಕೆಂದು ಬಿಲ್ ಕೊಟ್ಟರು, ಆಗ ಸಂಬಂಧಪಟ್ಟ ಅಧಿಕಾರಿಗಳು ಟೆಂಡರ್‌ನಲ್ಲಿ ನಮೂದಾಗಿರುವ ರೇಟನ್ನು ತೀಟೆಯಿದ್ದರೆ ತಗೋ ಎಂದು ಹೇಳದೆ ಪಾರ್ಟ್-ಪೇಮೆಂಟ್ ಎಂದು ಕೊಟ್ಟುಕೊಂಡು ಬಂದರು. ಸುರ್ಕಿ ಮಾರ್ಟರ್‌ನಲ್ಲಿ ಕಟ್ಟದಿರುವ ಕಾರಣ ಬಿಲ್ ಪಾಸ್ ಮಾಡುವುದಿಲ್ಲವೆಂದು ಹೇಳಬಹುದಾಗಿತ್ತು; ಆದರೆ ಆ ರೀತಿ ಮಾಡದೆ ಪಾರ್ಟ್-ಪೇಮೆಂಟ್ ಎಂದು ಕೊಟ್ಟುಕೊಂಡು ಹೋದರು. ಅಗ್ರಿಮೆಂಟ್ ಪ್ರಕಾರ ಪಾರ್ಟ್ ಪೇಮೆಂಟ್ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೂ ಸಹ ಕೊಟ್ಟುಕೊಂಡು ಹೋದರು. ಒಂದು ಸ್ಟೇಜಿನಲ್ಲಿ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು

SRI D. DEVARAJ URS.

"The Contractor has no reason to state that no kunkar is available and he has already started at one place collecting surki. He has not at all made any arrangement so far, as per the contractual obligations."

ಎಂದು ಬರೆದಿದ್ದಾರೆ. ಈ ರೀತಿ ಸ್ಪಷ್ಟವಾಗಿ ಬರದು ಹೇಳಿರುವುದು ಇದರಲ್ಲಿದೆ. ಆದರೂ ಈ ಅಂಶವನ್ನು ಟೆಕ್ನಿಕಲ್ ಸಬ್-ಕಮಿಟಿಯವರು ನೋಡಲಿಲ್ಲ; ಅವರ ಗಮನಕ್ಕೆ ಈ ಅಂಶವನ್ನು ತರಲಿಲ್ಲವೋ ಏನೋ ಗೊತ್ತಿಲ್ಲ ; ಮತ್ತು ಮೇಜರ್ ಇರಿಗೇಷನ್ ಬೋರ್ಡಿನ ಮುಂದೆಯೂ ಸಹ ಈ ವಿಷಯ ಹೋಗಲಿಲ್ಲ; ಟೆಕ್ನಿಕಲ್ ಸಬ್ ಕಮಿಟಿ ಮುಂದೆ ಯಾವಾಗ ಬಂತು ಎಂದರೆ 28-8-1970 ನೆಯ ಇಸವಿಯಲ್ಲಿ ಮತ್ತು 8-12-1970 ರಲ್ಲಿ ಬಂತು. ಈ ಎರಡು ಟೈಮ್‌ನಲ್ಲಿ ಟೆಕ್ನಿಕಲ್ ಸಬ್ ಕಮಿಟಿ ಮುಂದೆ ಸಬ್‌ಜಕ್ಟ್ ಬಂದಿದೆ. ಆಗ ಅವರು ಏನು ಹೇಳಿದರು ಎಂದರೆ ಕನ್‌ಕರ್ ಉಪಯೋಗಿಸಿಲ್ಲ, ಸುರ್ಕಿ ಮಾರ್ಟರ್ ಉಪಯೋಗಿಸಿಲ್ಲ, ಸಿಮೆಂಟ್‌ನಲ್ಲಿ ಕಟ್ಟಿಬಿಟ್ಟಿದ್ದಾರೆ, ಆದರೆ ರೇಟ್ ಮಾತ್ರ ಅಷ್ಟೇ ಕೊಡಬೇಕು ಎಂದು 75 ರೂಪಾಯಿ, ಅವರು ಏನು ಕ್ವೋಟ್ ಮಾಡಿದ್ದಾರೆ, ನಾನ್ ಸ್ಪಿಲ್‌ವೇಗೆ ಅದೇರೀತಿ ರೇಟ್ ಕೊಟ್ಟುಬಿಡಿ ಎಂದು ಹೇಳಿದರು. ಮತ್ತೆ ಏನಾಯಿತು ಎಂದರೆ ಎಂ. ಐ. ಪಿ. ಸಿ. ಬೋರ್ಡ್‌ಗೆ ಯಾವಾಗ ಬಂತು ಎಂದರೆ 16-1-1971 ರಲ್ಲಿ ಬಂತು. ಆಗ 16-1-1971 ರಲ್ಲಿ ಎಂ. ಐ. ಪಿ. ಸಿ. ಬೋರ್ಡ್‌ನವರು ಏನು ಮಾಡಿದರು ಎಂದರೆ ಒಂದು ರೆಸಲ್ಯೂಷನ್ ಪಾಸ್ ಮಾಡಿದರು.

7-30 P. M.

The resolution of the MIPC Board meeting held on 16.1.1971 says—

"The recommendation of the Technical Sub-committee to adopt cement mortar for the masonary in the non-flow section of the dam in lieu of the surki mortar, subject to the condition that the rate and specification of the cement mortar masonary to be entered into by the contractor in the supplementary agreement should be the same as that in the original tender. In this connection the Chief Engineer, Irrigation South, has to take further action to consult the contractor whether he is agreeable to this condition."

This the Board's resolution which met on 16-1-1971.

ಅದರ ಪ್ರಕಾರ ಇಂಜಿನೀಯರ್ಸ್ ಏನು ಮಾಡಬಿಟ್ಟರು ಎಂದರೆ ಕನ್‌ಸಲ್‌ಟೇಶನ್ ನೆಗೋಸಿಯೇಷನ್ ಮಾಡುತ್ತಾ ಬಂದರು. 1971 ನೇ ಇಸವಿಯಲ್ಲಿ ಪುನಃ ಇನ್ನೊಂದು ಬೋರ್ಡ್ ಮೀಟಿಂಗ್ ಆಯಿತು. 26-1-1972 ರಲ್ಲಿ ಪುನಃ ಮೀಟಿಂಗ್ ಆಯಿತು. ಈ ಮೀಟಿಂಗ್‌ನಲ್ಲಿ ಫೈನಲ್ ಆಗಿ, ಡಿಮ್ಯಾಂಡ್ 96.50 ರಂತೆ ಕೊಡಬೇಕು ಎಂದು ಅಪ್ರೂವ್ ಮಾಡಿದರು.

He was demanding 96.50 per cubic meter, the tender rate was 75 paise for cement mortar.

What was being stated in the begining was in a way nullified in the subsequent part of the resolution. So, the Chief Engineer should not say whether we agree or do not agree. We started negotiation again and went on telling. The MIPC Board met on 2.-1-1972 in which they took a decision, perhaps it shall be given at 19.5. ಅದರಂತೆ ಕೊಟ್ಟು ಕೊಂಡು ಬಂತು. 1972 ಮಾರ್ಚ್‌ಗೆ ಬಂದೆವು. 1972 ಮಾರ್ಚ್‌ಗೆ ಬಂದ ವೇಳೆಗೆ ಇನ್ನೊಂದು ವಿಚಾರ ನಡೆದಿದೆ 16-1-1971ರಲ್ಲಿ ಎಂ. ಐ. ಪಿ. ಸಿ. ಬೋರ್ಡ್‌ನಲ್ಲಿ Inreasing the capacity of storage of Hemavathi *R*eservoir ಬಗ್ಗೆ ರೆಗುಲ್ಯೂಷನ್ ಮಾಡಿದ್ದಾರೆ. 21 ಟಿ. ಎಂ. ಸಿ ಎಫ್. ಟಿ. ನೀರು ಸ್ಟೋರ್ ಮಾಡುವ ಬದಲು 34 ಟಿ. ಎಂ. ಸಿ. ಎಫ್. ಟಿ. ನೀರು ಸ್ಟೋರ್ ಮಾಡಬೇಕು. ಮತ್ತು ಅದಕ್ಕಾಗಿ ಡ್ಯಾಮ್‌ನ್ನು ಎತ್ತರಿಸಬೇಕು ಎಂದು ಹೇಳಿದರು. ಇದನ್ನು ಹೇಳುವಾಗ ಅಡಿಷನಲ್ ಕ್ವಾಂಟಿಟಿ 44,000 ಕ್ಯೂಬಿಕ್ ಮೀಟರ್ಸ್‌ಗೆ ಬಂದಿದೆ. 1971ನೇ ಇಸವಿಯಲ್ಲಿ ಬ್ಯಾಲೆನ್ಸ್ ಎಷ್ಟು ಇತ್ತು ಅಂದರೆ ಸುಮಾರು ಒಂದು ಲಕ್ಷ ಎಪ್ಪತ್ತೊಂದು ಸಾವಿರ ಚಿಲ್ಲರೆ ಕ್ಯುಬಿಕ್ ಮೀಟರ್ಸ್ ಆಫ್ ವರ್ಕ್ಸ್ ಎಕ್‌ಸ್ಟ್ರಾ ಕ್ವಾಂಟಿಟಿ ಎಲ್ಲಾ ಸೇರಿ ಆಗಿದೆ. ಎಂ. ಐ. ಪಿ. ಸಿ. ಬೋರ್ಡ್ಸ್‌ನವರು ಹೊಸದಾಗಿ ಕೊಟ್ಟು ಕೆಲಸ ಇನ್‌ಕ್ರೀಸ್ಡ್ ಕ್ವಾನ್‌ಟಿಟಿ ಏನು ಇದೆ ಅದಕ್ಕೆ ರೇಟ್ ಫೈನಲೈಸ್ ಮಾಡಿಬಿಟ್ಟಿದ್ದರೆ ನಮಗೆ ಕಷ್ಟ ಬರುತ್ತಾ ಇರಲಿಲ್ಲ. ಅವರನ್ನು ಫೈನಲೈಸ್ ಮಾಡಿ ಎಂದು ಕೇಳಲಿಕ್ಕೆ ಹೋಗಲಿಲ್ಲ. ಅಷ್ಟು ಹೊತ್ತಿಗೆ ಶ್ರೀ ಧರ್ಮವೀರರವರು ಬಂದರು. ಅವರು 96 ರಂತೆ ರೇಟ್ ಕೊಟ್ಟರು. ಇನ್ನು ಮುಂದೆ 1974ನೇ ಇಸವಿ ಜೂನ್‌ಗೆ ಕಂಟ್ರಾಕ್ಟ್ ಮುಗಿದಮೇಲೆ ಏನಾಗುತ್ತದೆಂದು ಅವರು ನೋಡಲಿಲ್ಲ. ಹೊಸ ಕೆಲಸಕ್ಕೆ ಏನು ಕೊಡಬೇಕು ಎಂಬುದನ್ನು ಮಾತನಾಡಲಿಲ್ಲ. ಅವರು ಏನು ರೇಟ್ ಕೇಳಿಬಿಟ್ಟರು ಅದನ್ನು ಕೊಟ್ಟುಬಿಟ್ಟು ಸುಮ್ಮನೆ ಹೋದರು ನಮ್ಮ ಕಾಲಕ್ಕೆ ಅದು ಬಂತು.

(SRI D. DEVARAJ URS)

The Balaji Construction Co. said, my work is over according to the terms of the contract. You have also given me extra load of work. ಈಗಾಗಲೇ ಸ್ಪಿಲ್‌ವೇ ಪೋರ್ಷನ್‌ಗೆ ಕಮಿಟ್ ಮಾಡಿಬಿಟ್ಟಿದ್ದಾರೆ, ನಾನ್ ಸ್ಪಿಲ್‌ವೇ ಪೋರ್ಷನ್ನಿಗೆ ಎಕ್ಸ್‌ಟ್ರಾ ಕ್ವಾಂಟಿಟಿ ಏನಾಗುತ್ತದೆ ಅದಕ್ಕೆ ಕೊಟ್ಟರೆ ಮಾಡುತ್ತೇವೆ, ಇಲ್ಲದಿದ್ದರೆ ಇನ್ನಾರಿಗಾದರೂ ಕೊಟ್ಟುಕೊಳ್ಳಿ ಎಂದು ಹೇಳಿದರು. ಅದು ಬಂದಾಗ ಪುನಃ ಅದು ಟೆಕ್ನಿಕಲ್ ಕಮಿಟಿ ಮುಂದೆ ಹೋಗಿ ಅವರು ಇದರ ಬಗ್ಗೆ ಸಾಕಷ್ಟು ವಿಚಾರ ಮಾಡಿದ್ದಾರೆ. The question before us is ಕಂಟ್ರಾಕ್ಟರ್ ಇಂದ ಮಾಡುವುದು ಸೂಕ್ತವೇ ಎಂಬುವುದು ಒಂದು ಕಡೆ, ಕಂಟ್ರಾಕ್ಟರ್‌ರವರ ಅಬ್ಲಿಗೇಷನ್ ಏನು, ಕಂಟ್ರಾಕ್ಟರರಿಂದ ಬರೆಸಿಕೊಂಡಿರತಕ್ಕ ಅಗ್ರಿಮೆಂಟ್ ಏನು ಎಂಬುವುದು ಒಂದು ಕಡೆ ನೋಡಬೇಕಾದುದು ಇದೆ. ಅಗ್ರಿಮೆಂಟ್‌ನಲ್ಲಿ ಏನು ಡಿಫೆಕ್ಟ್ ಇದೆ. ಆ ಡಿಫೆಕ್ಟಿನಿಂದ ಆಗುವ ಪರಿಣಾಮ ಏನು, ನಾಳೆ ಕೋರ್ಟಿಗೆ ಹೋದರೆ ಏನಾಗುತ್ತದೆ, ಟೆಕ್ನಿಕಲ್ ಆಗಿ ಫೀಸಿಬಲ್ ಯಾವುದು ಎನ್ನುವುದು ಎರಡನೆಯ ಭಾಗ ಮೂರನೇ ಭಾಗ ಇವರಿಗೆ ಕೊಡುವುದು ಬೇಡ, ಇನ್ನು ಯಾರಿಗಾದರೂ ಟೆಂಡರ್ ಕರೆದು ಕೊಟ್ಟರೆ, will it in any way reduce or will it increase and assuming there is going to be some reduction in the amount which has to be paid to the contractor when compared to this man, what are the other implications involved from the point of work, ಸ್ಪಿಲ್‌ವೇ ಬೇರೆ ಮಾಡಬೇಕಾಗುತ್ತದೆ, ಅವನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಎಷ್ಟು ವರ್ಷ ಆಗುತ್ತದೆ ಅದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು 1972 ರಿಂದ 1975 ನೇ ಇಸವಿಯ ವರೆಗೂ ಲೆಕ್ಕ ಇಟ್ಟು 1975ನೇ ಇಸವಿಗೆ ಪ್ರಾಜೆಕ್ಟ್ ಮಾಡಿದರೆ ಎಷ್ಟು ದಿವಸವಾಗುತ್ತದೆ, ಎಷ್ಟು ದಿವಸದಲ್ಲಿ ಆತ ಮುಗಿಸಬೇಕಾಗುತ್ತದೆ, 1975ನೇ ಇಸವಿಯುವರೆಗೆ ಟೆಂಡರ್ ಕೊಡದೆ ಇದ್ದರೆ ಅಥವಾ ನಾವು ಡಿಪಾರ್ಟ್‌ಮೆಂಟ್ ಎಸ್ಟಿಮೇಟ್ ಪ್ರಕಾರ ಮಾಡುತ್ತೇವೆಂದರೆ ಸ್ಪೆಸಿಫಿಕೇಶನ್, ರೇಟ್ಸ್ ಇವನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು 1975ನೇ ಇಸವಿಯಲ್ಲಿ ಎಷ್ಟು ಪರ್ಸೆಂಟೇಜ್ ಎಸ್ಕಲೇಷನ್ ಬರುತ್ತದೆ, ವರ್ಷೇ ವರ್ಷೇ ಎಷ್ಟು ಎಸ್ಕಲೇಷನ್ ಆಗಬಹುದು ಎಂಬುದು ಎಲ್ಲವನ್ನು ಸಾಕಷ್ಟು ವಿಚಾರಮಾಡಿ ಇಷ್ಟಕ್ಕೆ ಒಪ್ಪಿದರೆ ಕೊಡಬಹುದು ಎಂದು, ಎ. ಐ. ಪಿ. ಸಿ. ಬೋರ್ಡ್ ರೆಕಮೆಂಡೇಶನ್ ಏನು ಇದೆಯೋ ಅಷ್ಟಕ್ಕೆ ಅವರು ಒಪ್ಪಿಕೊಂಡು ಕೆಲಸಮಾಡಿರತಕ್ಕದ್ದು ಇದು. ಆದುದರಿಂದ ನಾವು ಆದರೂ ಮೊಹರುಬಾಸಿ ಮಾಡಬೇಕೆಂಬ ದೃಷ್ಟಿಯಿಂದ ಔಟ್ ಆಫ್ ದಿ ವೇ ಹೋಗಿ ಟೆಂಡರರ್‌ಗೆ ಕೊಡಬೇಕೆಂಬ ದೃಷ್ಟಿಯಿಂದ ಮಾಡಿದ್ದಲ್ಲ. ಬಹಳ ಹಿಂದೆಯೇ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಆ

ತೀರ್ಮಾನಗಳನ್ನು ನಾನಾ ಕಾರಣಗಳಿಂದ ತೆಗೆದುಕೊಳ್ಳದೇ ಉಳಿಸಿಕೊಂಡು ಬಂದಿದ್ದರಿಂದ ಇವತ್ತಿನ ದಿವಸ ನಾವು ಇಂಥಾ ಒಂದು ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿ ಹಾಕಿಕೊಳ್ಳುವಂಥ ಸ್ಥಿತಿ ಬಂದಿದೆ. ಇದರ ಜೊತೆಗೆ ಡ್ಯಾಂ ಪ್ರೊಪೋರ್ಷನ್ ಹೆಚ್ಚು ಅದಾಗ, ಕ್ವಾಂಟಂ ಆಫ್ ವರ್ಕ್ ಜಾಸ್ತಿ ಆಯಿತು. ಅದನ್ನು ಆತನಿಗೇ ಕೊಡೋಣ, ರೇಟ್ ಹೆಚ್ಚಿಗೆ ಇಲ್ಲ ಎಂದು ಆತನಿಗೆ ಕೊಟ್ಟಿದೆ. ಸ್ಲೂಯಿಸಸ್ ಕೆಪ್ಯಾಸಿಟಿ ಹೆಚ್ಚಿಸಿದುದರಿಂದ ಅದನ್ನು ಆತನಿಗೇ ಕೊಡಬೇಕೆಂದು ಕೊಟ್ಟಿದ್ದೇವೆ. ಅದನ್ನು ಕೊಡುವಾಗ ಸರ್ಕಾರದ ಜೊತೆಯಲ್ಲಿ ಏನು ನೆಗೋಷಿಯೇಷನ್ ನಡೆದಿತ್ತು, ಅದನ್ನು ಟೆಕ್ನಿಕಲ್ ಸಬ್ ಕಮಿಟಿಯು ಪರಿಶೀಲನೆ ಮಾಡಿ ಎಂ. ಐ. ಪಿ. ಸಿ. ಬೋರ್ಡ್ ಮುಂದೆ ಒಂದು ಒಪ್ಪಿದಂಥಾದ್ದನ್ನು ನಾವು ಕೊಟ್ಟಿದ್ದೇವೆಯೇ ಹೊರತು, ಯಾವ ದಾಕ್ಷಿಣ್ಯಕ್ಕಾಗಲಿ, ಅಥವಾ ಬೇರೆ ಯಾವುದಾದರೂ ಇನ್‌ಫ್ಲ್ಯೂಯನ್ಸ್‌ಗಾಗಲೀ ಕಟ್ಟುಬಿದ್ದು ಕೊಟ್ಟಿರುವುದಿಲ್ಲ ಎಂಬುದನ್ನು ನಾವು ಸ್ಪಷ್ಟವಾಗಿ ಹೇಳಬಯಸುತ್ತೇನೆ

ಇನ್ನು ಅದೇ ರೀತಿ ಕೆಲವು ಕ್ಲೈಂಸ್‌ನ್ನು ನೀವು ಕೊಟ್ಟುಬಿಟ್ಟಿದ್ದೀರಿ ಎಂದು ಹೇಳಿದ್ದೀರಿ. ಹಿಡಕಲ್ ಡ್ಯಾಂ ಅಥವಾ ಬೇರೆ ಕಡೆ ಕ್ಲೈಂಸ್ ನೆಗೋಷಿಯೇಷನ್ ಮಾಡಿ ಕೊಟ್ಟಿರತಕ್ಕಂಥಾದ್ದಾಗಲಿ, ನಾವು ಬಂದು ಹೊಸದಾಗಿ ವಿಷಯಗಳನ್ನು ಜಾರಿಗೆ ತಂದಿದ್ದೇವೆಂದು ತಿಳಿಯುವುದಾದರೆ ಅದು ಅಲ್ಲ. ಮಾನ್ಯ ದೇವೇಗೌಡರಿಗೆ ಗೊತ್ತಿದೆ ಎಂದು ನನ್ನ ಭಾವನೆ. ನಮ್ಮ ಇಲಾಖೆಯ ಚರಿತ್ರೆಯನ್ನು 1962ರಿಂದ ಈಚೆಗೆ ತೆಗೆದುಕೊಂಡರೆ ಆ ರೀತಿ ನೆಗೋಷಿಯೇಷನ್ ಮಾಡಿ ಕೊಟ್ಟಿರತಕ್ಕಂಥಾದ್ದು ಹತ್ತಾರು ನಿದರ್ಶನಗಳಿವೆ. ನಾವು ಇತ್ತೀಚೆಗೆ ಕ್ಲೈಂಸ್ ಕಮಿಟಿ ಎಂದು ಮಾಡಿದ್ದೇನೆ. ಹಿಂದೆ ಬರೀ ಟೆಕ್ನಿಕಲ್ ಸಬ್ ಕಮಿಟಿ ಮತ್ತು ಎಂ. ಐ. ಪಿ. ಸಿ. ಕೊಡುತ್ತಿದ್ದರು. ನಮಗೆ ಸರಿಯಾಗಿ ಗೊತ್ತಾಗುವುದಿಲ್ಲ. ಲೀಗಲ್ ಆಗಿ ಏನು ಇರಬಹುದು ಎಂದು ಲೀಗಲ್ ಅಸ್ಪೆಕ್ಟ್ ಸ್ಟಡಿ ಮಾಡಲಿಕ್ಕೆ ಲೀಗಲ್ ಡಿಪಾರ್ಟ್‌ಮೆಂಟ್, ಫೈನಾನ್ಸ್ ಡಿಪಾರ್ಟ್‌ಮೆಂಟ್, ಟೆಕ್ನಿಕಲ್ ಡಿಪಾರ್ಟ್‌ಮೆಂಟ್ ಎಲ್ಲರನ್ನೂ ಸೇರಿಸಿ ಒಂದು ಕ್ಲೈಂ ಕಮಿಟಿ ಮಾಡಿದ್ದೇವೆ. ಅವರು ಏನು ಟೆಕ್ನಿಕಲ್ ಆಗಿ ಲೀಗಲ್ ಆಗಿ ಕೊಡಬಹುದು ಎಂದು ಏನು ಹೇಳಿದರೋ ಅದನ್ನು ನಾವು ಕೊಟ್ಟಿದ್ದೇವೆ. ಅವರ ಒಂದು ತೀರ್ಮಾನ, ಅವರ ಒಂದು ಶಿಫಾರಸನ್ನು ನಾವು ಚಾಚೂ ಕೂಡ ಬಿಟ್ಟು ಹೋಗಿಲ್ಲ.

ಇನ್ನು ಕೆಲವು ವಿಷಯಗಳನ್ನು ಹೇಳಿದ್ದೀರಿ ನೀವು 10 ಚಾರ್ಜಸ್ ಏನು ಹೇಳಿದ್ದೀರಿ, ಅದರಲ್ಲಿ ಕೃಷ್ಣ ಫ್ಲೋರ್ ಮಿಲ್ಸ್‌ನದೂ ಒಂದು. ಹೌದು ಕೊಟ್ಟಿದೆ, ಆದರೆ ಅವರಿಗೆ ಕೊಟ್ಟಿರುವುದು ಸರ್ಕಾರದ ದಬ್ಬಾಳಿಕೆ ಮಾಡಿ ಆ ಜಾಗವನ್ನು ಯಾರಿಗೂ ಕೊಡದ ಹಾಗೆ ಮಾಡಿ ಅವರಿಗೆ ಕೊಟ್ಟದ್ದಲ್ಲ. ಕಾರ್ಪೊರೇಷನ್ ತೀರ್ಮಾನದ ಪ್ರಕಾರ ಕೊಟ್ಟಿದ್ದೇವೆ

ಶ್ರೀ ಟಿ.ಆರ್ ಶಾಮಣ್ಣ.—ಕಕಪೋರೇಷನ್‌ನವರು ಮಕ್ಕಳಿಗೆ ಆಟವಾಡಲು ಸ್ಟೇಡಿಯಂ ಕಟ್ಟಬೇಕೆಂದು ಇಟುಕೊಂಡಿದ್ದ ಜಾಗವನ್ನು ಅವರಿಗೆ ಕೊಟ್ಟಿದ್ದು ಸರಿಯೇ?

ಶ್ರೀ ಡಿ. ದೇವರಾಜ್ ಅರಸ್.—ಅದು ನನಗೂ ಗೊತ್ತಿದೆ. ಕಾರ್ಪೊರೇಷನ್‌ನವರು ಇಟ್ಟುಕೊಂಡಿರತಕ್ಕ ಜಾಗದಲ್ಲಿ ಸ್ವಲ್ಪ ಭಾಗವನ್ನು ತೆಗೆದುಕೊಂಡರೆ ತೊಂದರೆ ಏನೂ ಇಲ್ಲ. ನಾನು ಮ್ಯಾಪ್ ತರಿಸಿ ನೋಡಿಯೇ ಕೊಟ್ಟಿರತಕ್ಕದ್ದು. ಅಲ್ಲದೆ ಈಗಾಗಲೇ ಅಲ್ಲಿ ಒಂದು ಫ್ಯಾಕ್ಟರಿ ಇದೆ. ಅದರ ಎಕ್ಸ್‌ಟೆನ್‌ಷನ್ ಗೋಸ್ಕರ ಕೊಟ್ಟಿರುವುದು.

ಶ್ರೀ ಟಿ. ಆರ್. ಶಾಮಣ್ಣ.—ಇದು ಮೂರನೇ ಸಲ ಆ ಮಿಲ್‌ನವರಿಗೆ ಕೊಡುತ್ತಿರುವುದು ನೀವು ಪದೇ ಪದೇ ಕೊಡುತ್ತಿರುವುದಕ್ಕೆ ಕಾರಣವಾದರೂ ಏನು?

ಶ್ರೀ ಡಿ. ದೇವರಾಜ್ ಅರಸ್:—ಕಾರ್ಪೊರೇಷನ್‌ನ ಎಷ್ಟೋ ಜಾಗಗಳನ್ನು ಉದ್ಯಾನವನಗಳಿಗಾಗಿ ಇಟ್ಟುಕೊಂಡಿದ್ದನ್ನು ಕೊಟ್ಟಿಲ್ಲವೆ ನಾವು ಅಂಥಾದ್ದು ಏನೂ ಮಾಡಿಲ್ಲ.

ಶ್ರೀ ಟಿ. ಆರ್. ಶಾಮಣ್ಣ: –ಸಿವಿಕ್ ಅಮಿನೀಟೀಸ್‌ಗೆ ಇದ್ದಂಥ ನಾಲ್ಕೂವರೆ ಎಕರೆಯನ್ನು ಕೊಟ್ಟಿದ್ದಾರೆ. ಅದನ್ನು ಸರಿಪಡಿಸಿ.

ಶ್ರೀ ಡಿ. ದೇವರಾಜ ಅರಸ್.—ನೀವು ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಿಗೆ ಕೊಟ್ಟಿರುವ ಹತ್ತಾರು ನಿದರ್ಶನಗಳನ್ನು ಕೊಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಸಿವಿಕ್ ಅಮಿನೀಟೀಸ್‌ಗಾಗಿ ಇದ್ದಂಥಾದ್ದನ್ನು ಏತಕ್ಕೆ ಕೊಟ್ಟಿರಿ?

SRI D. DEVARAJ URS:—*So* far as Krishna Mills is concerned, Government did allow this land to be given on the recommendation of the Corporation. We have not gone beyond that. ಒಂದೊಂದು ಸಂದರ್ಭದಲ್ಲಿ ಏನು ಆಗುತ್ತದೆ ಅಂದರೆ ಅದಕ್ಕೆ ಬೇರೆ ಕಾರಣಗಳಿವೆ. I do not like to mention here. I do not like to elaborate it further.

ಅಧ್ಯಕ್ಷರು: ಈ ಚರ್ಚೆಯಲ್ಲಿ ಇದೆಲ್ಲಾ ಬರುತ್ತದೆಯೇ?

SRI D. DEVARAJ URS :—Charges are there before us. I must take the opportunity to mention what they are. Otherwise they will remain for ever on record without my having refuted them. ಏನೋ ಮಾಡಿಬಿಟ್ಟಿದ್ದೇವೆಂದು ಏತಕ್ಕೆ ಬರಬೇಕು ? ಮತ್ತೆ ನಿರ್ಮಲ ಇಂಜಿನಿಯರಿಂಗ್ ವಿಷಯ ಅಂದಿತ್ತು. ಅದಕ್ಕೆ ಉತ್ತರ ಕೊಟ್ಟಿದ್ದೇನೆ.

ಇನ್ನು 20 ಎಕರೆ ಜಮೀನು ವಿಷಯ ಹೇಳಬೇಕಾಗಿದೆ. ಆದರೆ ಅದನ್ನು ಹೆಚ್ಚು ಉದ್ದವಾಗಿ ಹೇಳದೇ ಒಂದೇ ಒಂದು ಮಾತಿನಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. 20 ಎಕರೆ ಜಮೀನು ಕೊಟ್ಟಿರುವುದರಲ್ಲಿ ನನ್ನ ಕೈವಾಡವಾಗಲಿ, ಹಸ್ತಕ್ಷೇಪವಾಗಲಿ, ನನ್ನ ಶಿಫಾರಸ್ಸು ಆಗಲಿ ಏನೂ ಮಾಡಿಲ್ಲವೆಂದು ಸ್ಪಷ್ಟಪಡಿಸ ಬಯಸುತ್ತೇನೆ. ಒಬ್ಬ ಯುವಕ ಡಾಕ್ಟರ್ ಆಗಿರುವವನು ಬೇಕು ಎಂದು ತೆಗೆದುಕೊಂಡಿದ್ದಾನೆ ಅದು ಸರಿಯೋ ತಪ್ಪೋ ಎನ್ನುವುದು ಹೈಕೋರ್ಟಿನಲ್ಲಿ ಇರುವುದರಿಂದ ಇದರ ಬಗ್ಗೆ ಏನೂ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ ಹಾಗೆ ವ್ಯಾಖ್ಯಾನ ಮಾಡುವುದಕ್ಕೆ ಹೋದರೆ ಅದು ತಪ್ಪಾಗುತ್ತದೆ. ಹೈಕೋರ್ಟಿನಲ್ಲಿ ಅದು ಯಾವ ರೀತಿ ತೀರ್ಮಾನವಾಗುತ್ತದೋ ಅದರಂತೆ ಯಾರು ಬೇಕಾದರೂ ಅದನ್ನು ಅನುಭವಿಸಿಕೊಳ್ಳಲಿ. ಇದು ತಪ್ಪಾಗಿದ್ದರೆ ತಪ್ಪು ಎಂದು ಹೇಳಲಿ, ಸರಿಯಾಗಿದ್ದರೆ ಸರಿ ಎಂದು ಹೇಳಲಿ.

ಇನ್ನು ಸೈಟುಗಳ ವಿಷಯದಲ್ಲಿ ನಾನು ಈಗಾಗಲೇ ಮೇಲ್ಮನೆಯಲ್ಲಿ ಉತ್ತರವನ್ನು ಹೇಳಿದ್ದೇನೆ. ಈಗ ಅದಕ್ಕಿಂತಲೂ ಹೆಚ್ಚಿಗೆ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ದೇವರಾಜ ಅರಸ್‌ಗೆ 300 ರೂಪಾಯಿ ಬಾಳತಕ್ಕ ಸೈಟನ್ನು ಕೇವಲ 35 ರೂಪಾಯಿಗೆ ಕೊಟ್ಟು ಬಿಟ್ಟಿದ್ದಾರಂತೆ ಅಂತ ವಾಜಪೇಯಿಯೂ ಹೇಳುವವರೇ, ಪಿಲೂ ಮೋದಿಯೂ ಹೇಳುವವರೇ ಇದು ಪತ್ರಿಕೆಗಳಲ್ಲೂ ಕೂಡ ಬಂದಿದೆ. Sri Devaraj Urs, Chief Minister of Karnataka has taken some site for only Rs. 3/ /- per sq. Yd. which would otherwise cost of Rs. 300/- per Sq. Yd. ಮಾನ್ಯ ಅಧ್ಯಕ್ಷರೇ, ಬಹುಶಃ ಈ ಸಭೆಯಲ್ಲಿ ಎಷ್ಟೋ ಜನ ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಮಿನಿಸ್ಟರ್‌ಗಳೂ, ಎಕ್ಸ್ ಮಿನಿಸ್ಟರ್‌ಗಳೂ, ಎಂ.ಎಲ್.ಎ.ಗಳೂ ಎಕ್ಸ್ ಎಂ.ಎಲ್.ಎ.ಗಳೂ, ಎಂ.ಪಿ.ಗಳೂ, ಅಧಿಕಾರಿಗಳೂ ಹೀಗೆ ಸಾವಿರಾರು ಜನರು ತೆಗೆದುಕೊಂಡಿದ್ದಾರೆ. ಇದರಲ್ಲಿ ಆಡಳಿತ ಪಕ್ಷ, ವಿರೋಧಪಕ್ಷದ ಪ್ರಶ್ನೆ ಇಲ್ಲ. ಆದರೆ ಯಾರೋ ಅವರಿಗೆ ಹೇಳುವವರು ಸರಿಯಾಗಿ ಹೇಳಿಲ್ಲವೆಂದು ತಿಳಿದುಕೊಂಡಿದ್ದೇನೆ. ಇದನ್ನೆಲ್ಲಾ ಹೇಳಿಕೊಂಡು ದೇಶದಲ್ಲಿ ಓಡಾಡುತ್ತಾರೆ. ಅದಕ್ಕೆ ಅವರ ಮಾತು ಕೇಳುವುದಿಲ್ಲ. ಹೇಳುವವರು ಸರಿಯಾಗಿ ತಿಳಿದುಕೊಂಡು ಹೇಳಿದ್ದರೆ ಕೇಳುತ್ತಿದ್ದರು. ಸಿ. ಐ. ಟಿ. ಬಿ. ಎಂದು ಮಾಡಿರುವುದು ಎಲ್ಲ ಜನರಿಗೂ ಸರಿಯಾದ ಬೆಲೆಯಲ್ಲಿ

SRI D. DEVARAJ URS

ಜಾಗಗಳನ್ನು ಕೊಡಬೇಕು ಎಂದು ಹರಾಜಿನಲ್ಲಿ ತೆಗೆದುಕೊಳ್ಳುವ ಹಾಗಿದ್ದರೆ ನಮ್ಮಂಥವರಿಗೆ, ನಿಮ್ಮಂಥವರಿಗೆ ಯಾರಿಗೂ ಕೂಡ ಒಂದು ಮನೆಯ ಜಾಗವೂ ಕೂಡ ಸಿಕ್ಕುತ್ತಾ ಇರಲಿಲ್ಲ. ಎಲ್ಲಾ ಬರೀ ಸಾಹುಕಾರರುಗಳೇ ಇಡೀ ಪ್ಯಾಲೆಸ್ ಆರ್ಚರ್ಡ್, ಜಯಮಹಲ್, ಎಕ್ಸ್‌ಟೆನ್‌ಷನ್‌ಗಳನ್ನು ಕೊಂಡು ಕೊಂಡು ಇಟ್ಟು ಕೊಳ್ಳುತ್ತಿದ್ದರು ಕಾರ್ನರ್ ಸೈಟ್‌ಗಳನ್ನು ಹರಾಜು ಹಾಕತಕ್ಕಂಥ ಒಂದು ನೀತಿ ಈ ಸಿ. ಐ. ಟಿ, ಬಿ. ಯಲ್ಲಿ ಇದೆ. ಇದರಲ್ಲಿ ಬಂದಂಥ. ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಹಾಕಬೇಕೆಂಬ ನೀತಿಯಿಟ್ಟುಕೊಂಡಿದ್ದಾರೆ ಜನ ಏನು ತಿಳಿದು ಕೊಂಡಿದ್ದಾರೆ ಎಂದರೆ ಸಿ. ಐ. ಟಿ. ಬಿ.ಗೆ ಮೋಸ ಮಾಡಿ ಬಹಳ ಕಡಿಮೆ ಬೆಲೆಗೆ ಈ ಸೈಟನ್ನು ತೆಗೆದುಕೊಂಡಿದ್ದಾರೆ ಹೆಚ್ಚಿಗೆ ದುಡ್ಡಿಗೆ ಮಾರುತ್ತಾರೆ ಎಂದು. ಇದನ್ನು ಮಾರಿ ಲಾಭ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ತೆಗೆದುಕೊಂಡಿಲ್ಲ. ಆದರೆ ನನ್ನ ಮೇಲೆ ಹೇಳುವವರು ಎಲ್ಲಾ ಮಾಡಿಕೊಂಡಿದ್ದಾರೆ. ಬೇಕಾದರೆ ಅದನ್ನು ತೋರಿಸಿ ಕೊಡುತ್ತೇನೆ ಹಡಗನ್ನೇ ನುಂಗಿಬಿಟ್ಟು ಅರಗಿಸಿಕೊಳ್ಳಲು ಹೋಗುತ್ತಾ ಇರುವವರು ಅವರು, ಹಡಗನ್ನು ನುಂಗದೇ ಇರುವ ನನ್ನಮೇಲೆ ಅವರು ಏನೇನೋ ಹೇಳುವುದಕ್ಕೆ ಹೊರಟಿದ್ದಾರೆ. ಆದರೆ ವಿಚಾರ ಗೊತ್ತಿಲ್ಲದೆ ಯಾವುದನ್ನೂ ಮಾತ ನಾಡಬಾರದು. ನಾನು ಮೋಸ ಮಾಡಿ ಸೈಟನ್ನು ತೆಗೆದುಕೊಂಡಿಲ್ಲ. ನಾನು ಸೈಟಿಗೆ ಅಪ್ಲೈ ಮಾಡಿದಾಗ ಮಿನಿಸ್ಟರ್ ಆಗಿರಲಿಲ್ಲ. ಅದಕ್ಕೂ ಮುಂಚೆ ಅರ್ಜಿ ಹಾಕಿದ್ದೆ ಆದರೆ ಅದು ಮಿನಿಸ್ಟರ್ ಆದ ಮೇಲೆ ಬಂತು. ಮೇಲಿನವರು ಕೇಳಿದ್ದರಿಂದ ಉತ್ತರ ಕೊಟ್ಟಿದ್ದೇನೆ ಇದಕ್ಕಿಂತ ಹೆಚ್ಚಿಗೆ ಏನನ್ನೂ ನಾನು ಹೇಳಬೇಕಾಗಿಲ್ಲ. ಅದರ ಬಗ್ಗೆ ನಾನು ಹೆಚ್ಚಾಗಿ ಹೇಳಬೇಕಾದ ಅಗತ್ಯ ಇಲ್ಲ. ಬಾಜ್ರಾ ವಗೈರೆ ಬಗ್ಗೆ ಎಲ್ಲಾ ಹೇಳಿ ಆಗಿದೆ. ಪಿ. ಡಬ್ಲ್ಯು. ಡಿ. ಆಫೀಸರ್ಸ್ ಬಗ್ಗೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳದೆ ಫೇವರಿಟಿಸಂ ತೋರಿಸಿದ್ದಾರೆ ಎಂದು ಮಾನ್ಯ ದೇವೇಗೌಡರು ಹೇಳಿದರು. ಬಹುಶಃ ಅವರು ಈಗಲಾದರೂ ಒಪ್ಪುತ್ತಾರೆ ಎಂದು ಕಾಣುತ್ತದೆ. ನಾನಂತೂ ಫೇವರಿಟಿಸಂ ಮಾಡುವುದಕ್ಕೆ ಹೋಗಿಲ್ಲ. ವಿಜಿಲೆನ್ಸ್ ಕಮಿಷನ್‌ಗೆ ಹೋಗಿತ್ತು. ಅಲ್ಲಿಂದ ಸೆಕ್ರೆಟರಿಯವರಿಗೆ ಹೋಗಿತ್ತು, ಆ ಮೇಲೆ ಪಿ. ಡಬ್ಲ್ಯು. ಡಿ. ಮಿನಿಸ್ಟರಿಗೆ ಹೋಗಿತ್ತು. ಏನು ಬಂದಿತ್ತೋ ಅದಕ್ಕೆ 'ಎಸ್' ಎಂದು ಹೇಳಿಕಳಿಸಿದ್ದೇನೆ ಅಷ್ಟೆ. ಇನ್ನೊಂದು ವಿಚಾರ ಹೇಳಿದರು. ಏನೆಂದರೆ ನೊ ಅಬ್ಜೆಕ್ಷನ್ ಸರ್ಟಿಫಿಕೇಟ್ 200 ಚಿಲ್ಲರೆ ಎಕರೆಗೆ ಕೊಟ್ಟಿದ್ದಾರೆ ಎಂದು ನಾನು ಅದನ್ನು ತರಿಸಿ ನೋಡಿದೆ. ನಾವು ಯಾವ ಕಾನೂನನ್ನು ಆಗಲಿ ಮುರಿದು ಮಾಡಿಲ್ಲ. ಎಚ್. ಎ. ಎಲ್. ಬಿ. ಇ. ಎಲ್. ಗೆ ಸಂಬಂಧಪಟ್ಟ ಎಂಪ್ಲಾಯೀಸ್ ಸೊಸೈಟಿ ಮಾಡಿಕೊಂಡಿದ್ದಾರೆ. ಕಾನೂನು ರೀತ್ಯ ಏನು ಮಾಡಬೇಕೋ ಅಷ್ಟು ಮಾಡಿದ್ದೇವೆಯೋ ಹೊರತು ಕಾನೂನು ವಿರುದ್ಧವಾಗಿ ಏನೂ ಕೆಲಸ ಮಾಡಿಲ್ಲ. ಕಾನೂನು ಬಿಟ್ಟು ವಿಶೇಷವಾದಂಥ ಸಹಾಯವನ್ನು ಅವರಿಗೆ ಮಾಡಬೇಕು ಎಂದು ಮಾಡಿಲ್ಲ ?.

ಶ್ರೀ ಕೊಣಂದೂರು ಲಿಂಗಪ್ಪ :—ಎಲ್ಲಾ ವಿಧಿನಿಯಮಗಳ ಪ್ರಕಾರ ನಡೆದಿದೆ.

ಶ್ರೀ ಡಿ. ದೇವರಾಜ್ ಅರಸ್ :— ವಿಧಿನಿಯಮಗಳ ಪ್ರಕಾರ ಅಂದರೆ 200-300 ಜನ ಕಾರ್ಮಿಕರು ಸೇರಿದ್ದಾರೆ. ತಾವೇ ಹೋಗಿ ಅವರನ್ನು ಕೇಳಿ, ಆವಾಗಲಾದರೂ ತಮಗೆ ಸಮಾಧಾನವಾಗುತ್ತದೋ ಏನೋ ನೋಡೋಣ. ಮಾನ್ಯ ಶಾಮಣ್ಣನವರನ್ನು ಕೇಳಿ ಹೇಳುತ್ತಾರೆ.

ಶ್ರೀ ಕೊಣಂದೂರು ಲಿಂಗಪ್ಪ:—ಎಲ್ಲಾ ಒಂದೇ, ವಿಧಿನಿಯಮಗಳ ಪ್ರಕಾರ ಮಾಡಿದ್ದೀರಿ.

ಶ್ರೀ ಡಿ. ದೇವರಾಜ್ ಅರಸ್:— ಆ ಎಂಪ್ಲಾಯೀಸ್ ಎಲ್ಲ ನಮ್ಮ ಚಿಕ್ಕಪ್ಪನ ಮಕ್ಕಳೇನು ಫೇವರಿಟಿಸಂ ತೋರಿಸುವುದಕ್ಕೆ ? ಎಂಪ್ಲಾಯೀಸ್ ಆಗಿರುವವರು ಪ್ರೈವೇಟ್ ಲ್ಯಾಂಡ್ ತೆಗೆದುಕೊಂಡು ಕನ್‌ವರ್ಟ್ ಮಾಡಿಕೊಂಡು ವಿಧಿನಿಯಮಗಳ ಪ್ರಕಾರ ಅಲ್ಲದೆ ಇನ್ನು ಯಾವ ಪ್ರಕಾರ ಮಾಡಬೇಕು ? ಇಂಥಾದ್ದನ್ನು ಸಾವಿರಾರು ಜನ ಮಾಡಿಕೊಂಡಿದ್ದಾರೆ. ಅವರೇನು ಇನ್ನೊಬ್ಬರಿಂದ ಕಡಿಮೆ ಬೆಲೆಗೆ ತೆಗೆದುಕೊಂಡು, ಹೆಚ್ಚು ಬೆಲೆಗೆ ಮಾರಿಕೊಳ್ಳುವುದಕ್ಕೆ ಹೋಗಿಲ್ಲ. ಲಾಭ ಮಾಡಿಕೊಂಡಿಲ್ಲ. ಅದನ್ನು ಸಿ.ಐ.ಟಿ.ಬಿ.ನವರು ತೆಗೆದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಸಿ. ಐ. ಟಿ.ಬಿ.ನವರು ತೆಗೆದುಕೊಳ್ಳಬೇಕು ಎಂದು ನೋಟಿಫಿಕೇಷನ್ ಎಲ್ಲಾ ಮಾಡಿದ್ದನ್ನು ಅವರು ಅಪಹರಿಸಿಕೊಂಡುಬಿಟ್ಟರು, ಆದುದರಿಂದ ಸಿ. ಐ. ಟಿ. ಬಿ. ಯವರು ತಕ್ಷಣ ಬಿಡಿಸಿದರು ಎಂದರೆ ಆಗ ಒಪ್ಪಿಕೊಳ್ಳೋಣ. ಅಂಥಾದ್ದೇನೂ ಅವರು ಮಾಡಿಲ್ಲ. ಆ ಎಂಪ್ಲಾಯೀಸ್ ಸೊಸೈಟಿ ಮಾಡಿಕೊಂಡು, ಎಲ್ಲರೂ ಸೇರಿ ದುಡ್ಡು ಹಾಕಿಕೊಂಡು ಇಂಥಾ ಜಮೀನು ತೆಗೆದುಕೊಂಡಿದ್ದೇವೆ, ಅದಕ್ಕೆ ನೋ ಅಬ್ಜಕ್ಷನ್ ಸರ್ಟಿಫಿಕೇಟ್ ಕೊಡಿ ಸೈಟ್ ಮಾಡಿಕೊಳ್ಳುತ್ತೇವೆ ಎಂದು ಕೇಳಿದರು ಅದಕ್ಕೆ ಎಸ್. ಎಂದು ಒಪ್ಪಿದ್ದೇವೆ. ಯಾರ ದಾಕ್ಷಿಣ್ಯಕ್ಕೂ ಮಾಡಿಲ್ಲ, ಯಾವ ಫೇವರಿಟಿಸಂ ತೋರಿಸಿಲ್ಲ.

ಅಧ್ಯಕ್ಷರೇ ಇಷ್ಟು ಹೇಳಿ, ಸರ್ಕಾರದಿಂದ ಯಾವುದಾದರೂ ರೀತಿಯಲ್ಲಿ ಕಾನೂನು ಬಿಟ್ಟು ಆಗಲೀ, ಯಾರಿಗಾದರೂ ದಾಕ್ಷಿಣ್ಯ ತೋರಿಸಿ ಸಹಾಯ ಮಾಡುವುದಾಗಲಿ ನಾವು ಕೆಲಸಗಳನ್ನು ಮಾಡಿದ್ದೇವೆ ಎಂದು ಮಾನ್ಯ ಸದಸ್ಯರು ಅನುಮಾನ ವ್ಯಕ್ತಪಡಿಸಿದರು. ಅದಕ್ಕೆ ನಾನು ನಮ್ರತೆಯಿಂದ ಸಭೆಯ ಮುಂದೆ ಮತ್ತು ಮಾನ್ಯ ದೇವೇಗೌಡರಿಗೆ ತಿಳಿಸುವುದು ಏನೆಂದರೆ ದಾಕ್ಷಿಣ್ಯ, ಫೆವರಿಟಿಸಂ ತೋರಿಸಿದಂಥ ಕಾರ್ಯ ಮಾಡಿದ್ದಾರೆ ಎಂದು ಅವರು ಏನು ಹೇಳಿದರು, ಅಂಥಾದ್ದು ನಾವು ಏನೂ ಮಾಡಿಲ್ಲ ಎಂದು ನಾನು ಕಡ್ಡಾಯವಾಗಿ ಸ್ಪಷ್ಟಪಡಿಸಿ ಹೇಳುತ್ತಾ ಇದ್ದೇನೆ. ಅದಕ್ಕೆ ನಾನು ತಕ್ಕಷ್ಟು ಮಾಹಿತಿಯನ್ನು ಒದಗಿಸುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ಕೊನೆಯದಾಗಿ ನಾನು ಕೇಳಿಕೊಳ್ಳುವುದು ಇಷ್ಟು ;

(SRI D. DEVARAJ URS)

ಅಧಿಕಾರದಲ್ಲಿರುವಾಗ, ಯಾರೇ ಆಗಲಿ ಯಾವುದಾದರೂ ಒಂದು ವಿರೋಧ ಇದ್ದೇ ಇರುತ್ತದೆ; ಕೇವಲ ಶಾಸಕರಿಗೇ ಅಲ್ಲ ಮಂತ್ರಿಗಳಿಗೂ ಇದ್ದೇ ಇರುತ್ತದೆ. ಹಳ್ಳಿಗಳಲ್ಲಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕೂಡ ಯಾವುದಾದರೂ ವಿರೋಧ ಇದ್ದೇ ಇರುತ್ತದೆ, ಅದು ನನಗೂ ಗೊತ್ತಿದೆ, ತಮಗೂ ಗೊತ್ತಿದೆ ಅಲ್ಲೂ ಕೂಡ ಇವರು ಏನೂ ಕೆಲಸ ಮಾಡಿಲ್ಲ ಎಂದು ಬಯ್ದುಕೊಳ್ಳುವ ಜನರೂ ಇದ್ದಾರೆ. ಟೀಕೆ ಮಾಡುವ ಜನರೂ ಇದ್ದಾರೆ ನಾವೆಲ್ಲಾ ಸರಿಯಾಗಿ ಕ್ರಿಯೇಟ್ ಮಾಡಿಕೊಂಡು ಇದ್ದೇವೆ ಎಂದು ಹೇಳುತ್ತಾ ಇಲ್ಲ ಕೋಣಂದೂರು ಲಿಂಗಪ್ಪನವರು ಬೇರೆ ಆಗಿಬಿಟ್ಟಿದ್ದಾರೆ. ಅವರೂ ಕೂಡ ಅದೇ ನೀರು, ಉಪ್ಪು, ಹುಳಿ ತಿನ್ನುತ್ತಿದ್ದಾರೆ, ಬೇರೆ ಅಲ್ಲ. ಅವರ ಪಕ್ಷದವರು 3 ದಿನ ನಿಲ್ಲುವುದಕ್ಕೆ ಸಾಧ್ಯವಾಗಿಲ್ಲ. ಏನೋ ಹೇಳುತ್ತಾರೆ, ನಿಮ್ಮಂಥವರನ್ನು ಕಟ್ಟಿಕೊಂಡರೆ ಗಾಡಿ ಹೊಡೆಯುವುದಕ್ಕೂ ಬರುವುದಿಲ್ಲ, ರಥ ನಡೆಸುವುದಕ್ಕೂ ಬರುವುದಿಲ್ಲ ಮುರಿದು ಬೀಳುತ್ತೀರಿ. ಆದುದರಿಂದ ಜನ ಬಿಟ್ಟಿದ್ದಾರೆ. ರಾಜ್ಯದ ಆಡಳಿತ ನಡಿಸುವುದು ಅಷ್ಟು ಸುಲಭವಲ್ಲ. ಬಯ್ದುಕೊಂಡು ತಿರುಗಾಡುವ ಜನ ಇರುತ್ತಾರೆ. ಈಗಾಗಲೇ ಅನುಭವ ಪಟ್ಟಿದ್ದೀರಿ, ಕುಳಿತು ಆಡಳಿತ ನಡೆಸುವುದಕ್ಕೆ ಆಗದೇ ಹಿಂದೆ ಬಿದ್ದಿದ್ದೀರಿ. ನಾವಾದರೂ ಇಷ್ಟು ಮಾಡಿದ್ದೇವೆ, ನಿಮ್ಮ ಕೈಯಲ್ಲಿ ಅದೂ ಸಾಧ್ಯವಿಲ್ಲ. ಈ ರೀತಿ ಮಾತನಾಡುವುದು ಬೇಡ ಇನ್ನು ಮೇಲಾದರೂ ಮಾತನಾಡುವಾಗ ಹಿಂದುಮುಂದು ನೋಡಿ, ಯೋಚನೆ ಮಾಡಿ ಮಾತನಾಡುವುದು ಒಳ್ಳೆಯದು. ಯಾರ ಮೇಲಾದರೂ ದೋಷಾರೋಪಣೆ ಮಾಡುವಾಗ ವಿಚಾರ ತಿಳಿದು ಮಾಡಬೇಕಾಗುತ್ತದೆ. ಮಾನ್ಯ ದೇವೇಗೌಡರು ಹೇಳಿದರು, ವಾಟರ್ ಬೋರ್ಡ್ ವಿಚಾರ ಬಂದಾಗ ನೀವು ಕಾಗದ ಬರೆದಿದ್ದೀರಿ ನನ್ನ ಹತ್ತಿರ ಇದೆ, ನಾನು ಓದಿದ್ದೇನೆ ಎಂದು. ನಾನೇ ಬೇಕಾದರೆ ಓದುತ್ತೇನೆ. ನಾನು ಸಂಪೂರ್ಣವಾದ ಅರಿವು ಇಟ್ಟುಕೊಂಡು ಬರೆದಿದ್ದೇನೆ, ಅರಿವಿನಿಂದಲೇ ಮಾಡಿದ್ದೇನೆ. ತಾವೇ ಓದಿ ತಿಳಿದಿದ್ದೀರಿ ಎಂದು ನನ್ನ ಭಾವನೆ. ಇಲ್ಲದೇ ಹೋದರೆ ಮತ್ತೆ ಇನ್ನೊಂದು ಸಾರಿ ಅದನ್ನು ಓದುವುದಕ್ಕೆ ನನ್ನ ಅಭ್ಯಂತರ ಇಲ್ಲ. ಯಾವುದೇ ಕಾರ್ಯ ಮಾಡುವಾಗ ಒಂದು ಕಾಲ ಮಿತಿ ಇರುತ್ತದೆ, ಕೆಲವು ನಿಯಮಗಳು ಇರುತ್ತವೆ. ಅದನ್ನು ತಿಳಿದು ಮಾಡಬೇಕಾಗುತ್ತದೆ. ನಾನಂತು ಅದೇ ಸ್ಥಾನದಲ್ಲಿ ಕುಳಿತುಕೊಂಡು ಬಹಳ ಜವಾಬ್ದಾರಿಯುತವಾಗಿ ನಡೆಸಿಕೊಂಡು ಬಂದಿದ್ದೇನೆ, ಈಗ ಇಲ್ಲೂ ಕೂಡ ಜವಾಬ್ದಾರಿಯುತವಾಗಿ ನಡೆಸಿಕೊಂಡು ಬರುತ್ತಿದ್ದೇನೆ. ಏನಾದರೂ ತಪ್ಪಾದರೆ ನಮ್ಮ ಪಕ್ಷ ಇದೆ, ತಾವು ಇದ್ದೀರಿ, ತಿದ್ದಿಕೊಳ್ಳುವುದಕ್ಕೆ ಆಗುತ್ತದೆ. ನೂರಕ್ಕೆ ನೂರು ಸರಿ ಇಲ್ಲದೆ ಇರಬಹುದು.

ಆದರೆ ಇದು ದುರುದ್ದೇಶದಿಂದ ಆಗಿದೆ ಎಂದು ಹೇಳುವುದಕ್ಕೆ ಅವರು ಇಲ್ಲಿ ಇಲ್ಲ. ಇನ್ನು ಮೇಲಾದರೂ ಆಕ್ಷೇಪಣೆ ಬಂದಾಗ ಅದು ಪ್ರತ್ಯಕ್ಷವಾದರೂ

ಪ್ರಮಾಣಿಸಿ ನೋಡಬೇಕು ಎಂದು ಹೇಳಿ ಅಧ್ಯಕ್ಷರು ಮತ್ತು ಈ ಸಭೆ ಬಹಳ ಹೊತ್ತು ನನ್ನ ಮಾತನ್ನು ಕೇಳಿದ್ದೀರಿ. ಬಹಳ ಹೊತ್ತು ಶ್ರಮವಾದರೂ ಕೂಡ ನಾನು ವಿಶೇಷ ವಂದನೆಗಳನ್ನು ಅಧ್ಯಕ್ಷರಿಗೂ ಈ ಸಭೆಗೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗಲಾದರೂ ಕೆರೆಗಳು ಬೇಕು ಮೇಜರ್ ಇರಿಗೇಷನ್ ಬೇಕು ಎಂದು ಕೇಳಿರುವುದಕ್ಕೆ ನೀವೆಲ್ಲರೂ ಒಮ್ಮತದಿಂದ ಇದನ್ನು ಪಾಸ್ ಮಾಡಿಕೊಡಿ ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

8-00 P. M.

‡ಶ್ರೀ ಹೆಚ್. ಡಿ. ದೇವೇಗೌಡ:— ಮಾನ್ಯ ಸಭಾಧ್ಯಕ್ಷಿಣಿಯವರೇ, ತಮ್ಮ ಅನುಮತಿ ಕೇಳಿ ಒಂದು ವಿವರಣೆಯನ್ನು ಕೊಡಬೇಕು. ಮುಖ್ಯ ಮಂತ್ರಿಯವರು ನಾನು ಇಟ್ಟಂಥ 10 ಚಾರ್ಜಸ್‌ಗಳ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ನಾನು ಬಹಳ ಕುತೂಹಲದಿಂದ ಕೇಳಿದ್ದೇನೆ. ಅವರು ಮಾತನಾಡುವಾಗ ಚಕಾರ ಶಬ್ದವನ್ನೂ ಕೂಡ ಎತ್ತಿಲ್ಲ. ನಾನು ಯಾವ ಆಧಾರಗಳ ಮೇಲೆ ನಿರ್ಣಯಕ್ಕೆ ಬಂದು ಆಪಾದನೆಗಳನ್ನು ಮಂಡಿಸಿದ್ದೇನೆ ಎನ್ನುವುದನ್ನು ಕೂಡ ಈ ಸಭೆಯಲ್ಲಿ ವಿವರಣೆ ಕೊಟ್ಟು ಚರ್ಚೆ ಮಾಡಿಲ್ಲ. ಮುಖ್ಯ ಮಂತ್ರಿಯವರು ಹೇಮಾವತಿ ಬಗ್ಗೆ ಕೆಲವು ವಿವರಣೆಗಳನ್ನು ಕೊಟ್ಟಿದ್ದಾರೆ. ಅದು ಪೂರ್ತಿ ವಿವರಣೆ ಅಲ್ಲ ಎಂದು ನನಗೂ ಗೊತ್ತಿದೆ ಅದು ಅವರಿಗೂ ಗೊತ್ತಿದೆ. ಏಕೆ ಎಂದರೆ ಸುರ್ಕಿ ಮಾರ್ಟರ್ ಸಿಮೆಂಟ್‌ಗೆ ಬದಲಾವಣೆ ಮಾಡುವ ಬಗ್ಗೆ ಹೇಳಿದರು. ಇನ್ನೂ ಹಲವಾರು ವಿಷಯ ಇದೆ: ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ಮಾತ್ರ ಮುಖ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅವರು ಹೇಳುವಾಗ ಈ ದೇಶದಲ್ಲಿ ರಾಜಕೀಯ ಜೀವನದಲ್ಲಿ ಇರತಕ್ಕ ಪ್ರತಿಯೊಬ್ಬ ವ್ಯಕ್ತಿಗಳು ಕೂಡ ಇವತ್ತು ಭ್ರಷ್ಟಾಚಾರಕ್ಕೆ ಒಳಗಾಗಿದ್ದಾರೆ ಎನ್ನುವ ಸಂಶಯ ಮೂಡತಕ್ಕ ವಾತಾವರಣ ಬೆಳೆದಿದೆ. ಅದನ್ನು ಬೆಳೆಸತಕ್ಕದ್ದು ಯೋಗ್ಯವಲ್ಲವೆಂದು ಒಂದು ಮಾತನ್ನು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ವಾತಾವರಣ ಬೆಳೆದಿರುವುದು ನಿಜ. ಅದು ಬೆಳೆಯತಕ್ಕಂಥಾದಕ್ಕೆ ನಾವೆಲ್ಲರೂ ಒಂದಲ್ಲ ಒಂದು ರೀತಿಯಿಂದ ಸಹಕಾರಿಗಳು ಆಗಿದ್ದೇವೆ ಎನ್ನತಕ್ಕಂಥಾದ್ದು ನಿಜ. ಆದರೆ ಇವತ್ತು ಆ ವಾತಾವರಣವನ್ನು ನಾವುಗಳು ಪ್ರಯತ್ನ ಮಾಡಿ ತೊಡೆದು ಹಾಕಬೇಕು. ಇದನ್ನು ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆ. ಆ ವಾತಾವರಣವನ್ನು ಮತ್ತೆ ಸರಿ ಮಾಡತಕ್ಕವರು ಈ ರಾಜಕಾರಣಿಗಳು. ಇವತ್ತು ನಾನು ಒಂದು ಮಾತನ್ನು ಮುಖ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಅಪಾದನೆಗೆ ಕಾರಣ ಮುಖ್ಯ ಮಂತ್ರಿಗಳು ಬಿಜಾಪುರದಲ್ಲಿ ಮಾಡಿದ ಭಾಷಣ. ಅದು ತನ್ನಷ್ಟಕ್ಕೆ ತಾನೇ ಬಂದದ್ದು ಅಲ್ಲ. ಈ ಸಭೆಯಲ್ಲಿ ನೋ

(ಶ್ರೀ ಹೆಚ್. ಡಿ. ದೇವೇಗೌಡ)

ಕಾನ್‌ಫಿಡೆನ್ಸ್ ಮೋಷನ್ ತಂದು ನಾವು ಯಾರೇ ಚಾರ್ಜಸ್ ಮಾಡಲಿ ಅವರು
ಸವಾಲು ಹಾಕಿದರು. ನಾನು ಅದನ್ನು ಒಪ್ಪಿಕೊಂಡಿದ್ದೇನೆ. ಅದಕ್ಕೆ ಅನು
ಗುಣವಾಗಿ ಈ ಸಭೆಯಲ್ಲಿ ಚಾರ್ಜಸ್ ಇಟ್ಟಿದ್ದೇನೆ. ವಿರೋಧ ಪಕ್ಷದ ವತಿಯಿಂದ
ಆಪಾದನೆ ಮಾಡುವಾಗ ಬೇಜವಾಬ್ದಾರಿಯಿಂದ ಆಪಾದನೆಯನ್ನು ಮಾಡತಕ್ಕಂಥ
ಪ್ರವೃತ್ತಿ ಬೆಳೆದು ಬಂದಿದೆ. ಆ ಒಂದು ವಾತಾವರಣ ಕೂಡ ಇದೆ; ಮನಸ್ಸಿಗೆ
ಬಂದ ಹಾಗೆ ಮಾತನಾಡುತ್ತಾರೆ ಎನ್ನುವ ವಾತಾವರಣ ಕೂಡ ಇದೆ. ಅದನ್ನು
ತೊಡೆದು ಹಾಕತಕ್ಕಂಥ ಜವಾಬ್ದಾರಿ ಅವರ ಮೇಲೆ ಬಿದ್ದಿದೆ. ಏಕೆಂದರೆ ದೇವೇ
ಗೌಡರು ಬೇಜವಾಬ್ದಾರಿಯಿಂದ ಮಾತನಾಡಿದ್ದಾರೆ ಎನ್ನತಕ್ಕಂಥಾದನ್ನು ತಾವು
ಇವತ್ತು ನಿರ್ಣಯವನ್ನು ಮಾಡಬೇಕು ಆ ಅಸ್ತ್ರವನ್ನು ತಮ್ಮ ಕೈಯಲ್ಲಿ ಕೊಟ್ಟಿ
ದ್ದೇನೆ. ಬೇಜವಾಬ್ದಾರಿಯಿಂದ ಮಾತನಾಡುವ ರಾಜಕಾರಣಿ ಇವತ್ತು ನಾಲಾ
ಯಕ್ಕು ಎಂಬ ತೀರ್ಮಾನ ಮಾಡತಕ್ಕ ಅಸ್ತ್ರ ನಿಮ್ಮ ಕೈಯಲ್ಲಿ ಇದೆ. ಈ ದೇಶ
ದಲ್ಲಿ ಕೂಡ ಆ ವಾತಾವರಣ ನಿರ್ಮಾಣವಾಗಿದೆ ಎಂದು ಹೇಳುವಾಗ ಒಂದು
ಹೊಸ ಸನ್ನಿವೇಶ ಬಂದಿದೆ. ವಿರೋಧ ಪಕ್ಷಗಳ ನಾಯಕರು ಮುಖ್ಯಮಂತ್ರಿಗಳ
ಚಾರಿತ್ರ್ಯ ವಧೆಯನ್ನು ಮಾಡತಕ್ಕ ಪ್ರಯತ್ನ ಪಟ್ಟಾಗ ಅತನನ್ನು ಈ ಸಭೆ ಶಿಕ್ಷೆ
ಮಾಡುವುದಕ್ಕೆ ಈ ದೇಶದ ಜನತೆ ಶಿಕ್ಷೆ ಮಾಡುವುದಕ್ಕೆ ಒಂದು ಸದವಕಾಶ ಕೊಟ್ಟಿ
ದ್ದಾರೆ. ನಾನು ಹೇಳಿದ್ದೇನೆ. ಇದು ತೀರ್ಮಾನ ಆದ ಮೇಲೆ ರಾಜಕೀಯ
ದಿಂದ ಮನೆಗೆ ಹೋಗುತ್ತೇನೆ ಎಂದು. ನಾನು ಇವತ್ತು ಕಳಕಳಿಯಿಂದ ಕೇಳಿ
ಕೊಳ್ಳುತ್ತೇನೆ. ಈ ನಿರ್ಣಯ ತಾವು ಹೇಳಬಾರದು. ಮೂರನೆಯವರಿಂದ
ಹೇಳಿಸುವ ಮನಸ್ಸು ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಅವರು ಅದನ್ನು
ಹೇಳಿದರೆ ಅದರಲ್ಲಿ ಸತ್ಯ ಇರಬಹುದು. ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆಮಾಡಲಿಕ್ಕೆ
ಹೋಗುವುದಿಲ್ಲ. ನಮ್ಮ ಬಾಯಿಂದ ಬರುವುದಕ್ಕೆ ಬದಲಿಗೆ ಮೂರನೆಯವರಿಂದ
ಹೇಳಿಸಿ. ದೇವೇಗೌಡರು ಹೇಳಿರತಕ್ಕಂಥಾದ್ದು ಎಲ್ಲಾ ಅಸತ್ಯ, ಅವರು ರಾಜ
ಕೀಯ ದ್ವೇಷದಿಂದ ಹೇಳಿದ್ದಾರೆ, ಅವರು ರಾಜಕಾರಣದಲ್ಲಿ ಮುಂದುವರಿಯಲಿಕ್ಕೆ
ನಾಲಾಯಕ್ಕು ಎಂದು ನಿರ್ಣಯಕ್ಕೆ ಬರುವುದಕ್ಕೆ ಅವಕಾಶ ಕಲ್ಪಿಸಕೂಡದು.
ರಾಷ್ಟ್ರದಲ್ಲಿ ಬೇಜವಾಬ್ದಾರಿಯಿಂದ ಮಾತನಾಡತಕ್ಕ ಅದರಲ್ಲೂ ಇಲ್ಲದೇ ಇರ
ತಕ್ಕಂಥ ಆಪಾದನೆ ಮಾಡತಕ್ಕ ವ್ಯಕ್ತಿಗಳಿಗೆ ಇನ್ನು ಮುಂದೆ ಬೇಗ ಮುದ್ರೆಯನ್ನು
ಹಾಕತಕ್ಕ ವ್ಯವಸ್ಥೆಯನ್ನು ಮಾಡಿ ಎಂದು ಹೇಳಿ ಇಷ್ಟು ಹೇಳಲು ಅವಕಾಶವನ್ನು
ಕೊಟ್ಟದ್ದಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಡಿ. ದೇವರಾಜ ಅರಸ್ :—ಮೊದಲನೆಯದಾಗಿ ಇವರನ್ನೆ ಆಗಲೀ
ಯಾರನ್ನೇ ಆಗಲೀ ಚಾಲೆಂಜ್ ಮಾಡಿ ಹೇಳಿದ್ದು ಅಲ್ಲ. ಒಂದು ವೇಳೆ ಸಂದರ್ಭ
ಬಂದರೆ ಅದನ್ನು ಮಾಡೋಣ. ಆದರೆ ಈಗ ಹೇಳಿರತಕ್ಕ ಅನೇಕ ವಿಚಾರಗಳು

ನಾವು ನೋಡುವುದಕ್ಕೆ ಆಗದೆ ಇರುವುದೇನೂ ಅಲ್ಲ. ತಾವು ಹೇಳಿರುವ ಹಾಗೆ ಹೇಮಾವತಿ ಪ್ರಕರಣದ ಬಗ್ಗೆ ನಿಮ್ಮ ಪಿ. ಎ. ಸಿ. ಯಲ್ಲಿ ಒಂದು ರಿಪೋರ್ಟ್ ಮಾಡಿದ್ದಾರೆ. ಇನ್ನೂ ಕೂಡ ನಿಮಗೆ ಮುಂದುವರಿಯುವುದಕ್ಕೆ ಅವಕಾಶ ಇದೆ ಪಿ. ಎ. ಸಿ. ರಿಪೋರ್ಟ್ ಮಾಡಿರುವುದು ತಮಗೆ ಗೊತ್ತಿದೆ. ಆದರೆ ಅದನ್ನು ಅಲ್ಲಿ ಬಿಡಬಹುದು ಎಂಬ ಅನುಮಾನ ಇದ್ದರೆ ಪೂರ್ತಿ ರಿಪೋರ್ಟ್ ತರಿಸಿಕೊಂಡು ನೋಡಬಹುದು. ನಾನು ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಏನೇನು ಆಯಿತು, ಟೆಕ್ನಿಕಲ್ ಸಬ್ ಕಮಿಟಿ ಮಾಡಿದಂತ ಎಲ್ಲವನ್ನೂ ವಿವರಣೆಗಳನ್ನು ಹೇಳಿದ್ದೇನೆ. ನಾನು ಹೇಳಿದ್ದು ಎಲ್ಲವನ್ನೂ ಕೇಳಿದರೆ ಸರ್ಕಾರದವರು ಅವನ್ನು ನಿಮಗೆ ಒದಗಿಸಿ ಕೊಟ್ಟೇ ಕೊಡುತ್ತಾರೆ. ನಾನು ಹೇಳಿದ್ದರಲ್ಲಿ ಬಹಳ ಗಹನವಾದ ವಿಚಾರಗಳು ಇವೆ. ಹೇಮಾವತಿ ಪ್ರಾಜೆಕ್ಟ್, ಹಿಡಕಲ್ ಡ್ಯಾಮ್‌ಗೆ ಕೊಟ್ಟಿರತಕ್ಕಂಥದ್ದೇ ಆಗಲಿ ಅದು ಎಲ್ಲಾ ಆಡಿಟ್ ಪ್ಯಾರಾದಲ್ಲಿ ಬಂದಿದೆ, ಬರುತ್ತದೆ. 1972–73ನೇ ಸಾಲಿನ ಆಡಿಟ್ ರಿಪೋರ್ಟ್‌ನಲ್ಲಿ ಕೆಲವು ವಿಚಾರಗಳು ಬಂದಿದ್ದು, ಅದೇ ರೀತಿ 1973–74ನೇ ಸಾಲಿನಲ್ಲಿ ಇದು ಬಂದೇ ಬರುತ್ತದೆ ಹಿಡಕಲ್ ಡ್ಯಾಮ್‌ನಲ್ಲಿ ಕಂಟ್ರಾಕ್ಟರಿಗೆ ಕೆಲಸ ಮಾಡುವುದಕ್ಕೆ ಕೊಟ್ಟಿದ್ದಾರೆ ಎಂದು ಹೇಳಿದರೆ ಅದು ಬರಬೇಕು. Therefore, most of the charges which have been mentioned in one way or the other are bound to come, within either the purview of the Auditor-General or the P. A. C. ತಾವು ನೋಡಿ ಹಾಗೂ ಸಮಾಧಾನ ಆಗಲಿಲ್ಲ ಎಂದು ವ್ಯಕ್ತಪಟ್ಟರೆ ಬರೆಯಿರಿ. I have no objection: I will face it. ತಪ್ಪಾದರೆ ಶಿಕ್ಷೆ ಅನುಭವಿಸೋಣ ತಾವು ಬರೆಯಿರಿ. ಇದಕ್ಕೆ ಅವಕಾಶ ಕಲ್ಪಿಸಿ ಕೊಡಿ ಎಂದು ಹೇಳುತ್ತೇನೆ. The Hon. the Leader of the opposition is the Chairman of the P. A. C., and the Audit report is there for him, and every year it is going to be there for him. ನಾವು ಮಾಡುವುದು ಎಲ್ಲಾ ಅದರಲ್ಲಿ ಬರುತ್ತದೆ. ತಾವು ತೆಗೆದುಕೊಳ್ಳಿ, ನೋಡಿ. I have gone through it. ಪಿ. ಎ. ಸಿ. ರಿಪೋರ್ಟ್‌ನಲ್ಲಿ ತಾವು ಏನು ಹೇಳಿದ್ದೀರಿ ಎಂದರೆ ಮೊದಲನೇ ತೀರ್ಮಾನ ಮಾಡಿದ್ದು ಸರಿಯಲ್ಲ ಎಂದು ಬರೆದಿದ್ದೀರಿ. ಲೈಮ್ ಸುರ್ಕಿ ಮೋರ್ಟರ್‌ನಲ್ಲಿ ಗೊತ್ತಿದ್ದು, ಗೊತ್ತಿದ್ದು ಏತಕ್ಕೆ ಈ ರೀತಿ ತೀರ್ಮಾನ ತೆಗೆದುಕೊಂಡರು, ಇದನ್ನು ತೆಗೆದುಕೊಳ್ಳಲೇಬಾರದಾಗಿತ್ತು ಎಂದು ಹೇಳಿದ್ದೀರಿ. ಇದು ಮುಂದೆ ಬರುತ್ತದೆ. I do not like to go further in the matter. If I have misquoted: if I have given wrong information to the House, certainly I will be caught. ಇದಕ್ಕಿಂತ ಹೆಚ್ಚಾಗಿ ಮುಂದುವರಿಸಿಕೊಂಡು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಇದನ್ನು ಇಷ್ಟಕ್ಕೆ ಬಿಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ :—ಹೇಮಾವತಿ ಬಗ್ಗೆ ಅವಕಾಶ ಇದೆ ಎಂದು ಹೇಳಿದರು. ನಾನು 10 ಚಾರ್ಜಸ್ ಬಗ್ಗೆ ಹೇಳಿದ್ದೇನೆ. ತಾವು ಹೇಮಾವತಿ ಬಗ್ಗೆ ಹೇಳಿದ ಪ್ರಸಂಗವಲ್ಲ. ಈ ಸಭೆಯಲ್ಲಿ ನಿರ್ಣಯ ಆಗಿತ್ತು. ಆದರಂತೆ ತೀರ್ಮಾನ ಹೇಗೆ ಮಾಡುತ್ತಾರೆ? ಮತ್ತೆ ಇಲ್ಲಿ ನಿರ್ಣಯ ಮಾಡಬೇಕಾದ್ದಿಲ್ಲ. ಶ್ರೀ ಕೆ. ಹೆಚ್. ಪಾಟೀಲರವರು ನಿರ್ಣಯ ಮಾಡಿರುವುದು ಸಮಿತಿಯ ತೀರ್ಮಾನ. ಇದರಲ್ಲಿ ನಮ್ಮ ಈ ಮನೆಯ ತೀರ್ಮಾನವಾಗಬೇಕಾಗಿತ್ತು ಎಂದು ನಾನು ವೈಯುಕ್ತಿಕವಾಗಿ ತಿಳಿದಿರುವುದು.

ಶ್ರೀ ಡಿ. ದೇವರಾಜ ಅರಸ್ :—ಎಲ್ಲ ವಿವರಗಳನ್ನೂ ತಮಗೆ ನಾನು ಆಗಲೇ ಕೊಟ್ಟಿದ್ದೇನೆ. ಬೇಕಾದರೆ ತಾವೇನು ಹತ್ತು ಆಪಾದನೆಗಳನ್ನೂ ಮಾಡಿದ್ದೀರಿ ಅವನ್ನೇ ಇಲ್ಲಿ ಓದುತ್ತೇನೆ:

1) Excess payment of about Rs. 98.86 lakhs to Sree Balaji Engineering Construction Co., in Hemavathi Project,

2) Excess payment of about Rs. 18 lakhs to Sri Shankaranarayana Construction Co., in Ghataprabha & Malaprabha projects,

3) Undue favour shown to M/s. Nirmala Engineering Construction Co., to release about Rs. 3.4 lakhs.

4) Undue favour shown while taking disciplinary action against the top P. W. D. officers.

ಮೊದಲನೇ ಹಾಗೂ ಎರಡನೇ ಆಪಾದನೆಗಳಲ್ಲಿ ಹೆಚ್ಚು ಹಣ ಕೊಟ್ಟಿರುವುದರ ಬಗ್ಗೆ ಹೇಳಿರುವುದರ ಬಗ್ಗೆ ನಾನಾಗಲೇ ಹೇಳಿದ್ದೇನೆ. ಮೂರನೇ ಅಪಾದನೆ ಬಗ್ಗೆ ಎಂದರೆ ನಿರ್ಮಲಾ ಇಂಜನೀಯರಿಂಗ್ ಕಂಪನಿ ಬಗ್ಗೆ ಕೂಲಂಕಷವಾಗಿ ಇಲ್ಲಿ ಚರ್ಚೆ ಕೂಡ ಆಗಿದೆ ಮತ್ತು ಎಲ್ಲ ವಿವರಗಳನ್ನೂ ಕೂಡ ಹೇಳಿದ್ದೇನೆ. ಇದರ ಬಗ್ಗೆ ನಾನು ಹೇಳುವುದೆಲ್ಲಾ ಮುಗಿದಿದೆ. ಇನ್ನೇನೂ ಇದರಲ್ಲಿ ಹೇಳಬೇಕಾಗಿಲ್ಲ. ಇದು ಸಾಕಷ್ಟು ಚರ್ಚೆಯೂ ಆಗಿದೆ. ಇದರ ಬಗ್ಗೆ ಇನ್ನೂ ಯಾವ ತೀರ್ಮಾನವೂ ಆಗಿಲ್ಲ. ಇದರಲ್ಲಿ ನಾವು ಯಾರಿಗೂ ಯಾವ ಅನ್‌ಡ್ಯೂ ಫೇವರು ತೋರಿಸಿಲ್ಲ. ಇನ್ನು ನಾಲ್ಕನೇ ಆಪಾದನೆ ಎಂದರೆ ಪಿ ಡಬ್ಲ್ಯು. ಡಿ ಆಫೀಸರ ಬಗ್ಗೆ ಇದೆ. ಇಲ್ಲಿ ಅವರು ಹೇಳಿರುವ ಯಾವ ಅಧಿಕಾರಿಗಳೂ ನನ್ನ ಚಾರ್ಜಿನಲ್ಲಿ ಇಲ್ಲ. ಇವರು ಬೇರೆ ಬೇರೆ ಇಲಾಖೆಗೆ ಸೇರಿದವರು ಹಾಗೂ ಇದರಲ್ಲಿ ಯಾರೂ ನನ್ನ ನೆಂಟರೂ ಅಲ್ಲ. ಒಂದು ವೇಳೆ ಇದರಲ್ಲಿ ಫೇವರಟಿಸಂ ತೋರಿಸಿದ್ದಾರೆ ಎಂದರೆ ಇದಕ್ಕೆ

ಉತ್ತರ ಇಷ್ಟೇ. ಇದರಲ್ಲಿ ನಮ್ಮ ಡಿಸ್‌ಕ್ರಿಷನ್ ಉಪಯೋಗ ಮಾಡಬೇಕೆಂದು ಇದೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವುದು ನಮ್ಮ ವಿವೇಚನೆಗೆ ಸೇರಿದ್ದು. ಇದನ್ನೆಲ್ಲಾ ವಿಚಾರ ಮಾಡಿಯೇ ಸರಕಾರ ತೀರ್ಮಾನ ಮಾಡಬೇಕಾಗುತ್ತದೆ. It is a preragative of the Government: it is discretion of the Government. In case the discretion used by the Government is not palatable and not liked by others, they say that it is wrong. All right, they have a right to criticise and I have my right to exercise my discretion as Government.

Then, charge No. 5 is as under :--

5) Undue favour shown while entrusting of work of preparation of drawings, designs and estimates for remodelling of the K. R. Market, Bangalore, to M/s. Karekar Sundaram, Architects.

ಇದೂ ಕೂಡ ಕಾರ್ಪೊರೇಷನ್ನಿಗೆ ಸೇರಿದ ವಿಚಾರ. ಕಾರ್ಪೊರೇಷನ್‌ನವರು ರೆಸಲ್ಯೂಷನ್ ಮಾಡಿ ಸರಕಾರಕ್ಕೆ ಕಳುಹಿಸಿದರೆ ಅದನ್ನು ಸರಕಾರ ವಿಚಾರ ಮಾಡಿ ಒಪ್ಪಬೇಕಾಗುತ್ತದೆ.

ನಾವು ಕಾರ್ಪೊರೇಷನ್ ನಿರ್ಣಯಕ್ಕೆ ವಿರುದ್ಧವಾಗಿ ಹೋಗುವುದಕ್ಕಾಗುವುದಿಲ್ಲ ಕಾರ್ಪೊರೇಷನ್‌ನವರು ಇದರ ಬಗ್ಗೆ ಯಾವ ರೀತಿ ತೀರ್ಮಾನ ಮಾಡುತ್ತಾರೋ ಅದು ಅವರಿಗೆ ಸೇರಿದ್ದು. ನನಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಇದರ ಬಗ್ಗೆ ಕಾರ್ಪೊರೇಷನ್ ಅಧ್ಯಕ್ಷರು ಕೂಡ ಬಂದು ಹೇಳಿದ್ದಾರೆ. ಇದರ ನಿರ್ಣಯ ತೆಗೆದುಕೊಳ್ಳಬೇಕಾದವರು ಕಾರ್ಪೊರೇಷನ್‌ನವರು. ಇದರ ಬಗ್ಗೆ ಅಧ್ಯಕ್ಷರು ಬಂದು ಏನೋ ಹೇಳಿದರು ಎನ್ನುತ್ತಾರೆ ಬೇಕಾದರೆ ಇದರ ಫೈಲನ್ನು ನಿಮಗೆ ತೋರಿಸುತ್ತೇನೆ. ಇದು ಪಿ. ಎ. ಸಿ. ಕಮಿಟಿಗೆ ಬರುತ್ತೋ ಏನೋ ಗೊತ್ತಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ಪಿ ಎ. ಸಿ. ಮುಂದೆ ಇದು ಬರುವುದಿಲ್ಲ.

ಶ್ರೀ ಡಿ ದೇವರಾಜ ಅರಸ್ :—ಹಾಗೇನಿಲ್ಲ ಎಂದರೆ ಅಲ್ಲಿಗೆ ಬಿಟ್ಟು ಬಿಡಿ. ಇದರಲ್ಲೇನೂ ಇಲ್ಲ ಇವೆಲ್ಲಾ ಕಾರ್ಪೊರೇಷನ್‌ಗೆ ಸೇರಿದ ವಿಚಾರ This is hundred percent a resolution of the Corporation. I stated that there is no reason to go against the Corporation resolution. I can also say so many things. Is that a

(ಶ್ರೀ ಡಿ. ದೇವರಾಜ ಅರಸ್)

charge? The Corporation is a body constituted under an enactment. This is all I can say so far as that point is concerned. Normally we do not over-rule. It is on record. I have not said anything against the wish or the resolution of the Corporation.

Charge No. 6 is as under:

(6) Grant of land to Krishna Flour Mills--property worth about Rs. 6 lakhs in Bangalore.

I have already replied this point. It pertains to the Corporation of the City of Bangalore. They have done some good work and they did get some collaboration from foreign countries and they have the machinery. It is an expansion of the existing mills. That is why we said that when there is an expansion we may give this. ಇದರಲ್ಲಿ ನಾವೇನೂ ಅಂತಹ ದೊಡ್ಡ ತಪ್ಪು ಮಾಡಿಲ್ಲ. ಇದು ಕಾರ್ಪೋರೇಷನ್‌ಗೆ ಸಂಬಂಧಪಟ್ಟ ವಿಚಾರ. ಕಾರ್ಪೋರೇಷನ್‌ನವರು ಏನು ಸಲಹೆ ಮಾಡುತ್ತಾರೋ ಅದನ್ನು ಸರಕಾರ ಬೇಕಾದರೆ ಒಪ್ಪಬಹುದು ಇಲ್ಲವೇ ಓವರ್ ರೂಲು ಮಾಡಬಹುದು. ಅಷ್ಟೇ. ಇವೆಲ್ಲ ಸರಕಾರದ ರಿಕಾರ್ಡುಗಳಲ್ಲೂ ಇದೆ ಮತ್ತು ಈ ಸಭೆಯಲ್ಲಿ ಹಿಂದೆ ನಾನು ಹೇಳಿರುವುದೂ ಸಭೆಯ ರಿಕಾರ್ಡುಗಳಲ್ಲಿ ಇದೆ. ತಾವು ನೋಡಬಹುದು. ಸರಕಾರ ಇದರಲ್ಲಿ ಏನೂ ಮಾಡಿಲ್ಲ. ಇವೆಲ್ಲ ಹಿಂದೆ ಕೂಡ ಬಂದು ಇಲ್ಲಿ ಬೇಕಾದ ಹಾಗೆ ಚರ್ಚೆ ಆಗಿದೆ ಇಂಡಸ್ಟ್ರಿಯನ್ನು ಎನ್‌ಕರೇಜು ಮಾಡಲು ಕೊಡಲಾಗಿದೆ.

After 25 years, the entire building, everything should come back to the Corporation.

The other charges are:

(7) Undue favour shown while disposing of 2,500 tonnes of bajra to Sri Saiya Ram and Ghanashyam & Co., I have answered this charge in the Upper House.

(8) Grant to 'no objection' certificate to alienate and conversion of about 287 acres of revenue land in S. No. 3........etc, in Narasipur village, Bangalore North Taluk (Densha Estate).

(9) Grant of 20 acres of land to Dr. M. D. Nataraj, in Bommenahalli, Nelamangala Taluk.

(10) Allotment of two sites to Mrs. M.D. Nataraj by City Improvement Trust Board.

These are the 10 charges, and I think I have answered all these charges.

MADAM SPEAKER :—I will now put the motion to the vote of the House.

The question is :

"That the repective sums not exceeding the amounts mentioned in the list of Demands be granted to Government to defray the charges which will come in course of payment during the financial year for the period ending with 31st day of March 1976 in respect of Demands Nos. 42, 51 and 52".

(The motion was adopted and the sums were granted)

As ordered by the Chair the motion for Demands for grants adopted by the Chair are reproduced below.

DEMAND NO. 42

"That a sum not exceeding Rs. 8,83,00,000 be granted to the Government to defray the charges which will come in course of payment during the financial year ending 31st day of March 1976 in respect of " Area Development ".

DEMAND NO. 51

"That a sum not exceeding Rs. 75,15,51,000 be granted to the Government to defray the charges which will come in course of payment during the financial year ending 31st day of March 1976 in respect of "Irrigation, Navigation, Drainage and Flood Control Projects."

DEMAND No. 52

"That a sum not exceeding Rs. 25,42,00,000 be granted to the Government to defray the charges which will come in course of payment during the financial year ending 31st day of March 1976 in respect of "Power Projects".

MESSAGE FROM THE CHAIRMAN L. C. ANNOUNCEMENT

MADAM SPEAKAR.—I have received a message from the Chairman, Legislative Council, stating that the following Bills have been agreed to by the Legislative Council without any amendments or recommendations:

1. The Karnataka Village Panchayats (Postponement of Elections) Bill, 1975.
2. The Karnataka Appropriation Bill, 1975.
3. The Karnataka Civil Services (Classification and Scale of pay of non-graduate Junior Engineers of the Public Works Department) Bill, 1975.
4. The Mysore Prevention of Cow Slaughter and Cattle Preservation (Amendment) Bill 1973.
5. The Karnataka Private Educational Institutions (Discipline and Control) Bill, 1975.

The House now stands adjourned to meet again on Thursday at 1-00 P. M.

The House adjourned at Twenty Minutes past Eight of the Clock to meet again at One of the Clock on Thursday, the 27th March, 1975.

WD—058—GBPC--550—6-8-75.